ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಬುಧವಾರ, 11 ಮಾರ್ಚ್ 2026
ಸಂಪುಟ 15, ಸಂಚಿಕೆ 352, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ಗೃಹ ಬಳಕೆ ಅನಿಲಕ್ಕೆ ಆದ್ಯತೆ

• ಪುಟ 9

ಹುಬ್ಬಳ್ಳಿ

ಬುಧವಾರ, 11 ಮಾರ್ಚ್ 2026

ಸಂಪುಟ 15, ಸಂಚಿಕೆ 352, ಪುಟಗಳು 14

■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ₹5

RNI No.KARKAN/ 2011/64413

hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಕದನವಿರಾಮ ಬಯಸಲ್ಲ: ಇರಾನ್ | ೧೨

ಜಲಸಂಧಿ ವಶ: ಟ್ರಂಪ್ ಎಚ್ಚರಿಕೆ | ೧೨

ಅರ್ಹ ಮತದಾರರನ್ನು ಹೊರಗಿಡಲ್ಲ: ಸಿಇಸಿ | ೧೨

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಜ್ಯೇಷ್ಠ

ದಿನದ ಮಾತು

ಸುಖಾಭಿಲಾಷಿಗೆ ವಿದ್ಯೆ ಇಲ್ಲ. ವಿದ್ಯಾರ್ಥಿಗೆ ಸುಖವಿಲ್ಲ. ವಿದ್ಯಾಕಾಂಕ್ಷಿ ಸುಖವನ್ನು ಬಿಡಬೇಕು.

▲ಸುಭಾಷಿತ

ಕಿರುಸುದ್ದಿ

ಕೆಪಿಸಿಸಿ ಅಧ್ಯಕ್ಷ ಡಿಕೆಶಿಗೆ ಶುಭ ಹಾರೈಸಿದ ಸಿಎಂ



ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಯಶಸ್ವಿಯಾಗಿ ಆರು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಭಾಶಯ ಕೋರಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆಗಳು. ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲ ಯುವನಾಯಕರಿಗೆ ಮಾದರಿಯಾಗಿದ್ದಾರೆ ಎಂದಿದ್ದಾರೆ. ➡ಪುಟ 2

ವೈದ್ಯರ ಮುಷ್ಕರ ವಾಪಸ್

ಬೆಂಗಳೂರು: ವಿವಿಧ ಬೇಡಿಕೆಗೆ ಆಗ್ರಹಿಸಿ ಮಾ.11ರಿಂದ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳು, ಸಿಬ್ಬಂದಿ ಕರೆ ನೀಡಿದ್ದ ಅನಿರ್ದಿಷ್ಟಾವಧಿ ಮುಷ್ಕರವನ್ನು ವೈದ್ಯಾಧಿಕಾರಿಗಳ ಸಂಘ ಮಂಗಳವಾರ ವಾಪಸ್ ಪಡೆದಿದೆ. ಒಪಿಡಿ ಎಂದಿನಂತೆ ಕಾರ್ಯನಿರ್ವಹಿಸಲಿದೆ. ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಜತೆಗಿನ ಸಂಧಾನ ಸಭೆ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಸಂಘ ಮಂಗಳವಾರ ಮುಷ್ಕರವನ್ನು ಕೈಬಿಟ್ಟಿರುವುದರಿಂದ ಹೊರ ರೋಗಿಗಳ ಚಿಕಿತ್ಸೆ ವಿಭಾಗ ಎಂದಿನಂತೆ ಕಾರ್ಯನಿರ್ವಹಿಸಲಿವೆ. ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಇಟ್ಟಿರುವ 14 ಬೇಡಿಕೆಗಳ ಪೈಕಿ 13 ಬೇಡಿಕೆ ಈಡೇರಿಸುವುದಾಗಿ ರಾಜ್ಯ ಸರ್ಕಾರ ಭರವಸೆ ನೀಡಿದೆ. ➡ಪುಟ 2

ಎಐಗೆ ತುಳು ಪಾಠ

ಬೆಂಗಳೂರು: ಡಿಜಿಟಲ್ ಯುಗದಲ್ಲಿ ಕೃತಕ ಬುದ್ಧಿಮತ್ತೆ ವೇಗವಾಗಿ ಅಭಿವೃದ್ಧಿಯಾಗುತ್ತಿದ್ದರೂ, ಡೇಟಾ ಕಡಿಮೆ ಇರುವ ಭಾಷೆಗಳು ತಂತ್ರಜ್ಞಾನದಿಂದ ಹಿಂದೆ ಬೀಳುತ್ತಿರುವುದು ದೊಡ್ಡ ಸವಾಲಾಗಿ ಉಳಿದಿದೆ. ಆದರೆ, ಇದನ್ನೇ ಸವಾಲಾಗಿ ತೆಗೆದುಕೊಂಡು ಕರ್ನಾಟಕದ ತುಳು ಭಾಷೆಯಲ್ಲಿ ಎಐ ಸಂಭಾಷಣೆ ನಡೆಸುವಂತೆ ಮಾಡುವ ಹೊಸ ವಿಧಾನವನ್ನು ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.

• ಪುಟ 02

3 ಕೋಟಿ ಮೌಲ್ಯದ ವಜ್ರ, ಚಿನ್ನಾಭರಣ ವಶ

• ಪುಟ 02

ಹೆಚ್ಚುವರಿ ಡೀಸೆಲ್‌ಗಾಗಿ ಭಾರತಕ್ಕೆ ಬಾಂಗ್ಲಾ ಮನವಿ

• ಪುಟ 09

ಸ್ವದೇಶಿ ಏರ್ ಡ್ರಾಪಬಲ್ ಕಂಟೇನರ್ ಪರೀಕ್ಷೆ ಯಶ

• ಪುಟ 09

ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಕೇಂದ್ರ ಕ್ರಮ | ನೈಸರ್ಗಿಕ ಅನಿಲ ಹಂಚಿಕೆ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆ

ಮನೆ ಬಳಕೆ, ಸಾರಿಗೆ ಕ್ಷೇತ್ರಗಳಿಗೆ ಅನಿಲ ನಿರಂತರ ಪೂರೈಕೆ | ಎಲ್‌ಪಿಜಿ, ಸಿಎನ್‌ಜಿ, ಪಿಎನ್‌ಜಿ ಗ್ಯಾಸ್‌ಗೆ ಒತ್ತು

ಗೃಹ ಬಳಕೆ ಅನಿಲಕ್ಕೆ ಆದ್ಯತೆ

ಹೊಸದಿಲ್ಲಿ: ನೈಸರ್ಗಿಕ ಅನಿಲ ಹಂಚಿಕೆ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಮಂಗಳವಾರ ಮಹತ್ವದ ಬದಲಾವಣೆ ಮಾಡಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಭಾರತಕ್ಕೆ ಬರುವ ಅನಿಲ ಸರಬರಾಜಿನಲ್ಲಿ ವ್ಯತ್ಯಯ ಉಂಟಾದ ಹಿನ್ನೆಲೆಯಲ್ಲಿ ಮನೆ ಬಳಕೆ ಹಾಗೂ ಸಾರಿಗೆ ಕ್ಷೇತ್ರಗಳಿಗೆ ನಿರಂತರ ಸರಬರಾಜು ಖಚಿತಪಡಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಹೊಸ ನಿಯಮಾವಳಿಯ ಪ್ರಕಾರ, ಎಲ್‌ಪಿಜಿ ಉತ್ಪಾದನೆ, ಸಿಎನ್‌ಜಿ ಮತ್ತು ಪೈಪ್ ಮೂಲಕ ಮನೆಗಳಿಗೆ ಒದಗಿಸುವ ಪಿಎನ್‌ಜಿ ಗ್ಯಾಸ್‌ಗೆ ಮೊದಲ ಆದ್ಯತೆ ನೀಡಲಾಗಿದೆ. ಭಾರತವು ದಿನಕ್ಕೆ ಸುಮಾರು 191 ಮಿಲಿಯನ್ ಸ್ಟ್ಯಾಂಡರ್ಡ್ ಕ್ಯೂಬಿಕ್ ಮೀಟರ್ (ಎಂಎಂಎಸ್‌ಸಿಎಂಡಿ) ಅನಿಲವನ್ನು ಬಳಸುತ್ತದೆ. ಇದರ ಅರ್ಧದಷ್ಟು ಭಾಗವನ್ನು ಆಮದು ಮೂಲಕ ಪೂರೈಸಲಾಗುತ್ತದೆ. ಆದರೆ ಮಧ್ಯಪ್ರಾಚ್ಯ ಸಂಘರ್ಷದ ಪರಿಣಾಮವಾಗಿ ಹಾರ್ಮುಜ್ ಜಲಸಂಧಿ ಮೂಲಕ ಸಾಗುವ ಎಲ್‌ಎನ್‌ಜಿ ಟ್ಯಾಂಕರ್‌ಗಳ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿದೆ. ಇದರ ಪರಿಣಾಮವಾಗಿ ಸುಮಾರು 60 ಎಂಎಂಎಸ್‌ಸಿಎಂಡಿ ಅನಿಲ ಸರಬರಾಜು ವ್ಯತ್ಯಯಗೊಂಡಿದೆ. ➡ಪುಟ 2





ಪಾಕ್ ಸೇರಿ ರಾಷ್ಟ್ರಗಳಿಗೆ ಇಂಧನ ಕೊರತೆಯ ಬಿಸಿ

ಮಧ್ಯಪ್ರಾಚ್ಯ ಯುದ್ಧವು ಜಾಗತಿಕ ತೈಲ ಪೂರೈಕೆ ವ್ಯತ್ಯಯ ಸೃಷ್ಟಿಸಿದ್ದರಿಂದ ತೈಲ ಕೊರತೆಯ ಬಿಸಿ ನೆರೆಯ ಪಾಕಿಸ್ತಾನ ಸೇರಿದಂತೆ ಹಲವು ದೇಶಗಳಿಗೆ ಮುಟ್ಟಿದೆ. ಚೀನಾ ಹಲವು ಪೂರೈಕೆದಾರರನ್ನು ಹೊಂದಿದ್ದರೂ, ಚೀನಾದಲ್ಲಿ ತೈಲ ಬೆಲೆ ಏರಿಕೆಯಾಗಿದೆ. ➡ಪುಟ 2

ತತ್ವಾರದ ಸಮಯದಲ್ಲಿ ತತ್ವಾದರ್ಶ ಪಾಲಿಸೋಣ

ಇಸ್ರೇಲ್– ಅಮೆರಿಕ– ಇರಾನ್ ಯುದ್ಧ ನಡೆಯುತ್ತಿದೆ. ಅದು ಮಧ್ಯಪ್ರಾಚ್ಯ ದೇಶಗಳ ಮೇಲೆಲ್ಲ ಪರಿಣಾಮ ಬೀರಿದೆ. ಈಗಾಗಲೇ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ವಿಪರೀತ ಸಮಸ್ಯೆ ಎದುರಿಸುತ್ತಿವೆ. ಪಾಕಿಸ್ತಾನದಲ್ಲಿ ಪೆಟ್ರೋಲ್ ಲೀಟರ್‌ಗೆ 55 ರುಪಾಯಿ ಹೆಚ್ಚಿಸಿರುವುದರ ಜತೆಗೆ ಶಾಲೆ– ಕಾಲೇಜಿಗೆ ರಜೆ ಕೊಟ್ಟು, ವಾರದಲ್ಲಿ ನಾಲ್ಕೇ ದಿನ ಕೆಲಸ ಎಂಬ ನಿಯಮವನ್ನೂ ಮಾಡಲಾಗಿದೆ. ಬಾಂಗ್ಲಾದೇಶದಲ್ಲಿ ಕೂಡ ಇಂಧನ ಸಮಸ್ಯೆ ಕಾಣಿಸಿಕೊಂಡಿದೆ. ಭಾರತ ತಕ್ಷಣಕ್ಕೆ ಬಾಂಗ್ಲಾದೇಶಕ್ಕೆ ಡೀಸೆಲ್ ಕಳಿಸಿಕೊಟ್ಟಿದೆ.

ನಮ್ಮ ದೇಶದಲ್ಲೂ ಗ್ಯಾಸ್ ಟ್ರಬಲ್ ಆರಂಭವಾಗಿದೆ. ಈಗ ಸದ್ಯಕ್ಕೆ ವಾಣಿಜ್ಯ ಬಳಕೆ ಸಿಲಿಂಡರ್ ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಹಾಗಾಗಿ ಗೃಹಬಳಕೆ ಗ್ಯಾಸ್ ಸಿಲಿಂಡರ್ ಕೂಡ ಕೊರತೆಯಾಗಬಹುದು ಎಂಬ ನಿರೀಕ್ಷೆಯಿದೆ. ಸಹಜವಾಗಿ ಯಾವುದೇ ವಸ್ತುವಿನ ಕೊರತೆ ಆರಂಭವಾದಾಗ ನಾವು ಆತಂಕಕ್ಕೆ ಒಳಗಾಗುತ್ತೇವೆ. ಅದರಿಂದ ಬಚಾವಾಗಲು ಆ ವಸ್ತುವನ್ನು ಹೆಚ್ಚು ಶೇಖರಿಸಲು ಹವಣಿಸುತ್ತೇವೆ. ಈಗ ಗ್ಯಾಸ್ ವಿಷಯದಲ್ಲೂ ಹಾಗೇ ಆಗುತ್ತಿದೆ. ಗ್ಯಾಸ್ ಕೊರತೆ ಆಗಬಹುದು ಎಂದೆನಿಸುತ್ತಿದ್ದಂತೆ ಕೆಲವರು ದಿಢೀರನೆ ಗ್ಯಾಸ್ ಬುಕ್ ಮಾಡಲಾರಂಭಿಸಿದ್ದಾರೆ. ಸಿಕ್ಕರೆ ಖರೀದಿಸಿ ಇಟ್ಟುಕೊಳ್ಳೋಣ ಎಂಬ ಯೋಚನೆ ಸಹಜ. ಅದರ ಬದಲಾಗಿ ನಾವು ಕಡಿಮೆ ಗ್ಯಾಸ್ ಬಳಸುವ ಮಾರ್ಗ ಅನುಸರಿಸಬಹುದೆ? ಹೇಗೂ ಈಗ ಬೇಸಿಗೆ. ತಣ್ಣಗಿನ ಆಹಾರಗಳನ್ನು ಅಥವಾ ಬೆಂಕಿಯ ಅಗತ್ಯವಿಲ್ಲದ ಆಹಾರವನ್ನು ನಮ್ಮ ದಿನನಿತ್ಯದ ಬಳಕೆಯಲ್ಲಿ ಹೆಚ್ಚಿಸಬಹುದೆ? ಶಾಲೆ–ಕಾಲೇಜುಗಳಲ್ಲಿ ಬೆಂಕಿ ಇಲ್ಲದ ಅಡುಗೆಯ ಸ್ಪರ್ಧೆ ಇರುತ್ತದಲ್ಲ, ಅಂತಹ ಕೌಶಲ್ಯಗಳನ್ನು ನಾವು ಈ ಸಮಯದಲ್ಲಿ ಹೆಚ್ಚು ಬಳಸಬಹುದೆ ಎಂದು ಯೋಚಿಸಬಹುದು. ನಾವೀನ್ಯಕ್ಕೆ ಹೆಸರಾದ ಭಾರತೀಯರಿಗೆ ಇದು ಅಸಾಧ್ಯವಾದ ಸಂಗತಿಯಂತೂ ಖಂಡಿತ ಅಲ್ಲ. ➡ಪುಟ 6

ಹೋಟೆಲ್ ಉದ್ಯಮಕ್ಕೆ ಭಾರೀ ಸಂಕಷ್ಟ

ಬೆಂಗಳೂರು: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆ ಹೆಚ್ಚಾಗುತ್ತಿದ್ದು, ಇದರಿಂದ ಬೆಂಗಳೂರಿನಲ್ಲಿನ ಕೆಲವು ಹೋಟೆಲ್‌ಗಳಲ್ಲಿ ಕೇವಲ ಟೀ ಕಾಫಿ ಸೇರಿದಂತೆ ಕೆಲ ತಿಂಡಿ ತಿನಿಸುಗಳನ್ನು ಮಾತ್ರ ನೀಡುತ್ತಿದ್ದು, ಇನ್ನು ಕೆಲವು ಹೋಟೆಲ್‌ಗಳು ಸಂಪೂರ್ಣ ಬಂದ್ ಮಾಡಲು ಹೋಟೆಲ್ ಮಾಲೀಕರು ಮುಂದಾಗುತ್ತಿದ್ದಾರೆ. ಸೋಮವಾರ ಈ ಸಂಬಂಧ ಹೋಟೆಲ್ ಸಂಘವು ಹೋಟೆಲ್‌ಗಳಲ್ಲಿ ಸಿಲಿಂಡರ್ ಖಾಲಿ ಆದ ಹಾಗೇ ಬಂದ್ ಮಾಡಲಾಗುವುದು ಎಂದು ತಿಳಿಸಿತ್ತು. ಅದರಂತೆ ಮಂಗಳವಾರ ಕೆಲ ಹೋಟೆಲ್‌ಗಳಲ್ಲಿ ಕೇವಲ ಟೀ, ಕಾಫಿ ಮಾತ್ರ ನೀಡುತ್ತಿದ್ದರು, ಇನ್ನು ಕೆಲವೆಡೆ ಅಧಿಕ ಅನಿಲ ಖರ್ಚಾಗುವ ತಿನಿಸುಗಳನ್ನು ಹೊರತುಪಡಿಸಿ ಇತರ ತಿನಿಸುಗಳನ್ನು ನೀಡಲಾಗುತ್ತಿತ್ತು.



ಕೇಂದ್ರ ಸಚಿವರಿಗೆ ಸಿಎಂ ಮನವಿ

ಈ ಬಗ್ಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರ ಬರೆದು ಬೆಂಗಳೂರಿನ ಹಲವು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ, ಇದೇ ಪರಿಸ್ಥಿತಿ ಮುಂದುವರಿದರೆ ಹಲವಾರು ಹೋಟೆಲ್‌ಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಪರಿಸ್ಥಿತಿ ಎದುರಾಗಬಹುದಾಗಿದೆ. ಆ ನಿಟ್ಟಿನಲ್ಲಿ ತಕ್ಷಣ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ವಿಮಾನಯಾನ ದರ ಏರಿಕೆ ಬಿಸಿ

ಹೊಸದಿಲ್ಲಿ: ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ಸಂಘರ್ಷದಿಂದಾಗಿ ಜೆಟ್ ಇಂಧನದ ಬೆಲೆ ತೀವ್ರವಾಗಿ ಏರಿಕೆಯಾಗಿರುವ ಕಾರಣ, ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಟಿಕೆಟ್‌ಗಳಿಗೆ ಹೆಚ್ಚುವರಿ ಇಂಧನ ಶುಲ್ಕ ವಿಧಿಸಲು ನಿರ್ಧರಿಸಿವೆ. ಮಾ.12ರಿಂದ ದೇಶೀಯ ವಿಮಾನ ಟಿಕೆಟ್‌ಗಳಿಗೆ ಪ್ರತಿ ಪ್ರಯಾಣಿಕನಿಗೂ 399 ರೂ. ಇಂಧನ ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ. ಸಾರ್ಕ್ ದೇಶಗಳ ಮಾರ್ಗಗಳಿಗೂ ಇದು ಅನ್ವಯವಾಗುತ್ತದೆ. ➡ಪುಟ 2

ಸರ್ಕಾರದ ವಿರುದ್ಧ ಪ್ರತಿಪಕ್ಷ ನಾಯಕ ಕಿಡಿ

ಬಜೆಟ್‌ನಲ್ಲಿ ಜನರಿಗೆ ಅನ್ಯಾಯ: ಅಶೋಕ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್ ರಾಜ್ಯದ ಜನರನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದೆ. ಹಿಂದುಳಿದ ವರ್ಗ, ಪರಿಶಿಷ್ಟ ವರ್ಗ ಹಾಗೂ ಎಲ್ಲ ವರ್ಗದ ಜನರಿಗೆ ಈ ಬಜೆಟ್ ತೀವ್ರ ಅನ್ಯಾಯ ಮಾಡಿದೆ. ವಿತ್ತೀಯ ಕೊರತೆ ಹಾಗೂ ಸಾಲದ ಪ್ರಮಾಣ ಮಿತಿಮೀರಿ ಹೋಗಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆರೋಪಿಸಿದರು. ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಳೇ ಸಾಲ ತೀರಿಸಲು ಹೊಸ ಸಾಲ ಮಾಡಿದ್ದಾರೆ. ➡ಪುಟ 2



ಸಾಲದ ಹೊರೆ ಹೆಚ್ಚಳ

ಮೂರು ವರ್ಷದಲ್ಲಿ ಒಟ್ಟು ವಿತ್ತೀಯ ಕೊರತೆ 54,660 ಕೋಟಿ ರೂ. ಆಗಿದೆ. ಈ ಮೂಲಕ ರಾಜ್ಯದ ಆರ್ಥಿಕ ಹೊಣೆ ದಯನೀಯ ಸ್ಥಿತಿಗೆ ಬಂದಿದೆ. ಸಿದ್ದರಾಮಯ್ಯ ಮಾತ್ರ 4,36,803 ಕೋಟಿ ರೂ. ಸಾಲ ಮಾಡಿದ್ದು, ಒಟ್ಟು ಸಾಲದಲ್ಲಿ ಅವರ ಸಾಲದ ಪ್ರಮಾಣ 52.33% ಆಗಿದೆ. ಸಿದ್ದರಾಮಯ್ಯನವರು ಸಾಲದ ರಾಮಯ್ಯ ಆಗಿದ್ದಾರೆ ಎಂದು ಆಶೋಕ ಆರೋಪಿಸಿದರು.

ಲೋಕಸಭೆ ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ಚರ್ಚೆ | ಮಾತಿನ ಚಕಮಕಿ

ಪ್ರತಿಪಕ್ಷದ ವರ್ತನೆ ಬೇಜವಾಬ್ದಾರಿಯುತ: ಶಾ

ಹೊಸದಿಲ್ಲಿ: ಲೋಕಸಭೆ ಸ್ಪೀಕರ್ ಓಂ ಬಿರ್ಲಾ ವಿರುದ್ಧದ ಅವಿಶ್ವಾಸ ನಿರ್ಣಯದ ಕುರಿತು ಲೋಕಸಭೆಯಲ್ಲಿ ಮಂಗಳವಾರ ಚರ್ಚೆ ಆರಂಭವಾಗುತ್ತಿದ್ದಂತೆ, ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ತೀವ್ರ ವಾಗ್ವಾದ ನಡೆದಿದೆ. ಕಾಂಗ್ರೆಸ್ ಸಂಸದ ಗೌರವ್ ಗೊಗೊಯ್ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ವಿರುದ್ಧ ಟೀಕೆ ಮಾಡಿದ್ದು, ಮಧ್ಯಪ್ರವೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರತಿಪಕ್ಷದ ವರ್ತನೆಯನ್ನು ಬೇಜವಾಬ್ದಾರಿಯುತ ಎಂದು ಆರೋಪಿಸಿದರು.

ಇದಕ್ಕೂ ಮುನ್ನ ಚರ್ಚೆ ವೇಳೆ ಮಾತನಾಡಿದ ಗೊಗೊಯ್, ಭವಿಷ್ಯದಲ್ಲಿ ಸಂಸತ್ತಿನ ದಾಖಲೆಗಳನ್ನು ಪರಿಶೀಲಿಸಿದಾಗ ರಿಜಿಜು ಪ್ರತಿಪಕ್ಷವನ್ನು ಅತಿ ಹೆಚ್ಚು ಬಾರಿ ಅಡ್ಡಿಪಡಿಸಿದ ಸಂಸದೀಯ ವ್ಯವಹಾರಗಳ ಸಚಿವ ಎಂದು ನೆನಪಾಗುವರು ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ರಿಜಿಜು, ಪ್ರತಿಪಕ್ಷ ಸದಸ್ಯರು ಅಸಂಸದೀಯ ಪದಗಳನ್ನು ಬಳಸುತ್ತಿದ್ದಾರೆ ಎಂದು ಆರೋಪಿಸಿ, ತಾವು ಅದಕ್ಕೆ ಉತ್ತರ ನೀಡಬೇಕಾಗುತ್ತದೆ ಎಂದು ಹೇಳಿದರು. ಇದಕ್ಕೆ ತಿರುಗೇಟು ನೀಡಿದ ಗೊಗೊಯ್, ಸಂಸತ್ತಿನ ದಾಖಲೆಗಳೇ ರಿಜಿಜು ಅವರ ಅಡ್ಡಿಪಡಿಸುವ ದಾಖಲೆಯನ್ನು ತೋರಿಸುತ್ತವೆ ಎಂದು ವ್ಯಂಗ್ಯವಾಡಿದರು. ➡ಪುಟ 2



ಚರ್ಚೆಯಲ್ಲಿ ಯಾರೆಲ್ಲಾ ಭಾಗಿ?

ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ನಿರ್ಣಯದ ಮೇಲಿನ ಚರ್ಚೆಯನ್ನು ಪ್ರಾರಂಭಿಸಲಿದ್ದಾರೆ. ಬಿಜೆಪಿ ಸಂಸದರಾದ ಅನುರಾಗ್ ಠಾಕೂರ್, ನಿಶಿಕಾಂತ್ ದುಬೆ, ರವಿಶಂಕರ್ ಪ್ರಸಾದ್ ಮತ್ತು ಭರ್ತೃಹರಿ ಮಹ್ತಾಬ್ ಈ ವಿಷಯದ ಕುರಿತು ಮಾತನಾಡಲಿದ್ದು, ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್) ಚಿರಾಗ್ ಪಾಸ್ವಾನ್ ಕೂಡ ಚರ್ಚೆಯ ಸಂದರ್ಭದಲ್ಲಿ ಸದನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಲೋಕಸಭಾ ಸ್ಪೀಕರ್ ಅವರನ್ನು ಪದಚ್ಯುತಗೊಳಿಸುವಂತೆ ಕೋರುವ ನಿರ್ಣಯದ ಪರವಾಗಿ ಕಾಂಗ್ರೆಸ್ ಸಂಸದರಾದ ಗೌರವ್ ಗೊಗೊಯ್, ಮನೀಶ್ ತಿವಾರಿ, ದೀಪೇಂದರ್ ಸಿಂಗ್ ಹೂಡಾ ಮತ್ತು ಜೋತಿಮಣಿ ಅವರು ತಮ್ಮ ವಾದ ಮಂಡಿಸಲಿದ್ದಾರೆ.

ಪಶ್ಚಿಮ ಬಂಗಾಳಕ್ಕೆ ತರಾಟೆ

ಹೊಸದಿಲ್ಲಿ: ಪಶ್ಚಿಮ ಬಂಗಾಳ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಮೇಲುಸ್ತುವಾರಿ ನೋಡಿಕೊಳ್ಳುವ ನ್ಯಾಯಾಂಗ ಅಧಿಕಾರಿಗಳ ನಿಷ್ಠೆಯನ್ನೇ ಪ್ರಶ್ನಿಸುವುದನ್ನು ನಾನು ಸಹಿಸಲಾರೆ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ(ಸಿಜೆಐ) ಸೂರ್ಯ ಕಾಂತ್ ತರಾಟೆಗೆತ್ತಿಕೊಂಡಿದ್ದಾರೆ.

ಪಶ್ಚಿಮ ಬಂಗಾಳದ ಎಸ್‌ಐಆರ್ ಪರಿಷ್ಕರಣೆಯನ್ನು ಪ್ರಶ್ನಿಸಿ ಸಲ್ಲಿಸಿದ ಅರ್ಜಿಗಳ ವಿಚಾರಣೆ ವೇಳೆ ಸಿಜೆಐ ಸೂರ್ಯ ಕಾಂತ್, ಈ ರೀತಿಯ ಅರ್ಜಿಗಳನ್ನು ಸಲ್ಲಿಸಲು ನಿಮಗೆ ಧೈರ್ಯ ಹೇಗೆ ಬಂತು? ನಿಮ್ಮ ಅರ್ಜಿ ತೀರಾ ಬಾಲಿಶವಾಗಿದೆ. ➡ಪುಟ 2

» ನ್ಯಾಯಾಂಗ ಅಧಿಕಾರಿಗಳ ನಿಷ್ಠೆ ಪ್ರಶ್ನಿಸುವ ಧೈರ್ಯವೇ?: ಸಿಜೆಐ ಪ್ರಶ್ನೆ

ಷರಿಯತ್ ಕುರಿತ ಅರ್ಜಿ | ಸುಪ್ರೀಂ ಅಭಿಪ್ರಾಯ

ಯುಸಿಸಿ ಸಮಯ ಬಂದಿದೆ

ಹೊಸದಿಲ್ಲಿ: ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ಅಗತ್ಯವಿರುವ ಸಮಯ ಬಂದಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಅಭಿಪ್ರಾಯಪಟ್ಟಿದೆ.

1937ರ ಷರಿಯತ್ ಕಾನೂನಿನ ಕೆಲವು ವಿಧಿಗಳು ಮುಸ್ಲಿಂ ಮಹಿಳೆಯರ ವಿರುದ್ಧ ಭೇದಭಾವ ತೋರಿಸುತ್ತಿದ್ದು, ಅವನ್ನು ರದ್ದುಪಡಿಸುವಂತೆ ಸಲ್ಲಿಸಲಾದ ಅರ್ಜಿಯನ್ನು ಬಹಳ ಉತ್ತಮ ಪ್ರಕರಣ ಎಂದು ಹೇಳಿದ ನ್ಯಾಯಾಲಯ, ಈ ವಿಷಯವನ್ನು ಪರಿಶೀಲಿಸುವುದು ಮುಖ್ಯವಾಗಿ ಶಾಸಕಾಂಗದ ಕೆಲಸವಾಗಿರಬಹುದು ಎಂದು ಕೋರ್ಟ್ ಅಭಿಪ್ರಾಯಪಟ್ಟಿತು. ಇದೇ ವೇಳೆ ಯುಸಿಸಿ ಸಮಯ ಬಂದಿದೆ ಎಂದು ಹೇಳಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ಆರ್. ಮಹಾದೇವನ್ ಅವರಿದ್ದ ಪೀಠವು, ಷರಿಯತ್ ಪರಂಪರೆಯ ವಾರಸುದಾರಿಕೆ ನಿಯಮವನ್ನು ಕೋರ್ಟ್ ರದ್ದುಪಡಿಸಿದರೆ, ಕಾನೂನಾತ್ಮಕ ಶೂನ್ಯತೆ ಉಂಟಾಗಬಹುದು ಎಂದು ಹೇಳಿತು. ಏಕೆಂದರೆ ಮುಸ್ಲಿಂ ವಾರಸುದಾರಿಕೆಗೆ ಸಂಬಂಧಿಸಿದ ಪ್ರತ್ಯೇಕ ಕಾನೂನು ಇಲ್ಲ. ಸುಧಾರಣೆಗಳ ಬಗ್ಗೆ ಆತುರದಲ್ಲಿ ನಾವು ಅವರಿಗೆ ಈಗಿರುವ ಹಕ್ಕುಗಳಿಗಿಂತ ಕಡಿಮೆ ಸಿಗುವ ಪರಿಸ್ಥಿತಿ ಉಂಟುಮಾಡಬಹುದು. ➡ಪುಟ 2

ನ್ಯಾಯಪೀಠ ಹೇಳಿದ್ದೇನು?

- ಷರಿಯತ್ ಕಾಯ್ದೆಯ ವಿಷಯದಲ್ಲಿ ಸುಧಾರಣೆಗಳನ್ನು ಮಾಡುವ ಮುಖ್ಯ ಅಧಿಕಾರ ಶಾಸನಸಭೆಗೆ ಇದೆ
- 1937ರ ಷರಿಯತ್ ಕಾಯ್ದೆ ರದ್ದುಪಡಿಸಿದರೆ ವಾರಸುದಾರಿಕೆಯಲ್ಲಿ ಕಾನೂನಾತ್ಮಕ ಶೂನ್ಯತೆ ಉಂಟಾಗುವ ಸಾಧ್ಯತೆ ಇದೆ
- ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಬೇಕಾದ ಸಮಯ ಬಂದಿದೆ
- ವಿಷಯ ಸಂಕೀರ್ಣವಾಗಿರುವುದರಿಂದ ಹೆಚ್ಚಿನ ಅಧ್ಯಯನ, ಉಲ್ಲೇಖಗಳು, ಪರ್ಯಾಯ ಪರಿಹಾರಗಳು ಅಗತ್ಯ

ವಿಧಾನ ಪರಿಷತ್‌ನ 3 ಸ್ಥಾನಕ್ಕೆ ಹೆಸರು ಘೋಷಿಸಿದ ಬಿಜೆಪಿ

ಬೆಂಗಳೂರು: ಮುಂದಿನ ನವೆಂಬರ್‌ನಲ್ಲಿ ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಬಿಜೆಪಿ ಮೂರು ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ.

ಈಶಾನ್ಯ ಶಿಕ್ಷಕರ ಕ್ಷೇತ್ರದಿಂದ ಶಶಿಲ್ ಜಿ. ನಮೋಶಿ, ಪಶ್ಚಿಮ ಪದವೀಧರರ ಕ್ಷೇತ್ರದಿಂದ ಎಸ್.ವಿ.ಸಂಕನೂರು ಹಾಗೂ ಆಗ್ನೇಯ ಪದವೀಧರರ ಕ್ಷೇತ್ರದಿಂದ ಕೆ.ಎಂ.ಸುರೇಶ್ ಹೆಸರು ಅಂತಿಮಗೊಳಿಸಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಮಂಗಳವಾರ ಪ್ರಕಟಿಸಿದ್ದಾರೆ.

ಹಾಲಿ ಕಾಂಗ್ರೆಸ್ ಪಕ್ಷದ ಪುಟ್ಟಣ್ಣ ಇರುವ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಬಿಜೆಪಿ ತನ್ನ ಅಭ್ಯರ್ಥಿಯನ್ನು ಘೋಷಿಸಿಲ್ಲ. ಆಗ್ನೇಯ ಪದವೀಧರರ ಕ್ಷೇತ್ರವನ್ನು ಹಾಲಿ ಬಿಜೆಪಿ ಸದಸ್ಯ ಚಿದಾನಂದ ಎಂ.ಗೌಡ ಪ್ರತಿನಿಧಿಸುತ್ತಿದ್ದಾರೆ. ಅಲ್ಲಿ ದಾವಣಗೆರೆಯ ಕೆ.ಎಂ.ಸುರೇಶ್ ಅವರಿಗೆ ಬಿಜೆಪಿ ಅವಕಾಶ ಮಾಡಿಕೊಟ್ಟಿದೆ.

₹13.50 ಕೋಟಿ ವೆಚ್ಚದಲ್ಲಿ ಯಂತ್ರಗಳ ಖರೀದಿಗೆ ಅನುಮೋದನೆ

ಕೆಎಂಸಿಆರ್‌ಐನಲ್ಲಿ ಶೀಘ್ರ ಡಿಎಸ್‌ಎ


▸ ವಿಜಯಕುಮಾರ ಬೆಳ್ಳೇರಿಮಠ

ದಿಗಂತ ವಿಶೇಷ

ಹುಬ್ಬಳ್ಳಿ: ಇಲ್ಲಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಯಲ್ಲಿ(ಕೆಎಂಸಿಆರ್‌ಐ) ಪಾರ್ಶ್ವವಾಯು ರೋಗಿಗಳ ಆರೈಕೆಗೆ 13.50 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಡಿಎಸ್‌ಎ (ಡಿಜಿಟಲ್ ಸಬ್ಟ್ರಾಕ್ಷನ್ ಆಂಜಿಯೋಗ್ರಫಿ) ಕ್ಯಾಥ್‌ಲ್ಯಾಬ್ ನಿರ್ಮಾಣ ಪ್ರಕ್ರಿಯೆ ನಡೆದಿದ್ದು, ಶೀಘ್ರದಲ್ಲಿಯೇ ಆರಂಭವಾಗಲಿದೆ.

ಕ್ಯಾಬಿನೆಟ್‌ನಲ್ಲಿ 10 ಕೋಟಿ ಹಾಗೂ ಕೆಎಂಸಿಆರ್‌ಐ ಸಂಸ್ಥೆಯ 3.50 ಕೋಟಿ ಅನುದಾನದಲ್ಲಿ ಯಂತ್ರಗಳ ಖರೀದಿಗೆ ಅನುಮೋದನೆ ದೊರೆತಿದ್ದು, ಕೆಎಂಸಿಆರ್‌ಐ ಆಸ್ಪತ್ರೆಯ ರೇಡಿಯಾಲಜಿ ವಿಭಾಗದಲ್ಲಿ ಸಿವಿಲ್ ವರ್ಕ್ ಸಹ ಪ್ರಾರಂಭಿಸಿ ಯಂತ್ರಗಳ ಅಳವಡಿಕೆ ಮಾಡಲಾಗುತ್ತಿದೆ. ಬೆಂಗಳೂರು ನಿಮಾನ್ಸ್‌ನಲ್ಲಿ ಈ ಸೌಲಭ್ಯವಿದ್ದು, ಈಗ ಹುಬ್ಬಳ್ಳಿ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಅಳವಡಿಸಲಾಗುತ್ತಿದೆ. ಇದರಿಂದ ಉತ್ತರ ಕರ್ನಾಟಕ ಭಾಗದ ರೋಗಿಗಳಿಗೆ ವರದಾನವಾಗಲಿದೆ.

ಡಿಎಸ್‌ಎ ಕ್ಯಾಥ್‌ಲ್ಯಾಬ್ ಉದ್ದೇಶ: ಕ್ಯಾಥ್‌ಲ್ಯಾಬ್ ಯಂತ್ರವೂ ಮಿದುಳಿನ ಹಾಗೂ ಹೃದಯದ ರಕ್ತನಾಳಗಳನ್ನು ಪರೀಕ್ಷೆ ಹಾಗೂ ಚಿಕಿತ್ಸೆ ನೀಡಲು ಬಳಸುವ ಸುಧಾರಿತ ವೈದ್ಯಕೀಯ ಸೌಲಭ್ಯವಾಗಿದೆ. ಹೃಯದಕ್ಕೆ ಹೇಗೆ ಆಂಜಿಯೋಗ್ರಫಿ ಮಾಡಿ ಸ್ಟಂಟ್ ಅಳವಡಿಸಿ ಹೃದಯಘಾತ ತಡೆಯಲು ಸಾಧ್ಯವೋ, ಅದೇ ರೀತಿ ಮೆದುಳಿನ ಆಂಜಿಯೋಗ್ರಫಿ ಮಾಡಲು ಈ ಯಂತ್ರವೂ ಅನುಕೂಲವಾಗಲಿದೆ. ಇದು ಅಡ್ವಾನ್ಸ್ ತಂತ್ರಜ್ಞಾನವಾಗಿದ್ದು, ಮುಂಚಿತವಾಗಿ ಪಾರ್ಶ್ವವಾಯು ರೋಗದಿಂದ ತಡೆಯಲು ಅನುಕೂಲವಾಗಲಿದೆ ಎಂದು ಕೆಎಂಸಿಆರ್‌ಐ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.



ಪಾರ್ಶ್ವವಾಯು ರೋಗಿಗಳ ಆರೈಕೆಗೆ ವರದಾನ

ಕೆಎಂಸಿಆರ್‌ಐ ಆಸ್ಪತ್ರೆಗೆ ಪ್ರತಿ ತಿಂಗಳ 130ರಿಂದ 150 ಜನ ರೋಗಿಗಳು ಚಿಕಿತ್ಸೆ ಪಡೆಯಲು ದಾಖಲಾಗುತ್ತಾರೆ. ಪಾರ್ಶ್ವವಾಯು ಲಕ್ಷಣಗಳು ಕಂಡು ಬಂದ ಮೂರು ಗಂಟೆಯ ಮೊದಲು ರೋಗಿಗಳು ಬಂದರೆ ಸಿ.ಟಿ. ಸ್ಕ್ಯಾನ್ ಮಾಡಿ ಟೆನೆಕ್ಟೆಪ್ಲೇಸ್ ಎಂಬ ಇಂಜೆಕ್ಷನ್ ನೀಡಿದರೆ ಬಹುತೇಕ ಗುಣಮುಖರಾಗುತ್ತಾರೆ. ಆದರೆ, ಮೂರು ಗಂಟೆ ನಂತರ ಬಂದರೆ, ತಪಾಸಣೆ ಮಾಡುವ ಅವಶ್ಯಕತೆ ಇದೆ. ಅದರಲ್ಲಿ ಎಷ್ಟು ಪ್ರಮಾಣದಲ್ಲಿ ರಕ್ತನಾಳದಲ್ಲಿ ರಕ್ತ ಹೆಪ್ಪುಗಟ್ಟಿದೆ ಎಂಬುದನ್ನು ಪತ್ತೆ ಮಾಡಿ ನಿವಾರಣೆ ಮಾಡಲು ಯಂತ್ರ ಸಹಕಾರಿಯಾಗಲಿದೆ ಎಂದು ಹೇಳಿದರು.

ಕೈಕಾಲುಗಳಲ್ಲಿ ರಕ್ತ ಹೆಪ್ಪುಗಟ್ಟುವುದು, ರಕ್ತನಾಳ ಸಣ್ಣದಾಗಿರುವುದನ್ನು ಈ ಯಂತ್ರದ ಸರಿಪಡಿಸಬಹುದು. ಈ ಯಂತ್ರದ ಮೂಲಕ ತಪಾಸಣೆ ದರವನ್ನು ಸರ್ಕಾರ ಇನ್ನೂ ನಿಗದಿಪಡಿಸಿಲ್ಲ. ಖಾಸಗಿ ಆಸ್ಪತ್ರೆಗಳಲ್ಲಿ ಇದಕ್ಕೆ 3.50 ಲಕ್ಷದಿಂದ 4 ಲಕ್ಷವರೆಗೂ ವೆಚ್ಚವಾಗುತ್ತದೆ. ಆಯುಷ್ಮಾನ್ ಭಾರತ್ ಕಾರ್ಡ್ ಇದ್ದರೆ ಯಾವುದೇ ಶುಲ್ಕ ಇರುವುದಿಲ್ಲ ಎಂದರು.

ಹಬ್ ಆ್ಯಂಡ್ ಸ್ಪೋಕ್

ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ನರ ವಿಜ್ಞಾನ ವಿಭಾಗವಿದ್ದು, ಸೂಕ್ತ ಸಿಬ್ಬಂದಿಯೂ ಸಹ ಇದ್ದಾರೆ. ಆದರೆ, ಡಿಎಸ್‌ಎ (ಡಿಜಿಟಲ್ ಸಬ್ಟ್ರಾಕ್ಷನ್ ಆಂಜಿಯೋಗ್ರಫಿ) ಕ್ಯಾಥ್ ಲ್ಯಾಬ್‌ಗೆ ತಾಂತ್ರಿಕ ಪರಿಣಿತರ ಅವಶ್ಯಕತೆ ಮಾತ್ರವಿದೆ. ಕ್ಯಾಥ್‌ಲ್ಯಾಬ್‌ನಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಅಳಡಿಸಿಕೊಳ್ಳುತ್ತಿದ್ದು, ಹಬ್ ಆ್ಯಂಡ್ ಸ್ಪೋಕ್ ಆದ್ಯತೆ ನೀಡಲಾಗುತ್ತಿದೆ. ಲ್ಯಾಬ್‌ನಲ್ಲಿ ಡಿಜಿಟಲ್ ಮೂಲಕ ಸ್ಥಳೀಯ ವೈದ್ಯರು ತಜ್ಞ ವೈದ್ಯರ ಸಂಪರ್ಕಿಸಿ ಸಲಹೆ ಪಡೆದು ಚಿಕಿತ್ಸೆ ನೀಡಲು ಅನುಕೂಲವಾಗಲಿದೆ ಎಂದು ಕೆಎಂಸಿಆರ್‌ಐ ಆಸ್ಪತ್ರೆ ನಿರ್ದೇಶಕ ಡಾ. ಈಶ್ವರ ಹೊಸಮನಿ ತಿಳಿಸಿದರು.

ಉತ್ತರ ಕರ್ನಾಟಕ ಭಾಗದಲ್ಲಿ ಏಳೆಂಟು ಜಿಲ್ಲೆಯ ಜನರಿಗೆ ಡಿಎಸ್‌ಎ (ಡಿಜಿಟಲ್ ಸಬ್ಟ್ರಾಕ್ಷನ್ ಆಂಜಿಯೋಗ್ರಫಿ) ಕ್ಯಾಥ್ ಲ್ಯಾಬ್ ಅನುಕೂಲವಾಗಲಿದೆ. ಇನ್ನೂ 2-3 ತಿಂಗಳಲ್ಲಿ ಲ್ಯಾಬ್ ಆರಂಭಿಸಿ ರೋಗಿಗಳಿಗೆ ಸೂಕ್ತ ಚಿಕಿತ್ಸೆ ದೊರೆಯುವಂತೆ ಮಾಡಲಾಗುವುದು.

■ **ಡಾ. ಈಶ್ವರ ಹೊಸಮನಿ, ನಿರ್ದೇಶಕ ಕೆಎಂಸಿಆರ್‌ಐ**

ಜಲಮಹೋತ್ಸವ ಕಾರ್ಯಕ್ರಮಕ್ಕೆ ಆಯ್ಕೆ



ಗಜೇಂದ್ರಗಡ: ದೆಹಲಿಯಲ್ಲಿ ಇಂದು ನಡೆಯುವ ಜಲ ಮಹೋತ್ಸವ ಕಾರ್ಯಕ್ರಮಕ್ಕೆ ವಿಶೇಷ ಆಮಂತ್ರಿಕರಾಗಿ ನಿಡಗುಂದಿ ಗ್ರಾಮ ಪಂಚಾಯತ ಮಟ್ಟದ ಜಲ-ಸಖಿ ರೋಷನ್ ಬೇಗ್ಂ ಶಿರಗುಂಪಿಯವರನ್ನು ಆಯ್ಕೆ ಮಾಡಲಾಗಿದೆ. ಭಾರತ ಸರ್ಕಾರ ರಾಷ್ಟ್ರಪತಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಲ ಮಹೋತ್ಸವ ಸಮಾರಂಭದ ವಿಶೇಷ ಆಮಂತ್ರಿಕರಾಗಿ ಆಯ್ಕೆಯಾಗಿರುವುದಕ್ಕೆ ತಾಲೂಕು ಪಂಚಾಯತ ಅಧಿಕಾರಿಗಳು ಹರ್ಷ ವ್ಯಕ್ತಪಡಿಸಿದ್ದಾರೆ. ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಜಲ ಮಿಷನ್ ಯೋಜನೆಯ ಅನುಷ್ಠಾನ, ಸುಸ್ಥಿರತೆ ಕುಡಿಯುವ ನೀರಿನ ಪದ್ಧತಿ ಜಾರಿ ಮೇಲ್ವಿಚಾರಣೆ ಮತ್ತು ನಿರ್ವಹಣೆಯನ್ನು ಉತ್ತಮವಾಗಿ ಕೈಗೊಂಡಿರುವ ಸಂಜೀವಿನಿ ಮಹಿಳಾ ಸದಸ್ಯರನ್ನಾಗಿ ಗದಗ ಜಿಲ್ಲೆಯಿಂದ ರೋಷನ್ ಬೇಗ್ಂ ಆಯ್ಕೆ ಮಾಡಲಾಗಿದೆ.

ಈಶಾನ್ಯ ಶಿಕ್ಷಕರ ಕ್ಷೇತ್ರ: ನಮೋಶಿಗೆ ಬಿಜೆಪಿ ಟಿಕೆಟ್

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳ ವ್ಯಾಪ್ತಿಗೆ ಒಳಪಡುವ ಕರ್ನಾಟಕ ವಿಧಾನ ಪರಿಷತ್‌ನ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಚುನಾವಣೆಗೆ ಭಾರತೀಯ ಜನತಾ ಪಕ್ಷ (ಬಿಜೆಪಿ) ತನ್ನ ಅಭ್ಯರ್ಥಿಯನ್ನು ಘೋಷಿಸಿದೆ.



ಹಾಲಿ ಎಂಎಲ್ಸಿ ಶಶೀಲ್ ನಮೋಶಿ ಅವರನ್ನು ಮತ್ತೆ ಅಭ್ಯರ್ಥಿಯಾಗಿ ಕಣಕ್ಕಿಳಿಸಲು ಪಕ್ಷ ಅಧಿಕೃತವಾಗಿ ಘೋಷಣೆ ಮಾಡಿದೆ. ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ ವ್ಯಾಪ್ತಿಗೆ ಒಳಪಡುವ ಈಶಾನ್ಯ ಶಿಕ್ಷಕರ ಮತಕ್ಷೇತ್ರಕ್ಕೆ ಶೀಘ್ರದಲ್ಲೇ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿ ತನ್ನ ಅಭ್ಯರ್ಥಿಯನ್ನು ಪ್ರಕಟಿಸಿದೆ. ಈ ಕ್ಷೇತ್ರದಲ್ಲಿ ಮೇಲ್ಕಂಡ ಏಳು ಜಿಲ್ಲೆಗಳಲ್ಲಿನ ಪ್ರೌಢಶಾಲೆ ಹಾಗೂ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಮತದಾರರಾಗಿ ನೋಂದಾಯಿಸಿಕೊಂಡು ಚುನಾವಣೆಯಲ್ಲಿ ಮತ ಚಲಾಯಿಸುವ ಮೂಲಕ ವಿಧಾನ ಪರಿಷತ್‌ಗೆ ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡುತ್ತಾರೆ.

ಯುಪಿಎಸ್‌ಸಿ : 739ನೇ ರ್‍ಯಾಂಕ್

ನೇಸರಗಿ: ಸಮೀಪದ ಮೇಕಲಮರಡಿ ಗ್ರಾಮದ ನಿವಾಸಿ (ಹೊಸೂರ ಗ್ರಾಮದ) ಬಸವರಾಜ ಮಡಿವಾಳಪ್ಪ ಪಾಟೀಲ ದೇಶದ ಪ್ರತಿಷ್ಠಿತ ಯುಪಿಎಸ್‌ಸಿ ಪರೀಕ್ಷೆಯಲ್ಲಿ 739ನೇ ರ್‍ಯಾಂಕ್ ಪಡೆದು ತೇರ್ಗಡೆ ಆಗಿದ್ದಾನೆ.



ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಿಕ್ಷಕರಾದ ತಂದೆ ಮಡಿವಾಳಪ್ಪ ಮತ್ತು ತಾಯಿ ಶಾಂತವ್ವ ಇವರ ಸುಪುತ್ರನಾದ ಬಸವರಾಜ ಪ್ರಾಥಮಿಕ ಶಿಕ್ಷಣ ಚಿಕ್ಕೋಡಿ ತಾಲೂಕಿನ ಕಬ್ಬೂರಿನಲ್ಲಿ ಮಾಡಿ 6ರಿಂದ 10ನೇ ತರಗತಿ ವರೆಗೆ ಕೊಥಳಿ ಕುಪ್ಪನವಾಡಿ ಗ್ರಾಮದ ಜವಾಹರ ನವೋದಯ ಶಾಲೆಯಲ್ಲಿ ಕಲಿತು, ಧಾರವಾಡದಲ್ಲಿ ಪಿಯುಸಿ ವಿಜ್ಞಾನ ಮುಗಿಸಿದ್ದಾನೆ. ನಂತರ ಮೆಕ್ಯಾನಿಕ್ ಎಂಜಿನಿಯರಿಂಗ್ ಮುಗಿಸಿ, ಯುಪಿಎಸ್‌ಸಿ ಅಧ್ಯಯನಕ್ಕಾಗಿ ದೆಹಲಿಯ ವಾಜಿಭಾಯಿ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದು 739 ರ್‍ಯಾಂಕ್ ಪಡೆದು ತೇರ್ಗಡೆ ಆಗಿದ್ದಾನೆ.

ಮಾ.14ರಿಂದ ಟೈಕಾನ್ ಸಮಾವೇಶ-2026

ಹುಬ್ಬಳ್ಳಿ: ದಿ ಇಂಡಸ್ ಎಂಟರ್ಪ್ರನರ್ (ಟಿಐಇ) ಸಂಸ್ಥೆ ಹುಬ್ಬಳ್ಳಿ ಘಟಕದಿಂದ ನಾರ್ಥ ಕರ್ನಾಟಕ ರೈಸಿಂಗ್ ಎಂಬ ಟೈಕಾನ್ 2026 ಸಮಾವೇಶವನ್ನು ಮಾ.14 ಹಾಗೂ 15ರಂದು ನಗರದ ಗೋಕುಲ ರಸ್ತೆ ಡೆನಿಸನ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಟೈ ಹುಬ್ಬಳ್ಳಿ ಅಧ್ಯಕ್ಷ ಗಿರೀಶ ಮಾನೆ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟೈಕಾನ್ ಸಮಾವೇಶ ಕಳೆದ 16 ವರ್ಷದಿಂದ ಮಾಡಲಾಗುತ್ತಿದೆ. ಈ ಮೊದಲು ಹುಬ್ಬಳ್ಳಿ ಧಾರವಾಡ ಸೀಮಿತವಾಗಿದ್ದ ಟೈಕಾನ್ ಸಮಾವೇಶ ಪ್ರಸ್ತುತ ವರ್ಷ ಉತ್ತರ ಕರ್ನಾಟಕ ಭಾಗಕ್ಕೂ ವಿಸ್ತರಿಸಿ ಅಲ್ಲಿಯ ಉದ್ಯಮಿಗಳ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಮಾ.14ರಂದು ಬೆಳಗ್ಗೆ 10ಗಂಟೆಗೆ ಸಮಾವೇಶಕ್ಕೆ ಚಾಲನೆ ದೊರೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ವಿಶಾಲ ನಾಗನಗೌಡ ಮಾತನಾಡಿ, ಈ ಸಮಾವೇಶದಲ್ಲಿ ವಕ್ತಾರಾಗಿ ಅಲಿನಾ ಅಲಂ, ಡಾ. ಶಾಲಿನಿ ನಲ್ವಾಡ್, ರೂಮಾ ದೇವಿ, ವಿದ್ಯಾ ಎಂ. ಮುರ್ಕುಂಬಿ, ವಚನಾ ಶೆಟ್ಟಿ, ಜಾನ್ ಕುರುವಿಲ್ಲಾ, ಪ್ರಣವ ಮಹಾಜನಿ, ರೋಹಿತ್ ಭಟ್, ಕೆ. ಟಿ. ಉಪಾಧ್ಯಾಯ, ಉಮೇಶ್ ವಿ., ಮದನ್ ಪಡಕಿ ಮತ್ತು ಡಾ. ಸಂಜಯ್ ಅರೋರಾ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಇಲ್ಲಿಯವೆಗೆ 82 ನವೋದ್ಯಮಿಗಳು ನೋಂದಣಿ ಮಾಡಿಸಿದ್ದಾರೆ. ಅವರಿಗೆ ಉಚಿತ ನೋಂದಣಿಗೆ ಅವಕಾಶ ನೀಡಲಾಗಿದೆ. ಈ ವರ್ಷ ನವೋದ್ಯಮಿಗಳಿಗೆ ಹಲವು ಕಂಪನಿಗಳ ಭೇಟಿ ನೀಡಿ ಹಲವು ವಿಷಯಗಳ ಕುರಿತು ಚರ್ಚೆ ನಡೆಸಲಿದ್ದಾರೆ. ನವೋದ್ಯಮ ಸ್ಥಾಪಿಸುವ ಬಗ್ಗೆ ರೌಂಡ ಟೇಬಲ್ ಸಂವಾದ ನಡೆಯಲಿದೆ ಎಂದು ಹೇಳಿದರು. ಉಪಾಧ್ಯಕ್ಷ ಗೌರವ ಶಾ, ಸಂತೋಷ ಕೋಟ್ಲಿ, ವಿವೇಕ ಪಾಟೀಲ, ವೆಂಕಟೇಶ ಇದ್ದರು.

ದಾಂಡೇಲಿ-ಅಳ್ನಾವರ ರೈಲು ಸಂಚಾರ

ಸಮಯ ಬದಲಾವಣೆ: ಸಂಸದ ಕಾಗೇರಿ ಹರ್ಷ

ದಾಂಡೇಲಿ: ದಾಂಡೇಲಿ ರೈಲು ಪುನರಾರಂಭದ ಉದ್ಘಾಟನಾ ಕಾರ್ಯಕ್ರಮದ ಸಂದರ್ಭದಲ್ಲಿ ಕೇಂದ್ರ ರೈಲ್ವೆ ರಾಜ್ಯ ಸಚಿವರಾದ ವಿ.ಸೋಮಣ್ಣರವರು ನೀಡಿದ ಭರವಸೆಯಂತೆ, ಅಳ್ನಾವರ ಮತ್ತು ದಾಂಡೇಲಿ ನಡುವೆ ಸಂಚರಿಸುವ ಮೂರು ಜೋಡಿ ಡೆಮೋ ರೈಲುಗಳ ಸಮಯವನ್ನು ಪರಿಷ್ಕರಿಸಲಾಗಿದ್ದು, ಈ ನೂತನ ವೇಳಾಪಟ್ಟಿಯು ಮಾರ್ಚ್ 17ರಿಂದ ಜಾರಿಗೆ ಬರಲಿದೆ. ಸಾರ್ವಜನಿಕರ ಬೇಡಿಕೆಗೆ ಸ್ಪಂದಿಸಿ ಸಮಯ ಬದಲಾವಣೆ ಮಾಡಿಕೊಟ್ಟಿದ್ದಕ್ಕಾಗಿ ಕೇಂದ್ರ ರೈಲ್ವೆ ಸಚಿವರಿಗೆ ಹಾಗೂ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣರವರಿಗೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಕೃತಜ್ಞತೆ ಸಲ್ಲಿಸಿದ್ದಾರೆ.

ಅವರು ಮಂಗಳವಾರ ಪತ್ರಿಕೆಗೆ ನೀಡಿದ ಪ್ರಕಟಣೆಯಲ್ಲಿ ಪರಿಷ್ಕೃತ ಆದೇಶದಂತೆ, ಈ ಹಿಂದೆ ಭಾನುವಾರ ರಜೆ ಇರುತ್ತಿದ್ದ ಈ ರೈಲುಗಳು ಇನ್ನು ಮುಂದೆ ಗುರುವಾರ ಹೊರತುಪಡಿಸಿ ವಾರದ ಉಳಿದ ಆರು ದಿನಗಳ ಕಾಲ ಸಂಚರಿಸಲಿವೆ.

ಸಮಯದ ಬದಲಾವಣೆಯಂತೆ, ರೈಲು ಸಂಖ್ಯೆ 76501 ಅಳ್ನಾವರದಿಂದ ಬೆಳಗ್ಗೆ 5:00ಕ್ಕೆ ಹೊರಟು 5:45ಕ್ಕೆ ದಾಂಡೇಲಿ ತಲುಪಲಿದೆ ಮತ್ತು ರೈಲು ಸಂಖ್ಯೆ 76502 ದಾಂಡೇಲಿಯಿಂದ ಬೆಳಗ್ಗೆ 6:15ಕ್ಕೆ ಹೊರಟು 7:00ಕ್ಕೆ ಅಳ್ನಾವರ ತಲುಪಲಿದೆ. ರೈಲು ಸಂಖ್ಯೆ 76503 ಅಳ್ನಾವರದಿಂದ ಬೆಳಗ್ಗೆ 7:35ಕ್ಕೆ ಹೊರಟು 8:20ಕ್ಕೆ ದಾಂಡೇಲಿ ತಲುಪಲಿದ್ದು, ಮಧ್ಯಾಹ್ನದ ರೈಲು ಸಂಖ್ಯೆ 76504ರ ಸಮಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಅದೇ ರೀತಿ ಸಂಜೆಯ ರೈಲು ಸಂಖ್ಯೆ 76505 ಅಳ್ನಾವರದಿಂದ 18:00 ಕ್ಕೆ ಹೊರಟು 18:45ಕ್ಕೆ ದಾಂಡೇಲಿ ತಲುಪಲಿದ್ದು, ಮರಳಿ ಬರುವ ರೈಲು ಸಂಖ್ಯೆ 76506 ದಾಂಡೇಲಿಯಿಂದ 19:05ಕ್ಕೆ ಹೊರಟು 19:50ಕ್ಕೆ ಅಳ್ನಾವರ ತಲುಪಲಿದೆ.

ದೇಶಪಾಂಡೆ ಕೃತಜ್ಞತೆ: ಅಳ್ನಾವರ ಮತ್ತು ದಾಂಡೇಲಿ ನಡುವೆ ಸಂಚರಿಸುವ ಮೂರು ಜೋಡಿ ಡೆಮೋ ರೈಲುಗಳ ಸಮಯವನ್ನು ಪರಿಷ್ಕರಿಸಿರುವುದನ್ನು ಸ್ವಾಗತಿಸಿರುವ ಶಾಸಕ ಆರ್.ವಿ. ದೇಶಪಾಂಡೆ ಈ ಬಗ್ಗೆ ತಾವೂ ಸಹ ಮಾಡಿರುವ ಮನವಿಗೆ ಸ್ಪಂದಿಸಿರುವ ರೈಲ್ವೆ ಸಚಿವರಿಗೆ, ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

ಇಂದು ಕನಕಗಿರಿ ಕನಕಾಚಲಪತಿ ರಥೋತ್ಸವ

▸ ಶೇಖರಸಿಂಗ್ ಎಲ್ ರಜಪೂತ್

ಕನಕಗಿರಿ: ಕನಕಾಚಲ ಪತಿ ದೇವಸ್ಥಾನವು ಪುರಾಣ ಹಾಗೂ ಐತಿಹಾಸಿಕ ಸುಪ್ರಸಿದ್ಧ ಪುಣ್ಯ ಕ್ಷೇತ್ರ ಕನಕಗಿರಿ ಎರಡನೇ ತಿರುಪತಿ ಎಂದೆನಿಸಿದೆ. ಕಣ್ಣಿದ್ದವರು ಕನಕಗಿರಿ ನೋಡಿ ಕಾಲಿದ್ದವರು ಹಂಪೆಯನ್ನು ನೋಡಿಯಂತೆ ಐತಿಹಾಸಿಕ ಧಾರ್ಮಿಕ ಕ್ಷೇತ್ರ ಮತ್ತು ತಿರುಪತಿ ಮಾದರಿಯ 14 ದಿನ ನಡೆಯುವ ಜಾತ್ರೆಯಲ್ಲಿ ಲಕ್ಷಾಂತರ ಭಕ್ತರು ಪಾಲ್ಗೊಳ್ಳಲಿದ್ದಾರೆ. ಆರು ಚಕ್ರವುಳ್ಳ ರಥೋತ್ಸವದ ಮೇಲೆ ಗೊಂಬೆ ಕಟ್ಟುವುದ ಹೂವಿನ ಅಲಂಕಾರ ಮಾಡುವುದು ವಿವಿಧ ತಳಿರು ತೋರಣಗಳಿಂದ ರಥವನ್ನು ಶೃಂಗಾರಗೊಳಿಸಿದ್ದಾರೆ. ಸಂಜೆ 4.30ಕ್ಕೆ ರಥೋತ್ಸವವು ನಡೆಯಲಿದೆ.



ಪುಷ್ಕರಣಿಯ ಹತ್ತಿರ ತಲೆ ಮುಂಡೆ ಕೊಡುವ ಭಕ್ತರಿಗೆ ಸ್ನಾನಕ್ಕೆ ನೀರಿನ ವ್ಯವಸ್ಥೆ, ಮತ್ತು ಸಚ್ಚಿದಾನಂದ ಅವಧೂತರ ಮಠದಲ್ಲಿ ಎರಡು ದಿನಗಳ ಕಾಲ ಅನ್ನಸಂತರ್ಪಣೆ, ಬ್ರಾಹ್ಮಣ ಸಮಾಜದವರಿಗೆ ಗುರುಶೇಶ ವಿಠ್ಠಲ ಮತ್ತು ಮಂತ್ರಾಲಯದ ರಾಯರ ಮಠದ ವತಿಯಿಂದ ದೇವಸ್ಥಾನದ ಹಿಂಭಾಗದಲ್ಲಿರುವ ರಾಯರ ಮಠದಲ್ಲಿ ದಾಸೋಹದ ವ್ಯವಸ್ಥೆ ಕಲ್ಪಿಸಲಾಗಿದೆ.

ಎರಡನೇಯ ತಿರುಪತಿ ಎಂಬ ನಾಮಂಕಿತದಿಂದ ಜಗತ್ ಪ್ರಸಿದ್ಧಿ ಹೊಂದಿದ ಪುಣ್ಯ ಕ್ಷೇತ್ರಗಳ ಪೈಕಿ ಕನಕಗಿರಿಯೂ ಕೂಡಾ ಒಂದು ಪುಣ್ಯ ಕ್ಷೇತ್ರ. ಸ್ಕಂದ ಪುರಾಣದಲ್ಲಿಯೂ ಈ ಕ್ಷೇತ್ರದ ಬಗ್ಗೆ ವರ್ಣಿಸಲ್ಪಟ್ಟಿದೆ. ಹಿಂದೆ ಕನಕಗಿರಿಯೂ ಒಂದು ಅರಣ್ಯವಾಗಿತ್ತು. ಕನಕಮುನಿ ಎನ್ನುವಾತ ತಪಸ್ಸು ಮಾಡುತ್ತಿರುವಾಗ ಭೀಕರ ಬರಗಾಲ ಆವರಿಸಿ ಪಶು ಪಕ್ಷಿ ಸಂಕುಲ ಕಂಗೆಟ್ಟು ನಿಂತಾಗ ಈ ಮುನಿಯತ್ತ ಬಂದು ಬರವಾಣಿ ನಿವಾರಣೆಗಾಗಿ ಪ್ರಾರ್ಥಿಸಿದರು. ಆ ಪ್ರಾರ್ಥನೆಗೊಲಿದ ಬಗವಂತನು ಪ್ರತ್ಯಕ್ಷನಾಗಿ ಬಂಗಾರದ ಮಳೆ ಸುರಿಸಿದ. ಅದರ ಫಲವೇ ಕನಕಗಿರಿ(ಸುವರ್ಣಗಿರಿ) ಎನ್ನುವುದೇ ಒಂದು ಪ್ರತೀತಿ.

ಈ ದೇವಾಲಯಗಳಲ್ಲಿ ಕಲಾತ್ಮಕಕ ಶಿಲ್ಪಕಗಳು ಭವ್ಯ ಸೌಂದರ್ಯವನ್ನು ಸಾರಿ ಹೇಳುವ ಸಿಂಹಕಲ್ಲು ಕಂಬಗಳು ಜಕಣಾಚಾರ್ಯ ಅದ್ಭುತ ಕಲಾ ಜಗತ್ತು ನೋಡುಗರನ್ನು ತಲ್ಲಣಿಸುವಂತಿವೆ.

ಬಹುಶಃ ದಕ್ಷಿಣ ಭಾರತದ ಇಂತಹ ಬೃಹತ್ ಆಕಾರದ ತೇರು ನೋಡಲು ಸಿಗುವುದು ಕನಕಗಿರಿಯಲ್ಲಿ ಮಾತ್ರ. ಅದರಲ್ಲೂ ರಾಜಬೀದಿಯ ಮುಕ್ಕಾಲು ಕಿ.ಮೀ ಅಲಂಕೃತ ತೇರನ್ನು ಭಕ್ತಾಧಿಗಳು ಎಳೆಯುವಾಗ ಅದರ ಹೊನಪು ಜನರ ಧ್ವನಿ(ಗೋವಿಂದ..) ಎನ್ನುವುದು ಬಹಳ ಮನಮೋಹಕವಾಗಿರುತ್ತದೆ.

9ದಿನ ನಿತ್ಯ ವಿವಿಧ ಉತ್ಸವಗಳು ಹಗಲು ರಾತ್ರಿ ವೇಳೆ ಮೆರವಣಿಗೆ ಮೂಲಕ ರಾಜಬೀದಿಯಲ್ಲಿ ಭಕ್ತಿಯ ವಿಶೇಷ ಪೂಜೆಗೆ ಸಾಕ್ಷಿಯಾಗಿದೆ. ಆರಂಭದ ದಿನ ಧ್ವಜಾರೋಹಣ ದೇಚಯಾಗದೊಂದಿಗೆ ಆರಂಭವಾಗುತ್ತದೆ. ಈ ದೇವರಿಗೆ ಕಡುಬು, ಬೆಲ್ಲದ ಬೆಳೆ ನೈವೈದ್ಯ ಮಾಡುವುದು ನೋಡಿದರೆ ಈ ದೇವರು ಕಡಬು ಪ್ರೀಯನೆಂದು ಗೋಚರವಾಗುತ್ತದೆ. ಕನಕಗಿರಿಯ ಜಾತ್ರೆ ಮತ ಮೇಲು ಕೀಳು ಬೇದ ಭಾವ ಯಾವುದನ್ನು ಲೆಕ್ಕಿಸದೇ ಕೋಮು ಸೌಹಾರ್ದತೆಯಿಂದ ಆಚರಿಸುವುದರಿಂದಲೇ ಈ ಸಾಲಿ ಗ್ರಾಮಕ್ಕೆ ಪಂಚಲೋಹ ಉಗ್ರನರಸಿಂಹ ಆಕಾರದ ದೇವರ ಕವಚ ನಿರ್ಮಿಸಿದ್ದಾರೆ.

ಕಿರುಸುದ್ದಿ

ಪ್ರಶಸ್ತಿ ಪ್ರದಾನ ನಾಳೆ



◆ **ಧಾರವಾಡ:** ಶಾಂತಕವಿ ಸಕ್ಕರಿ ಬಾಳಾಚಾರ್ಯರ 106ನೇ ಸಂಸ್ಮರಣೆ, ವಿಶೇಷ ಉಪನ್ಯಾಸ, 2025ನೇ ಸಾಲಿನ ಶಾಂತರಂಗ ನಾಟಕಕಾರ ಪ್ರಶಸ್ತಿ ಪ್ರದಾನ ಸಮಾರಂಭ ಮಾ.1ರಂದು ನಗರದ ರಂಗಾಯಣದ ಸಾಂಸ್ಕೃತಿಕ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಟ್ರಸ್ಟ್ ಕಾರ್ಯದರ್ಶಿ ಹನುಮೇಶ ಸಕ್ಕರಿ, ಈಚೆಗೆ ರಂಗಭೂಮಿ ಎದುರಿಸುವ ನಾಟಕಗಳ ಕೊರತೆ ನೀಗಿಸಲು, ನಾಟಕ ರಚನೆ ಪ್ರೋತ್ಸಾಹಿಸಲು ಪ್ರಶಸ್ತಿಗೆ ಹಸ್ತಪ್ರತಿ ಆಹ್ವಾನಿಸಿದ್ದಾಗಿ ತಿಳಿಸಿದರು. ಮೊದಲ ವರ್ಷದಲ್ಲಿಯೇ 22 ಹಸ್ತಪ್ರತಿಗಳು ಪ್ರಶಸ್ತಿಗೆ ಬಂದಿದ್ದು, ತೀರ್ಪುಗಾರರು ಬೆಳಗಾವಿಯ ಶಿರೀಶ್ ಜೋಶಿ ಅವರ ಕಂಠಿಹಾರ ನಾಟಕ ಶಾಂತರಂಗ ಪ್ರಶಸ್ತಿಗೆ, ಅರ್ಧ ಸತ್ಯದ ಕಥೆ, ಇರುವಂತ ಕೃತಿ ತೀರ್ಪುಗಾರರ ಮೆಚ್ಚುಗೆ ಪ್ರಶಸ್ತಿ ಪಡೆದಿವೆ. ಶಾಂತರಂಗ ಪ್ರಶಸ್ತಿ ರೂ.15 ಸಾವಿರ ನಗದು, ತೀರ್ಪುಗಾರರ ಮೆಚ್ಚುಗೆ ಪ್ರಶಸ್ತಿ ತಲಾ ರೂ.2,500 ನಗದು, ಸ್ಮರಣಿಕೆ ಒಳಗೊಂಡಿದ್ದು, ಅಂದು ಸಂಜೆ 5.30ಕ್ಕೆ ನಡೆಯುವ ಸಮಾರಂಭದಲ್ಲಿ ರಂಗಕರ್ಮಿ ಕೆ.ವಿ.ಅಕ್ಷರ ಪ್ರಶಸ್ತಿ ಪ್ರದಾನಿಸಲಿದ್ದಾರೆ ಎಂದರು. ರಂಗ ನಿರ್ದೇಶಕ ಡಾ. ಕೆ.ವಿ.ಅಕ್ಷರ ಭಾವಯಿತ್ರೀ ಪ್ರತಿಭೆಯ ಬಿಕ್ಕಟ್ಟು ವಿಷಯ ಕುರಿತು ಉಪನ್ಯಾಸ ನೀಡಲಿದ್ದು, ರಂಗಕರ್ಮಿ ಪ್ರಜ್ಞಾ ಮತ್ತಿಹಳ್ಳಿ, ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ ಸೇರಿದಂತೆ ಅನೇಕರು ಪಾಲ್ಗೊಳ್ಳುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಂಗಕರ್ಮಿಕ ಡಾ.ಶಶಿಧರ ನರೇಂದ್ರ, ಸಮ್ಮೀರ ಜೋಶಿ ಇದ್ದರು.

ವಿಚಾರ ಸಂಕಿರಣ ನಾಳೆ

◆ **ಧಾರವಾಡ:** ಕರ್ನಾಟಕ ವಿಶ್ವವಿದ್ಯಾಲಯದ ಜೈನಶಾಸ್ತ್ರ ಅಧ್ಯಯನ ಪೀಠ ಮತ್ತು ಜನತಾ ಶಿಕ್ಷಣ ಸಮಿತಿಯ ಮಂಜುನಾಥೇಶ್ವರ ಸ್ನಾತಕ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಸಾಹಿತ್ಯ ಸಂಸ್ಕೃತಿ ರಾಜ್ಯಮಟ್ಟದ ವಿಚಾರ ಸಂಕಿರಣ ಮಾ.12ರಂದು ಜೆಎಸ್ಸೆಸ್ ಡಿ.ಆರ್.ಎಚ್. ಸಭಾಂಗಣದಲ್ಲಿ ಜರುಗಲಿದೆ.


ಜೆಎಸ್ಸೆಸ್ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಅಧ್ಯಕ್ಷತೆಯಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಡೆಯುವ ವಿಚಾರ ಸಂಕಿರಣಕ್ಕೆ ಕವಿವಿ ಕುಲಪತಿ ಡಾ. ಎ.ಎಂ. ಖಾನ್ ಉದ್ಘಾಟಿಸಲಿದ್ದು, ವಿಶ್ರಾಂತ ಪ್ರಾಧ್ಯಾಪಕ ಡಾ. ಜೆ.ಎಂ.ನಾಗಯ್ಯ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಬೆಳಗ್ಗೆ 11ರ ಮೊದಲ ಗೋಷ್ಠಿಯಲ್ಲಿ ಕನ್ನಡ ಸಾಹಿತ್ಯಕ್ಕೆ ರನ್ನ ಕವಿ ಕೊಡುಗೆ ಕುರಿತು ನಿವೃತ್ತ ಪ್ರಾಧ್ಯಾಪಕ ಡಾ. ವೈ.ಎಂ.ಭಜಂತ್ರಿ ಉಪನ್ಯಾಸ ನೀಡಲಿದ್ದು, ಶಾಸನ ತಜ್ಞೆ ಹನುಮಾಕ್ಷಿ ಗೋಗಿ ಅಧ್ಯಕ್ಷತೆ ವಹಿಸಲಿದ್ದಾರೆ. ಮಧ್ಯಾಹ್ನ 2ರ ಎರಡನೇ ಗೋಷ್ಠಿಯಲ್ಲಿ ಸರ್ವ ಧರ್ಮ ಸಮನ್ವಯ ಕೇಂದ್ರ: ಶ್ರೀ ಕ್ಷೇತ್ರ ಧರ್ಮಸ್ಥಳ ವಿಷಯ ಕುರಿತು ರಂಗಕರ್ಮಿ ಡಾ.ಶಶಿಧರ ನರೇಂದ್ರ ವಿಷಯ ಮಂಡಿಸಲಿದ್ದು, ಸಾಹಿತಿ ಡಾ.ವೀಣಾ ಯಲಿಗಾರ ಅಧ್ಯಕ್ಷತೆ ವಹಿಸಲಿದ್ದಾರೆ. ಮಧ್ಯಾಹ್ನ 3.30ಕ್ಕೆ ಜೆಎಸ್ಸೆಸ್ ಆಡಳಿತಾಧಿಕಾರಿ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ಜರುಗಲಿದ್ದು, ಸಾಹಿತಿ ಕೆ.ಎಸ್.ಕೌಜಲಗಿ ಸಮಾರೋಪ ಭಾಷಣ ಮಾಡಲಿದ್ದು, ಲೇಖನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಒಳ ಮೀಸಲಾತಿಗೆ ವಿರೋಧ



◆ **ಹುಬ್ಬಳ್ಳಿ:** ಪರಿಶಿಷ್ಟ ಜಾತಿಗಳ ಮೀಸಲಾತಿ ಅಪ್ರಾಯೋಗಿಕವಾಗಿ ವರ್ಗೀಕರಣ ಮಾಡಬಾರದು. ಒಳ ಮೀಸಲಾತಿಗೆ ಬಂಜಾರ ಸಮಾಜದ ವಿರೋಧವಿದ್ದು, ಹಳೇ ಮೀಸಲಾತಿ ಆಧಾರದಲ್ಲಿ ನೇಮಕಾತಿ ನಡೆಸಬೇಕು ಎಂದು ಬಂಜಾರಾ ಸಮಾಜ ಯುವ ಮುಖಂಡ ವೆಂಕಟೇಶ ಪಮ್ಮಾರ ಆಗ್ರಹಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ಒಳ ಮೀಸಲಾತಿ ಹೆಸರಿನಲ್ಲಿ ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳಿಗೆ ಅನ್ಯಾಯ ಮಾಡಲಾಗುತ್ತಿದೆ. ಇತ್ತೀಚೆಗೆ ರಾಜ್ಯ ಸರ್ಕಾರದ ಧಾರವಾಡ ಕೃಷಿ ವಿವಿ,ಆರೋಗ್ಯ ವಿವಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಆರೋಗ್ಯ ಇಲಾಖೆಗಳಲ್ಲಿ ನಡೆಸಲಾದ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿಗಳ ಪ್ರವರ್ಗ ಬಿ ಮತ್ತು ಪ್ರವರ್ಗ ಸಿ ಗುಂಪಿಗೆ ಶೂನ್ಯ ಹುದ್ದೆ ಹಂಚಿಕೆ ಮಾಡಲಾಗಿದೆ. ಈ ಮೂಲಕ ಬಂಜಾರ, ಭೋವಿ, ಕೊರಮ, ಕೊರಚ,ಭಜಂತ್ರಿ, ಡೊಂಬರ ಅಲೆಮಾರಿ ಸೂಕ್ಷ್ಮ ಜಾತಿಗಳಿಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಸರ್ಕಾರ ಎಚ್ಚೆತ್ತುಕೊಂಡ ಪರಿಶಿಷ್ಟ ಜಾತಿಗಳ ವರ್ಗೀಕರಣ ಬಿಟ್ಟು ಹಿಂದಿನ ನಿಯಮದಂತೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗುವುದು ಎಂದು ಘೋಷಿಸಿರುವುದು ಸ್ವಾಗತಾರ್ಹ. ತ್ವರಿತವಾಗಿ ಹಿಂದಿನ ನಿಯಮದಂತೆ ನೇಮಕಾತಿ ಮತ್ತು ಶಿಕ್ಷಣ ಪ್ರವೇಶ ಪ್ರಕ್ರಿಯೆಗಳನ್ನು ಪ್ರಾರಂಭಿಸಬೇಕು ಎಂದರು.

ಶಿವಪ್ಪ ಘಂಟಿ ನಿಧನ



◆ **ಧಾರವಾಡ:** ತಾಲೂಕಿನ ನರೇಂದ್ರ ಗ್ರಾಮದ ನಿವಾಸಿ ಶಿವಪ್ಪ ಗಂಗಪ್ಪ ಘಂಟಿ(82) ಸೋಮವಾರ ನಿಧನ ಹೊಂದಿದರು. ಇವರಿಗೆ ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಳಗವಿದೆ.



ಕಲಘಟಗಿ: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಿಮಿತ್ತ ಕಲಘಟಗಿ ವಕೀಲರ ಸಂಘದ ಮಹಿಳಾ ನ್ಯಾಯವಾದಿಗಳು, ತಾಲೂಕು ಕಾನೂನು ಸೇವಾ ಸಮಿತಿ ಸದಸ್ಯರು, ಅತಿಥಿಗಳು ಮಹಿಳಾ ದಿನಾಚರಣೆ ಆಚರಿಸಿದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ

◆ **ನವಲಗುಂದ:** ನಾಗನೂರ ಗ್ರಾಮದ ಬಹುದಿನದ ಬೇಡಿಕೆ ನೂತನ ಪಶು ಆಸ್ಪತ್ರೆ ಪ್ರಾರಂಭೋತ್ಸವ, ದುರ್ಗಾದೇವಿ ದೇವಸ್ಥಾನ, ಮಶೀದಿಗಳ ನೂತನ ಕಟ್ಟಡ ಕಾಮಗಾರಿಗಳಿಗೆ ಭೂಮಿಪೂಜೆ ಮಾಡಿರುವುದು ನನಗೆ ಸಂತೋಷ ತಂದಿದೆ ಎಂದು ಶಾಸಕ ಎನ್. ಎಚ್. ಕೋನರಡ್ಡಿ ಹೇಳಿದರು. ತಾಲೂಕಿನ ನಾಗನೂರ ಗ್ರಾಮದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿಪೂಜೆ ನೇರವೇರಿಸಿ ಮಾತನಾಡಿ, ಈಗಾಗಲೇ ಮಳೆಗಾಲದಲ್ಲಿ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಸಂಚರಿಸಲು ಬಹಳ ಸಮಸ್ಯೆಯಾಗಿತ್ತು 7 ಕೋಟಿ ವೆಚ್ಚದಲ್ಲಿ ಗುಡಿಸಾಗರ, ನಾಗನೂರ, ಸೊಟಕನಾಳ, ಕಡದಳ್ಳಿ, ಅರಹಟ್ಟಿ, ತಡಹಾಳ ವರೆಗೆ ನೂತನವಾಗಿ ಡಾಂಬರೀಕರಣ ರಸ್ತೆ ಕಾಮಗಾರಿ ಆರಂಭಿಸಲಾಗಿದೆ ಇನ್ನೂ ಅಭಿವೃದ್ಧಿ ಮಾಡುವುದು ಬಾಕಿ ಇದ್ದು, ಅಭಿವೃದ್ಧಿಪಡಿಸಿ ಮಾದರಿ ಗ್ರಾಮ ಮಾಡೋಣ ಎಂದರು. ಗ್ರಾಮದಲ್ಲಿ ನೂತನ ಪಶು ಆಸ್ಪತ್ರೆ ಉದ್ಘಾಟನೆ, ರೂ. 30 ಲಕ್ಷ ವೆಚ್ಚದಲ್ಲಿ ಹಜರತ್ ದಾವಲ್ ಮಲೀಕ್ ದರ್ಗಾ, ತಡೆಗೋಡೆ ಹಾಗೂ ರೂ. 15 ಲಕ್ಷ ವೆಚ್ಚದಲ್ಲಿ ದುರ್ಗಾದೇವಿ ದೇವಸ್ಥಾನದ ಕಟ್ಟಡ ಭೂಮಿಪೂಜೆ ನೆರವೇರಿಸಿರುವುದು ನನ್ನ ಕರ್ತವ್ಯ ಎಂದರು. ಸಮರ್ಥ ಶಿವಾನಂದ ಶ್ರೀಗಳು, ಪಂಡಿತ ಬಸವರಾಜ ಶ್ರೀಗಳು ಸಾನಿಧ್ಯವಹಿಸಿದ್ದರು. ತಹಶೀಲ್ದಾರ್ ಸುಧೀರ್ ಸಾಹುಕಾರ್, ಕಾರ್ಯನಿರ್ವಾಹಕ ಅಧಿಕಾರಿ ಪಿ.ಆರ್. ಬಡೇಖಾನ್, ಗ್ರಾಪಂ ಆಡಳಿತಾಧಿಕಾರಿ ಕೆ ಸುಧಾಕರ, ಮುಖಂಡರಾದ ಎ.ಡಿ. ಕುಲಕರ್ಣಿ, ಎಸ್.ಸಿ. ಹೊಳೆಯನ್ನವರ, ಸದುಗೌಡ ಪಾಟೀಲ, ಡಾ. ಸಂತಿ, ನವಲಗುಂದ ಅಂಜುಮನ್ ಅಧ್ಯಕ್ಷ ಅಲ್ಲಸಾಬ್ ಕಲ್ಲಕುಟ್ರಿ, ಮನೋಹರ ದ್ಯಾಬೇರಿ, ರೇಣುಕಾ ಹೊಂಗಲ, ಹೊಳೆಯಪ್ಪ ಹೊಳೆಯನ್ನವರ, ಲಗದೇಸಾಬ ದಿವಾನಸಾಬನವರ, ಅಮೃತರಾವ್ ಕುಲಕರ್ಣಿ, ಅನ್ವರ್ ಮುಲಿಮನಿ, ಬಸವರಾಜ ಕರಿಬರಮನ್ನವರ, ಶೌಕತ್ ಅಲಿ ಲಂಬೂನವರ ಇದ್ದರು.



ನವಲಗುಂದ: ತಾಲೂಕಿನ ನಾಗನೂರ ಗ್ರಾಮದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೇರವೇರಿಸಿದ ಶಾಸಕ ಎನ್. ಎಚ್. ಕೋನರಡ್ಡಿ.

ಮಾಧ್ಯಮ ಹಬ್ಬದ ಸಮಾರೋಪ | ಕುಲಸಚಿವ ಡಾ.ವಣಿಕ್ಯಾಳ ಕಳವಳ

ಪತ್ರಿಕಾ ಸ್ವಾತಂತ್ರ್ಯ ಹರಣ ಸಲ್ಲ



◆ **ಧಾರವಾಡ:** ಉದ್ಯಮಿಗಳ ಪ್ರವೇಶದಿಂದ ಇತ್ತೀಚೆಗೆ ಪತ್ರಿಕೋದ್ಯಮ ಕಪಿಮುಷ್ಟಿಗೆ ಸಿಲುಕಿದೆ. ಇದರಿಂದ ಪತ್ರಿಕಾ ಸ್ವಾತಂತ್ರ್ಯ ಹರಣವಾಗುತ್ತಿದೆ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಆಡಳಿತಾತ್ಮಕ ಕುಲಸಚಿವ ಡಾ.ಶಂಕರೆಪ್ಪ ವಣಿಕ್ಯಾಳ ಕಳವಳ ವ್ಯಕ್ತಪಡಿಸಿದರು.

ಬೆಳಗಾವಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಗರದ ಕವಿವಿಯ ಕನಕ ಅಧ್ಯಯನ ಪೀಠ ಭವನದಲ್ಲಿ ಏರ್ಪಡಿಸಿದ್ದ ಎರಡು ದಿನಗಳ ಮಾಧ್ಯಮ ಹಬ್ಬದ ಸಮಾರೋಪದಲ್ಲಿ ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದರು. ಪ್ರತಿಯೊಂದು ಮಾಧ್ಯಮವೂ ಒಂದಿಲ್ಲೊಂದು ಸಿದ್ಧಾಂತಕ್ಕೆ ಅಂಟಿಕೊಂಡಿವೆ. ಇಂದು ಶೋಕಿಕಾಗಿ ಪತ್ರಿಕೆ ಆರಂಭಿಸುವ ಹಾಗೂ ಪತ್ರಕರ್ತರಾಗುವವರ ಸಂಖ್ಯೆ ಹೆಚ್ಚಿದೆ. ಇದರಿಂದ ಮಾಧ್ಯಮದ ನೈತಿಕತೆ, ವಿಶ್ವಾಸರ್ಹತೆಗೆ ಧಕ್ಕೆ ಬರುತ್ತಿದೆ. ನಿತ್ಯ ಸುದ್ದಿ, ಜಾಹೀರಾತು ಪ್ರಕಟಣೆಯಲ್ಲಿ ಪಾರದರ್ಶಕತೆ ಕಾಪಾಡುವಂತೆ ಸಲಹೆ ನೀಡಿದರು.

ಹಿರಿಯ ಪತ್ರಕರ್ತ ಬಂಡು ಕುಲಕರ್ಣಿ ಮಾತನಾಡಿ, ವರದಿಗಾರಿಕೆಗೆ ಯಾವುದೇ ಚೌಕಟ್ಟಿಲ್ಲ, ಇದೊಂದು ಇಂಟರ್ನೆಟ್, ತಂತ್ರಜ್ಞಾನ, ಸಾಮಾಜಿಕ ಜಾಲತಾಣದ ಮಹಿಮೆ. ಆದರೆ ಪತ್ರಿಕೋದ್ಯಮದಲ್ಲಿ ಭಾಷಾ ಶುದ್ಧತೆ ಕ್ಷೀಣಿಸಿದೆ ಎಂದರು. ಹಿರಿಯ ಪತ್ರಕರ್ತ ಮಲ್ಲಿಕಾರ್ಜುನ ಸಿದ್ದಣ್ಣವರ ಮಾತನಾಡಿ, ಉದ್ಯಮಿಗಳ ಪ್ರಭಾವಕ್ಕೆ ಸಿಲುಕಿದ ಸಮಾಜದ ಕಾವಲುಗಾರ ಪತ್ರಿಕೋದ್ಯಮ ಇಂದು ಕಾವಲುಗಾರನಾಗಿ ಉಳಿದಿಲ್ಲ. ಈ ಕುರಿತು ಪತ್ರಕರ್ತರು ಕೂಡ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದರು.

ಕವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಡಾ.ಸಂಜಯ ಮಾಲಗತ್ತಿ ಅಧ್ಯಕ್ಷತೆ ವಹಿಸಿದ್ದರು. ವಿಶ್ರಾಂತ ಪ್ರಾಧ್ಯಾಪಕ ಡಾ. ಎ.ಎಸ್.ಬಾಲಸುಬ್ರಮಣ್ಯ, ವಾರ್ತಾ ಇಲಾಖೆ ಉಪನಿರ್ದೇಶಕ ಗುರುರಾಜ ಕಡಬೂರ, ಸುರೇಶ ಹಿರೇಮಠ ಇದ್ದರು.

▸▸ ಮಾಧ್ಯಮ ಹಬ್ಬದ ಪ್ರಯುಕ್ತ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯದ ಪತ್ರಿಕೋದ್ಯಮ-ಸಮೂಹ ಸಂವಹನ ವಿಭಾಗದ ಚಾಂಪಿಯನ್ ಪಟ್ಟ ಅಲಂಕರಿಸಿತು.

ಎಐ ತಂತ್ರಜ್ಞಾನದ ಅರಿವು ಅಗತ್ಯ



◆ **ಧಾರವಾಡ:** ಪತ್ರಿಕೋದ್ಯಮದಲ್ಲಿ ತಂತ್ರಜ್ಞಾನ ಹಾಸುಹೊಕ್ಕಿದೆ. ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆ ಬಳಸಿ, ವಿವಿಧ ಕೌಶಲ್ಯಗಳು ಅಳವಡಿಸಿಕೊಂಡು ಉತ್ತಮ ಭವಿಷ್ಯ ಕಟ್ಟಿಕೊಳ್ಳಲು ವಿಶ್ರಾಂತ ಪ್ರಾಧ್ಯಾಪಕ ಡಾ. ಎ.ಎಸ್.ಬಾಲಸುಬ್ರಮಣ್ಯ ಸಲಹೆ ನೀಡಿದರು.

ಇಲ್ಲಿನ ಕರ್ನಾಟಕ ವಿಶ್ವವಿದ್ಯಾಲಯದ ಕನಕ ಸಭಾಭವನದಲ್ಲಿ ನಡೆದ ಮಾಧ್ಯಮ ಹಬ್ಬದಲ್ಲಿ ಎರಡನೇ ದಿನ ಪತ್ರಿಕೋದ್ಯಮದಲ್ಲಿ ಕೃತಕ ಬುದ್ಧಿಮತ್ತೆ ಆಧಾರಿತ ವಿಷಯಗಳ ವಿಶ್ವಾಸಾರ್ಹತೆ ಕುರಿತಂತೆ ಅವರು ವಿಶೇಷ ಉಪನ್ಯಾಸ ನೀಡಿದರು. ಭವಿಷ್ಯದಲ್ಲಿ ಪತ್ರಿಕೋದ್ಯಮಕ್ಕೆ ಕೃತಕ ಬುದ್ಧಿಮತ್ತೆ ಬಳಕೆ ಅನಿವಾರ್ಯವಾಗಲಿದೆ. ವಿದ್ಯಾರ್ಥಿಗಳು ಮೊಬೈಲ್‌ನಲ್ಲಿ ಯುಟ್ಯೂಬ್, ಫೇಸ್‌ಬುಕ್‌ನಲ್ಲೂ ಕಾಲಹರಣ ಮಾಡುವ ಬದಲಿಗೆ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನದ ಅರಿವು ಹೊಂಬೇಕಿದೆ ಎಂದರು.

> ಸ್ನಾತಕೋತ್ತರ ಪದವಿ ಮುಗಿಸಿದರೂ ನೌಕರಿ ಸಿಗುತ್ತಿಲ್ಲ, ಬೇರೆ ಭಾಷೆ ಬರುತ್ತಿಲ್ಲ, ಸ್ಥಳೀಯವಾಗಿ ನೌಕರಿ ಬೇಕು ಎಂಬ ಕುಂಟು ನೆಪ ಹೇಳುವ ಕಾಲ ಹೋಗಿದೆ. ಕಾಲಕ್ಕೆ ತಕ್ಕಂತೆ ವಿದ್ಯಾರ್ಥಿಗಳು ಬದಲಾವಣೆ ಹೊಂದಬೇಕು.
>
> ■ ಡಾ. ಎ.ಎಸ್. ಬಾಲಸುಬ್ರಮಣ್ಯ, ವಿಶ್ರಾಂತ ಪ್ರಾಧ್ಯಾಪಕ

ಸುಳ್ಳು ಸುದ್ದಿ ಪತ್ತೆ ಹಚ್ಚಿ

ಸಾಮಾಜಿಕ ಮಾಧ್ಯಮದಲ್ಲಿ ಸಾಕಷ್ಟು ಸುದ್ದಿಗಳು ಹರಿದಾಡುತ್ತವೆ. ಆದರೆ ಯಾವುದು ಸತ್ಯ ಮತ್ತು ಮಿಥ್ಯ ಎಂಬುವ ಗೊಂದಲ ಒದುಗರಿಗಿದೆ. ಫ್ಯಾಕ್ಟ್ ಚೆಕ್ ವೆಬ್‌ಸೈಟ್‌ಗಳಿದ್ದು, ಸುಳ್ಳು ಸುದ್ದಿ ಪತ್ತೆ ಹಚ್ಚುವ ಕೆಲಸ ಭಾವಿ ಪತ್ರಕರ್ತರು ಮಾಡಬೇಕು ಎಂದು ಹಿರಿಯ ಪತ್ರಕರ್ತ ಸುಭಾಷ ಹೂಗಾರ ಹೇಳಿದರು.

ಮಹಿಳೆಯರಿಗೆ ಸಮಾನ ಅವಕಾಶ ನೀಡಿ

◆ **ಹುಬ್ಬಳ್ಳಿ:** ಮಹಿಳೆ ಮತ್ತು ಪುರುಷರು ಸಮಾನರು. ಮಹಿಳೆಯರಿಗೆ ಸಮಾನ ಹಕ್ಕುಗಳು, ನ್ಯಾಯ ಮತ್ತು ಸಮಾನ ಅವಕಾಶಗಳನ್ನು ಒದಗಿಸುವುದರಿಂದ ಮಹಿಳಾ ಸಬಲೀಕರಣ ಸಾಧಿಸಲು ಸಾಧ್ಯವಾಗುತ್ತದೆ ಎಂದು ಡಾ. ಪದ್ಮಾ ಸತ್ಯಮೂರ್ತಿ ಹೇಳಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಇಲ್ಲಿನ ಸೇವಾಭಾರತಿ ಬಾಲಕಲ್ಯಾಣ ಕೇಂದ್ರದಲ್ಲಿ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿ, ಸಮಾಜ ಎಂಬ ರಥಕ್ಕೆ ಮಹಿಳೆ ಮತ್ತು ಪುರುಷರು ಎರಡು ಗಾಲಿಗಳಂತೆ. ಒಂದು ಗಾಲಿ ಕುಂಠಿತವಾದರೂ ಸಮಾಜ ಹಾಗೂ ದೇಶದ ಪ್ರಗತಿ ಸಾಧ್ಯವಾಗುವುದಿಲ್ಲ. ಆದ್ದರಿಂದ ಹೆಣ್ಣುಮಕ್ಕಳಿಗೆ ಉತ್ತಮ ಮತ್ತು ಉನ್ನತ ಶಿಕ್ಷಣವನ್ನು ನೀಡುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಅತ್ಯಗತ್ಯ ಎಂದರು.

ಬಾಲಕಲ್ಯಾಣ ಕೇಂದ್ರದ ಅಧ್ಯಕ್ಷೆ ಕಮಲಾಜೋಶಿ ಮಾತನಾಡಿ, ಮಹಿಳೆ ಅಬಲೆ ಅಲ್ಲ, ಅವಳು ಸಬಲೆ. ಮಹಿಳೆ ಮನಸ್ಸು ಮಾಡಿದರೆ ಯಾವುದೇ ಕಾರ್ಯವನ್ನೂ ಸಾಧಿಸುವ ಸಾಮರ್ಥ್ಯ ಹೊಂದಿದ್ದಾಳೆ. ಆದರೆ ಆ ಸಾಧನೆಗೆ ಬೇಕಾದ ಪ್ರೋತ್ಸಾಹ ಮತ್ತು ಬೆಂಬಲ ಮನೆಯಿಂದಲೇ ಆರಂಭವಾಗಬೇಕು. ಮಹಿಳಾ ಸಬಲೀಕರಣ ಮತ್ತು ಅಭಿವೃದ್ಧಿ ಒಂದೇ ನಾಣ್ಯದ ಎರಡು ಮುಖಗಳಂತಿವೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಐಶ್ವರ್ಯ ನಾಯಕ್ ಮಾತನಾಡಿದರು. ಇದೇ ಸಂದರ್ಭದಲ್ಲಿ ರಾಮಾಯಣ ಮತ್ತು ಮಹಾಭಾರತದ ವಿಷಯಗಳ ಕುರಿತು ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಲಾಯಿತು. ಒಟ್ಟು 20 ತಂಡಗಳ ಸದಸ್ಯರುಗಳು ಈ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬಾಲಕಲ್ಯಾಣ ಕೇಂದ್ರದ ಮಾತಾಜಿ ರತ್ನಾ ಪವಾಡಶೆಟ್ಟಿ ನಿರೂಪಿಸಿದರು, ಆಶಾ ಚೌದರಿ ಪ್ರಾರ್ಥನೆ, ಹರ್ಷಿತಾ ಅಡವಿ ಪರಿಚಯಿಸಿದರು, ಅನಿತಾ ಪಾಟೀಲ ವಂದಿಸಿದರು.



ಕೆರೆಗಳ ಪುನರುಜ್ಜೀವನ ಕಾಮಗಾರಿ ಕಳಪೆ: ಆರೋಪ

◆ **ನವಲಗುಂದ:** 75ನೇ ಆಜಾದಿ ಕಾ ಅಮೃತ್ ಮಹೋತ್ಸವದ ನೆನಪಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಜಿಲ್ಲೆಗೆ ನೀಡಿದ ಅಮೃತ ಸರೋವರ ಯೋಜನೆಯಡಿ ನವಲಗುಂದ ಕ್ಷೇತ್ರದ ಕೆರೆಗಳ ಪುನರುಜ್ಜೀವನ ಕಾಮಗಾರಿ ಕಳಪೆಯಾಗಿದ್ದು, ಇಂದು ಭ್ರಷ್ಟಾಚಾರದ ಕೂಪವಾಗಿ ಮಾರ್ಪಟ್ಟಿದೆ ಎಂದು ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಆರೋಪಿಸಿದ್ದಾರೆ.

ಮಂಗಳವಾರ ಕ್ಷೇತ್ರದ ಗುಡಿಸಾಗರ ಹಾಗೂ ಗೊಬ್ಬರಗುಂಪಿ ಗ್ರಾಮಗಳ ಕೆರೆಗಳಿಗೆ ಭೇಟಿ ನೀಡಿ ಕಾಮಗಾರಿ ವೀಕ್ಷಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅವರ ಸಹಕಾರದೊಂದಿಗೆ ನಾನು ಮಂತ್ರಿಯಾಗಿದ್ದ ಅವಧಿಯಲ್ಲಿ ಈ 16 ಕೆರೆಗಳ ಅಭಿವೃದ್ಧಿ ಯೋಜನೆಯನ್ನು ಕ್ಷೇತ್ರಕ್ಕೆ ತಂದಿದ್ದೆ. ಆದರೆ ಈಗಿನ ಶಾಸಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಜನರ ಆಸ್ತಿಯಾದ ಕೆರೆಗಳನ್ನು ಸುಧಾರಿಸುವ ಬದಲು ತಮ್ಮ ಆಪ್ತರಿಗೆ ಹಣ ಮಾಡಿಕೊಡಲು ಶಾಸಕರು ಈ ಯೋಜನೆಯನ್ನು ಎಟಿಎಂ ಮಾಡಿಕೊಂಡಿದ್ದಾರೆಯೇ? ಇಷ್ಟೊಂದು ಕಳಪೆ ಕೆಲಸ ನಡೆಯುತ್ತಿದ್ದರೂ ಶಾಸಕರು ಮೌನಕ್ಕೆ ಶರಣಾಗಿರುವುದು ಏಕೆ? ಎಂದು ಪ್ರಶ್ನಿಸಿದರು.

ಕಣ್ಣೆದುರಿಗೇ ಕಳಪೆ ಕಾಮಗಾರಿ ನಡೆಯುತ್ತಿದ್ದರೂ ಮೌನವಾಗಿರುವ ಅಧಿಕಾರಿಗಳು ಈ ಭ್ರಷ್ಟಾಚಾರದ ಪಾಲನ್ನು ಪಡೆಯುತ್ತಿದ್ದಾರೆಯೇ ಎಂಬ ಅನುಮಾನ ಕಾಡುತ್ತಿದೆ. ಸಾರ್ವಜನಿಕರ ತೆರಿಗೆ ಹಣ ಅಂದರೆ ಅದು ಯಾರೊಬ್ಬರ ಜೇಬಿನ ದುಡ್ಡಲ್ಲ, ರೈತರ ಮತ್ತು ಬಡವರ ದಾಹ ನೀಗಿಸಬೇಕಾದ ಕೆರೆಗಳ ವಿಷಯದಲ್ಲಿ ರಾಜಕೀಯ ಆಟವಾಡಿದರೆ ಕ್ಷೇತ್ರದ ಜನತೆ ತಕ್ಕ ಪಾಠ ಕಲಿಸುತ್ತಾರೆ. ಕೂಡಲೇ ಈ ಕಳಪೆ ಕಾಮಗಾರಿಯನ್ನು ನಿಲ್ಲಿಸಿ, ಪಾರದರ್ಶಕವಾಗಿ ತನಿಖೆ ನಡೆಸಬೇಕು. ಗುಣಮಟ್ಟದ ಕೆಲಸವಾಗದಿದ್ದರೆ ಮುಂದಿನ ದಿನಗಳಲ್ಲಿ ಬೀದಿಗಿಳಿದು ಉಗ್ರ ಹೋರಾಟ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಅವರು ಎಚ್ಚರಿಸಿದರು.

ಗ್ರಾಮದ ಮುಖಂಡರಾದ ಮುತ್ತಣ್ಣ ಮನಮಿ, ಸಿದ್ದಣ್ಣ ಕೆಟಗೇರಿ, ಶರಣಪ್ಪಗೌಡ ದಾನಪ್ಪಗೌಡ್ರ, ಗುರನಾಥ ಉಳ್ಳೆಗಡ್ಡಿ, ಬಾಬುಗೌಡ ಕುಲಕರ್ಣಿ, ಭೀಮಣ್ಣ ಪಟ್ಟೇದ ಸೇರಿದಂತೆ ಸಿದ್ದನಗೌಡ ಮರಿಗೌಡ್ರ, ಜಯಪ್ರಕಾಶ್ ಬಾದಾಮಿ ಹಾಗೂ ಸಮಸ್ತ ಗ್ರಾಮದ ಗುರು ಹಿರಿಯರು ಮತ್ತು ಯುವಕರು ಉಪಸ್ಥಿತರಿದ್ದರು.



ಮಾಧ್ಯಮ ಹಬ್ಬದ ಸ್ಪರ್ಧೆ: ಸಂಗನಗೌಡ ದ್ವಿತೀಯ



◆ **ಧಾರವಾಡ:** ಕರ್ನಾಟಕ ವಿಶ್ವವಿದ್ಯಾಲಯದ ಕನಕ ಅಧ್ಯಯನ ಪೀಠದ ಭವನದಲ್ಲಿ ನಡೆದ ಮಾಧ್ಯಮ ಹಬ್ಬದ ವಾಕ್ ಥ್ರೂ ಪಿಟುಸಿ ಸ್ಪರ್ಧೆಯಲ್ಲಿ ಶಿಗ್ಗಾವಿಯ ಜಾನಪದ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿ ಸಂಗನಗೌಡ ಹೂವನ್ನವರ ದ್ವಿತೀಯ ಸ್ಥಾನ ಪಡೆದರು.

ಪತ್ರಿಕೋದ್ಯಮ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ.ಎ.ಎಸ್ .ಬಾಲಸುಬ್ರಮಣ್ಯ, ವಿಜಯ ಕರ್ನಾಟಕ ಪತ್ರಿಕೆ ಸ್ಥಾನಿಕ ಸಂಪಾದಕ ಬಂಡು ಕುಲಕರ್ಣಿ, ಕವಿವಿಯ ಕುಲಸಚಿವ ಶಂಕರಪ್ಪ ವಣಿಕ್ಯಾಳ ಪ್ರಶಸ್ತಿ ಪ್ರದಾನ ಮಾಡಿದರು. ವಿದ್ಯಾರ್ಥಿ ಸಾಧನೆಗೆ ಜಾನಪದ ವಿವಿಯ ಕುಲಪತಿ ಡಾ. ಟಿ.ಎಂ.ಭಾಸ್ಕರ್, ವಿಭಾಗದಪ್ರಾಧ್ಯಾಪಕಡಾ.ವೆಂಕನಗೌಡಪಾಟೀಲ, ಶಿವಾನಂದ ದೊಡ್ಡಮನಿ, ಬೋಧಕ-ಬೋಧಕೇತರ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.



ಧಾರವಾಡ: ಇಲ್ಲಿನ ವಾರ್ಡ್ ನಂ-8ರ ಕೋಳಿಕೇರಿ ಮತ್ತು ಹಿರೆಕೇರಿಗೆ ಮಹಾನಗರ ಪಾಲಿಕೆ ಅನುದಾನದಲ್ಲಿ ರಿಟರ್ನಿಂಗ್ ವಾಲ್ ಮತ್ತು ತಡೆಗೋಡೆ ನಿರ್ಮಾಣಕ್ಕೆ ಪಾಲಿಕೆಯ ಸದಸ್ಯ ಶಂಕರ ಶೇಳಕೆ ಭೂಮಿಪೂಜೆ ನೆರವೇರಿಸಿದರು.

ಸಮಾಜದಲ್ಲಿ ಮಹಿಳಾ ಜವಾಬ್ದಾರಿ ಹೆಚ್ಚಳ

◆ **ಧಾರವಾಡ:** ಯುವಜನರಲ್ಲಿ ಉತ್ತಮ ಸಂಸ್ಕೃತಿ, ಸಂಸ್ಕಾರ, ವ್ಯಕ್ತಿತ್ವ ರೂಪಿಸುವ ಮುಖ್ಯ ಜವಾಬ್ದಾರಿ ಮಹಿಳೆಯರ ಮೇಲಿದೆ ಎಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ ಹೇಳಿದರು.

ನಗರದ ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಂಗಳವಾರ ಹಮ್ಮಿಕೊಂಡ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮಹಿಳೆಯರು ಸವಾಲಿನ ನಡುವೆಯೂ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದರು.

ಹೈಕೋರ್ಟ್ ನ್ಯಾಯವಾದಿ ವಿದ್ಯಾವತಿ ಕೋಟ್ಟೂರಶೆಟ್ಟರ್ ಮಾತನಾಡಿ, ಮಹಿಳೆಯರು ಹಕ್ಕು ಹಾಗೂ ಬಾಧ್ಯತೆಗಳ ಕಾಪಾಡುವ ಜವಾಬ್ದಾರಿ ಸಮಾಜದ ಮೇಲಿದೆ. ಮಹಿಳೆಯೂ ಸಹ ಹಕ್ಕುಗಳು-ಕರ್ತವ್ಯಗಳ ಅರಿತು ನಡೆಯುವಂತೆ ತಿಳಿಸಿದರು.

ಸಮಾಜಕ್ಕೆ ಬಹಳ ಹಿಂದಿನಿಂದ ಮಹಿಳೆಯರು ತಮ್ಮದಾದ ಕೊಡುಗೆ ನೀಡುತ್ತಾ ಬಂದಿರುವುದು ಶ್ಲಾಘನೀಯ. ಆದರೆ ತಮ್ಮ ವೈಯಕ್ತಿಕ ಬದುಕು ಕಡೆಗಣನೆ ಮಾಡುವುದು ಸರಿಯಲ್ಲ ಎಂದರು.

ಪ್ರಾಚಾರ್ಯ ಡಾ.ರಮೇಶ ಚಕ್ರಸಾಲಿ, ಕುಟುಂಬ ನಿರ್ವಹಣೆ, ಸಂಸ್ಥೆಗಳ ಅಭಿವೃದ್ಧಿ ಹಾಗೂ ಸಮುದಾಯದ ಏಳಿಗೆಯಲ್ಲಿ ಮಹಿಳೆಯರ ಪಾತ್ರ ಅಲ್ಲಗಳೆಯುವಂತಿಲ್ಲ, ಸಮೃದ್ಧ ದೇಶಕಟ್ಟಲು ಕೊಡುಗೆ ನೀಡಲು ಕೋರಿದರು.

ಅಧ್ಯಕ್ಷತೆ ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನ ಡೀನ್ ಡಾ. ಸಿ.ವಿಜಯಾ ಮಾತನಾಡಿ, ತಾಳ್ಮೆ, ಸಮಯ ಸದ್ಬಳಕೆ, ಬದ್ಧತೆ ಹಾಗೂ ಸರಿಯಾದ ಯೋಜನೆ ಇವುಗಳಿಂದ ಸಾಧನೆ ಹಾದಿ ಕ್ರಮಿಸಲು ಸಲಹೆ ನೀಡಿದರು.

ಇದಕ್ಕೂ ಮೊದಲು ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು ಜರುಗಿದವು. ಡಾ. ಕೇಶವ ಜೋಶಿ, ಡಾ. ಕೆ.ಎನ್ .ಪಾಟೀಲ, ಮೇಘಾ ಹುಕ್ಕೇರಿ, ಡಾ. ಶೈಲಜಾ ಶಿರ್ಕೋಳ ಸೇರಿದಂತೆ ಅನೇಕರು ಇದ್ದರು. ಡಾ.ವರ್ಷಾ ಜೋಶಿ ಪ್ರಾರ್ಥಿಸಿದರು. ಎಸ್‌ಡಿಎಂಸಿಇಟಿ ಮಹಿಳಾ ವೇದಿಕೆ ಅಧ್ಯಕ್ಷೆ ಡಾ.ನೀತಾ ಕುಲಕಣಿ ಸ್ವಾಗತಿಸಿದರು. ಪ್ರೊ. ಇಂದಿರಾ ಉಮರ್ಜಿ ನಿರೂಪಿಸಿದರು. ಡಾ.ರಶ್ಮಿ ಪರಿಚಯಿಸಿದರು. ಫ್ಲೋರಾ ವವಂದಿಸಿದರು.



ಡಿಕೆಶಿ ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರ್ಣ: ಸಂಭ್ರಮಾಚರಣೆ

◆ **ಹುಬ್ಬಳ್ಳಿ:** ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ವಿದ್ಯಾನಗರ ಹಾಗೂ ಉಣಕಲ್ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಮಂಗಳವಾರ ಕೇಶ್ವಾಪುರ ವೃತ್ತದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಯಶಸ್ವಿಯಾಗಿ ಪೂರೈಸಿದ ಹಿನ್ನೆಲೆ ಸಂಭ್ರಮಾಚರಣೆ ಮಾಡಲಾಯಿತು.



ಮಂಗಳವಾರ ಕೇಶ್ವಾಪುರ ವೃತ್ತದಲ್ಲಿ ನೂರಾರು ಕಾರ್ಯಕರ್ತರು ಕೇಕ್ ಕತ್ತರಿಸಿ, ಪಟಾಕ್ಷಿ ಹಾರಿಸಿ ವಿಜೃಂಭಣೆಯಿಂದ ಆಚರಿಸಿದರು. ಸೆಂಟ್ರಲ್ ವಿಧಾನಸಭಾ ಕ್ಷೇತ್ರದ 266 ಬೂತ್ ಮಟ್ಟದ ಕಾಂಗ್ರೆಸ್ ಏಜೆಂಟರನ್ನು ನೇಮಿಸಿ, ಏಪ್ರಿಲ್ ತಿಂಗಳಿನಲ್ಲ ನಡೆಯಲಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ 2026 ಸಕ್ರಿಯವಾಗಿ ಭಾಗವಹಿಸಿ ಮತದಾರರ ಹಕ್ಕು ರಕ್ಷಣೆ ಮಾಡಲು ಕಾರ್ಯಕರ್ತರಿಗೆ ವಿದ್ಯಾನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಜತ್ ಉಳ್ಳಾಗಡ್ಡಿಮಠ ಸೂಚಿಸಿದರು .

ಡಿ.ಕೆ. ಶಿವಕುಮಾರ್ ಅವರು ಕೋವಿಡ್ ಸಮಯದಲ್ಲಿ ಕೊರೋನಾ ವಾರಿಯರ್ ರೀತಿ ಕೆಲಸ ಮಾಡಿ ಸಂಕಷ್ಟದಲ್ಲಿ ಸಿಲುಕಿದ ಜನರ ನೆರವಿಗೆ ನಿಂತು ಕಾಂಗ್ರೆಸ್ ಪಕ್ಷದ ಮೇಲೆ ಜನರಿಗಿದ್ದ ವಿಶ್ವಾಸವನ್ನು ಹೆಚ್ಚಿಸಿದರು. ಡಿಕೆಶಿ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು 2023ರ ಚುನಾವಣೆಯಲ್ಲಿ 135 ಸ್ಥಾನಗಳನ್ನು ಗೆಲ್ಲುವ ಮೂಲಕ ಭರ್ಜರಿ ಬಹುಮತ ಪಡೆಯಿತು. ಅಲ್ಲದೇ ಹೇಳಿದಷ್ಟೇ ಸ್ಥಾನ ಗೆದ್ದು ಪಕ್ಕಾ ಚುನಾವಣಾ ರಣತಂತ್ರಗಾರ ಎಂದು ಸಾಬೀತುಪಡಿಸಿದರು ಎಂದರು.

ಮಹಾನಗರ ಜಿಲ್ಲಾಧ್ಯಕ್ಷ ಅಲ್ತಾಫ್ ಹಳ್ಳೂರ್, ಸತೀಶ್ ಮೆಹರವಾಡೆ, ಚೇತನ್ ಹಿರೇಕೆರೂರ್, ಸೆಂದೀಲ್ ಕುಮಾರ್, ಸುವರ್ಣ ಕಲ್ಲಕುಂಟ್ಲಾ, ದೊಡ್ಡರಮ್ಮಪ್ಪ ದೊಡ್ಡಮನಿ, ಮೊಹಮ್ಮದ್ ಷರೀಫ್ ಗರಗದ, ದೇವಕಿ ಯೋಗಾನಂದ್, ಗೌರಮ್ಮ ಬಾಳೋಗಿ, ಸ್ನೇಹ ಜಾಧವ್, ಬಾಳಮ್ಮ ಜಂಗನವರ್, ಸಂಗಮೇಶ್ ಗೌರಕ್ಕನವರ್ ಇದ್ದರು.

ಉತ್ತಮ ಸಂಚಾರ ವ್ಯವಸ್ಥೆ ಗುರಿ

◆ **ಕುಂದಗೋಳ:** ಕ್ಷೇತ್ರದಲ್ಲಿ ರಸ್ತೆ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದ್ದು, ಗ್ರಾಮೀಣ ಪ್ರದೇಶದ ಜನರಿಗೆ ಉತ್ತಮ ಸಂಚಾರ ವ್ಯವಸ್ಥೆ ಕಲ್ಪಿಸುವುದು ನಮ್ಮ ಉದ್ದೇಶವಾಗಿದೆ ಎಂದು ಶಾಸಕ ಎಂ.ಆರ್. ಪಾಟೀಲ ಹೇಳಿದರು.

ಅವರು 2024-25ನೇ ಸಾಲಿನ ಲೆಕ್ಕ ಶೀರ್ಷಿಕೆ 5054 ಅಡಿಯಲ್ಲಿ ಹುಲುಗೂರ-ಯರಗುಪ್ಪಿ ಜಿ, ಮು.ರ.ಶಿರೂರು ಕಮಡೊಳ್ಳಿ ರಸ್ತೆಯ ಮೀ. 4.00 ರಿಂದ 19.80ರ ವರೆಗೆ ಆಯ್ದ ಭಾಗಗಳಲ್ಲಿ ಕೈಗೊಳ್ಳಲಾಗುತ್ತಿರುವ ಮರುಡಾಂಬರೀಕರಣ ಕಾಮಗಾರಿಗೆ ಕಮಡೊಳ್ಳಿ ಗ್ರಾಮದಲ್ಲಿ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿ ಮಾತನಾಡಿ, ಉತ್ತಮ ರಸ್ತೆ ವ್ಯವಸ್ಥೆ ಶಿಕ್ಷಣ ಮುಲ ಸೌಕರ್ಯ ಗ್ರಾಮಗಳ ಅಭಿವೃದ್ಧಿಗೆ ಸಹಕಾರಿಯಾಗಲಿದೆ, ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ರಸ್ತೆ ಸುಧಾರಣೆ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ. ಜನರಿಗೆ ಗುಣಮಟ್ಟದ ಮೂಲಸೌಕರ್ಯ ಒದಗಿಸಲು ತಮ್ಮ ಅಧಿಕಾರದ ಅವಧಿಯಲ್ಲಿ ಪ್ರಯತ್ನಿಸುವುದಾಗಿ ಹೇಳಿದರು.

ನಾಗನಗೌಡ ಸಾತ್ಮರ,ಮಾಲತೇಶ ಶಾಗೋಟಿ, ರವಿಗೌಡ ಪಾಟೀಲ, ಟಿ ಜಿ ಬಾಲಣ್ಣನವರ,ಷಣ್ಮುಖ ಐಹೊಳೆ, ಬಸವರಾಜ ನಾವಳ್ಳಿ, ರಂಗನಗೌಡರು ಪಾಟೀಲ, ನೇಮಿಚಂದ್ರ ಬಸಾಪುರ,ಸಂತೋಷ ಮಲ್ಲಿಗವಾಡ ರಮೇಶಗೌಡ ಮೇಲಮಾಳಗಿ,ಗುಳ್ಳಪ್ಪ ಹಂಚಿನಾಳ, ಬಿ ಸಿ ಶೆಟ್ಟರ ಈಶ್ವರ ಬರದೇಲಿ,ಕೋಟಪ್ಪ ತಳಗೇರಿ ಮಂಜುನಾಥ ತಳಗೇರಿ,ಗಿರೀಶ ಹಾವಳಿ,ಅಪ್ಪು ಶೆಟ್ರ ಸೇರಿದಂತೆ ಇತರರಿದ್ದರು.



ತಂತ್ರಜ್ಞಾನ ಆಧಾರಿತ ಪಠ್ಯಕ್ರಮ ಅಗತ್ಯ: ಡಾ.ಖಾನ್

◆ **ಧಾರವಾಡ:** ಭಾರತೀಯ ಜ್ಞಾನ ಪರಂಪರೆಯು ಜೀವನದ ಅವಿಭಾಜ್ಯ ಅಂಗ. ಈ ಜ್ಞಾನದೊಂದಿಗೆ ಶಿಕ್ಷಕರ ತಂತ್ರಜ್ಞಾನ ಕೌಶಲ್ಯದೊಂದಿಗೆ ಬೋಧನೆ ಮಾಡಬೇಕು ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎ.ಎಂ.ಖಾನ್ ಹೇಳಿದರು.



ನಗರದ ಕರ್ನಾಟಕ ವಿಶ್ವವಿದ್ಯಾಲಯದ ಮದನ್ ಮೋಹನ್ ಮಾಳವೀಯದ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಭಾರತೀಯ ಜ್ಞಾನ ಪರಂಪರೆ ಕುರಿತು ಪ್ರಾಧ್ಯಾಪಕರಿಗೆ ನಡೆದ ಜ್ಞಾನಾಭಿವೃದ್ಧಿಗೆ ಸಾಮರ್ಥ್ಯ ತರಬೇತಿ ಉದ್ಘಾಟಿಸಿ ಮಾತನಾಡಿ, ಪುರಾತನ ಸಂಸ್ಕೃತಿಯ ವೈದ್ಯಕೀಯ ಚಿಕಿತ್ಸೆಯಾದ ಮನೆ ಮದ್ದಿನಿಂದಲೇ ರೋಗ ಗುಣಪಡಿಸುವ ಅರಿಶಿಣದ ಮಹತ್ವ ತಿಳಿಸಿದರು. ಪಾರಂಪರಿಕ ಹಾಗೂ ತಂತ್ರಜ್ಞಾನ ಜ್ಞಾನದ ಎರಡೂ ಜೊತೆಗೂಡಿ ಸಾಗಬೇಕು. ಕೃಷಿ, ಸಾಹಿತ್ಯ, ವಿಜ್ಞಾನ, ಆಯುರ್ವೇದ ಅಧ್ಯಯನಕ್ಕೆ ಪೂರಕವಾಗಿ ವಿವಿಗಳಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣದ ಪಠ್ಯಕ್ರಮ ಅಳವಡಿಸಬೇಕು ಎಂದರು.

ಕವಿವಿ ಸಿಎಂಡಿಆರ್ ನಿರ್ದೇಶಕ ಪ್ರೊ. ಬಸವಪ್ರಭು ಜಿರ್ಲಿ ಮಾತನಾಡಿ, ಬನಾರಸ್ ಹಿಂದೂ ವಿವಿಯಲ್ಲಿಸಂಸ್ಕೃತವಿಷಯದೊಂದಿಗೆ ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣ 1916ರಲ್ಲಿ ಪ್ರಾರಂಭಿಸಿದ ದೇಶದ ಏಕೈಕ ವಿಶ್ವವಿದ್ಯಾಲಯ ಎಂದರು. 20 ಸಾವಿರಕ್ಕೂ ಹೆಚ್ಚು ಹೆರಿಗೆ ಮಾಡಿಸಿದ ಸೂಲಗತ್ತಿ ನರಸಮ್ಮ ಪದ್ಮಶ್ರೀ ಪಶಸ್ತಿಗೆ ಪಡೆದಿರುವುದು ಈಗ ಇತಿಹಾಸ. ಆಧುನಿಕ ಶಿಕ್ಷಣಕ್ಕೆ ಪಾರಂಪರಿಕ ಜ್ಞಾನವೂ ಸಹ ಪೂರಕವೇ. ಇದು ಜೀವಿಗಳ ಆರೈಕೆಯಲ್ಲಿ ಪ್ರಮುಖ ಪಾತ್ರವು ವಹಿಸಲಿದೆ ಎಂದರು.

ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಕವಿವಿ ನಿರ್ದೇಶಕ ಪ್ರೊ. ಬಿ.ಎಚ್.ನಾಗೂರ ಮಾತನಾಡಿ, ಹಳ್ಳಿಗಳಲ್ಲಿ ಅನೌಪಚಾರಿಕ ರೂಪದಲ್ಲಿ ಇರುವ ಭಾರತೀಯ ಜ್ಞಾನ ಪರಂಪರೆ ಪಠ್ಯಕ್ರಮದಲ್ಲಿ ಅಳವಡಿಸಬೇಕು ಎಂದರು.

ಡಾ.ಲೋಕೇಶ ಶಾಸ್ತ್ರಿ, ತರಬೇತಿ ಸಂಯೋಜಕಿ ಡಾ. ಶ್ರೀದೇವಿ, ಪ್ರತಿನಿಧಿ ಅಧಿಕಾರಿ ಡಾ. ದಿನೇಶ ಪಾಂಡುರಂಗ ಇದ್ದರು. ಅಮರೇಶ ನಾಯಕ ಪ್ರಾರ್ಥಿಸಿದರು. ಡಾ. ಪದ್ಮಾವತಿ ಸಿಂಗಾರಿ ಸ್ವಾಗತಿಸಿ, ವಂದಿಸಿದರು.

ಕಾಂಗ್ರೆಸ್ ಕಚೇರಿಗೆ ಭೂಮಿ ಮೇಲ್ಮನೆಯಲ್ಲಿ ಗದ್ದಲ

ವಿಧಾನ ಪರಿಷತ್: ರಾಜ್ಯದಲ್ಲಿ ಹಲವು ಕಡೆಗಳಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಭೂಮಿ ಕೊಟ್ಟಿರುವ ವಿಚಾರ ಸಂಬಂಧ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ಮಧ್ಯೆ ಮೇಲ್ಮನೆಯಲ್ಲಿ ಕೆಲ ಕಾಲ ವಾಗ್ವಾದ ಉಂಟಾಯಿತು.

ಕಾಂಗ್ರೆಸ್ ಕಚೇರಿ ನಿರ್ಮಾಣಕ್ಕೆ ಭೂಮಿ ನೀಡಿದ ವಿಚಾರ

ಮಂಗಳವಾರ ಪ್ರಶ್ನೋತ್ತರ ಸಮಯದಲ್ಲಿ ಬಿಜೆಪಿಯ ಡಿ.ಎಸ್.ಅರುಣ್ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕಾಗಿ ಸುಮಾರು 40 ಕೋಟಿ ರೂ. ಮೌಲ್ಯದ ಸರ್ಕಾರಿ ಜಾಗವನ್ನು ಕೇವಲ 2 ಕೋಟಿ ರೂ. ಗಳ ರಿಯಾಯಿತಿ ದರದಲ್ಲಿ ಮಂಜೂರು ಮಾಡಲಾಗಿದೆ. ಆದೇಶದಲ್ಲಿ ಎಕರೆಗಳ ಅಂಕಿಗಳಲ್ಲಿ ವ್ಯತ್ಯಾಸವಿದ್ದು, ಇನ್ನೊಂದರಲ್ಲಿ ಒಂದೊಂದು ಎಕರೆ ಜಾಗದಲ್ಲಿ ಕಾಂಗ್ರೆಸ್ ಭವನ ನಿರ್ಮಾಣ ಮಾಡುವುದಕ್ಕೆ ರಾಜ್ಯ ಸರ್ಕಾರ ಮುಂದಾಗಿರುವುದು ಇದೊಂದು ರೀತಿ ಹಗಲು ದರೋಡೆಯಾಗಿದೆ ಎಂದು ಹೇಳಿದರು. ಇದಕ್ಕೆ ಉತ್ತರಿಸಿದ ಸಚಿವ ಬೈರತಿ ಸುರೇಶ್, ಸಚಿವ ಸಂಪುಟದ ತೀರ್ಮಾನದಂತೆ ಕಾಂಗ್ರೆಸ್ ಕಚೇರಿ ನಿರ್ಮಿಸಲು ನಿವೇಶನ ಮಂಜೂರು ಮಾಡಲಾಗಿದೆ. ಕಂದಾಯ ಇಲಾಖೆಯಿಂದ ಯಾವುದೇ ತಕರಾರುಗಳು ಸ್ವೀಕೃತವಾಗಿಲ್ಲ. ಈ ಹಿಂದೆ ಡಿ.ಎಸ್.ಅರುಣ್ ಅವರೂ ಸಾರ್ವಜನಿಕರ ಸದುಪಯೋಗಕ್ಕೆ 2 ನಿವೇಶನವನ್ನು ರಿಯಾಯಿತಿ ದರದಲ್ಲಿ ನೀಡಲಾಗಿದೆ. ಬಿಜೆಪಿ ಕಚೇರಿಗಳಿಗೂ ನಿವೇಶನ ಕೊಡಲಾಗಿದೆ ಎಂದು ತಿಳಿಸಿದರು.

ಮಧ್ಯೆ ಪ್ರವೇಶಿಸಿದ ಛಲವಾದಿ ನಾರಾಯಣಸ್ವಾಮಿ ಅವರು, ಸರ್ಕಾರ 100 ಕಾಂಗ್ರೆಸ್ ಭವನ ಮಾಡಲು ನಿರ್ಧರಿಸಿದ್ದರು. ರಾಜಕೀಯ ಪಕ್ಷಕ್ಕೆ ನೂರಾರು ನಿವೇಶನಗಳು ಕೊಡುವುದಕ್ಕೆ ಅವಕಾಶ ಇಲ್ಲ, ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದ ಕೂಡಲೇ ಕಾನೂನು ಬಾಹಿರ ಇರುವುದು ಸರಿಯಾಗುತ್ತಾ, ಏನು ಬೇಕಾದರೂ ತೀರ್ಮಾನ ಕೈಗೊಳ್ಳಬಹುದೇ ಎಂದು ಪ್ರಶ್ನಿಸಿದರು.

ಉಪಾಹಾರ ಕೂಟ



ಮಂಗಳವಾರ ರಾಷ್ಟ್ರಪತಿ ಭವನದಲ್ಲಿ ಕರ್ನಾಟಕ, ಆಂಧ್ರಪ್ರದೇಶ ಹಾಗೂ ಕೇರಳದ ಸಂಸದರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಪಾಹಾರ ಕೂಟ ಆಯೋಜಿಸಿದ್ದರು. ಈ ವೇಳೆ ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ನಿರ್ಮಲಾ ಸೀತಾರಾಮನ್, ಜೆ.ಪಿ. ನಡ್ಡಾ, ಎಚ್.ಡಿ. ಕುಮಾರಸ್ವಾಮಿ ಸೇರಿದಂತೆ ರಾಜ್ಯದ ಸಂಸದರು ಉಪಸ್ಥಿತರಿದ್ದರು.

ಬಾಕಿ ಹಣ ವಾರದೊಳಗೆ ನೀಡಲು ಕ್ರಮ: ಖಂಡ್ರೆ

ವಿಧಾನ ಪರಿಷತ್: ಇತ್ತೀಚೆಗೆ ಮಡಿಕೇರಿಯಲ್ಲಿ ಆನೆ ದಾಳಿಯಿಂದ 2 ಪ್ರಕರಣಗಳಲ್ಲಿ ಮೃತಪಟ್ಟ ಇಬ್ಬರೂ ಕುಟುಂಬಸ್ಥರಿಗೆ ಈಗಾಗಲೇ ತಲಾ 5 ಲಕ್ಷ ರೂ. ಪರಿಹಾರ ನೀಡಲಾಗಿದ್ದು, 15 ಲಕ್ಷ ರೂ. ಬಾಕಿ ಮೊತ್ತವನ್ನು ವಾರದೊಳಗೆ ನೀಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ ನೀಡಿದರು.



ಆನೆ ದಾಳಿಯಿಂದ ಮೃತಪಟ್ಟ ಕುಟುಂಬಸ್ಥರಿಗೆ ತಲಾ 5 ಲಕ್ಷ ಪರಿಹಾರ

ಶೂನ್ಯವೇಳೆಯಲ್ಲಿ ಸುಜಾ ಕುಶಾಲಪ್ಪ ಅವರ ಪ್ರಸ್ತಾಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಫೆ.28 ರಂದು ಕಾಡಿನಂಚಿನ ನಿವಾಸಿ 17 ವರ್ಷದ ಬಾಲಕಿ ಆನೆ ದಾಳಿಯಿಂದ ಮೃತಪಟ್ಟಿದ್ದರೆ, ಮಾ.9 ರಂದು ಕಾಡಿನೊಳಗೆ ವಾಸಿಸುತ್ತಿದ್ದ 55 ವರ್ಷದ ಬುಡಕಟ್ಟು ಮಹಿಳೆ ಸಾವಿಗೀಡಾಗಿದ್ದಾರೆ ಇದು ಅತ್ಯಂತ ನೋವಿನ ಸಂಗತಿ ಎಂದರು. ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ, ಅರಣ್ಯ ಇಲಾಖೆ ಮಾನವ-ವನ್ಯಜೀವಿ ಸಂಘರ್ಷ ತಡೆಯಲು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಆನೆನಿಗ್ರಹಕಂದಕ, ಸೌರವಿದ್ಯುತ್ ಬೇಲಿನಿರ್ವಹಣೆ ಮಾಡಲಾಗುತ್ತಿದೆ. 2 ಆನೆ ಕಾರ್ಯಪಡೆ ಕಾರ್ಯನಿರ್ವಹಿಸುತ್ತಿದೆ. ಈಗ 2 ಪುಂಡಾನೆಗಳ ಸೆರೆಗೆ ಮುಖ್ಯ ವನ್ಯಜೀವಿ ಪರಿಪಾಲಕರು ಆದೇಶ ನೀಡಿದ್ದಾರೆ ಎಂದು ತಿಳಿಸಿದರು.

ಆನೆ-ಮಾನವ ಸಂಘರ್ಷ ನಿಯಂತ್ರಿಸಲು ಶಾಶ್ವತ ಪರಿಹಾರ ಕ್ರಮಗಳ ಬಗ್ಗೆಯೂ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು. ಆನೆ-ಮಾನವ ಸಂಘರ್ಷ ನಿಯಂತ್ರಿಸಲು 2025-26ನೇ ಸಾಲಿನಲ್ಲಿ ಮಡಿಕೇರಿ ವಿಭಾಗಕ್ಕೆ 7ಕಿ.ಮೀ. ಮತ್ತು ನಾಗರಹೊಳೆ ವಿಭಾಗಕ್ಕೆ 20 ಕಿ.ಮೀ. ರೈಲು ಹಳಿ ತಡೆಗೋಡೆ ಮಂಜೂರಾಗಿದ್ದು, ಶೀಘ್ರ ಕಾಮಗಾರಿ ಆರಂಭಿಸಲಾಗುವುದು ಎಂದು ವಿವರಿಸಿದರು.

ಕಿರುಸುದ್ದಿ

ಸಾವಯುವ ಕೃಷಿಗೆ ಪ್ರೋತ್ಸಾಹ

ವಿಧಾನ ಪರಿಷತ್: ತೆಂಗಿನ ತೋಟ ಸೇರಿದಂತೆ ತೋಟಗಾರಿಕೆ ಬೆಳೆಗಳನ್ನು ಪುನಶ್ಚೇತನಗೊಳಿಸಲು ವೈಜ್ಞಾನಿಕವಾಗಿ ಸಾವಯುವ ಕೃಷಿಯನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ತಿಳಿಸಿದರು. ಸದಸ್ಯ ರಮೇಶ್ ಬಾಬು ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ತೆಂಗಿನ ತೋಟಗಳಲ್ಲಿ ವೈಜ್ಞಾನಿಕವಾಗಿ ಸಾವಯುವ ಕೃಷಿಯನ್ನು ಅಳವಡಿಸಲು ಮೊದಲನೇ ಹಂತದಲ್ಲಿ ತುಮಕೂರು ಹಾಗೂ ಮಂಡ್ಯ ಜಿಲ್ಲೆಗಳಲ್ಲಿ ಎರಡು ಗುಚ್ಚಗಳನ್ನು ಗುರುತಿಸಲಾಗಿದೆ.



ಎರಡನೇ ಹಂತದಲ್ಲಿ ತುಮಕೂರು, ಹಾಸನ, ಮಂಡ್ಯ, ಮೈಸೂರು, ಚಾಮರಾಜನಗರ, ಚಿತ್ರದುರ್ಗ ಜಿಲ್ಲೆಗಳಲ್ಲಿ 10 ಗುಚ್ಚಗಳನ್ನು ಗುರುತಿಸಲಾಗುವುದು ಎಂದರು. ತೋಟಗಾರಿಕೆಯಲ್ಲಿ ಸಾವಯುವ ಕೃಷಿಯನ್ನು ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಗುಚ್ಚ ಮಾದರಿಯಲ್ಲಿ 640 ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು 2 ಗ್ರಾಮ ಪಂಚಾಯಿತಿಯಲ್ಲಿ ಪರಂಪರಾಗತ ಕೃಷಿ ವಿಕಾಸ ಯೋಜನೆ ಅಡಿ ಅಳವಡಿಸಿಕೊಳ್ಳಲಾಗಿದೆ ಎಂದರು.

900 ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕ: ಸಚಿವ

ವಿಧಾನಸಭೆ: ಕಳೆದ ಒಂದೂವರೆ ವರ್ಷದಲ್ಲಿ 900 ಜನ ಸಬ್ ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿದ್ದೇವೆ. ಮೊದಲ ಹಂತದಲ್ಲಿ 545 ಜನ ಒಂದು ಅಥವಾ ಎರಡು ವಾರಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಾರೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು. ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ ನಾಲ್ಕೈದು ವರ್ಷಗಳಿಂದ ನೇಮಕಾತಿ ನಡೆದಿಲ್ಲ, ಕಳೆದ ಒಂದೂವರೆ ವರ್ಷದಲ್ಲಿ 900 ಜನ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕ ಮಾಡಿದ್ದೇವೆ. ಮೊದಲ ಹಂತದಲ್ಲಿ 545 ಜನ ಎರಡು ವಾರಗಳಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುತ್ತಾರೆ. ಇನ್ನೂ 400 ಜನರಿಗೆ ತರಬೇತಿ ನಡೆಯುತ್ತಿದೆ. ಇನ್ನೂ ಎರಡು ತಿಂಗಳಲ್ಲಿ ತರಬೇತಿ ಪೂರ್ಣಗೊಳ್ಳಲಿದೆ ಎಂದರು. ಪ್ರಸಕ್ತ 8,000 ಜನ ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಅನುಮತಿ ಸಿಕ್ಕಿದೆ. ಶೀಘ್ರದಲ್ಲೇ ಅವರ ನೇಮಕಕ್ಕೆ ಅಧಿಸೂಚನೆ ಹೊರಡಿಸಲಿದ್ದೇವೆ. ಒಳ ಮೀಸಲಾತಿ ವಿಷಯದಿಂದ ನೇಮಕಾತಿ ವಿಳಂಬವಾಗಿದೆ. ಈಗಾಗಲೇ ಸರ್ಕಾರ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಘೋಷಿಸಿದೆ. ಅದರಲ್ಲಿ ಈ ಹುದ್ದೆಗಳೂ ಸೇರಿವೆ. ನೇಮಕಾತಿ ಆದ ತಕ್ಷಣ ಯಾವ ಠಾಣೆಯಲ್ಲಿ ತೀವ್ರ ಕೊರತೆ ಇದೆ, ಅಂತಹ ಕಡೆ ನಾವು ನಿಯುಕ್ತಿ ಮಾಡುತ್ತೇವೆ ಎಂದು ತಿಳಿಸಿದರು.

ಮಹಾಮಸ್ತಕಾಭಿಷೇಕ ಪೂರ್ವ ಸಿದ್ಧತೆಗಾಗಿ ಸಮಿತಿ

ವಿಧಾನಸಭೆ: ಮುಂದಿನ ವರ್ಷದ ಫೆಬ್ರವರಿಯಲ್ಲಿ ಜರುಗಲಿರುವ ಕಾರ್ಕಳದ ಬಾಹುಬಲಿ ಮಹಾಮಸ್ತಕಾಭಿಷೇಕ ಧಾರ್ಮಿಕ ಕಾರ್ಯಕ್ರಮಕ್ಕೆ ಸುಮಾರು 7 ಕೋಟಿ ರೂ. ಅನುದಾನ ಬೇಕಾಗಲಿದ್ದು, ಪೂರ್ವ ಸಿದ್ಧತೆ ಮಾಡಿಕೊಳ್ಳಲು ಸಮಿತಿ ರಚಿಸಲಿದ್ದು, ಮುಖ್ಯಮಂತ್ರಿಗಳ ಜತೆ ಸಭೆ ನಡೆಸಿ ತೀರ್ಮಾನಿಸಲಾಗುವುದು ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ಮಹಾಮಸ್ತಕಾಭಿಷೇಕ ಪೂರ್ವ ಸಿದ್ಧತೆ ಬಗ್ಗೆ ಗಮನ ಸೆಳೆದ ಬಿಜೆಪಿ ಶಾಸಕ ಸುನೀಲ್ ಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಹನ್ನೆರಡು ವರ್ಷಗಳಿಗೆ ಒಮ್ಮೆ ಜರುಗುವ ಈ ಧಾರ್ಮಿಕ ಆಚರಣೆಯನ್ನು ನಡೆಸಲು ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಳ್ಳಲಿದೆ ಎಂದರು.

ಆಯಕಟ್ಟಿನ ಜಾಗದಲ್ಲಿ ವಿಮಾನ ನಿಲ್ದಾಣ ನಿರ್ಮಾಣ: ಎಂಬಿಪಾ

ಸಿಎಂ ಜತೆ ಚರ್ಚಿಸಿ ಕ್ರಮ

ವಿಧಾನ ಪರಿಷತ್: ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳ ಜನರಿಗೆ ಅನುಕೂಲವಾಗುವಂತೆ ಆಯಕಟ್ಟಿನ ಜಾಗದಲ್ಲಿ ಹೊಸದಾಗಿ ವಿಮಾನ ನಿಲ್ದಾಣ ನಿರ್ಮಿಸುವಸಂಬಂಧಮೂರೂಜಿಲ್ಲೆಗಳಜನಪ್ರತಿನಿಧಿಗಳು ಜತೆಗೂಡಿ ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ ನಡೆಸಿದ ನಂತರ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಸದಸ್ಯ ವೈ.ಎಂ.ಸತೀಶ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು, 2010 ರಲ್ಲಿ ಬಳ್ಳಾರಿಯಲ್ಲಿ ವಿಮಾನ ನಿಲ್ದಾಣಕ್ಕಾಗಿ 900 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಯೋಜನೆಯ ಜವಾಬ್ದಾರಿ ಹೊತ್ತಿದ್ದ ಚೆನ್ನೈ ಮೂಲದ ಮೆ.ಮಾರ್ಗ್ ಶ್ರೀ ಕೃಷ್ಣದೇವರಾಯ ಏರ್ಪೋರ್ಟ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಎರಡು ವರ್ಷ ಕಳೆದರೂ ಕಾಮಗಾರಿ ಆರಂಭಿಸದ ಕಾರಣ ಅದರೊಂದಿಗಿನ ಒಪ್ಪಂದವನ್ನು ರದ್ದುಗೊಳಿಸಲಾಗಿದೆ. ಪ್ರಸ್ತುತ ಹೊಸದಾಗಿ ಡಿಪಿಆರ್ ಸಿದ್ಧಪಡಿಸಲು ಸಲಹೆಗಾರರ ನೇಮಕಕ್ಕೆ ಟೆಂಡರ್ ಕರೆಯಲಾಗಿದೆ ಎಂದು ಮಾಹಿತಿ ನೀಡಿದರು.

ಈ ನಡುವೆ ವಿಜಯನಗರ ಮತ್ತು ಕೊಪ್ಪಳ ಭಾಗದವರೂ ವಿಮಾನ ನಿಲ್ದಾಣ ಬೇಕೆನ್ನುತ್ತಿದ್ದಾರೆ. ಹೀಗಾಗಿ ಜಿಲ್ಲೆಗೊಂದು ವಿಮಾನನಿಲ್ದಾಣಮಾಡುವುದುಕಾರ್ಯಸಾಧುವಲ್ಲಎಂದು ಈ ರೀತಿಯ ಚಿಂತನೆ ಮಾಡಲಾಗುತ್ತಿದೆ. ಆದರೆ ಬಳ್ಳಾರಿಯಲ್ಲಿ ವಿಮಾನ ನಿಲ್ದಾಣಕ್ಕೆಂದು ಸ್ವಾಧೀನ ಪಡಿಸಿಕೊಂಡಿರುವ ಜಮೀನನ್ನು ವಾಪಸ್ ಕೊಡಲು ಬರುವುದಿಲ್ಲ ಎಂದು ಹೇಳಿದರು.



- ಡಿಪಿಆರ್ ಸಿದ್ಧಪಡಿಸಲು ಸಲಹೆಗಾರರ ನೇಮಕಕ್ಕೆ ಟೆಂಡರ್ ಕರೆಯಲಾಗಿದೆ
- ಜಿಲ್ಲೆಗೊಂದು ವಿಮಾನ ನಿಲ್ದಾಣ ಮಾಡುವುದು ಕಾರ್ಯ ಸಾಧುವಲ್ಲ

ಜಿಲ್ಲೆಗೊಂದು ನಿಲ್ದಾಣ ಅಪ್ರಾಯೋಗಿಕ

ಪ್ರತಿ ಜಿಲ್ಲೆಗೂ ಪ್ರತ್ಯೇಕ ವಿಮಾನ ನಿಲ್ದಾಣ ನಿರ್ಮಿಸುವುದು ಸಮಂಜಸವಲ್ಲ. ಉಡಾನ್ ಯೋಜನೆಯಡಿ ಆರಂಭವಾದ ಬೀದರ್ ಮತ್ತು ಕಲಬುರಗಿ ನಿಲ್ದಾಣಗಳು ಆರಂಭದಲ್ಲಿ ಉತ್ತಮವಾಗಿದ್ದರೂ ನಂತರ ವಿಮಾನ ಸೇವೆ ಸ್ಥಗಿತಗೊಂಡ ಉದಾಹರಣೆಗಳು ನಮ್ಮ ಎದುರಿದೆ. ಬಳ್ಳಾರಿ ವಿಮಾನ ನಿಲ್ದಾಣಕ್ಕೂ ಅಂತಹ ಸ್ಥಿತಿ ಬರಬಾರದು. ಹೀಗಾಗಿ ಮೂರು ಜಿಲ್ಲೆಗಳಿಗೂ ಹತ್ತಿರವಾಗುವ ಸೂಕ್ತ ಸ್ಥಳದ ಬಗ್ಗೆ ಚಿಂತನೆ ನಡೆದಿದೆ. ಆದರೆ ಬಳ್ಳಾರಿಯಲ್ಲಿ ಈಗಾಗಲೇ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ವಾಪಸ್ ನೀಡಲು ಸಾಧ್ಯವಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಹೊಸ ಕೈಗಾರಿಕಾ ನೀತಿ ಜಾರಿಗೆ ಚಿಂತನೆ: ಸಚಿವ

ವಿಧಾನ ಪರಿಷತ್: ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ ಸ್ಥಾಪನೆಗೆ ಬಂಡವಾಳ ಹೂಡಿಕೆ ಆಕರ್ಷಿಸಲು ನಮ್ಮ ಸರ್ಕಾರ, ಹೊಸ ಕೈಗಾರಿಕಾ ನೀತಿಗಳನ್ನು ಜಾರಿಗೆ ತರುತ್ತಿದೆ. ಬಾಗಲಕೋಟೆ ಮತ್ತು ವಿಜಯಪುರದಲ್ಲಿ 8 ರಿಂದ 9 ಕಂಪನಿಗಳು ಬಂಡವಾಳ ಹೂಡಿಕೆ ಮಾಡುತ್ತಿವೆ ಎಂದು ಸಚಿವ ಎಂ.ಬಿ. ಪಾಟೀಲ್ ಹೇಳಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿಯ ಪಿ.ಎಚ್.ಪೂಜಾರ್ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷ್ಣಾ ಮೇಲ್ದಂಡೆ ಯೋಜನೆಯ ನಿರಾಶ್ರಿತರಿಗೆ ಉದ್ಯೋಗ ನೀಡಬೇಕು. ಇದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಬಿಜೆಪಿಯವರು ಕೇಂದ್ರ ಸರ್ಕಾರವನ್ನು ಒಪ್ಪಿಸುವ ಮೂಲಕ ರಾಜ್ಯದಲ್ಲಿ ದೊಡ್ಡ ಕಂಪನಿಗಳನ್ನು ತರುವ ಕೆಲಸ ಮಾಡಬೇಕು ಎಂದರು.

ಜ್ಞಾನಭಂಡಾರ ಹಸ್ತಪ್ರತಿ, ಡಿಜಿಟಲ್ ಬಿಲ್ ಮಂಡನೆ

ವಿಧಾನಸಭೆ: ಕರ್ನಾಟಕ ರಾಜ್ಯದಲ್ಲಿರುವ ಹಸ್ತಪ್ರತಿಗಳ ಸಮೀಕ್ಷೆ, ದಾಖಲೀಕರಣ, ಸಂರಕ್ಷಣೆ, ಡಿಜಿಟಲೀಕರಣ, ಸಂಶೋಧನೆ, ಪ್ರಕಟಣೆ ಮತ್ತು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲು ಕರ್ನಾಟಕ ಹಸ್ತಪ್ರತಿಗಳ ಪ್ರಾಧಿಕಾರ ಸ್ಥಾಪಿಸಲು ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಮತ್ತು ಡಿಜಿಟಲೀಕರಣ ವಿಧೇಯಕ, 2026ನ್ನು ಮಂಡಿಸಲಾಯಿತು. ಮಂಗಳವಾರ ಸದನದಲ್ಲಿ ಎಚ್.ಕೆ.ಪಾಟೀಲ್ ಈ ವಿಧೇಯಕವನ್ನು ಮಂಡಿಸಿದರು. ಪುರಾತತ್ತ್ವ ಇಲಾಖೆಯ ಪ್ರಭಾರದಲ್ಲಿರುವ ಸಚಿವರು ಈ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿರಲಿದ್ದಾರೆ. ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಪದನಿಮಿತ್ತ ಸದಸ್ಯ ಕಾರ್ಯದರ್ಶಿ, ಐವರು ಪದನಿಮಿತ್ತ ಸದಸ್ಯರು, ಭಾರತಾಧ್ಯಯನ ಶಾಸ್ತ್ರ, ಕನ್ನಡ ಸಾಹಿತ್ಯ ಅಥವಾ ಹಸ್ತಪ್ರತಿ ಶಾಸ್ತ್ರದಲ್ಲಿ ಮೂವರು ವಿದ್ವಾಂಸರು ಸದಸ್ಯರು, ಖಾಸಗಿ ಹಸ್ತಪ್ರತಿಧಾರಕರು ಅಥವಾ ಮಠಗಳ ಇಬ್ಬರು ಪ್ರತಿನಿಧಿಗಳು ಸದಸ್ಯರು, ಡಿಜಿಟಲ್ ಮಾನವಿಕಗಳಲ್ಲಿನ ಒಬ್ಬ ತಜ್ಞ ಸದಸ್ಯರಾಗಿರಲಿದ್ದಾರೆ ಎಂದು ವಿಧೇಯಕದಲ್ಲಿ ತಿಳಿಸಲಾಗಿದೆ.

ಪೊಲೀಸ್, ಲೋಕಾಯುಕ್ತ ಕಾಯ್ದೆ ತಿದ್ದುಪಡಿ ವಿಧೇಯಕಗಳು

ಪೊಲೀಸ್ ಠಾಣೆಗಳು, ವೃತ್ತ, ಉಪ ವಿಭಾಗ, ಜಿಲ್ಲೆ ಮತ್ತು ವಲಯಗಳ ಪ್ರಭಾರದಲ್ಲಿರುವ ಅಧಿಕಾರಿಗಳ ಅಧಿಕಾರಾವಧಿ ವಯೋನಿವೃತ್ತಿಗೊಳಪಟ್ಟು, ಕಾಲಕಾಲಕ್ಕೆ ಸರ್ಕಾರದಿಂದ ಅಧಿಸೂಚಿಸಬಹುದಾದಂಥ ಕಾರ್ಯಾಚರಣೆ ಕರ್ತವ್ಯಗಳು ಅಥವಾ ಅಂಥ ಇತರೆ ಕರ್ತವ್ಯಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಗಳು ಕನಿಷ್ಠ ಒಂದು ವರ್ಷದ ಅಧಿಕಾರಾವಧಿ ಹೊಂದಿರಬೇಕು ಎಂಬ ತಿದ್ದುಪಡಿಯೊಂದಿಗೆ ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕ, 2026 ವಿಧೇಯಕ ಮಂಡಿಸಲಾಯಿತು. ಅಲ್ಲದೇ ಲೋಕಾಯುಕ್ತರ ಭತ್ಯೆಗಳು ಮತ್ತು ಸೇವಾ ಷರತ್ತುಗಳನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಅಥವಾ ಸಂದರ್ಭಾನುಸಾರ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಿಗೆ ಸಂದಾಯವಾಗಬಹುದಾದ ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳಿಗೆ ಸರಿಸಮಾನಾಗಿರುವಂತೆ ಉಪಬಂಧ ಕಲ್ಪಿಸಲು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ 2026 ನ್ನು ಮಂಡಿಸಲಾಯಿತು.

443 ಅಗ್ನಿಶಾಮಕ ವಾಹನ ಚಾಲನೆ ಸ್ಥಗಿತ: ಪರಮೇಶ್ವರ

ವಿಧಾನಸಭೆ: ಕೇಂದ್ರ ಗೃಹ ಮಂತ್ರಾಲಯದ ಗುಜರಿ ನೀತಿಯನ್ವಯ ಕಾರ್ಯಾಚರಣೆಗೆ ಯೋಗ್ಯವಾಗಿದ್ದರೂ 15 ವರ್ಷ ಮೇಲ್ಪಟ್ಟ 443 ಅಗ್ನಿಶಾಮಕ ವಾಹನಗಳನ್ನು ರಸ್ತೆ ಚಾಲನೆಯಿಂದ ಸ್ಥಗಿತಗೊಳಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ ಹೇಳಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಕಿರಣ್ ಕುಮಾರ್ ಕೊಡ್ಗಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಈ ಪೈಕಿ 155 ವಾಹನಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ. ಪ್ರಸ್ತುತ 261 ವಾಹನಗಳ ವಿಲೇವಾರಿಗೆ ಕ್ರಮ ಕೈಗೊಳ್ಳಲಾಗಿದೆ ಎಂದರು. ಈ ವಾಹನಗಳ ಬದಲಿಗೆ 15ನೇ ಹಣಕಾಸು ಆಯೋಗದ ಯೋಜನೆಯಲ್ಲಿ ಹಾಗೂ ಕೆ-ಸೇಫ್-2 ಯೋಜನೆಯಲ್ಲಿ ಒಟ್ಟು 270 ವಾಹನಗಳನ್ನು ಖರೀದಿಸಲು ಸರಬರಾಜು ಆದೇಶವನ್ನು ನೀಡಲಾಗಿದೆ. ಇದರಲ್ಲಿ 100 ವಾಹನಗಳು ಸರಬರಾಜು ಮಾಡಿದ್ದು, ಬಾಕಿ ಉಳಿದ 170 ವಾಹನಗಳ ಕವಚ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ವಾಹನಗಳು ಇಲಾಖೆಗೆ ಸರಬರಾಜು ಆದ ನಂತರ ಆದ್ಯತೆಯ ಮೇರೆಗೆ ವಾಹನಗಳನ್ನು ಮಂಜೂರು ಮಾಡಲಾಗುತ್ತದೆ ಎಂದು ವಿವರಿಸಿದರು. ಅಗ್ನಿಶಾಮಕ ದಳಕ್ಕೆ ಒಟ್ಟು 547 ವಾಹನಗಳನ್ನು ಖರೀದಿಸುತ್ತೇವೆ ಡಾ. ಪರಮೇಶ್ವರ ತಿಳಿಸಿದರು.

ಒಂದೇ ಅಗ್ನಿಶಾಮಕ ಠಾಣೆಯ ಎರಡು-ಮೂರು ಕಡೆ ಅಗ್ನಿ ಅವಘಡ ನಡೆದರೆ ಅಥವಾ ಬೃಹತ್ ಪ್ರಮಾಣದಲ್ಲಿ ಅಗ್ನಿ ಅನಾಹುತ ಸಂಭವಿಸಿದರೆ ಅಗ್ನಿಶಾಮಕ ವಾಹನಗಳ ನಿಯೋಜನೆಗೆ ಸಮಸ್ಯೆಯಾಗುತ್ತದೆ. ಇಂತಹ ಸಂದರ್ಭದಲ್ಲಿ 20 ಕಿ.ಮೀ. ವ್ಯಾಪ್ತಿಯಲ್ಲಿರುವ ಬೇರೆ ಠಾಣೆಗಳ ವಾಹನಗಳನ್ನು ನಿಯೋಜಿಸಲಾಗುತ್ತದೆ ಎಂದು ಸಚಿವರು ಹೇಳಿದರು.

ಜವಳಿ ಪಾರ್ಕ್ ಜಮೀನಿಗೆ ಕೇಂದ್ರಕ್ಕೆ ಪತ್ರ

ವಿಧಾನ ಪರಿಷತ್: ಸಿಂಧನೂರು ತಾಲೂಕಿನಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು 15 ಎಕರೆ ಜಮೀನನ್ನು ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ್ ತಿಳಿಸಿದರು.



ಚುಕ್ಕೆ ಗುರುತಿನ ಪ್ರಶ್ನೋತ್ತರ ಕಲಾಪದಲ್ಲಿ ಉತ್ತರಿಸಿದ ಸಚಿವರು, ಜವಳಿ ಪಾರ್ಕ್ ಸ್ಥಾಪನೆಯ ಸಂಬಂಧ ಅಗತ್ಯವಿರುವ ಕನಿಷ್ಠ 15 ಎಕರೆ ಜಮೀನನ್ನು ಗುರುತು ಮಾಡಿ, ಜವಳಿ ಇಲಾಖೆಯ ಹೆಸರಿಗೆ ಹಸ್ತಾಂತರಿಸಲು ಸಿಂಧನೂರು ತಾಲೂಕಿನ ತಹಸೀಲ್ದಾರರು, ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ. ಜಮೀನಿನ ಮಂಜೂರಾತಿಯನ್ನು ನಿರೀಕ್ಷಿಸಲಾಗಿದೆ ಎಂದರು.

ಸಿಂಧನೂರು ತಾಲೂಕಿನಲ್ಲಿ ಒಂದೇ ಕಡೆ 15 ಎಕರೆಯಷ್ಟು ಸರ್ಕಾರಿ ಜಮೀನು ಲಭ್ಯವಿರುವುದಿಲ್ಲ. ಆದರೆ, ಸಿಂಧನೂರು ತಾಲೂಕಿನಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸೆಂಟ್ರಲ್ ಸೀಡ್ ಫಾರಂ(ಸಿಎಸ್‌ಎಫ್)ನಲ್ಲಿ ಸುಮಾರು 7,500 ಎಕರೆಯಷ್ಟು ಭೂಮಿ ಲಭ್ಯವಿದ್ದು, ಈ ಜಮೀನನ್ನು ಇಲಾಖೆಗೆ ಮಂಜೂರು ಮಾಡಿದ್ದಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು ಪರಿಶೀಲಿಸಲಾಗುವುದು ಎಂದು ಹೇಳಿದರು.

ಎಪಿಎಂಸಿಗಳಲ್ಲಿ ₹476 ಕೋಟಿ ಮಾರುಕಟ್ಟೆ ಶುಲ್ಕ ಸಂಗ್ರಹ

ವಿಧಾನ ಪರಿಷತ್: ಪ್ರಸಕ್ತ ಹಣಕಾಸು ವರ್ಷದ ಜನವರಿ ಅಂತ್ಯಕ್ಕೆ ರಾಜ್ಯದ ಎಪಿಎಂಸಿಗಳಲ್ಲಿ ಒಟ್ಟು 71 ಸಾವಿರ ಕೋಟಿ ರೂ. ವಹಿವಾಟು ನಡೆದಿದೆ. 476.65 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದೆ ಎಂದು ಸಕ್ಕರೆ, ಕಬ್ಬು ಅಭಿವೃದ್ಧಿ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು. ಸದಸ್ಯ ಟಿ. ಶರವಣ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ಕಳೆದ ಹಣಕಾಸು ವರ್ಷದಲ್ಲಿ 82 ಸಾವಿರ ಕೋಟಿ ರೂ. ವಹಿವಾಟು ನಡೆದಿತ್ತು. ಈ ಅವಧಿಯಲ್ಲಿ 498 ಕೋಟಿ ರೂ. ಮಾರುಕಟ್ಟೆ ಶುಲ್ಕ ಸಂಗ್ರಹವಾಗಿದ್ದು, ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ಪ್ರಮಾಣ ಮತ್ತಷ್ಟು ಹೆಚ್ಚಾಗಲಿದೆ ಎಂದು ಹೇಳಿದರು.

ರಾಜ್ಯದಲ್ಲಿ 170 ಎಪಿಎಂಸಿಗಳಿದ್ದು, ಅಂಗಡಿಗಳ ಹಂಚಿಕೆ ಪ್ರಕ್ರಿಯೆ ನಿರಂತರವಾಗಿರುತ್ತದೆ. 141 ಎಪಿಎಂಸಿಗಳಲ್ಲಿ ಅಂಗಡಿ ಹರಾಜು ಬಾಕಿ ಇದ್ದು, ಕ್ರಮ ಕೈಗೊಳ್ಳಲು ಸಮಿತಿಗಳಿಗೆ ಸೂಚನೆ ನೀಡಲಾಗಿದೆ ಎಂದು ವಿವರಿಸಿದರು. ವಾಣಿಜ್ಯ ಸ್ವರೂಪದ ಚಿಕ್ಕ ಮಳಿಗೆಗಳನ್ನು 55 ತಿಂಗಳ ಹಂಚಿಕೆ ಅವಧಿ ಮುಕ್ತಾಯವಾದ ನಂತರ ಮತ್ತೆ ಮುಂದುವರಿಸಲು ಅವಕಾಶವಿಲ್ಲ. ಅಂತಹ ಅಂಗಡಿಗಳನ್ನು ಹೊಸದಾಗಿ ಟೆಂಡರ್ ಕರೆದು ಬೇಡಿಕೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಲಿದ್ದು, ಬಾಕಿ ಉಳಿಯುವುದಿಲ್ಲ ಎಂದು ತಿಳಿಸಿದರು.

ಕ್ಯಾಂಟೀನ್‌ನಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಗೆ ಕ್ರಮ





ವಿಧಾನ ಪರಿಷತ್: ರಾಜ್ಯದ ಇಂದಿರಾ ಕ್ಯಾಂಟೀನ್‌ಗಳಲ್ಲಿ ಶೀಘ್ರದಲ್ಲೇ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ಬೈರತಿ ಸುರೇಶ್ ಭರವಸೆ ನೀಡಿದರು.

ಪ್ರಶ್ನೋತ್ತರ ಕಲಾಪದಲ್ಲಿ ಕಾಂಗ್ರೆಸ್ ಸದಸ್ಯ ಜಗದೇವ್ ಗುತ್ತೇದಾರ್ ಪ್ರಸ್ತಾಪಿಸಿದ ವಿಷಯ ಪ್ರಸ್ತಾಪಿಸಿದರು. ಕಲಬುರಗಿಯ ಇಂದಿರಾ ಕ್ಯಾಂಟೀನ್‌ನಲ್ಲಿ ಮೆನು ಪ್ರಕಾರ ತಿಂಡಿ ನೀಡಲಾಗುತ್ತಿಲ್ಲ, ಜತೆಗೆ ಆಹಾರದ ಗುಣಮಟ್ಟವೂ ಸರಿಯಿಲ್ಲ ಎಂಬ ಅನೇಕ ದೂರುಗಳು ಬರುತ್ತಿವೆ. ಈ ವ್ಯವಸ್ಥೆಯನ್ನು ಸರಿಪಡಿಸುವುದರ ಜತೆಗೆ ಕ್ಯಾಂಟೀನ್‌ಗಳನ್ನು ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಬೈರತಿ ಸುರೇಶ್, ನಮಗೆ ದೊರೆತ ಮಾಹಿತಿ ಪ್ರಕಾರ ಇಂದಿರಾ ಕ್ಯಾಂಟೀನ್‌ಗಳಲ್ಲಿ ಮೆನು ಪ್ರಕಾರವೇ ಆಹಾರ ನೀಡಲಾಗುತ್ತಿದೆ. ಪ್ರಾದೇಶಿಕತೆಗೆ ಅನುಗುಣವಾಗಿ ತಿಂಡಿ ಮತ್ತು ಊಟವನ್ನು ನೀಡಲಾಗುತ್ತಿದೆ. ಈ ಬಗ್ಗೆ ನನಗೆ ಯಾವುದೇ ಗಂಭೀರ ದೂರುಗಳು ಬಂದಿಲ್ಲ ಎಂದು ಹೇಳಿದರು. ರಾಜ್ಯದ ಎಲ್ಲ ಇಂದಿರಾ ಕ್ಯಾಂಟೀನ್‌ಗಳಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ತರಲು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗುವುದು ಎಂದು ಬೈರತಿ ತಿಳಿಸಿದರು.

ಮತಪತ್ರ ಬಳಕೆ: ವಿಧೇಯಕ ಮಂಡನೆ

ವಿಧಾನಸಭೆ: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತಯಂತ್ರಗಳ ಬದಲಿಗೆ ಮತ ಪತ್ರವನ್ನು ಬಳಸಲು ಅನುವು ಮಾಡುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಗಳವಾರ ಮಂಡನೆ ಮಾಡಲಾಯಿತು.



ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪರವಾಗಿ ಕಾನೂನು, ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ-2026 ಮಂಡಿಸಿದರು.

ಗ್ರಾಮ ಪಂಚಾಯತ್ ಸೇರಿದಂತೆ ಇತರೆ ಚುನಾವಣೆ ಸಂದರ್ಭದಲ್ಲಿ ಮತದಾರ ಮೇಲಿನ ದಬ್ಬಾಳಿಕೆ, ಬೆದರಿಕೆ ಹಾಗೂ ಅನಗತ್ಯ ಪ್ರಭಾವ ಹಾಕುವವರ ವಿರುದ್ಧ ಕ್ರಮ ಕೈಗೊಳ್ಳುವ ಅಂಶವನ್ನು ಈ ವಿಧೇಯಕದಲ್ಲಿ ಸೇರ್ಪಡೆಗೊಳಿಸಲಾಗಿದೆ. ಸಂವಿಧಾನದ 326ನೇ ಅನುಚ್ಛೇದದಡಿ ಜನರ ಪ್ರಜಾಸತ್ತಾತ್ಮಕ ಇಚ್ಛೆಯನ್ನು ಪ್ರತಿಬಿಂಬಿಸುವ ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕ ರೀತಿಯಲ್ಲಿ ಚುನಾವಣೆ ನಡೆಸುವ ಸಲುವಾಗಿ ಈ ವಿಧೇಯಕ ಅಗತ್ಯತೆವಿದೆ. ಅದರಲ್ಲೂ ಮುಖ್ಯವಾಗಿ ಮತದಾರರ ಮತಪತ್ರದ ಗೌಪ್ಯತೆ ಖಚಿತಪಡಿಸಿಕೊಳ್ಳಲು ಮತ್ತು ಮತದಾರರನ್ನು ದಬ್ಬಾಳಿಕೆ, ಬೆದರಿಕೆ ಮತ್ತು ಅನಗತ್ಯ ಪ್ರಭಾವದಿಂದ ರಕ್ಷಿಸಿ, ಆ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಪಾವಿತ್ರ್ಯ ಸುರಕ್ಷಿತಗೊಳಿಸಲು ಈ ವಿಧೇಯಕ ತರಲಾಗಿದೆ. ಇವಿಎಂ ಕಾರ್ಯನಿರ್ವಹಣೆಯ ಕುರಿತು ಕಳವಳ ವ್ಯಕ್ತವಾಗಿದ್ದು, ಸಾರ್ವಜನಿಕ ನಂಬಿಕೆಯನ್ನು ಮರುಸ್ಥಾಪಿಸಲು ಸದೃಢ ರಹಸ್ಯ ಮತದಾನ ಪದ್ಧತಿಗೆ ಮರಳುವುದು ಅವಶ್ಯಕ ಎಂದು ವಿವರಿಸಲಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ರಹಸ್ಯ ಮತದಾನ ವ್ಯವಸ್ಥೆಯ ಬಳಕೆ ಕಡ್ಡಾಯಗೊಳಿಸಲು ಶಾಸನ ರೂಪಿಸುವುದು ಅಗತ್ಯವಾಗಿದೆ. ರಾಜ್ಯ ಕಾಗದ ಪತ್ರಗಳನ್ನು ಬಳಸಿಕೊಂಡು ರಹಸ್ಯ ಮತದಾನ ವ್ಯವಸ್ಥೆ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲು ಸ್ಥಳೀಯ ಸಂಸ್ಥೆಗಳನ್ನು ನಿಯಂತ್ರಿಸುವ ಸಂಬಂಧ ಕಾನೂನು ತಿದ್ದುಪಡಿ ಮಾಡಲು ಈ ತಿದ್ದುಪಡಿ ವಿಧೇಯಕ ಮಂಡಿಸಲಾಗಿದೆ.

ಜಿಲ್ಲಾ ಪಂಚಾಯತ್‌ನ ಪ್ರತಿಯೊಂದು ಮತಕ್ಷೇತ್ರಗಳಲ್ಲಿ ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಾಧಿಕಾರಿ ಮತದಾರರ ಪಟ್ಟಿ ಸಿದ್ಧಪಡಿಸಬೇಕು. ಈ ಸಂಬಂಧ ಮೂಲ ಅಧಿನಿಯಮದ 165ನೇ ಪ್ರಕರಣಕ್ಕೆ ತಿದ್ದುಪಡಿ ಮಾಡಲಾಗಿದೆ. ಜಿ.ಪಂ. ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲಾಗಿರುವ ಯಾರೇ ವ್ಯಕ್ತಿ, ಆ ಮತಕ್ಷೇತ್ರದ ಚುನಾವಣೆಯಲ್ಲಿ ಮತದಾನಕ್ಕೆ ಹಕ್ಕುವುಳ್ಳವನಾಗಿರಲಿದ್ದಾನೆ. ಮೂಲ ಅಧಿನಿಯಮದಲ್ಲಿದ್ದ ಜಿಲ್ಲಾ ಪಂಚಾಯತ್‌ನ ಯಾವುದೇ ಚುನಾವಣಾ ಕ್ಷೇತ್ರದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕರ್ನಾಟಕ ವಿಧಾನಸಭೆಯ ಮತದಾರರ ಪಟ್ಟಿಯನ್ನು ಜಿಲ್ಲಾ ಪಂಚಾಯತ್‌ನ ಮತದಾರರ ಪಟ್ಟಿಯ ಸಿದ್ಧತೆಯ ಉದ್ದೇಶಕ್ಕಾಗಿ ಅಳವಡಿಸಿಕೊಳ್ಳುವ ಅಂಶವನ್ನು ಕೈಬಿಡಲಾಗಿದೆ.

ಕೋವಿಗಳ ಪರವಾನಗಿ ನವೀಕರಣಕ್ಕೆ ರೈ ಮನವಿ

ವಿಧಾನಸಭೆ: ಕೃಷಿ ಬೆಳೆ ರಕ್ಷಣೆ ಸಂಬಂಧಿಸಿ ಕೋವಿ ಪರವಾನಗಿ ನವೀಕರಿಸಲು ಜಮೀನಿಗೆ ಕಾಡುಪ್ರಾಣಿ ಬಂದಿರಬೇಕು, ಅದು ಬೆಳೆಗೆ ಹಾನಿಮಾಡಿರಬೇಕು ಮತ್ತು ಅದಕ್ಕೆ ಅರಣ್ಯ ಇಲಾಖೆಯಿಂದ ಪರಿಹಾರ ಸಿಕ್ಕಿರಬೇಕು ಎಂದು ಪೊಲೀಸರು ಹೇಳುತ್ತಿರುವಾಗಿ ಕಾಂಗ್ರೆಸ್ ಶಾಸಕ ಅಶೋಕ್ ಕುಮಾರ್ ರೈ ಗಮನ ಸೆಳೆದರು.

ಪ್ರಶ್ನೋತ್ತರ ಕಲಾಪದಲ್ಲಿ ಪ್ರಸ್ತಾಪಿಸಿದ ಅವರು, ಈಗ ಕೃತಕ ಕೋವಿಗಳನ್ನು ಇಟ್ಟುಕೊಂಡು ಮಂಗಗಳು, ಕಾಡುಹಂದಿಗಳನ್ನು ಓಡಿಸಲು ಸಾಧ್ಯವಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಡಾನೆ ದಾಳಿಗೆ ಮೂವರು ಬಲಿಯಾಗಿದ್ದಾರೆ. ಆದರೆ, ದ.ಕ. ಮತ್ತು ಉಡುಪಿ ಜಿಲ್ಲೆಯಲ್ಲಿ ಕೋವಿಗಳ ಪರವಾನಗಿ ನವೀಕರಿಸುತ್ತಿಲ್ಲ ಎಂದು ಅಲವತ್ತುಗೊಂಡರು.

ಇದಕ್ಕೆ ಉತ್ತರಿಸಿದ ಡಾ.ಜಿ.ಪರಮೇಶ್ವರ, ಕೋವಿ ಪರವಾನಗಿ ನವೀಕರಣ ಪೊಲೀಸರು ಮಾಡುವುದಿಲ್ಲ, ಪೊಲೀಸರು ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಮಾತ್ರ ನೀಡುತ್ತಾರೆ. ನವೀಕರಣಕ್ಕಾಗಿ ಮಾನದಂಡಗಳನ್ನು ನಿಗದಿಪಡಿಸಲಾಗಿದೆ. ಅದನ್ನು ಉಪಯೋಗಿಸಲು ದೈಹಿಕ ಶಕ್ತಿ ಇರಬೇಕು, ಮಾನಸಿಕವಾಗಿ ಸದೃಢವಾಗಿರಬೇಕು, ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗವಹಿಸಿರಬಾರದು ಮೊದಲಾದ ಮಾನದಂಡಗಳಿವೆ. ಕೆಲವು ಸಂದರ್ಭದಲ್ಲಿ ಪರವಾನಗಿ ಒಂದು ಊರಿನಲ್ಲಿ ಇರುತ್ತದೆ. ಅವರು ಬೇರೆ ಕಡೆ ವಾಸವಿರುತ್ತಾರೆ. ಅಂತಹ ಸಂದರ್ಭದಲ್ಲಿ ಅವರಿಗೆ ಯಾಕೆ ಪರವಾನಗಿ ನೀಡಬೇಕೆಂಬ ಉದ್ದೇಶದಿಂದ ತಿರಸ್ಕರಿಸಲಾಗುತ್ತದೆ ಎಂದು ಹೇಳಿದರು.

ಪರಿಶೀಲಿಸಿ ಕ್ರಮ

ಕೋವಿಗಳ ನವೀಕರಣ ನಿಯಮಾವಳಿಗೆ ಸಂಬಂಧಿಸಿದ ವಿಚಾರವಾಗಿರುವುದರಿಂದ ಈ ಬಗ್ಗೆ ಪರಿಶೀಲನೆ ನಡೆಸುತ್ತೇವೆ. ರಾಜ್ಯದಲ್ಲಿಯೂ ತಾಲೂಕು ಕೇಂದ್ರದಲ್ಲೇ ಕೋವಿ ಪರವಾನಗಿ ನವೀಕರಿಸಲು ಅವಕಾಶ ನೀಡಬೇಕೆಂಬ ಬೇಡಿಕೆಯಿದೆ. ಈ ಬಗ್ಗೆ ಪರಿಶೀಲನೆ ನಡೆಸುವುದಾಗಿ ಗೃಹ ಸಚಿವರು ಭರವಸೆ ನೀಡಿದರು.



ವಯಸ್ಸಾದರೆ ಮಗನಿಗೆ ಪರವಾನಗಿ ಕೊಡಿ

ಈ ವೇಳೆ ಅಶೋಕ್ ಕುಮಾರ್ ರೈ ಮಾತನಾಡಿ, ನನ್ನ ಕ್ಷೇತ್ರದಲ್ಲಿ ಗ್ರಾಮದಲ್ಲೇ ವಾಸವಿರುವ 250-300 ಜನರ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ವಯಸ್ಸಾದವರಿದ್ದರೆ ಅವರ ಮಗನ ಹೆಸರಿಗೆ ಕೋವಿಯನ್ನು ನವೀಕರಿಸಿ ಕೊಡಬೇಕು. ಹೊಸ ಕೋವಿ ಪರವಾನಗಿ ಕೇಳುತ್ತಿಲ್ಲ, ಈಗಿರುವ ಪರವಾನಗಿಯನ್ನೇ ನವೀಕರಿಸಲು ಮನವಿ ಮಾಡುತ್ತಿದ್ದೇವೆ. ಆದರೆ, ಅರ್ಜಿ ಸಲ್ಲಿಸಿದ ಕೂಡಲೇ ಅದನ್ನು ತಿರಸ್ಕರಿಸಲಾಗುತ್ತಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಗೃಹ ಸಚಿವರು, ತಿರಸ್ಕೃತಗೊಂಡ ಪಟ್ಟಿ ನೀಡಿ ಅರ್ಹತೆ ಇದ್ದರೆ ನವೀಕರಿಸಿ ನೀಡಲಾಗುತ್ತದೆ ಎಂದರು. ಕಳೆದ ನಾಲ್ಕು ವರ್ಷಗಳಲ್ಲಿ ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಕೋವಿ ಪರವಾನಗಿ ನವೀಕರಣ ಅರ್ಜಿಗಳನ್ನು ತಮ್ಮ ಕಚೇರಿಯಲ್ಲಿ ಸ್ವೀಕರಿಸಿ, ಕೋವಿ ಪರವಾನಗಿ ನವೀಕರಿಸಿ ಕೊಟ್ಟಿದ್ದಾರೆ. ಕ್ರಿಮಿನಲ್ ಪ್ರಕರಣಗಳು ದಾಖಲಾದ ಕೋವಿ ಪರವಾನಗಿದಾರರ ಪ್ರಕರಣಗಳನ್ನು ಹೊರತುಪಡಿಸಿದಂತೆ ಯಾವುದೇ ಪ್ರಕರಣಗಳು ಬಾಕಿಯಿಲ್ಲ ಎಂದು ಮಾಹಿತಿ ನೀಡಿದರು. ಮಧ್ಯೆ ಪ್ರವೇಶಿಸಿದ ಬಿಜೆಪಿ ಶಾಸಕ ಸಿಮೆಂಟ್ ಮಂಜು, ಕೋವಿಯನ್ನು ಬಸ್ಸಿನಲ್ಲಿ ದೂರದ ಜಿಲ್ಲಾ ಕೇಂದ್ರಕ್ಕೆ ತಂದು ಪರವಾನಗಿ ನವೀಕರಿಸುವುದು ಕಷ್ಟದ ಕೆಲಸ. ಆದ್ದರಿಂದ ತಾಲೂಕು ಕೇಂದ್ರಗಳಲ್ಲಿಯೇ ಪರವಾನಗಿ ನವೀಕರಣಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಸಂಪಾದಕೀಯ

ನೇಪಾಳ: ಹೊಸ ರಾಜಕೀಯ ಯುಗ

ನೆರೆಯ ನೇಪಾಳದಲ್ಲಿ ನಡೆದ ಸಂಸದೀಯ ಚುನಾವಣೆಯ ಫಲಿತಾಂಶವು ಅಲ್ಲಿ ನೂತನ ರಾಜಕೀಯ ಯುಗವೊಂದು ಆರಂಭವಾಗಿರುವುದನ್ನು ಸಂಕೇತಿಸಿದೆ. ಕಳೆದ ವರ್ಷ ಯುವ ಜನಾಂಗದಿಂದ ನಡೆದ ಭಾರೀ ಜನಾಂದೋಲನವು ಸರಕಾರದ ಪತನಕ್ಕೆ ಕಾರಣವಾಗಿದ್ದರೆ, ಈಗ ಅದೇ ಯುವ ಜನಾಂಗವು ಹೊಸ ಸರಕಾರವನ್ನು ಅಧಿಕಾರಕ್ಕೆ ತಂದಿದೆ. ಇದು ಕೇವಲ ಸರಕಾರದ ಬದಲಾವಣೆಯುಷ್ಟೇ ಅಲ್ಲ, ಬದಲಾಗಿ ಇದು ನೇಪಾಳದ ಇಡೀ ರಾಜಕೀಯ ವ್ಯವಸ್ಥೆಯ ಕ್ರಾಂತಿಕಾರಿ ಸ್ಥಿತ್ಯಂತರಕ್ಕೆ ನಾಂದಿ ಹಾಕಿದೆ ಎನ್ನಬಹುದು. ಹೊಸ ಪೀಳಿಗೆಯ ರಾಜಕೀಯ ಕ್ರಾಂತಿಯು ತಂದಿರುವ ಬದಲಾವಣೆಯು ಕಣ್ಣಿಗೆ ರಾಚುವಂತಿದೆ. ಈವರೆಗೆ ನೇಪಾಳದ ರಾಜಕೀಯದಲ್ಲಿ ಪ್ರಧಾನ ಪಾತ್ರ ವಹಿಸಿಕೊಂಡು ಬಂದ ನೇಪಾಳಿ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷ ಮೊದಲಾದ ರಾಜಕೀಯ ಪಕ್ಷಗಳೆಲ್ಲ ಮೂಲೆಗುಂಪಾಗಿವೆ. ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಕೂಡಾ ಸೋಲು ಕಂಡಿದ್ದಾರೆ. ಹೊಸದಾದ ಸುಧಾರಣವಾದಿ ನಿಲುವಿನ ರಾಷ್ಟ್ರೀಯ ಸ್ವತಂತ್ರ ಪಾರ್ಟಿ(ಆರ್‌ಎಸ್‌ಪಿ) ಭಾರೀ ಬಹುಮತ ಪಡೆದು ಅಧಿಕಾರಕ್ಕೇರಿದೆ. 35ರ ಹರಯದ ಬಾಲೇಂದ್ರ ಶಾ ನೂತನ ಪ್ರಧಾನಿಯಾಗಲಿದ್ದಾರೆ.



ನೇಪಾಳದ ಪ್ರತಿಯೊಂದು ಬೆಳವಣಿಗೆ ಕೂಡಾ ಭಾರತದ ಪಾಲಿಗೆ ಮಹತ್ವದ್ದಾಗುತ್ತದೆ. ನೇಪಾಳದೊಂದಿಗೆ 1,800 ಕಿ.ಮೀ.ಗಳ ಮುಕ್ತ ಗಡಿಯನ್ನು ಭಾರತವು ಹೊಂದಿದ್ದು, ಉಭಯದೇಶಗಳ ಮಧ್ಯೆ ಸಾಂಸ್ಕೃತಿಕ ಮತ್ತು ಧಾರ್ಮಿಕ ಬಂಧವು ನಿಕಟವಾಗಿದೆ. ಉಭಯತ್ರರ ಆರ್ಥಿಕತೆಯೂ ಒಂದನ್ನೊಂದು ಆಧರಿಸಿದ್ದು, ಲಕ್ಷಾಂತರ ನೇಪಾಳಿಗಳು ಭಾರತದಲ್ಲಿ ವಾಸಿಸುತ್ತಿದ್ದಾರೆ. ಇದರ ಜತೆಗೇ ನೇಪಾಳವು ಭಾರತ ಮತ್ತು ಚೀನಾಗಳ ನಡುವೆ ಆಯಕಟ್ಟಿನ ಜಾಗದಲ್ಲಿ ಇರುವುದರಿಂದ ಭಾರತವು ಅಲ್ಲಿನ ಬೆಳವಣಿಗೆಯನ್ನು ಸದಾ ಗಮನಿಸುತ್ತಿರಬೇಕಾಗುತ್ತದೆ.

ಈ ಹಿಂದೆಲ್ಲ ನೇಪಾಳದ ರಾಜಕೀಯವನ್ನು ನಿರ್ದೇಶಿಸುವಲ್ಲಿ ಭಾರತದ ಪಾತ್ರವೂ ಇತ್ತು. ಆದರೆ ಬಳಿಕ ಚೀನಾವು ಅಲ್ಲಿನ ಕಮ್ಯುನಿಸ್ಟ್ ಪಕ್ಷದ ಮುಖಾಂತರವಾಗಿ ತನ್ನ ಪ್ರಭಾವ ಹೇರುವಲ್ಲಿ ಸಫಲವಾಗಿತ್ತು. ಕೆಲವು ಸಂದರ್ಭದಲ್ಲಿ ಭಾರತ ವಿರೋಧಿ ಭಾವನೆಯನ್ನು ಬಿತ್ತುವಲ್ಲೂ ಚೀನಾ ಹಾಗೂ ಕಮ್ಯುನಿಸ್ಟ್ ಪಕ್ಷಗಳು ಸಫಲವಾಗಿದ್ದವು. ಇನ್ನೀಗ ಭಾರತವು ನೇಪಾಳದ ರಾಜಕೀಯವನ್ನು ನಿರ್ದೇಶಿಸುವುದಕ್ಕಿಂತಲೂ ಅಲ್ಲಿನ ಬದಲಾದ ಪರಿಸ್ಥಿತಿಯನ್ನು ಹೊಂದಿಕೊಂಡು ಅದನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಿಸಿಕೊಳ್ಳುವ ರಾಜತಾಂತ್ರಿಕ ಚಾಣಾಕ್ಷತೆಯನ್ನು ಪ್ರದರ್ಶಿಸಬೇಕಾಗಿದೆ. ತಮಗೆ ಅಮೆರಿಕ, ಚೀನಾ, ಭಾರತ, ರಷ್ಯಾ ಯಾರೂ ಬೇಡ, ತಮ್ಮದು ಸ್ವತಂತ್ರ ನಡೆ ಎಂಬುದಾಗಿ ಪ್ರಧಾನಿಯಾಗಲಿರುವ ಬಾಲೇಂದ್ರ ಶಾ ಈ ಮೊದಲು ಹೇಳಿದ್ದರಾದರೂ, ಇನ್ನೀಗ ಅಧಿಕಾರಕ್ಕೇರಿದ ಬಳಿಕ ಅವರ ಸರಕಾರವು ಯಾವ ಧೋರಣೆಯನ್ನು ಪ್ರದರ್ಶಿಸುತ್ತದೆ ಎಂದು ಕಾದು ನೋಡಬೇಕು. ನೇಪಾಳಿ ಜನರ ಆದ್ಯತೆಯು ಈಗ ದೇಶದಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರವನ್ನು ನಿಗ್ರಹಿಸಿ, ಉತ್ತಮ ಮೂಲಸೌಕರ್ಯಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿದೆ. ಆ ನಿಟ್ಟಿನಲ್ಲಿ ಹೊಸ ಸರಕಾರದ ಮುಂದೆ ದೊಡ್ಡ ಸವಾಲು ಇರುವುದೂ ನಿಜ.

ತತ್ತ್ವಾರದ ಸಮಯದಲ್ಲಿ ತತ್ತ್ವಾದರ್ಶ ಪಾಲಿಸೋಣ

ಖಾರಾ ಬಾತ್

• ವಿನಾಯಕ ಭಟ್ಟ ಮೂರೂರು
vakradanta@gmail.com

ನಮ್ಮ ದೇಶದ ತೈಲದ ವಿಷಯದಲ್ಲಿ ಬೇರೆ ಬೇರೆ ದೇಶಗಳನ್ನು ಅವಲಂಬಿಸಿರುವುದು ಗೊತ್ತೇ ಇದೆ. ದಿನಕ್ಕೆ 60 ಲಕ್ಷ ಬ್ಯಾರಲ್ ತೈಲ ಬಳಸುವ ನಾವು, ಹೆಚ್ಚಿನ ಪ್ರಮಾಣದ ತೈಲಕ್ಕಾಗಿ ವಿದೇಶಗಳನ್ನೇ ಅವಲಂಬಿಸಿದ್ದೇವೆ. ಇತ್ತೀಚೆಗೆ ರಷ್ಯಾದಿಂದ ಹೆಚ್ಚು ತೈಲ ಖರೀದಿಸುತ್ತಿದ್ದೇವಾದರೂ, ನಾವು ಇರಾನ್ ಹಾಗೂ ಅರಬ್ ದೇಶಗಳಿಂದಲೂ ತೈಲ ಆಮದು ಮಾಡಿಕೊಳ್ಳುತ್ತಿದ್ದೇವೆ. ಇರಾನ್ ಹಾಗೂ ಅರಬ್ ದೇಶಗಳಲ್ಲಿ ತೈಲ ಉತ್ಪಾದನೆ ಕುಸಿತಗೊಂಡಿದೆ. ಜತೆಗೆ ತೈಲ ಸಾಗಾಟ ಸಮಸ್ಯೆಯೂ ಉದ್ಭವಿಸಿದೆ. ಹರ್ಮೋಜ್ ಜಲಸಂಧಿಯಲ್ಲಿ ಚೀನಾ ಮತ್ತು ಭಾರತಕ್ಕೆ ಹೋಗುವ ಹಡಗುಗಳಿಗೆ ಅವಕಾಶ ನೀಡುವುದಾಗಿ ಇರಾನ್ ಈಗಾಗಲೇ ಹೇಳಿದೆಯಾದರೂ, ಅಲ್ಲಿ ಹಡಗುಗಳ ಟ್ರಾಫಿಕ್ ಜಾಂ ಆಗಿರುವುದರಿಂದ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇದರ ಅಲ್ಪ-ಸ್ವಲ್ಪ ಪರಿಣಾಮ ನಮ್ಮ ಮೇಲೆ ಆದರೂ ಆಗಬಹುದು. ಸಮಸ್ಯೆ ಆಗಬಹುದು ಎಂದು ಆತಂಕಪಡುತ್ತ ಇರುವ ಬದಲು ಸಮಸ್ಯೆ ಆಗದಂತೆ ನಾವೇ ಪ್ರಯತ್ನಿಸಲು ಸಾಧ್ಯವಿದೆಯಾ ಎಂದು ಯೋಚಿಸಬಹುದು.

ಎಲ್ಲವನ್ನೂ ಸರ್ಕಾರವೇ ಮಾಡಲಿ ಎಂದು ಯೋಚಿಸುವ ಬದಲು ನಾವಾಗೇ ಕೆಲವು ಪ್ರಯತ್ನಗಳ ಮೂಲಕ ಬಳಕೆ ಕಡಿಮೆ ಮಾಡಲು ಸಾಧ್ಯವಿದೆ. ಉದಾಹರಣೆಗೆ ಕಾರು ಬಳಸುವವರು ಸಾಧ್ಯವಾದಲ್ಲೆಲ್ಲ ಸ್ಕೂಟರ್ ಅಥವಾ ಬೈಕ್ ಬಳಸಬಹುದು. ಬೈಕ್‌ಗಳನ್ನು ಬಳಸುವವರು ಸಾಧ್ಯವಾದಷ್ಟು ಮೆಟ್ರೊ ಅಥವಾ ಬಸ್ ಬಳಸಬಹುದು. ತೀರಾ ಅಗತ್ಯವಿರುವ ಓಡಾಟಗಳನ್ನು ಮಾತ್ರ ಮಾಡಬಹುದು. ಎರಡು-ಮೂರು ಓಡಾಟಗಳ ಬದಲು ಒಂದೇ ಓಡಾಟದಲ್ಲಿ ಕೆಲಸ ಮುಗಿಸಲು ಸಾಧ್ಯವಿದೆಯೇ ಎಂದು ಯೋಚಿಸಬಹುದು.

ಇವೆಲ್ಲವೂ ತುಂಬಾ ಚಿಕ್ಕ ಚಿಕ್ಕ ಪ್ರಯತ್ನಗಳು. ನಾವು ಮಾಡಲಾಗದ ಪ್ರಯತ್ನಗಳೇನಲ್ಲ. ಈ ರೀತಿಯ ಪ್ರಯತ್ನಗಳನ್ನು ಸ್ವಲ್ಪ ಜನ ಅನುಸರಿಸಿದರೂ ದೇಶದ ತೈಲ ಬಳಕೆಯ ಮೇಲಿನ ಒತ್ತಡ ಗಣನೀಯವಾಗಿ ಕಡಿಮೆಯಾಗುತ್ತದೆ. ನಾವೊಬ್ಬರು ಹೀಗೆ ಮಾಡುವುದರಿಂದ ಏನುಪಯೋಗ ಎಂದು ಯೋಚಿಸುವ ಬದಲು, ಉಳಿದವರು ಮಾಡುತ್ತಾರೊ ಇಲ್ಲವೊ ನಾವು ಮಾಡೋಣ ಎಂದು ಯೋಚಿಸಿದರೆ ಹೆಚ್ಚು ಪರಿಣಾಮಕಾರಿಯಾಗಬಹುದು. ಇದ್ಯಾವುದೂ ಕಷ್ಟವಲ್ಲ. ಯಾಕೆಂದರೆ ಕೊರೋನಾ ಸಂದರ್ಭದಲ್ಲಿ ನಾವೆಲ್ಲ ಎಂತಹ ಸ್ಥಿತಿ ಎದುರಿಸಿದ್ದೇವೆ ಎಂಬುದನ್ನು ಒಮ್ಮೆ ನೆನಪಿಸಿಕೊಳ್ಳಿ. ವಾರಗಟ್ಟಲೆ ಮನೆಯಿಂದ ಹೊರಗೆ ಹೋಗದೆಯೂ ಜೀವನ ಸಾಗಿಸಿದ್ದೇವೆ. ಕಾರು-ಬೈಕು, ಪೆಟ್ರೋಲ್ ಇತ್ತಾದರೂ ಓಡಾಡುವ ಹಾಗೆ ಇರಲಿಲ್ಲ. ಈಗ ಪರಿಸ್ಥಿತಿ ಹಾಗಿಲ್ಲ. ಸ್ವಲ್ಪ ನಮ್ಮನ್ನು ನಾವು ನಿಯಂತ್ರಿಸಿಕೊಳ್ಳಬೇಕಿದೆ ಅಷ್ಟೇ.

ಈಗ ಅಂತಹ ಅನಿವಾರ್ಯ ಸ್ಥಿತಿ ಏನಿದೆ ಈಗ ಎಂದು ಕೆಲವರು ಪ್ರಶ್ನಿಸಬಹುದು. ಖಂಡಿತ ಅನಿವಾರ್ಯ ಸ್ಥಿತಿ ಇಲ್ಲ. ಭಾರತಕ್ಕೆ ತೈಲದ ಕೊರತೆ ಆಗದ ಹಾಗೆ ಕಚ್ಚಾ ತೈಲ ನೀಡುವುದಾಗಿ ರಷ್ಯಾ ಈಗಾಗಲೇ ಹೇಳಿಕೆ ನೀಡಿದೆ. ದೇಶದಲ್ಲಿ ತೈಲ ಸಂಗ್ರಹವೂ ಇದೆ. ಆದರೆ ಯುದ್ಧ ಸ್ಥಿತಿ ಯಾವಾಗ



ತಿಳಿಯಾಗುತ್ತದೆ ಎಂಬ ಸ್ಪಷ್ಟತೆ ಈಗ ಸದ್ಯಕ್ಕಿಲ್ಲ. ಅಕಸ್ಮಾತ್ ಯುದ್ಧ ಒಂದು ಅಥವಾ ಎರಡು ತಿಂಗಳು ಮುಂದುವರಿದರೆ ಆಗೇನು ಕತೆ? ನಮ್ಮ ಸರ್ಕಾರ ಅದಕ್ಕೊಂದು ದಾರಿ ಖಂಡಿತ ಕಂಡುಕೊಳ್ಳುತ್ತದೆ ಎಂಬುದರಲ್ಲಿಯೂ ಅನುಮಾನವಿಲ್ಲ. ಆದರೆ ನಾವು ನಮ್ಮದೊಂದು ಕಿರುಪ್ರಯತ್ನದ ಮೂಲಕ ಸರ್ಕಾರದ ಮೇಲಿನ ಒತ್ತಡ ಕಡಿಮೆ ಮಾಡಬಹುದೆ? ದೇಶದ ಹಿತದೃಷ್ಟಿಯಿಂದ ನಾವು ಪ್ರಯತ್ನಿಸಬಹುದೆ ಎಂಬ ಯೋಚನೆ ಅಷ್ಟೆ. ಯಾಕೆಂದರೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ವಿಪರೀತ ಏರಿಕೆಯಾಗಿದೆ. ಈ ಸಮಯದಲ್ಲಿ ನಾವು ತೈಲ ಖರೀದಿ ಮಾಡಿದರೆ ಸಹಜವಾಗಿ ಹೆಚ್ಚು ಹಣ ನೀಡಿ ಖರೀದಿ ಮಾಡಬೇಕಾಗುತ್ತದೆ. ಆಗ ದೇಶದ ಆರ್ಥಿಕತೆಯ ಮೇಲೆ ಒತ್ತಡ ಬೀಳುತ್ತದೆ. ಸರ್ಕಾರ ಜನರ ಹಿತದೃಷ್ಟಿಯಿಂದ ಪೆಟ್ರೋಲ್- ಡೀಸೆಲ್ ಬೆಲೆ ಏರಿಕೆ ಮಾಡದೆ ಇರಬಹುದು ಅಥವಾ ಸ್ವಲ್ಪ ಮಾತ್ರ ಏರಿಕೆ ಮಾಡುವ ನಿರ್ಧಾರ ಕೈಗೊಳ್ಳಬಹುದು. ನಿರ್ಧಾರ ಯಾವುದೇ ಆದರೂ ನಮಗೆ ನಷ್ಟವೆ ಎಂಬುದರಲ್ಲಿ ಅನುಮಾನವಿಲ್ಲ. ಕೇಂದ್ರ ಸರ್ಕಾರ ಸುಮಾರು ವರ್ಷಗಳಿಂದ ಪೆಟ್ರೋಲ್ ಬೆಲೆ ಏರಿಕೆಯಾಗದಂತೆ ತನ್ನ ತೈಲ ಖರೀದಿ ನೀತಿಯನ್ನು ನಿಭಾಯಿಸಿದೆ. ಪರಿಸ್ಥಿತಿಯ ಅನಿವಾರ್ಯದಿಂದ ದರ ಹೆಚ್ಚಳ ಮಾಡುವಂತಾದರೆ ಅದರ ಪರಿಣಾಮ ನಮ್ಮೆಲ್ಲರ ಮೇಲೂ ಆಗುತ್ತದೆ. ಆ ಪರಿಣಾಮಗಳನ್ನು ಕಡಿಮೆ ಮಾಡುವ ದೃಷ್ಟಿಯಿಂದ ನಾವು ಈಗಲೇ ಮುಂದಡಿ ಇಡಬಹುದೆ ಎಂಬದಷ್ಟೇ ಚಿಂತನೆ.

ಸದ್ಯಕ್ಕೆ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಕಡಿಮೆ ಮಾಡುವಂತೆ ಸರ್ಕಾರವೇನೂ ಮನವಿ ಮಾಡಿಲ್ಲ. ಅಂತಹ ಸ್ಥಿತಿ ನಿರ್ಮಾಣವಾಗಲಿಕ್ಕೂ ಇಲ್ಲ. ಆದರೆ ದೇಶದ ಪ್ರಜೆಗಳಾಗಿ ನಾವೇನಾದರೂ ಕೊಡುಗೆ ನೀಡಬಹುದಾ? ಸರ್ಕಾರ ಅಥವಾ ಪ್ರಧಾನಿ ಕರೆ ನೀಡುವ ಮೊದಲೇ ನಾವು ಅಳಿಲುಸೇವೆ ಸಲ್ಲಿಸಬಹುದಾ? ಒಳ್ಳೆಯ ಪ್ರಜೆಗಳಾಗಿ ನಮ್ಮ ಕೆಲಸ ಮಾಡಬಹುದಾ? ಎಂಬುದಷ್ಟೇ ಇಲ್ಲಿನ ಚಿಂತನೆ.

ಇಬ್ಬರ ಜಗಳ ಮೂರನೆಯವರಿಗೆ ಲಾಭ ಎಂಬುದು ಹಳೆಯ ಮಾತು. ಕೆಲವೊಮ್ಮೆ ಇಬ್ಬರ ಜಗಳದಲ್ಲಿ ಸಂಬಂಧವೇ ಇಲ್ಲದ ಮೂರನೆಯವರಿಗೆ ನಷ್ಟವೂ ಆಗಬಹುದು. ಈ ಯುದ್ಧದಲ್ಲಿ ಭಾರತ ಯಾವ ರೀತಿಯಲ್ಲೂ ಭಾಗೀದಾರನಲ್ಲ. ಆದರೆ ಎಲ್ಲೋ ದೂರದಲ್ಲಿ ಯುದ್ಧ ನಡೆಯುತ್ತಿದೆ ಎಂದು ನಾವು ಹಾಯಾಗಿರುವುದು ಸಾಧ್ಯವಿಲ್ಲ. ಯಾಕೆಂದರೆ ಯುದ್ಧ ತುಂಬಾ ದೂರದಲ್ಲೇನೂ ನಡೆಯುತ್ತಿಲ್ಲ. ಯುದ್ಧ ನಡೆಯುತ್ತಿರುವ ದೇಶಗಳೂ ಸೇರಿದಂತೆ ಮಧ್ಯಪ್ರಾಚ್ಯದ ಎಲ್ಲ ದೇಶಗಳ ಜತೆ ಭಾರತ ಒಂದಲ್ಲ ಒಂದು ರೀತಿಯಲ್ಲಿ ಬಾಂಧವ್ಯ ಹೊಂದಿದೆ. ಅವರೆಲ್ಲ ಯುದ್ಧ ಪರಿಸ್ಥಿತಿಯಲ್ಲಿರುವಾಗ ಅದರ ಪರಿಣಾಮಗಳು ನಮ್ಮ ದೇಶದ ಮೇಲೂ ಆಗುವುದು ಸಹಜ. ವ್ಯಾಪಾರ, ರಫ್ತು- ಆಮದು ಎಲ್ಲವೂ ವ್ಯತ್ಯಯವಾಗಿದೆ. ಹಾಗಾಗಿ ನಾವೂ ಸ್ವಲ್ಪ ಜೀವನಶೈಲಿಯ ವ್ಯತ್ಯಾಸದ ಮೂಲಕ ಆ ನಿಟ್ಟಿನಲ್ಲಿ ಪ್ರಯತ್ನಿಸಬಹುದೇನೊ. ಎಲ್ಲದಕ್ಕೂ ಸರ್ಕಾರವನ್ನೇ ದೂಷಿಸುವವರು, ಸರ್ಕಾರವೇ ಎಲ್ಲವನ್ನೂ ಮಾಡಲಿ ಬಿಡಿ ಎನ್ನುವವರ, ನಮ್ಮೆಲ್ಲ ಸಮಸ್ಯೆಗೂ ಪರಿಹಾರ ನೀಡಬೇಕಾದ್ದು ಸರ್ಕಾರದ ಕೆಲಸ ಎನ್ನುವವರ ಬಗ್ಗೆ ಚರ್ಚೆ ಅನಗತ್ಯ. ಅವರು ಸಿಕ್ಕ ಅವಕಾಶವನ್ನು ಟೀಕೆಗೆ, ಜನರನ್ನು ಸರ್ಕಾರದ ವಿರುದ್ಧ ರೊಚ್ಚಿಗೆಬ್ಬಿಸಲು ಪ್ರಯತ್ನ ಮಾಡಬಹುದು. ಆದರೆ ಒಳ್ಳೆಯ ಯೋಚನೆಯ ಒಂದಷ್ಟು ಜನ ನಾವೇನು ಮಾಡಬಹುದು ಎಂದು ಯೋಚಿಸಲು ಇದು ಸಕಾಲ.

ಪರಶಿವನನ್ನು ನಿತ್ಯ ಧ್ಯಾನಿಸಬೇಕು

ಶ್ರೋತವ್ಯಃ ಸೌಗತೋ ಧರ್ಮಃ ಕರ್ತವ್ಯಃ ಪುನರಾರ್ಹತಃ।
ವೈದಿಕೋ ವ್ಯವಹರ್ತವ್ಯಃ ಧ್ಯಾತವ್ಯಃ ಪರಮಃ ಶಿವಃ॥

ಬೌದ್ಧ ಧರ್ಮವನ್ನು ಕೇಳಬೇಕು. ಜೈನಧರ್ಮವನ್ನು ನಡವಳಿಕೆಯಲ್ಲಿ ಇರಿಸಿಕೊಳ್ಳಬೇಕು. ವ್ಯವಹಾರದಲ್ಲಿ ವೈದಿಕ ಧರ್ಮವನ್ನು ಚಾಲ್ತಿಗೆ ತರಬೇಕು. ಪರಶಿವನನ್ನು ಧ್ಯಾನ ಮಾಡುತ್ತಿರಬೇಕು –ಎಂಬುದು ಶ್ಲೋಕಾರ್ಥ.

ಶ್ಲೋಕ ಸಾಗರ

• ಡಾ.ಸೋಂದಾ ಭಾಸ್ಕರ ಭಟ್

ಪ್ರಕೃತ ಶ್ಲೋಕ ನಮ್ಮ ದಿನನಿತ್ಯದ ಬದುಕು ಹೇಗಿರಬೇಕು ಎಂಬುದನ್ನು ತಿಳಿಸಿಕೊಡುತ್ತದೆ. ಬೌದ್ಧ ಎಂಬುದು ಧರ್ಮವಲ್ಲ, ಅದೊಂದು ಮತ. ಜೈನ ಧರ್ಮವಲ್ಲ; ಅದೊಂದು ಮತ. ವೈದಿಕ ಧರ್ಮವೆಂದರೆ ಸನಾತನ ಧರ್ಮ, ಹಿಂದೂ ಧರ್ಮ ಎಂದರ್ಥ. ಇದು ಮಾತ್ರ ಧರ್ಮ. ಉಳಿದವುಗಳು ಮತಗಳು. ಹೀಗೆ ಹೇಳುವುದಕ್ಕೆ ಜ್ಞಾನಿಗಳು ಕಾರಣವನ್ನೂ ನೀಡುತ್ತಾರೆ. ಯಾವುದೋ ಒಬ್ಬನ ಮತಿಯಿಂದ ಮೂಡಿ ಬಂದು ನಿರ್ದಿಷ್ಟ ಒಂದು ಗ್ರಂಥವನ್ನು ಮತಗಳು ಆಶ್ರಯಿಸುತ್ತೇವೆ.

ಆದರೆ ಧರ್ಮ ಹಾಗಲ್ಲ. ಧರ್ಮ ಯಾವಾಗ ಹುಟ್ಟಿದೆ ಎಂಬುದು ಗೊತ್ತಿಲ್ಲ. ಯಾವುದೋ ಒಬ್ಬ ಮತಿಯ ಪಡಿಯಚ್ಚಲ್ಲ. ಯಾವುದೇ ಒಂದು ಗ್ರಂಥ ಎಂಬುದಿಲ್ಲ. ವೇದದಿಂದ ಆರಂಭಿಸಿ ವಚನ, ದಾಸವಾಣಿ, ಕಾವ್ಯವಾಣಿ ಎಲ್ಲವೂ ಧರ್ಮಕ್ಕೆ ಪೂರಕ ಹಾಗೂ ಪ್ರೇರಕ. ಕಾಲಬಾಹಿರವಾದುದನ್ನು ಬಿಟ್ಟು ಮನುಕುಲದ ಏಳ್ಗೆಗೆ ಬೇಕಾದುದೆಲ್ಲವನ್ನೂ ಜತೆಗಿರಿಸಿಕೊಂಡು ಮುಂದುವರಿಯುತ್ತದೆ. ವೈದಿಕಧರ್ಮ ಎಂದು ಕರೆಯುವ ಸನಾತನ ಹಿಂದೂ ಧರ್ಮ ಇವನ್ನು ಅಳವಡಿಸಿಕೊಂಡು ಸಾಗುತ್ತಿರುವುದರಿಂದ ಇದನ್ನು ಮಾತ್ರ ಜ್ಞಾನಿಗಳು ಧರ್ಮವೆಂದಿದ್ದಾರೆ.

ಹೀಗೆಂದ ಮಾತ್ರಕ್ಕೆ ಮತಗಳು ತ್ಯಾಜ್ಯವಲ್ಲ. ಅವುಗಳು ಬೋಧಿಸುವ ದಿವ್ಯ ತತ್ತ್ವಗಳ ಅನುಷ್ಠಾನವು ಮನುಕುಲವನ್ನು ಮೇಲೆತ್ತುತ್ತದೆ. ಬೌದ್ಧ ವಿಚಾರ ಬುದ್ಧನ ಅನುಭವಗಳ ಹಾಗೂ ಅವನು ಕಂಡುಕೊಂಡ ಶಾಶ್ವತ ಸತ್ಯದ ಪ್ರಕಟ ಸ್ವರೂಪ. ಬೌದ್ಧ ಧರ್ಮವನ್ನು ಕೇಳಬೇಕು. ಅದರಲ್ಲಿ ಕೇಳಲೇಬೇಕಾದ ಅಪೂರ್ವ ವಿಷಯಗಳಿವೆ. ಬೌದ್ಧಮತವು ದೇಹ ಅಶಾಶ್ವತ, ಭೋಗಭಾಗ್ಯಗಳು ಕ್ಷಣಿಕ, ಎಲ್ಲವೂ ನಶ್ವರ ಎಂಬುದನ್ನು ಸವಿಸ್ತಾರವಾಗಿ ತಿಳಿಸಿ, ಮತ್ತೆ ಮತ್ತೆ ಚಿಂತಿಸಿ, ಜೀವನದಲ್ಲಿ ಅಳವಡಿಸಿಕೊಂಡು ಶ್ರೇಷ್ಠಮಟ್ಟದ ಜೀವನ ನಡೆಸಬೇಕು ಎಂಬುದನ್ನು ಸಾರುತ್ತದೆ. ಆದ್ದರಿಂದ ಬೌದ್ಧ ಉಪದೇಶವನ್ನು ಕೇಳಿ ಅಳವಡಿಸಿಕೊಳ್ಳಬೇಕು. ಜೈನ ಮತದ ಬೋಧನೆ ನಮ್ಮ ನಡೆ-ನುಡಿಗಳಲ್ಲಿ ಅಭಿವ್ಯಕ್ತವಾಗಬೇಕು. ಹಸಿದವರಿಗೆ ಆಹಾರ ನೀಡುವುದು, ರೋಗಿಗಳ ಉಪಚಾರ, ಅಜ್ಞಾನಿಗಳಿಗೆ ಸಮ್ಯಕ್ ಜ್ಞಾನದ ಅರಿವು ಇವೆಲ್ಲ ಜೈನಮತ ತಿಳಿಸಿಕೊಡುವ ಶಾಶ್ವತವಾಗಿ ಅನುಷ್ಠಾನಿಸಬೇಕಾದ ತತ್ತ್ವಗಳು. ದೇವತಾ ಪೂಜೆ, ಮಾತಾ-ಪಿತೃ, ಅತಿಥಿಗಳ ಪೂಜೆ, ಜೀವನೋನ್ನತಿಗೆ ಬೇಕಾದ ಸಂಸ್ಕಾರಗಳನ್ನು ನಡೆಸುವುದು ಇವೆಲ್ಲವನ್ನೂ ವೈದಿಕಧರ್ಮ ಹೇಳುತ್ತದೆ.

ಹೀಗೆ ಕೇಳುವಿಕೆ, ನಡವಳಿಕೆ, ಅನುಷ್ಠಾನಗಳು ಮನುಷ್ಯನ ಬದುಕನ್ನು ಶ್ರೇಷ್ಠತೆಯತ್ತ ಕೊಂಡೊಯ್ಯುತ್ತದೆ. ಇವೆಲ್ಲವೂ ಹೇಗೇ ಇರಲಿ, ಬೋಧಿಸಲಿ, ಪರಶಿವನ ಧ್ಯಾನವನ್ನು ಮಾತ್ರ ಮರೆಯಬಾರದು. ಧ್ಯಾನವೇ ಬದುಕನ್ನು ಸುಂದರ ಹಾಗೂ ಸಮೃದ್ಧಿಗೊಳಿಸುತ್ತದೆ. ಜೀವನದಲ್ಲಿ ಭಗವಂತನನ್ನು ಆಧಾರವಾಗಿರಿಸಿ, ಧರ್ಮದ ಮಾರ್ಗದಲ್ಲಿ ಮುಂದುವರಿಯೋಣ.

ನರಕಕ್ಕೆ ಕಾರಣವಾಗುವ ಆಸುರೀ ಸಂಪತ್ತು

ಪದಸಂಚಲನ

• ಡಾ. ವಿಶ್ವನಾಥ ಸುಂಕಸಾಳ
sunkasalvishwa@gmail.com

ಹಿಂದಿನ ಲೇಖನದಲ್ಲಿ ಗರುಡಪುರಾಣದಲ್ಲಿ ವಿವರಿಸಿರುವಂತೆ ನರಕಗಳ ವರ್ಣನೆಯನ್ನು ನೋಡಿದೆವು. ಭಾಗವತದಲ್ಲಿಯೂ ಇದೇ ರೀತಿಯಲ್ಲಿ ನರಕಗಳ ವರ್ಣನೆಯನ್ನು ಮತ್ತು ಅಂಥ ನರಕಗಳಿಗೆ ಹೋಗಲು ಕಾರಣವಾಗುವ ಅಕಾರ್ಯಗಳ ವಿವರಣೆಯನ್ನು ಕೊಡಲಾಗಿದೆ. ಶ್ರೀಮದ್ಭಗವದ್ಗೀತೆಯಲ್ಲಿ ನರಕದ ದ್ವಾರವನ್ನಾಗಿ ನಮ್ಮ ಕೆಲವು ಗುಣಗಳನ್ನು ತಿಳಿಸಲಾಗಿದೆ. **ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ। ಕಾಮಃ ಕ್ರೋಧಸ್ತಥಾ ಲೋಭಸ್ತಸ್ಮಾದೇತತ್ತ್ರಯಂ ತ್ಯಜೇತ್॥** ಎಂಬುದಾಗಿ. ದೈವೀಸಂಪತ್ತು ಮತ್ತು ಆಸುರೀಸಂಪತ್ತೆಂಬುದಾಗಿ ಎರಡುವಿಧದ ವ್ಯಕ್ತಿತ್ವವನ್ನು ತಿಳಿಸಿ, ಆಸುರೀಸಂಪತ್ತನ್ನು ಅತ್ಯಂತ ವಿಸ್ತೃತವಾಗಿ ವರ್ಣಿಸಲಾಗಿದೆ. ಇದರ ಸಂಕ್ಷೇಪವಾಗಿ ಈ ಮೇಲಿನ ಶ್ಲೋಕವನ್ನು ಹೇಳುತ್ತಾ, ಕಾಮ, ಕ್ರೋಧ ಮತ್ತು ಲೋಭಗಳೇ ನಮ್ಮನ್ನು ನರಕಕ್ಕೆ ದೂಡುವ ಕೆಟ್ಟಸ್ವಭಾವಗಳಾಗಿವೆ ಎಂಬುದಾಗಿ ಪರಮಾತ್ಮನು ತಿಳಿಸುತ್ತಾನೆ.

ದೈವೀಸಂಪತ್ತು ಮೋಕ್ಷಕ್ಕೆ ಕಾರಣವಾದರೆ, ಆಸುರೀಸಂಪತ್ತು ನಮ್ಮ ಅಧಃಪತನಕ್ಕೆ ಕಾರಣವಾಗುತ್ತವೆ. ವ್ಯಕ್ತಿಯ ಅಧೋಗತಿಗೆ ಕಾರಣವಾಗುವ ಗುಣಗಳು ಯಾವುವು ಎಂಬುದನ್ನು ಹದಿನಾರನೆಯ ದೈವಾಸುರ ಸಂಪದ್ವಿಭಾಗಯೋಗದಲ್ಲಿ ಪರಮಾತ್ಮನು ವಿಸ್ತೃತವಾಗಿ ತಿಳಿಸಿದ್ದಾನೆ. ಅಲ್ಲಿ ಮೊದಲು ದೈವೀಸಂಪತ್ತುಳ್ಳವರ ಗುಣಗಳನ್ನು ಪಟ್ಟಿಮಾಡುತ್ತಾನೆ. ಅಭಯ, ಮನಶ್ಶುದ್ಧಿ, ಆತ್ಮಜ್ಞಾನೋಪಾಯದಲ್ಲಿಯೇ ಸರ್ವದಾ ಆಸಕ್ತನಾಗಿರುವಿಕೆ, ದಾನ, ಬಾಹ್ಯೇಂದ್ರಿಯನಿಗ್ರಹ, ದ್ರವ್ಯಾದಿಯಜ್ಞಗಳು, ಸ್ವಾಧ್ಯಾಯ, ತಪಸ್ಸು, ಅಹಿಂಸೆ, ಸತ್ಯವಚನ, ಕ್ರೋಧರಾಹಿತ್ಯ, ತ್ಯಾಗಬುದ್ಧಿ, ಮನೋನಿಗ್ರಹ, ಚಾಡಿ ಹೇಳದಿರುವಿಕೆ, ಭೂತದಯೆ, ಲೋಲುಪತೆ ಇಲ್ಲದೇ ಇರುವಿಕೆ, ಮೃದುತ್ವ, ಲಜ್ಜಾ, ಕರ್ಮೇಂದ್ರಿಯಗಳನಿಗ್ರಹ, ಬಲ, ಕ್ಷಮಾಗುಣ, ಧೈರ್ಯ, ಹೊರಗಿನ ಮತ್ತು ಒಳಗಿನ ಶುಚಿತ್ವ, ತನ್ನ ಬಗ್ಗೆಯೇ ತನಗೆ ಅತಿಯಾದ ಪೂಜ್ಯಭಾವ ಇಲ್ಲದೇ ಇರುವಿಕೆ, ಇವೆಲ್ಲ ದೈವೀಸಂಪತ್ತಾಗಿವೆ. ಇಂಥ ಗುಣಗಳು ನಮ್ಮ ಅಭ್ಯುದಯ ಮತ್ತು ನಿಃಶ್ರೇಯಸ್ಸಿಗೆ ಕಾರಣವಾಗುತ್ತವೆ. ಆಮೂಲಕ ಮರಣದ ಅನಂತರ ಉತ್ತಮಜನ್ಮಕ್ಕೆ ಕಾರಣವಾಗಿ ಕ್ರಮೇಣ ಮೋಕ್ಷಮಾರ್ಗದಲ್ಲಿ ಮುನ್ನಡೆಯುವ ಇಚ್ಛೆಯನ್ನೂ, ಸಾಮರ್ಥ್ಯವನ್ನೂ ಉಂಟುಮಾಡುತ್ತವೆ.

ಇದಕ್ಕೆ ವಿರುದ್ಧವಾಗಿ ಆಸುರೀಸಂಪತ್ತು ನಮ್ಮ ನಮ್ಮ ಅಧೋಗತಿಗೆ ಕಾರಣವಾಗುತ್ತವೆ. ಅವು ಇಹದಲ್ಲೂ, ಪರದಲ್ಲೂ ಶ್ರೇಯಸ್ಸಿಗೆ ಪ್ರತಿಬಂಧಕವೇ ಆಗಿರುವುದರಿಂದ ಎಲ್ಲೂ ಸುಖಕ್ಕೆ ಕಾರಣವಾಗುವುದಿಲ್ಲ. ಅಂಥ ಗುಣಗಳು ನಮ್ಮಲ್ಲಿವೆಯೇ ಎಂದು ಪರಾಮರ್ಶಿಸಿಕೊಳ್ಳುವ ಸಲುವಾಗಿಯೇ ಭಗವದ್ಗೀತೆಯಲ್ಲಿ ಇವುಗಳ ವಿವರಣೆಯನ್ನು ಮಾಡಲಾಗಿದೆ. ಅವು ಯಾವವು ಎಂದರೆ, ದಂಭ. ದಂಭವನ್ನು ಧರ್ಮಧ್ವಜಿತ್ವ ಎಂಬುದಾಗಿ ಶಂಕರರು ತಮ್ಮ ಭಾಷ್ಯದಲ್ಲಿ ತಿಳಿಸಿದ್ದಾರೆ. ಅರ್ಥಾತ್ ತಾನು ಪರಮ ಧಾರ್ಮಿಕ ಎಂಬುದಾಗಿ ತಿಳಿಸಲು ಬೇಕಾದ ಬಾಹ್ಯವೇಷಗಳು. ಆತ ನಿಜವಾಗಿ ಎಷ್ಟು ಧರ್ಮಾಚರಣೆಯನ್ನು ಮಾಡುತ್ತಾನೋ ಇಲ್ಲವೋ, ಆದರೆ ಅದಕ್ಕಿಂತ ಹೆಚ್ಚು ತೋರಿಸಿಕೊಳ್ಳಲು ಬಯಸುತ್ತಾನೆ. ಎರಡನೆಯದು, ದರ್ಪ. ವಿದ್ಯೆ, ಧನ, ಯಶಸ್ಸು ಮೊದಲಾದ ನಿಮಿತ್ತದಿಂದ ಉಂಟಾಗುವ ಮದವಿದು. ಇವುಗಳ ಜೊತೆಗೆ ಕ್ರೋಧ, ಮತ್ತೊಬ್ಬರನ್ನು ನೋಯಿಸುವಂಥ ಕಠಿಣ ಮಾತುಗಳು, ಕರ್ತವ್ಯಾಕರ್ತವ್ಯ ಅವಿವೇಕ ಇವೆಲ್ಲ ಆಸುರೀಸಂಪತ್ತನ್ನುಳ್ಳವರಲ್ಲಿ ಕಾಣಬರುವ ದೋಷಗಳಾಗಿವೆ. ಹೀಗೆ ಈ ದೋಷಗಳು ವ್ಯಕ್ತಿಯನ್ನು ಕಟ್ಟಿಹಾಕಿ ನರಕಪ್ರಾಪ್ತಿಗೆ ಕಾರಣವಾಗುತ್ತವೆ. ಯಾಕೆ ಪರಮಾತ್ಮನು ಈ ಅಧ್ಯಾಯದಲ್ಲಿ ಈ ರೀತಿಯಲ್ಲಿ ವ್ಯಕ್ತಿತ್ವದ ವಿಭಾಗವನ್ನು ಮಾಡಿಕೊಟ್ಟಿದ್ದಾನೆಂದರೆ, ದೈವೀಸಂಪತ್ತು ನನ್ನಲ್ಲಿದೆಯೇ? ಎಂದು ನೋಡಿಕೊಂಡು, ಇಲ್ಲದಿದ್ದರೆ ಅದನ್ನು ಹೊಂದಲು ಪ್ರಯತ್ನಿಸಬೇಕು. ಒಂದು ವೇಳೆ ಆಸುರೀಸಂಪತ್ತು ಇದ್ದರೆ ಅದನ್ನು ನಿವಾರಿಸಿಕೊಳ್ಳಬೇಕು ಎಂಬ ಕಾರಣಕ್ಕೆ.

ಆಸುರೀಸಂಪತ್ತಿನವರು ಹೇಗೆಲ್ಲ ಯೋಚಿಸುತ್ತಾರೆ, ಹೇಗೆಲ್ಲ ವರ್ತಿಸುತ್ತಾರೆ ಎಂಬಿತ್ಯಾದಿಗಳನ್ನು ವಿಶದವಾಗಿ ತಿಳಿಸಿಕೊಡಬೇಕೆಂಬ ಕಾರಣಕ್ಕೆ ಇನ್ನೂ ವಿಸ್ತೃತವಾಗಿ ಪರಮಾತ್ಮನು ಆಸುರೀಸಂಪತ್ತಿನವರ ವರ್ಣನೆಯನ್ನೇ ಮುಂದುವರೆಸುತ್ತಾನೆ. ಅಸುರಸ್ವಭಾವದವರು ಹೇಗೆ ಯೋಚಿಸುತ್ತಾರೆಂದರೆ, ಈ ಜಗತ್ತೆಲ್ಲವೂ ಅಶಾಶ್ವತ ಮತ್ತು ಇದಕ್ಕೆ ಧರ್ಮವೆಂಬುದು ಈ ಜಗತ್ತಿಗೆ ಆಧಾರವಲ್ಲ. ಈ ಜಗತ್ತು ಸ್ವಭಾವತಃ ನಡೆದುಕೊಂಡು ಹೋಗುತ್ತಿದೆ. ಅದಕ್ಕೋಸ್ಕರ ಒಬ್ಬ ಈಶ್ವರನಾಗಲೀ, ಧರ್ಮವಾಗಲೀ ಬೇಕಾಗಿಲ್ಲ. ಗಂಡು-ಹೆಣ್ಣಿನ ಮೈಥುನ ಮಾತ್ರದಿಂದಲೇ ಈ ಜಗತ್ತು ಹುಟ್ಟಿದೆ ಮತ್ತು ಮುಂದುವರೆಯುತ್ತಿದೆ. ಹಾಗಾಗಿ ಧರ್ಮಕ್ಕಿಂತಲೂ ಕಾಮವೇ ಈ ಜಗತ್ತಿನ ಕೀಲಿಕೈ ಆಗಿದೆ ಎಂಬಿತ್ಯಾದಿಯಾಗಿ ರಮಣೀಯವಾದ ಮಾತಿನ ಮೂಲಕ ಜಗತ್ತನ್ನು ಮರುಳುಗೊಳಿಸುತ್ತಾರೆ. ಈ ದೃಷ್ಟಿಯನ್ನೇ ನಂಬಿಕೊಂಡ ಅಂಥವರೂ ಮತ್ತು ಅವರನ್ನು ನಂಬಿದ ಇತರರೂ ಸೇರಿ, ಪರಲೋಕವೆಂಬುದೇ ಇಲ್ಲವೆಂಬುದಾಗಿ ಭಾವಿಸಿ ಸ್ವೇಚ್ಛಾಚಾರದಲ್ಲಿ ತೊಡಗಿಕೊಂಡು ಕ್ರೂರಕರ್ಮಗಳನ್ನು ಮಾಡುತ್ತಾ ಜಗತ್ತಿಗೆ ಕಂಟಕರಾಗುತ್ತಾರೆ. ಆ ಮೂಲಕ ಜಗತ್ತಿಗೆ ಕಂಟಕರಾಗುತ್ತಾರೆ.

ಅಷ್ಟೇ ಅಲ್ಲ, ಅವರು ತಮ್ಮ ಇಚ್ಛೆಯನ್ನೆಲ್ಲ ತೀರಿಸಿಕೊಳ್ಳುವುದಕ್ಕಾಗಿಯೇ ತಮ್ಮ ಇಡೀ ಜೀವನವನ್ನು ಮುಡಿಪಾಗಿಡುತ್ತಾರೆ. ಅಂಥವರು ದಂಭ, ಅಭಿಮಾನ, ಮದವೇ ಮೊದಲಾದ ಎಲ್ಲ ದುರ್ಗುಣಗಳನ್ನೂ ತಮ್ಮೊಳಗೆ ಬಿಟ್ಟುಕೊಳ್ಳುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ಅವಿವೇಕದಿಂದ ಯಾವತ್ತೂ ನಕಾರಾತ್ಮಕ ಚಿಂತನೆಯಲ್ಲೇ ತಮ್ಮ ಸಮಯ ಕಳೆಯುತ್ತಾರೆ. ಅಷ್ಟೇ ಅಲ್ಲ, ಕಾಮೋಪಭೋಗವೇ ಶ್ರೇಷ್ಠವಾದದ್ದು ಎಂಬ ನಿಶ್ಚಯ ಅವರದ್ದು. ಹಾಗಾಗಿ ಯಾವ ಒಳ್ಳೆಯ ಗುಣಗಳಿಗೂ ಅವರ ವ್ಯಕ್ತಿತ್ವದಲ್ಲಿ ಜಾಗ ದೊರೆಯುವುದಿಲ್ಲ. ಆಶಾಪಾಶಕ್ಕೆ ಒಳಗಾಗಿ, ಕಾಮಕ್ರೋಧವನ್ನೇ ತಮ್ಮ ಸ್ವಭಾವವನ್ನಾಗಿಸಿಕೊಂಡು, ಅದನ್ನು ಪೂರೈಸಿಕೊಳ್ಳುವ ಸಲುವಾಗಿ ನಿಧಾನವಾಗಿ ಅವರು ಅನ್ಯಾಯದ ಮಾರ್ಗವನ್ನು ಹಿಡಿಯುತ್ತಾರೆ. ಒಮ್ಮೆ ಈ ಮಾರ್ಗಕ್ಕೆ ಇಳಿದರೆ ಮತ್ತೆ ಎದ್ದು ಬರುವುದು ಕಷ್ಟ. ಇದನ್ನೇ **ಆಶಾಪಾಶಶತೈರ್ಬದ್ಧಾಃ ಕಾಮಕ್ರೋಧಪರಾಯಣಾಃ। ಈಹಂತೇ ಕಾಮಭೋಗಾರ್ಥಮನ್ಯಾಯೇನಾರ್ಥಸಞ್ಚಯಾನ್॥** ಎಂಬುದಾಗಿ ಹೇಳಲಾಗಿದೆ.

ಈ ರೀತಿಯ ಸ್ವಭಾವದವರು ನಿತ್ಯವೂ ಕೂಡ ತಾನಿಷ್ಟು ದುಡಿದೆ, ಇದರಿಂದ ಇಷ್ಟು ದೊರೆಯಿತು, ನಾಳೆ ಇಷ್ಟನ್ನು ಪಡೆದುಕೊಳ್ಳಬೇಕು, ಆಮೇಲೆ ಇಷ್ಟಿಷ್ಟನ್ನು ನನ್ನದಾಗಿಸಿಕೊಳ್ಳಬೇಕು ಎಂಬಿತ್ಯಾದಿ ಚಿಂತನೆಯಲ್ಲಿಯೇ ತಮ್ಮ ಇಡೀ ಜೀವನವನ್ನು ಕಳೆದು, ಜೀವನವನ್ನು ಲೌಕಿಕಚಿಂತನೆಗಾಗಿಯೇ ಮೀಸಲಾಗಿಸಿ ಹೊರಡುತ್ತಾರೆ. ಅಷ್ಟೇ ಅಲ್ಲ, ಈತನನ್ನ ಶತ್ರು, ಇವನನ್ನು ನಾನು ನಾಶಮಾಡಬೇಕು, ಅಷ್ಟೇ ಅಲ್ಲ ಇತಿಂಥವರು ನನ್ನ ಶತ್ರುಗಳಿದ್ದಾರೆ, ಅವರನ್ನೆಲ್ಲ ನಾಶ ಮಾಡುತ್ತೇನೆ ಎಂಬಿತ್ಯಾದಿಯಾಗಿಯೇ ಅವರ ಆಲೋಚನೆಯು ಸಾಗುತ್ತದೆ. ಇದು ನಿಧಾನಕ್ಕೆ ಆತನಲ್ಲಿ ಅಹಂಕಾರವನ್ನು ವರ್ಧಿಸುತ್ತಾ, ತಾನೇ ಸರ್ವಶಕ್ತನೆಂಬ ಭ್ರಮೆಯನ್ನು ಉಂಟುಮಾಡುತ್ತದೆ. ಹಾಗಾಗಿ ಆತ ನಿಧಾನಕ್ಕೆ ಎಲ್ಲ ಮೌಲ್ಯವನ್ನೂ ಬಿಟ್ಟುಬಿಡುತ್ತಾನೆ. ತನ್ನಂಥ ಇನ್ನೊಬ್ಬರಿಲ್ಲ ಎಂಬ ಭಾವ ಬೆಳೆಯುತ್ತಿದ್ದಂತೆಯೇ ಆತ ಲೋಕಕಂಟಕನಾಗುತ್ತಾನೆ. ನನ್ನಷ್ಟು ಸುಖಿಗಳೂ, ಶ್ರೀಮಂತರೂ, ಬುದ್ಧಿವಂತರೂ, ನನ್ನಷ್ಟು ಪರಿಣತರೂ ಯಾರಿದ್ದಾರೆ ಎಂಬಿತ್ಯಾದಿಯಾಗಿಯೇ ಅವರ ಭಾವವಿರುತ್ತದೆಯೇ ಹೊರತೂ, ಯಶಸ್ಸು ಬಂದಾಗ ಇನ್ನಷ್ಟು ಬಾಗಬೇಕು, ವಿಧೇಯನಾಗಬೇಕು ಎಂದು ಅವರಿಗೆ ಅನ್ನಿಸುವುದೇ ಇಲ್ಲ. ಹಣ, ಅಧಿಕಾರ ಇತ್ಯಾದಿಗಳು ಒದಗಿದಾಗ ಸಹಜವಾಗಿಯೇ ಲೋಕವು ಅತನ ಹಿಂದೆ ಬರುತ್ತದೆ. ಅದನ್ನು ನೋಡಿ ಆತ ಒಂದು ರೀತಿಯ ಉನ್ಮತ್ತತೆಗೆ ಒಳಗಾಗುತ್ತಾನೆ. ಹಿತವಚನವನ್ನು ಕಡೆಗಣಿಸುತ್ತಾನೆ. ಎಚ್ಚರವನ್ನು ತಪ್ಪುತ್ತಾನೆ. ಪ್ರಮಾದವು ವ್ಯಕ್ತಿಯ ಶ್ರೇಯಸ್ಸಿಗೆ ಅತಿ ದೊಡ್ಡ ಶತ್ರು. ಆದರೆ ಅದನ್ನೆಲ್ಲ ಆತ ಉಪೇಕ್ಷಿಸುತ್ತಾನೆ.

ನನ್ನದೇ ಪರಿಶ್ರಮ, ನನ್ನದೇ ದುಡ್ಡು, ನಾನು ಅದನ್ನು ಹೇಗೆ ಬೇಕಾದರೂ ಬಳಸಿಕೊಳ್ಳುತ್ತೇನೆ, ಏನು ಬೇಕಾದರೂ ಮಾಡುತ್ತೇನೆ ಎಂಬಿತ್ಯಾದಿಯಾಗಿ ಆತನೊಳಗೆ ಮದವು ಹೆಚ್ಚುತ್ತಾ ಬರುತ್ತದೆ. ಹೊರಗೆ ಒಳ್ಳೆಯ ವ್ಯಕ್ತಿಯಂತೆ ನಟನೆಯನ್ನು ಮಾಡಿದರೂ ಆತನ ನಡತೆಯಲ್ಲಿ ಇವೆಲ್ಲ ಸೂಕ್ಷ್ಮವಾಗಿ ಕಾಣಲು ತೊಡಗುತ್ತವೆ. ಕೊನೆಗೊಮ್ಮೆ ಬಾಹ್ಯದಲ್ಲಿಯೂ ಇದು ಅಭಿವ್ಯಕ್ತಿಸಲು ತೊಡಗಿ ನಿಧಾನವಾಗಿ ಆತ ಎಲ್ಲ ಕಲ್ಯಾಣಗುಣಗಳಿಂದ, ಶಿಷ್ಟರಿಂದ, ಸಮಾಜದಿಂದ ದೂರವಾಗುತ್ತಾನೆ, ಪುಣ್ಯದಿಂದಲೂ ದೂರವಾಗುತ್ತಾ, ಪಾಪವನ್ನೇ ಆಶ್ರಯಿಸುತ್ತಾನೆ. ಈ ಮೂಲಕ ನರಕಕ್ಕೆ ಬೀಳುತ್ತಾನೆ. ಅದನ್ನೇ ಗೀತೆಯಲ್ಲಿ ಹೀಗೆ ಹೇಳಿದೆ:

ಅನೇಕಚಿತ್ತವಿಭ್ರಾಂತಾ ಮೋಹಜಾಲಸಮಾವೃತಾಃ।
ಪ್ರಸಕ್ತಾಃ ಕಾಮಭೋಗೇಷು ಪತಂತಿ ನರಕೇಽಶುಚೌ॥ ಎಂಬುದಾಗಿ.

ಅವರ ದುರಾಚಾರದ ವರ್ಣನೆ ಇಷ್ಟಕ್ಕೇ ನಿಲ್ಲುವುದಿಲ್ಲ. ತಮ್ಮನ್ನು ತಾವೇ ಸಂಭಾವಿತರೆಂದು ಭಾವಿಸುವ ಈ 'ಆತ್ಮಸಂಭಾವಿತರು', ಅವಿಧೇಯತೆಯನ್ನೇ ತುಂಬಿಕೊಂಡು, ಧನ-ಮಾನ-ಮದಗಳಿಂದ ಕೂಡಿದವರಾಗಿ ತೋರಿಕೆಗಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆ. ಅವರಿಗೆ ಬೇಕಿರುವುದು ನಾಲ್ಕು ಜನರ ಹೊಗಳಿಕೆಯೇ ಹೊರತೂ ವಿಧಿ-ವಿಧಾನಗಳಲ್ಲಾಗಲೀ, ಪಾಪ-ಪುಣ್ಯದಲ್ಲಾಗಲೀ, ಹಿರಿಯರ ಮಾತಿನಲ್ಲಾಗಲೀ, ಶಾಸ್ತ್ರವಾಕ್ಯದಲ್ಲಾಗಲೀ ಅವರು ಶ್ರದ್ಧೆ ಉಳ್ಳವರಲ್ಲ. ಈ ರೀತಿಯಲ್ಲಿ ವ್ಯಕ್ತಿತ್ವದ ರಂಧ್ರದಂತಿರುವ ಎಲ್ಲ ದೋಷಗಳನ್ನೂ ತನ್ನಲ್ಲಿ ತುಂಬಿಕೊಂಡು ತನ್ನೊಳಗಿರುವ ಆ ಪರಮಾತ್ಮನನ್ನೇ ಉಪೇಕ್ಷಿಸುತ್ತಾರೆ. ಜೊತೆಗೆ ಒಳ್ಳೆಯವರನ್ನೂ, ಒಳ್ಳೆತನವನ್ನೂ ದ್ವೇಷಿಸಲು ತೊಡಗುತ್ತಾರೆ. ಕೊನೆಗೆ ಅಧರ್ಮವೇ ಧರ್ಮದಂತೆಯೂ, ಅವಿವೇಕವೇ ವಿವೇಕವೆಂಬುದಾಗಿಯೂ, ತಾನು ಮಾಡುವ ಕೆಟ್ಟ ಕೆಲಸಗಳನ್ನೆಲ್ಲ ಒಳ್ಳೆಯದೆಂಬುದಾಗಿಯೂ ಸಮರ್ಥಿಸಿಕೊಳ್ಳುತ್ತಾ ತನ್ನ ಅಧೋಗತಿಗೆ ತಾನೇ ಕಾರಣರಾಗಿಬಿಡುತ್ತಾರೆ. ಹಾಗಾಗಿ ಇಂಥವ್ಯಕ್ತಿಗಳನ್ನು ಒಬ್ಬ ವಿವೇಕಿಯಾದವನು ಸರ್ವಥಾ ದೂರ ಇಡಬೇಕು. ಇಂಥ 'ನರಾಧಮ'ರನ್ನು ಅನೇಕ ನರಕಗಳ ಮಾರ್ಗದಲ್ಲಿ ಎಸೆಯುತ್ತೇನೆ ಎಂಬುದಾಗಿ ಗೀತೆಯಲ್ಲಿ ಕೃಷ್ಣ ಎಚ್ಚರಿಸಿದ್ದಾನೆ.

ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್।
ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು॥ ಎಂಬುದಾಗಿ.

ಒಮ್ಮೆ ಆಸುರೀಯೋನಿಗಳಲ್ಲಿ ಹುಟ್ಟಿದರೆ ಮತ್ತಷ್ಟು ಮತ್ತಷ್ಟು ಕೆಳಮುಖವಾಗಿಯೇ ಅವರ ಪ್ರಯಾಣ ಸಾಗುತ್ತದೆ. ಈ ರೀತಿಯಲ್ಲಿ ಪರಮಾತ್ಮನಿಂದ ದೂರವಾಗಿ, ಜನ್ಮಜನ್ಮಗಳಲ್ಲಿಯೂ ಮೂಢಯೋನಿಗಳಲ್ಲೇ ಜನ್ಮವನ್ನು ಪಡೆಯುತ್ತಾರೆ. ಇದಕ್ಕೆ ವಿರುದ್ಧವಾಗಿ ಯಾರು ದೈವೀಸಂಪತ್ತನ್ನು ಉಳ್ಳವರೋ ಅಥವಾ ಅದನ್ನು ಪಡೆಯಲು ನಿರಂತರ ಯತ್ನಿಸುತ್ತಾರೋ ಅಂಥವರು ನಿಧಾನವಾಗಿಯಾದರೂ ಶ್ರೇಯಸ್ಸನ್ನು ಹೊಂದುತ್ತಾರೆ ಎಂಬುದಾಗಿ ಪರಮಾತ್ಮನು ತಿಳಿಸಿದ್ದಾನೆ. ಈ ರೀತಿಯಲ್ಲಿ ಪುರಾಣಗಳಲ್ಲಿ ಬರುವ ನರಕಗಳ ವರ್ಣನೆಯು ಈ ನಿಟ್ಟಿನಲ್ಲಿ ನಮಗೆ ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳದಿದ್ದರೆ ಆಗುವ ಪರಿಣಾಮವನ್ನು ತಿಳಿಸಲೋಸುಗವೇ ಬಂದಿವೆ ಎನ್ನಬಹುದು.

'ಭಾರತದ ಟ್ರಂಪ್' ರಾಹುಲ್ ಗಾಂಧಿ!

ರಾಹುಲ್‌ಗಾಂಧಿ ತಮ್ಮ ನಡೆನುಡಿಗಳಿಂದ 'ಟ್ರಂಪ್'ರಂತೆಯೇ ವರ್ತಿಸುತ್ತಿದ್ದಾರೆ.

ಭಾವದೀಪ್

ರಾಹುಲ್ ಗಾಂಧಿಯವರ ಆಷಾಢಭೂತಿತನವು ಡೊನಾಲ್ಡ್ ಟ್ರಂಪ್‌ರನ್ನೇ ಹೆಚ್ಚೆಚ್ಚು ಹೋಲುವಂತಿದೆ. ಟ್ರಂಪ್‌ರಂತೆ ರಾಹುಲ್ ಗಾಂಧಿ ಕೂಡಾ ಮಾತಿನ ಬಾಟಲ್ ಬಾಂಬುಗಳನ್ನು ಎತ್ತಿ ಎತ್ತಿ ಒಗೆಯುವುದರಲ್ಲಿ ನಿಷ್ಣಾತರು. ಇಂತಹ ಬಾಂಬುಗಳು ದೊಡ್ಡ ತಲೆಬರಹದ ಸುದ್ದಿಗಳಾಗಿ ಕಿಡಿ ಹಚ್ಚಲಿ ಎಂಬುದು ಅವರ ನಿರೀಕ್ಷೆ.

ಅವರ ಆರೋಪಗಳು ಹೆಚ್ಚು ವಿಚಿತ್ರಗೊಂಡಷ್ಟೂ ಅವರು ಬಳಸುವ ಭಾಷೆ ಹೆಚ್ಚೆಚ್ಚು ಘೋರವಾಗುತ್ತದೆ. ಆ ಮೂಲಕ ಜನರ ಗಮನವನ್ನು ಹೆಚ್ಚು ಸೆಳೆಯುವಂತಿರುತ್ತದೆ. ನಿಮ್ಮಲ್ಲಿ ಮಾತಿಗೆ ವಸ್ತುವಿಲ್ಲವಾದರೆ ನೀವೇ ಮಾತಿನ ವಸ್ತುವಾಗಿ ಎಂಬುದು ಅವರ ನಿಲುವು. ಎಲ್ಲೋ ಮೂಲೆ(ಡಂಪ್)ಗೆಸೆಯಲ್ಪಡುವ ಬದಲಾಗಿ ಟ್ರಂಪ್‌ರಂತಾಗುವ ಬಯಕೆ.

ರಾಹುಲ್ ಗಾಂಧಿಯ ಉದ್ದೇಶಪೂರ್ವಕ ಜಗಳಗಂಟತನ, ಸದಾ ಕಾರುವ ದ್ವೇಷ, ಹಠಾತ್ತನೆ ಎಗರಿಬೀಳುವ ಸ್ವಭಾವ ಎಲ್ಲವೂ 'ಟ್ರಂಪ್‌ತನ'ವನ್ನು ಸೂಚಿಸುತ್ತದೆ. ಟ್ರಂಪ್‌ರಂತೆಯೇ ಅವರು ವಾಸ್ತವಾಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹಾಗಾಗಿಯೇ ಅವರು 'ಭಾರತದ್ದು ಮೃತ ಆರ್ಥಿಕತೆ' ಎಂಬ ಟ್ರಂಪ್‌ರ ಮಾತನ್ನು ಅನಾಮತ್ತು ಎತ್ತಿ ಬಿಡುತ್ತಾರೆ. ಪ್ರಗತಿಯ ನೈಜ ಅಂಕಿಅಂಶಗಳನ್ನು ಕಡೆಗಣಿಸುತ್ತಾರೆ.

ಅಪರೇಶನ್ ಸಿಂದೂರ್ ನಿಲ್ಲಿಸುವಲ್ಲಿ ಟ್ರಂಪ್‌ರ ಒತ್ತಡವಿತ್ತು ಎಂಬುದನ್ನು ಭಾರತವು ನಿರಾಕರಿಸಿದಾಗ, ರಾಹುಲ್ 'ಪಾಕಿಸ್ತಾನದಲ್ಲಿ ಭಯೋತ್ಪಾದಕ ಕೇಂದ್ರಗಳ ವಿರುದ್ಧ ಭಾರತದ ದಾಳಿಯು ಟ್ರಂಪ್ ಸೂಚನೆಯ ಮೇರೆಗೆ ನಿಂತಿತು' ಎನ್ನುತ್ತಾರೆ. ಟ್ರಂಪ್‌ರನ್ನು ಪ್ರಾಮಾಣಿಕತೆಗೆ ಮಾದರಿಯಾಗಿ ತೆಗೆದುಕೊಳ್ಳುವಂತೆಯೇ ಇಲ್ಲ ಎಂಬುದು ಅವರಿಗೆ ಗಣನೆಯಿಲ್ಲ. ಕೇಂದ್ರ ಸರಕಾರವು ಯಾವುದೇ ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸಿದ್ದನ್ನು ಕಾಂಗ್ರೆಸಿಗರು ಎಂದೂ ಹೊಗಳಿದ್ದಿಲ್ಲ.

ಮೋದಿಯವರು 2017ರಲ್ಲಿ ಇಸ್ರೇಲಿಗೆ ನೀಡಿದ ಭೇಟಿಯನ್ನು ಆಯೋಜಿಸಿದ್ದು ಜೆಫ್ರಿ ಎಪ್‌ಸ್ಟೀನ್ ಎನ್ನುತ್ತಾರೆ ರಾಹುಲ್. ಆದರೆ ಎಪ್‌ಸ್ಟೀನ್‌ನ ಇಡೀ ವ್ಯವಹಾರವೇ ವಂಚನೆಯದ್ದು. ಅವನೊಂದಿಗೆ ಮೋದಿ ಸಖ್ಯ ಕಲ್ಪಿಸಿಕೊಳ್ಳಲೂ ಅಸಾಧ್ಯ. ಆದರೂ ರಾಹುಲ್ ತಮ್ಮ ಆರೋಪವನ್ನು ಜನರು ನಂಬಬೇಕೆಂದು ಬಯಸುತ್ತಾರೆ.

ಪ್ರತಿಯೊಂದು ಚುನಾವಣೆಯ ಸೋಲಿನ ಬಳಿಕವೂ ರಾಹುಲ್ ಹೆಚ್ಚೆಚ್ಚು ಹತಾಶರಾಗುತ್ತಿದ್ದಾರೆ. ಕಾಂಗ್ರೆಸ್ ಪಕ್ಷವು ಚುನಾವಣಾ ವಿಜಯದಿಂದ ಈಗ ಸುದ್ದಿಯಾಗುವುದಿಲ್ಲ. ರಾಹುಲ್ ಮಾಧ್ಯಮಗಳ ಮುಂದೆ ಹಾಜರಾಗಿ ಏನಾದರೂ ಹೇಳಿದಾಗ ಮಾತ್ರ ಸುದ್ದಿಯಾಗುತ್ತದೆ. ಈಗಂತೂ ಅವರು ಮುಖಪುಟದ ಸುದ್ದಿಯಾಗುವುದು ಪಿತೂರಿ ಸಿದ್ಧಾಂತ ಮತ್ತು ಪ್ರಚೋದನಕಾರಿ ಹೇಳಿಕೆಗಳನ್ನು ನೀಡುವಾಗ ಮಾತ್ರ.



ಒಂದು ಸುಳ್ಳನ್ನು ನೂರು ಬಾರಿ ಹೇಳಿದರೆ ಅದೇ ಸತ್ಯವಾಗುತ್ತದೆ ಎಂಬ ಗೊಬೆಲ್ಸ್ ಸಿದ್ಧಾಂತವನ್ನು ರಾಜಕೀಯದಲ್ಲಿ ಎಲ್ಲರೂ ಅನುಸರಿಸುತ್ತಾರೆ. ರಾಹುಲ್ ಅದನ್ನು ಎಲ್ಲರಿಗಿಂತ ಹೆಚ್ಚೇ ಪಾಲಿಸುತ್ತಾರೆ. ಆದರೆ ನಿಮ್ಮ ವಿರೋಧಿಗಳು ಹೆಚ್ಚು ವಿಶ್ವಾಸಭರಿತರಾಗಿದ್ದಾಗ ಈ ಸಿದ್ಧಾಂತ ಕೆಲಸ ಮಾಡುವುದಿಲ್ಲ. ಹಾಗಾಗಿ ಮೋದಿ ಬ್ರಾಂಡ್‌ನ್ನು ಹಳಿಯುವುದು ಕಾಂಗ್ರೆಸಿಗೆ ಅನಿವಾರ್ಯ ಕರ್ಮವಾಗಿದೆ.

ಟ್ರಂಪ್ ಪ್ರೇರಿತ 'ವೋಟ್ ಚೋರಿ' ಆರೋಪ ಇದೇ ಉದ್ದೇಶ ಹೊಂದಿರುವಂತದ್ದು. 2024ರಲ್ಲಿ ಚುನಾವಣಾ ಪ್ರಚಾರದ ವೇಳೆ ಟ್ರಂಪ್ "ಡೆಮಾಕ್ರಾಟರು ನಾಯಿ ತರಹ ವಂಚನೆ ಮಾಡುತ್ತಾರೆ" ಎಂದು ವಿರೋಧ ಪಕ್ಷವನ್ನು ತೆಗಳಿದ್ದರು. ಕೆಲವು ತಿಂಗಳ ಬಳಿಕ ರಾಹುಲ್ ಅದೇ ವಿಷಯವನ್ನು ಹಿಡಿದುಕೊಂಡರು. ಆದರೆ ಚೌಕಿದಾರ್ ಚೋರ್ ಹೈ ಆರೋಪದಂತೆಯೆ ಅವರ ವೋಟ್ ಚೋರಿಯ ಹೈಡ್ರೋಜನ್ ಬಾಂಬ್ ಕೂಡ ಠುಸ್ಸೆಂದಿತು. ಏಕೆಂದರೆ ಅವರಲ್ಲಿ ವೋಟ್ ಚೋರಿ ಸಾಬೀತುಪಡಿಸುವ ಪುರಾವೆಯೆ ಇರಲಿಲ್ಲ.

ರಿಯಾಲಿಟಿ ಟಿವಿಯಲ್ಲಿ ಟ್ರಂಪ್ ವರ್ತನಾ ಶೈಲಿಯನ್ನು ಅನುಕರಿಸಿದ ರಾಹುಲ್ ಸಂಸತ್ತಿನಲ್ಲಿ ಅಂತಹ ಗಿಮಿಕ್‌ಗಳನ್ನು ಪ್ರದರ್ಶಿಸಲೆತ್ನಿಸುತ್ತಾರೆ. ನರವಣೆಯವರ ಪುಸ್ತಕವನ್ನು ಓದುವ ಪ್ರಹಸನ, ಆಳುವ ಪಕ್ಷದವರತ್ತ ಫ್ಲೈಯಿಂಗ್ ಕಿಸ್ ತೂರಿದ್ದು, ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟುರನ್ನು 'ದ್ರೋಹಿ' ಎಂದು ಕರೆದುದು ಇಂತಹುದೇ ಗಿಮಿಕ್‌ಗಳು. ತಮ್ಮ ನಾಯಕನನ್ನೆ ಅನುಕರಿಸಿದ ಯುವ ಕಾಂಗ್ರೆಸ್‌ನ ಕೆಲವು ಸದಸ್ಯರು ಎಐ ಜಾಗತಿಕ ಸಮ್ಮೇಳನದಲ್ಲಿ ಶರ್ಟ್ ಬನಿಯನ್ ಬಿಚ್ಚಿ ಬೆತ್ತಲೆ ಪ್ರದರ್ಶನ ನಡೆಸಿದರು. ಅವರನ್ನು ರಾಹುಲ್ 'ಬಬ್ಬರ್ ಶೇರ್' ಎಂದು ಬಣ್ಣಿಸಿದ್ದು ಅವರ ನಡತೆಗೆ ಸೂಕ್ತವಾಗಿಯೇ ಇತ್ತು.

ಇವೆಲ್ಲ ನೋಡುವಾಗ, ರಾಹುಲ್ ಗಾಂಧಿ ಮತ್ತು ಟ್ರಂಪ್‌ರ ಎಡಬಿಡಂಗಿತನವನ್ನು ತುಲನೆ ಮಾಡುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದರಲ್ಲಿ ಆಶ್ಚರ್ಯವಿದೆಯೆ?! ಸಮಸ್ಯೆಯೇನೆಂದರೆ ಕಾಂಗ್ರೆಸ್‌ನಲ್ಲಿ ಈಗ ಸಂಘಟನಾತ್ಮಕ ಬಲವಿಲ್ಲ. ದೊಡ್ಡ ಚಿಂತನೆಗೂ ಬರವಿದೆ. ಎನ್‌ಡಿಎ ರಕ್ಷಣಾ ಕವಚದಲ್ಲಿ ಬಿರುಕು ಕಂಡುಕೊಳ್ಳಲು ಕಾಂಗ್ರೆಸಿಗಿನ್ನೂ ಸಾಧ್ಯವಾಗಿಲ್ಲ. ಸರಕಾರದ ಅಭಿವೃದ್ಧಿಶೀಲ ಮತ್ತು ಕಲ್ಯಾಣ ಕಾರ್ಯಗಳಿಂದಾಗಿ ಕಾಂಗ್ರೆಸಿಗೆ ಎನ್‌ಡಿಎಯನ್ನು ಸೋಲಿಸಲು ಸಾಧ್ಯವಾಗದಿರುವುದು ಒಂದು ಕಡೆಯಾದರೆ, ಮತ್ತೊಂದೆಡೆಯಿಂದ ಸರಿಯಾದ ವಿಷಯವನ್ನು ಪ್ರಚಾರತಂತ್ರವಾಗಿ ಆರಿಸಲೂ ಅದಕ್ಕೆ ಸಾಧ್ಯವಾಗಿಲ್ಲ. ಅದು ಎತ್ತಿಕೊಂಡ ವಿಷಯಗಳಾವುವೂ ಜನರ ವಿಶ್ವಾಸ ಗಳಿಸಲಿಲ್ಲ. ರಾಹುಲ್ ಬಿಜೆಪಿ ಸರಕಾರದ ಮೇಲೆ ಹೊರಿಸಿದ ಬಹಳಷ್ಟು ಆರೋಪಗಳಿಗೆ ಪುರಾವೆಗಳೇ ಇರಲಿಲ್ಲ.

ಭಾರತೀಯ ಮತದಾರರು ವಿರೋಧ ಪಕ್ಷ ನಾಯಕನಿಂದ ಇದಕ್ಕಿಂತ ಹೆಚ್ಚು ಪ್ರಬುದ್ಧ ನಡೆಯನ್ನು ಅಪೇಕ್ಷಿಸುತ್ತಾರೆ. ಕೇವಲ ಪೊಳ್ಳು ಘೋಷಣೆಗಳಿಗೆ ಜನರು ಮರುಳಾಗುವ ಕಾಲ ಸಂದುಹೋಯಿತು. ರಾಹುಲ್‌ರವರು ತಮ್ಮ ನಡೆನುಡಿಯಿಂದ 'ಭಾರತದ ಟ್ರಂಪ್'ರಂತಾಡುತ್ತಿದ್ದಾರೆ.

ಕಳವು ಪ್ರಕರಣದ ವ್ಯಕ್ತಿ ಸೆರೆ: 3 ಕೋಟಿ ಮೌಲ್ಯದ ವಜ್ರ, ಚಿನ್ನಾಭರಣ ವಶ

ಬೆಂಗಳೂರು: ಯಲಹಂಕದ ಜೂಡಿಷಿಯಲ್ ಲೇಔಟ್‌ನಲ್ಲಿ ನಡೆದಿದ್ದ ಭಾರಿ ಮೊತ್ತದ ಕಳವು ಪ್ರಕರಣವನ್ನು ಭೇದಿಸಿರುವ ನಗರ ಪೊಲೀಸರು, ರಾಜಸ್ಥಾನ ಮೂಲದ ಓರ್ವ ವ್ಯಕ್ತಿಯನ್ನು ಬಂಧಿಸಿ ಸುಮಾರು 3 ಕೋಟಿ ರೂ. ಮೌಲ್ಯದ ವಜ್ರ ಮತ್ತು ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ವೆಲಾರಾಮ ಮೀನಾ ಅಲಿಯಾಸ್ ಸುನೀಲ (19) ಬಂಧಿತ ಆರೋಪಿ. ಈತ ಟೈಲ್ಸ್ ಕೆಲಸ ಮಾಡಿಕೊಂಡು ಜೂಡಿಷಿಯಲ್ ಲೇಔಟ್‌ನಲ್ಲಿ ವಾಸವಾಗಿದ್ದ. ದೂರುದಾರರ ಚಿಕ್ಕಪ್ಪ ಅಮೆರಿಕಾದಲ್ಲಿ ಸಾಫ್ಟ್‌ವೇರ್ ಡೆವಲಪರ್ ಆಗಿ ಕೆಲಸ ಮಾಡುತ್ತಿದ್ದು, ಅವರ ಪತ್ನಿ ಪ್ರತಿ ಆರು ತಿಂಗಳಿಗೊಮ್ಮೆ ಅಲ್ಲಿಗೆ ಹೋಗಿ ಬರುತ್ತಿದ್ದರು. ಈ ಸಂದರ್ಭವನ್ನು ಬಳಸಿಕೊಂಡ ಆರೋಪಿ, ಕಳೆದ ಫೆ.15ರಂದು ರಾತ್ರಿ ಮನೆಯ ಟೇರೆಸ್ ಬಾಗಿಲನ್ನು ಮುರಿದು ಒಳನುಗ್ಗಿ ಚಿನ್ನಾಭರಣಗಳನ್ನು ಕಳವು ಮಾಡಿದ್ದರು. ಈ ಬಗ್ಗೆ ಯಲಹಂಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆ ಕೈಗೆತ್ತಿಕೊಂಡ ಪೊಲೀಸರು ವಿವಿಧ ಆಯಾಮಗಳಲ್ಲಿ ಕಾರ್ಯಾಚರಣೆ ನಡೆಸಿ,



ಫೆ.18ರಂದು ರಾಜಸ್ಥಾನದ ಮಣಗಿರಿಪಾಲ ಗ್ರಾಮದಲ್ಲಿ ಆರೋಪಿಯನ್ನು ವಶಕ್ಕೆ ಪಡೆದರು. ವಿಚಾರಣೆಯ ವೇಳೆ ಆರೋಪಿಯು ಕೃತ್ಯವನ್ನು ಒಪ್ಪಿಕೊಂಡಿದ್ದು, ಆತನ ಮನೆಯಲ್ಲಿ ಬಚ್ಚಿಟ್ಟಿದ್ದ 1.833 ಕೆ.ಜಿ. ತೂಕದ ವಜ್ರ ಮತ್ತು ಚಿನ್ನಾಭರಣಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬಂಧಿತನನ್ನು ರಾಜಸ್ಥಾನದ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಟ್ರಾನ್ಸಿಸ್ಟ್ ವಾರೆಂಟ್ ಪಡೆದು ಬೆಂಗಳೂರಿಗೆ ಕರೆತಂದು, ಮಾ.6ರಂದು ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಯಶಸ್ವಿ ಕಾರ್ಯಾಚರಣೆಯನ್ನು ಈಶಾನ್ಯ ವಿಭಾಗದ ಡಿಸಿಪಿ ಮಿಥುನ್ ಕುಮಾರ್ ಅವರ ಮಾರ್ಗದರ್ಶನದಲ್ಲಿ, ಎಸಿಪಿ ನರಸಿಂಹಮೂರ್ತಿ ಮತ್ತು ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿ ಸಿಬ್ಬಂದಿ ತಂಡ ನಡೆಸಿದೆ.

ಗೃಹಬಳಕೆಗೆ ಅನಿಲಕ್ಕೆ ಆದ್ಯತೆ

ಪುಟ 9➜ ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು, ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ಲಭ್ಯವಿರುವ ಅನಿಲವನ್ನು ಪ್ರಮುಖ ಬಳಕೆದಾರರಿಗೆ ಮರುಹಂಚಿಕೆ ಮಾಡುವ ನಿರ್ಧಾರ ತೆಗೆದುಕೊಂಡಿದೆ.

ಮನೆ ಬಳಕೆ ಮತ್ತು ಸಾರಿಗೆಗೆ 100% ಸರಬರಾಜು: ಸರ್ಕಾರದ ಹೊಸ ಆದೇಶದ ಪ್ರಕಾರ ಎಲ್‌ಪಿಜಿ ಉತ್ಪಾದನೆ, ಸಿಎನ್‌ಜಿ ಹಾಗೂ ಮನೆಗಳಿಗೆ ಪೈಪ್ ಮೂಲಕ ನೀಡುವ ಪಿಎನ್‌ಜಿ ಬಳಕೆದಾರರಿಗೆ ಕಳೆದ ಆರು ತಿಂಗಳ ಸರಾಸರಿ ಬಳಕೆಯ ಶೇ.100ರಷ್ಟು ಅನಿಲವನ್ನು ನೀಡಲಾಗುತ್ತದೆ. ಇದರಿಂದ ಅಡುಗೆ ಅನಿಲ ಸರಬರಾಜು ಮತ್ತು ವಾಹನಗಳಿಗೆ ಬಳಸುವ ಸಿಎನ್‌ಜಿ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ. ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ಸಾಮಾಜಿಕ ಜಾಲತಾಣದಲ್ಲಿ ನೀಡಿದ ಪ್ರತಿಕ್ರಿಯೆಯಲ್ಲಿ, ದೇಶೀಯ ಬಳಕೆದಾರರಿಗೆ ಯಾವುದೇ ಕೊರತೆ ಉಂಟಾಗದಂತೆ ಸರ್ಕಾರ ಕ್ರಮ ಕೈಗೊಂಡಿದೆ ಎಂದು ಹೇಳಿದ್ದಾರೆ. ಜನರು ಆತಂಕಪಡುವ ಅಗತ್ಯವಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಗೊಬ್ಬರ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಕಡಿತ: ಪ್ರಮುಖ ಕ್ಷೇತ್ರಗಳಿಗೆ ಆದ್ಯತೆ ನೀಡಿದ ನಂತರ ಉಳಿದ ಅನಿಲವನ್ನು ಇತರ ಕ್ಷೇತ್ರಗಳಿಗೆ ನೀಡಲಾಗುತ್ತದೆ. ಗೊಬ್ಬರ ಉತ್ಪಾದನಾ ಘಟಕಗಳಿಗೆ ಕಳೆದ ಆರು ತಿಂಗಳ ಸರಾಸರಿ ಬಳಕೆಯ ಕನಿಷ್ಠ 70ರಷ್ಟು ಅನಿಲ ಒದಗಿಸಲಾಗುತ್ತದೆ.

ಇದಲ್ಲದೆ ಚಹಾ ಉದ್ಯಮ, ತಯಾರಿಕಾ ಕೈಗಾರಿಕೆಗಳು ಹಾಗೂ ಇತರ ಕೈಗಾರಿಕಾ ಬಳಕೆದಾರರಿಗೆ ಸುಮಾರು 80ರಷ್ಟು ಅನಿಲವನ್ನು ಪೂರೈಸಲಾಗುತ್ತದೆ. ನಗರ ಅನಿಲ ವಿತರಣೆ ಸಂಸ್ಥೆಗಳು (ಸಿಜಿಡಿ) ತಮ್ಮ ಕೈಗಾರಿಕಾ ಮತ್ತು ವಾಣಿಜ್ಯ ಗ್ರಾಹಕರಿಗೆ ಇದೇ ಪ್ರಮಾಣದಲ್ಲಿ ಅನಿಲ ಒದಗಿಸಬೇಕಾಗಿದೆ.

ರಿಫೈನರಿಗಳು ಮತ್ತು ಪೆಟ್ರೋಕೆಮಿಕಲ್ ಘಟಕಗಳ ಮೇಲೆ ಪರಿಣಾಮ: ಈ ಮರುಹಂಚಿಕೆಯ ಪರಿಣಾಮವಾಗಿ ಪೆಟ್ರೋಕೆಮಿಕಲ್ ಘಟಕಗಳು, ವಿದ್ಯುತ್ ಉತ್ಪಾದನಾ ಘಟಕಗಳು ಹಾಗೂ ಹೆಚ್ಚಿನ ಬೆಲೆಯ ಅನಿಲ ಬಳಕೆದಾರರಿಗೆ ಅನಿಲ ಸರಬರಾಜಿನಲ್ಲಿ ಕಡಿತವಾಗಲಿದೆ. ತೈಲ ಶುದ್ಧೀಕರಣ ಕಂಪನಿಗಳು ತಮ್ಮ ಅನಿಲ ಬಳಕೆಯನ್ನು ಕಳೆದ ಆರು ತಿಂಗಳ ಸರಾಸರಿಯ ಸುಮಾರು ಶೇ.65 ಕಡಿಮೆ ಮಾಡಿಕೊಳ್ಳಬೇಕಾಗಿದೆ.

ಇದಲ್ಲದೆ ಎಲ್‌ಪಿಜಿ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರ ಈಗಾಗಲೇ ರಿಫೈನರಿಗಳಿಗೆ ಕೆಲವು ಪೆಟ್ರೋಕೆಮಿಕಲ್ ಪ್ರಕ್ರಿಯೆಗಳ ಅನಿಲವನ್ನು ಅಡುಗೆ ಅನಿಲ ಉತ್ಪಾದನೆಗೆ ತಿರುಗಿಸುವಂತೆ ಸೂಚಿಸಿದೆ.

ಹೋಟೆಲ್ ಉದ್ಯಮಕ್ಕೆ ಭಾರೀ ಸಂಕಷ್ಟ

ಪುಟ 9➜ **ಕೇಂದ್ರ ಸಚಿವರಿಗೆ ತೇಜಸ್ವಿ ಪತ್ರ:** ರೆಸ್ಟೋರೆಂಟ್ ಮತ್ತು ಆಹಾರ ಸೇವಾ ಉದ್ಯಮವು ದೈನಂದಿನ ಅಡುಗೆ ಕಾರ್ಯಾಚರಣೆಗಳಿಗೆ ವಾಣಿಜ್ಯ ಎಲ್‌ಪಿಜಿಯನ್ನು ಅವಲಂಬಿಸಿರುತ್ತದೆ. ಇತರ ಹಲವಾರು ವಲಯಗಳಿಗಿಂತ ಭಿನ್ನವಾಗಿ, ಹೆಚ್ಚಿನ ವಾಣಿಜ್ಯ ಅಡುಗೆಮನೆಗಳು ಪ್ರಸ್ತುತ ಪಿಎನ್‌ಜಿ ಸಂಪರ್ಕ ಅಥವಾ ವಿದ್ಯುತ್ ಅಡುಗೆ ವ್ಯವಸ್ಥೆಗಳಂತಹ ತಕ್ಷಣದ ಪರ್ಯಾಯಗಳನ್ನು ಹೊಂದಿಲ್ಲ. ಎಲ್‌ಪಿಜಿ ಸರಬರಾಜಿನಲ್ಲಿನ ಯಾವುದೇ ಅಡಚಣೆಯು ರೆಸ್ಟೋರೆಂಟ್ ಕಾರ್ಯಾಚರಣೆಗಳು, ವಲಯದಲ್ಲಿನ ಉದ್ಯೋಗ ಮತ್ತು ಗ್ರಾಹಕರಿಗೆ ಒದಗಿಸಲಾದ ಸೇವೆಗಳ ಮೇಲೆ ನೇರವಾಗಿ ಪರಿಣಾಮ ಬೀರಬಹುದು ಎಂದು ತೇಜಸ್ವಿ ಸೂರ್ಯ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ.

ಪಾಕ್ ಸೇರಿ ರಾಷ್ಟಗಳಿಗೆ ಇಂಧನ ಕೊರತೆಯ ಬಿಸಿ

ಪುಟ 9➜ ಯುರೋಪ್ ಮತ್ತು ಅಮೆರಿಕದಲ್ಲೂ ಆರ್ಥಿಕ ಅಸ್ಥಿರತೆ ಎದುರಾಗುವ ನಿರೀಕ್ಷೆಯಿದೆ. ಇನ್ನು ಪಾಕ್ ಸರ್ಕಾರ ತೈಲ ಕೊರತೆ ಸಮಸ್ಯೆ ಎದುರಿಸಲು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಸರ್ಕಾರದ ವೆಚ್ಚ ಕಡಿತ, ಕಡ್ಡಾಯ ವರ್ಕ್ ಫ್ರಮ್ ಹೋಮ್, ಮುಂದಿನ ಎರಡು ತಿಂಗಳು ಸರ್ಕಾರಿ ವಾಹನಗಳ ಇಂಧನ ಬಳಕೆ ಶೇ.50 ಕಡಿತ ಮತ್ತು ಶೇ.60ರಷ್ಟು ಸರ್ಕಾರಿ ವಾಹನ ಬಳಕೆ ಕಡಿತಗೊಳಿಸಲು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಆದೇಶಿಸಿದ್ದಾರೆ.

ವಿಮಾನಯಾನ ದರ ಏರಿಕೆ ಬಿಸಿ

ಪುಟ 9➜ ಅಂತೆಯೇ ಅಂತಾರಾಷ್ಟ್ರೀಯ ಮಾರ್ಗಗಳಿಗೂ ಶುಲ್ಕ ಹೆಚ್ಚಿಸಲಾಗಿದೆ. ಪಶ್ಚಿಮ ಏಷ್ಯಾ ಮಾರ್ಗಗಳಿಗೆ 10 ಡಾಲರ್, ಆಫ್ರಿಕಾ ಮಾರ್ಗಗಳಿಗೆ 30 ಡಾಲರ್ ಹೆಚ್ಚಿಸಿ 90 ಡಾಲರ್‌ಗೆ ಮತ್ತು ದಕ್ಷಿಣ ಪೂರ್ವ ಏಷ್ಯಾ ಮಾರ್ಗಗಳಿಗೆ 20 ಡಾಲರ್ ಹೆಚ್ಚಿಸಿ 60 ಡಾಲರ್‌ನಷ್ಟು ಇಂಧನ ಶುಲ್ಕ ವಿಧಿಸಲಾಗುತ್ತದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕನೇಜಿ

ಹಿಂದುತ್ವ ಸರ್ವರಿಗೂ ಶ್ರೇಯಸ್ಸನ್ನು ಬಯಸುತ್ತದೆ. ಈ ಕಾರಣದಿಂದಾಗಿ ಭಾರತವು ಸರ್ವ ಧರ್ಮಗಳಿಗೆ ಆಶ್ರಯತಾಣವಾಗಿದೆ
- ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ

- ಸರ್ವ ಧರ್ಮಗಳಿಗೂ ಆಶ್ರಯತಾಣವಾಗಿದೆ ಎಂಬುದಕ್ಕಾಗಿ ಹೆಮ್ಮೆಯಾಗುತ್ತಿದೆ. ಇನ್ನೊಂದೆಡೆ ಧರ್ಮದ ಹೆಸರಿನಲ್ಲಿ ಅಧರ್ಮ ಮಾಡುವ ಮಂದಿಗೂ ಆಶ್ರಯತಾಣವಾಗುತ್ತಿದೆಯೋ ಎಂಬ ಭಯವಾಗುತ್ತಿದೆ!

ದಿನ ಭವಿಷ್ಯ

ಮೇಷ ಹೊಂದಾಣಿಕೆ ಸ್ವಭಾವ ತೋರಿ. ಹಠ, ಬೇಕಾಬಿಟ್ಟಿ ಧೋರಣೆ ಸಂಬಂಧ ಕೆಡಿಸೀತು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಸಫಲತೆ.

ವೃಷಭ ನೀವು ನಿರೀಕ್ಷಿಸಿದ ಫಲ ಇಂದು ಸಿಗದು. ವೃತ್ತಿ ಕ್ಷೇತ್ರದಲ್ಲಿ ಬಯಸದ ಬೆಳವಣಿಗೆ. ನಿಮ್ಮ ಮನಸ್ಸು ಕೆಡಿಸುವ ವ್ಯಕ್ತಿಗಳ ಸಂಗದಿಂದ ದೂರವಿರಿ.

ಮಿಥುನ ನಿರಾಳ ದಿನ. ಮುಖ್ಯ ಕೆಲಸವನ್ನು ಬಹುತೇಕ ನೆರವೇರಿಸಿದ ಸಮಾಧಾನ. ಉದ್ಯಮದಲ್ಲಿ ಪ್ರಗತಿ. ಆರೋಗ್ಯ ಸುಸ್ಥಿರ. ಬಂಧುಮಿತ್ರರ ಸಹಕಾರ.

ಕಟಕ ವೃತ್ತಿಯಲ್ಲಿ ಎಲ್ಲವೂ ಉತ್ತಮವಾಗಿ ಸಾಗಲಿದೆ. ಆದರೆ ಕೌಟುಂಬಿಕ ಬದುಕಲ್ಲಿ ಏರುಪೇರು ಎದುರಿಸುವಿರಿ. ಅತಿರೇಕವಾಗಿ ವರ್ತಿಸದಿರಿ.

ಸಿಂಹ ಎಂದಿಗಿಂತ ಹೆಚ್ಚೇ ಕೆಲಸದ ಒತ್ತಡ. ಸಹಚರರ ಜತೆ ಸಂಘರ್ಷ. ಹಣಕ್ಕೆ ಸಂಬಂಧಿಸಿ ಪ್ರಮುಖ ನಿರ್ಧಾರ ತಾಳದಿರಿ. ಕಾದು ನೋಡುವುದೊಳಿತು.

ಕನ್ಯಾ ವೃತ್ತಿ ಮತ್ತು ಖಾಸಗಿ ಬದುಕಿನ ಮಧ್ಯೆ ಹೊಂದಾಣಿಕೆಯ ಕೊರತೆ. ಎರಡನ್ನೂ ಸಮಾನವಾಗಿ ನಿಭಾಯಿಸಿ. ಯಾವುದನ್ನೂ ಕಡೆಗಣಿಸಬೇಡಿ.

ತುಲಾ ಕೆಲವು ದಿನಗಳ ಕಠಿಣ ಶ್ರಮಕ್ಕೆ ಸೂಕ್ತ ಫಲ ಸಿಗಲಿದೆ. ಸಂತೃಪ್ತಿ. ವಿದ್ಯಾರ್ಥಿಗಳಿಂದ ಕಠಿಣ ಪರಿಶ್ರಮ ಅಗತ್ಯ. ನಿರ್ಲಕ್ಷ್ಯ ಸಲ್ಲದು.

ವೃಶ್ಚಿಕ ಎಲ್ಲರ ಮಾತೂ ಕೇಳುತ್ತಾ ಹೋದರೆ ನಿಮ್ಮ ಮೇಲಿನ ಒತ್ತಡ ಹೆಚ್ಚಲಿದೆ. ನೀವೇ ವಿವೇಕಯುತವಾಗಿ ಯೋಚಿಸಿ. ಮನೆಯಲ್ಲಿ ಸೌಹಾರ್ದ ಪರಿಸರ.

ಧನು ಸಂತೋಷ ಹೆಚ್ಚಿಸುವ ದಿನ. ಅದೃಷ್ಟ ನಿಮ್ಮ ಜತೆಗಿದೆ. ಕಾಡುತ್ತಿದ್ದ ಸಮಸ್ಯೆ ಪರಿಹಾರ. ಆಪ್ತರ ಜತೆಗಿನ ಭಿನ್ನಮತ ನಿವಾರಣೆ. ವೆಚ್ಚ ಅಧಿಕ.

ಮಕರ ಪ್ರಗತಿಪರ ದಿನ. ದೃಢಚಿತ್ತದಿಂದ ಕೆಲಸ ನಿರ್ವಹಿಸಿ. ಉತ್ತಮ ಫಲ ಖಂಡಿತ. ಆರ್ಥಿಕ ಸ್ಥಿತಿ ತೃಪ್ತಿಕರ. ದಂಪತಿ ಮಧ್ಯೆ ವಿರಸ ಉಂಟಾದೀತು.

ಕುಂಭ ಆರ್ಥಿಕ ಲಾಭ. ಉದ್ಯಮದಲ್ಲಿ ಯಶಸ್ಸು. ವಯಸ್ಸಾದವರು ಆರೋಗ್ಯದ ಕಡೆ ಹೆಚ್ಚು ಗಮನ ಕೊಡಿ. ಕೌಟುಂಬಿಕ ಸಾಮರಸ್ಯ.

ಮೀನ ಗ್ರಹಗತಿ ಒಳಿತನ್ನು ಸೂಚಿಸುತ್ತಿದೆ. ವೃತ್ತಿಯಲ್ಲಿ ಉನ್ನತಿ. ನಿರುದ್ಯೋಗಿಗಳಿಗೆ ಉದ್ಯೋಗವಕಾಶ. ಪ್ರೀತಿ, ಸ್ನೇಹದಲ್ಲಿ ವಿರಸ ಮಾಯ, ಸಮರಸತೆ ಬೆಳೆಯಲಿದೆ.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 5,3,7,1

ಆ್ಯಸಿಡ್ ದಾಳಿ: ಸಂತ್ರಸ್ತರಿಗೆ ಸರ್ಕಾರದ ಬೆಂಬಲ | ಉತ್ತರಿಸಿದ ಸಚಿವ

₹50 ಸಾವಿರ ಮಾಸಾಶನ

ವಿಧಾನ ಪರಿಷತ್: ರಾಜ್ಯದಲ್ಲಿ ಆ್ಯಸಿಡ್ ದಾಳಿಗೊಳಗಾದವರು ಜೀವಂತ ಶವವಾಗಿದ್ದಾರೆ. ಹೆತ್ತ ಮಕ್ಕಳೇ ಅವರನ್ನು ಹೊರಗಟ್ಟುತ್ತಿದ್ದಾರೆ. ಸರ್ಕಾರದಿಂದ ಮನೆಯೂ ಸಿಕ್ಕಿಲ್ಲ, ಮನೆ ಬಾಡಿಗೆ ನೀಡಲು ಯಾರೂ ಮುಂದೆ ಬರುತ್ತಿಲ್ಲ, ಅನಿವಾರ್ಯತೆಯಿಂದ ಅವರು ಆತ್ಮಹತ್ಯೆಯ ಹಾದಿ ತುಳಿದರೆ ಅದಕ್ಕೆ ಸರ್ಕಾರವೇ ಹೊಣೆ ಎಂದು ಸದಸ್ಯ ಶಿವಕುಮಾರ್ ಕೆ. ಮೇಲ್ಮನೆಗೆ ಪ್ರಸ್ತಾಪಿಸಿದರು.

ಗಮನ ಸೆಳೆಯುವ ಸೂಚನೆಗಳ ಅಡಿ ಆ್ಯಸಿಡ್ ದಾಳಿಗೊಳಗಾದ ಸಂತ್ರಸ್ತೆಯರಿಗೆ ವೈದ್ಯಕೀಯ ಚಿಕಿತ್ಸೆ, ಮಾಸಿಕ ಪರಿಹಾರ, ವೇತನ, ವಾಸಸ್ಥಳ ವಸತಿ ಸೌಲಭ್ಯ, ಸರ್ಕಾರಿ ಉದ್ಯೋಗ ಮತ್ತು ಮೀಸಲಾತಿ ಒದಗಿಸುವ ಕುರಿತು ವಿಷಯ ಪ್ರಸ್ತಾಪಿಸಿದ ಅವರು, ರಾಜ್ಯದಲ್ಲಿ ಆ್ಯಸಿಡ್ ದಾಳಿಗೊಳಗಾಗಿರುವ 169 ಜನ ಹೆಣ್ಣು ಮಕ್ಕಳ ಜೀವಂತ ನರಕ ಅನುಭವಿಸುತ್ತಿದ್ದಾರೆ. ಪ್ರೀತಿ, ಪ್ರೇಮ ನಿರಾಕರಣೆ, ದ್ವೇಷ ಮತ್ತಿತರೆ ಕಾರಣದಿಂದ ರಾಜ್ಯದಲ್ಲಿ 169 ಜನ ಹೆಣ್ಣು ಮಕ್ಕಳು ಆ್ಯಸಿಡ್ ದಾಳಿಗೆ ಒಳಗಾಗಿದ್ದಾರೆ. ಬಹುತೇಕರ ಮುಖ ಅತ್ಯಂತ ವಿರೂಪವಾಗಿದೆ. ಅನೇಕರಿಗೆ ತಲೆಯಲ್ಲಿ ಕೂದಲಿಲ್ಲ, ಲಕ್ಷಾಂತರ ರೂ. ಖರ್ಚು ಮಾಡಿ 10 ರಿಂದ 15 ಬಾರಿ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಂಡಿದ್ದರೂ, ಅವರ ಮುಖ ನೋಡುವ ಸ್ಥಿತಿಯಲ್ಲಿಲ್ಲ ಎಂದು ಹೇಳಿದರು.

ಈ ಕೂಡಲೇ ಸರ್ಕಾರ ಸಂತ್ರಸ್ತರಿಗೆ ನೀಡುವ ಮಾಶಾಸನವನ್ನು 10 ರಿಂದ 15 ಸಾವಿರ ರೂ. ಗೆ ಹೆಚ್ಚಿಸಬೇಕು. ಆ್ಯಸಿಡ್ ದಾಳಿ ಮಾಡುವ ಆರೋಪಿಗೆ 3 ರಿಂದ 4 ವರ್ಷದಲ್ಲಿ ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದರು. ಅದಕ್ಕೆ ಧ್ವನಿಗೂಡಿಸಿದ ಭಾರತಿ ಶೆಟ್ಟಿ, ಹೇಮಲತಾ ನಾಯಕ್ ಹಾಗೂ ಉಮಾಶ್ರೀ ಅವರು, ಯಾವುದೇ ತಪ್ಪಿಲ್ಲದಿದ್ದರೂ ಹೆಣ್ಣು ಮಕ್ಕಳ ಮೇಲೆ





ಸಂತ್ರಸ್ತರ ಪರ ಧ್ವನಿಗೂಡಿಸಿದ ಡಿಸಿಎಂ, ಛಲವಾದಿ
ಇದೇ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸದಸ್ಯ ಪೂಜಾರ್ ಚರ್ಚೆಯಲ್ಲಿ ಪಾಲ್ಗೊಂಡು, ಸಂತ್ರಸ್ತರ ಪರ ಧ್ವನಿಗೂಡಿಸಿದರು.

» ರಾಜ್ಯದಲ್ಲಿ 169 ಜನ ಹೆಣ್ಣು ಮಕ್ಕಳು ಆ್ಯಸಿಡ್ ದಾಳಿಗೆ ಒಳಗಾಗಿದ್ದಾರೆ

ಆಸಿಡ್ ದಾಳಿಯಾಗಿರುವುದು ಅನೇಕ ಪ್ರಕರಣಗಳಲ್ಲಿ ಕಂಡು ಬಂದಿದೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ಮೊದಲ ಬಾರಿಗೆ 3 ಸಾವಿರ ರೂ. ಮಾಶಾಸನ ನೀಡಿದ್ದರು. ನಂತರ ಅವರೇ ಅದನ್ನು 10 ಸಾವಿರ ರೂ.ಗೆ ಹೆಚ್ಚಿಸಿದ್ದರು. ಕನಿಷ್ಠ 25 ಸಾವಿರ ರೂ. ಮಾಶಾಸನ ನೀಡಬೇಕು. ಹೊರಗುತ್ತಿಗೆ ನೇಮಕಾತಿಯಲ್ಲಿ ಅವರಿಗೆ ಆದ್ಯತೆ ನೀಡಬೇಕು ಎಂದು ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಅಮಾನವೀಯ ಕೃತ್ಯದ ಸಂತ್ರಸ್ಥರಿಗೆ ನೆರವಾಗುವುದು ನಮ್ಮ ಕರ್ತವ್ಯ. ಈವರೆಗೆ ಸರ್ಕಾರದಿಂದ 59 ಜನರಿಗೆ ತಲಾ 10 ಸಾವಿರ ರೂ. ಮಾಶಾಸನ ಸಿಗುತ್ತಿದೆ. ಇನ್ನುಮುಂದೆ ಎಲ್ಲ 169 ಜನರಿಗೆ ತಲಾ 50 ಸಾವಿರ ರೂ. ಮಾಶಾಸನ ನೀಡಲಾಗುವುದು. ಜತೆಗೆ 5 ಲಕ್ಷ ರೂ. ಸಾಲವನ್ನಾಗಿ ನೀಡದೇ ಒಂದು ಬಾರಿಗೆ ಆರ್ಥಿಕ ನೆರವು ಕಲ್ಪಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರು ಮತ್ತು ಮುಖ್ಯಮಂತ್ರಿಗಳ ಮನವೊಲಿಸುವುದಾಗಿ ಭರವಸೆ ನೀಡಿದ್ದಾರೆ. ಅಲ್ಲದೇ, ಆ್ಯಸಿಡ್ ದಾಳಿ ಸಂತ್ರಸ್ತರು ಸರ್ಕಾರದ ಪರಿಹಾರ ಪಡೆಯಲು ದಾಖಲೆಗಳ ಸಲ್ಲಿಕೆಯಲ್ಲಿ ವಿನಾಯಿತಿ ನೀಡಲಾಗುವುದು ಎಂದರು.

ಅದಕ್ಕೆ ಬೆಂಬಲ ಸೂಚಿಸಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, ಕಾರ್ಮಿಕ ಇಲಾಖೆಯ ಅಸಂಘಟಿತ ಕಾರ್ಮಿಕರ ನಿಗಮದಡಿಯೂ ಸಂತ್ರಸ್ತರ ಗಂಭೀರತೆಯನ್ನು ಆಧರಿಸಿ, ಗರಿಷ್ಠ 2 ಲಕ್ಷ ರೂ. ವರೆಗೆ ಪರಿಹಾರ ನೀಡಲು ಕ್ರಮ ವಹಿಸುವುದಾಗಿ ತಿಳಿಸಿದರು.

ಎಐಗೆ ತುಳು ಪಾಠ!

ಬೆಂಗಳೂರು: ಡಿಜಿಟಲ್ ಯುಗದಲ್ಲಿ ಕೃತಕ ಬುದ್ಧಿಮತ್ತೆ ವೇಗವಾಗಿ ಅಭಿವೃದ್ಧಿಯಾಗುತ್ತಿದ್ದರೂ, ಡೇಟಾ ಕಡಿಮೆ ಇರುವ ಭಾಷೆಗಳು ತಂತ್ರಜ್ಞಾನದಿಂದ ಹಿಂದೆ ಬೀಳುತ್ತಿರುವುದು ದೊಡ್ಡ ಸವಾಲಾಗಿ ಉಳಿದಿದೆ. ಆದರೆ, ಸವಾಲಾಗಿ ತೆಗೆದುಕೊಂಡು ಕರ್ನಾಟಕದ ತುಳು ಭಾಷೆಯಲ್ಲಿ ಎಐ ಸಂಭಾಷಣೆ ನಡೆಸುವಂತೆ ಮಾಡುವ ಹೊಸ ವಿಧಾನವನ್ನು ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ.

ಸಂಶೋಧಕರಾದ ಪ್ರಥಮೇಶ್ ದೇವಾಗ ಮತ್ತು ಪರಾಸ್ ಚೋಪ್ರಾ ಅವರು ಈ ಅಧ್ಯಯನ ನಡೆಸಿದ್ದು, ''ಮೇಕಿಂಗ್ ಲಾರ್ಜ್ ಲಾಂಗ್ವೇಜ್ ಮಾಡೆಲ್ಸ್ ಸ್ಪೀಕ್ ತುಳು: ಸ್ಟ್ರಕ್ಚರ್ಡ್ ಪ್ರಾಂಪ್ಟಿಗ್ ಫಾರ್ ಆ್ಯನ್ ಎಕ್ಟ್ರೀಮ್ಲಿ ಲೋ ರಿಸೋರ್ಸ್ ಲಾಂಗ್ವೇಜ್'' ಎಂಬ ಶೀರ್ಷಿಕೆಯಲ್ಲಿ ಸಂಶೋಧನಾ ಪ್ರಬಂಧ ಪ್ರಕಟವಾಗಿದೆ. ತುಳು ಭಾಷೆಗೆ ಸುಮಾರು 20 ಲಕ್ಷಕ್ಕೂ ಹೆಚ್ಚು ಭಾಷಿಕರು ಇದ್ದರೂ ಡಿಜಿಟಲ್ ಮಾಹಿತಿಯ ಕೊರತೆ ಇರುವುದರಿಂದ ದೊಡ್ಡ ಭಾಷಾ ಮಾದರಿಗಳು (ಎಲ್‌ಎಲ್‌ಎಂ) ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಸಂಶೋಧಕರು ''ಸ್ಟ್ರಕ್ಚರ್ಡ್ ಪ್ರಾಂಪ್ಟಿಂಗ್'' ಎಂಬ ವಿಧಾನವನ್ನು ಬಳಸಿದ್ದಾರೆ. ಈ ವಿಧಾನದಲ್ಲಿ ಭಾಷೆಯ ವ್ಯಾಕರಣ ನಿಯಮಗಳು, ತಪ್ಪು ಪದಗಳನ್ನು ತಪ್ಪಿಸಲು ನಿಯಂತ್ರಣ ಸೂಚನೆಗಳು, ಹಾಗೂ ಉದಾಹರಣೆಗಳ ಮೂಲಕ ಮಾದರಿಯನ್ನು ಮಾರ್ಗದರ್ಶಿಸುವ ಕ್ರಮವನ್ನು ಬಳಸಲಾಗಿದೆ.

ವ್ಯಾಕರಣ ನಿಖರತೆ

ಈ ವಿಧಾನವನ್ನು ಜಗತ್ತಿನ ಪ್ರಮುಖ ಎಐ ಮಾದರಿಗಳಾದ ಚಾಟ್ ಜಿಪಿಟಿ, ಜೆಮಿನಿ ಮತ್ತು ಎಲ್‌ಎಲ್‌ಎಎಂಎ ಮೇಲೆ ಪರೀಕ್ಷಿಸಲಾಗಿದೆ. ಇದರಲ್ಲಿ ಬಂದ ಫಲಿತಾಂಶದ ಪ್ರಕಾರ, ತುಳು ಭಾಷೆಯ ವ್ಯಾಕರಣ ನಿಖರತೆ ಸುಮಾರು ಶೇ.85 ಮಟ್ಟಕ್ಕೆ ಏರಿದರೆ, ತುಳು ಬದಲು ಕನ್ನಡ ಪದಗಳು ಬಳಕೆಯಾಗುವ ಪ್ರಮಾಣ ಶೇ.80ರಿಂದ ಕೇವಲ ಶೇ.5ಕ್ಕೆ ಇಳಿದಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

ಈ ಪ್ರಯೋಗವು ಭವಿಷ್ಯದಲ್ಲಿ ತುಳು ಮಾತ್ರವಲ್ಲ, ಡೇಟಾ ಕಡಿಮೆ ಇರುವ ಅನೇಕ ಭಾರತೀಯ ಭಾಷೆಗಳಿಗೂ ಎಐ ತಂತ್ರಜ್ಞಾನವನ್ನು ತಲುಪಿಸಲು ಮಹತ್ವದ ಹೆಜ್ಜೆಯಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.


ಡೇಟಾ ಇಲ್ಲದ ಭಾಷೆಯನ್ನೂ ಮಾತನಾಡುವಂತೆ ಮಾಡಿದ ಹೊಸ ಸಂಶೋಧನೆ



- ತುಳು ಭಾಷೆಯಲ್ಲಿ ಎಐ ಪ್ರಯೋಗ
- ಡೇಟಾ ಇಲ್ಲದ ಭಾಷೆಗೆ ಹೊಸ ತಂತ್ರ
- ಇಬ್ಬರು ಸಂಶೋಧಕರ ಅಧ್ಯಯನ
- ಸ್ಟ್ರಕ್ಚರ್ಡ್ ಪ್ರಾಂಪ್ಟಿಂಗ್ ವಿಧಾನ ಬಳಕೆ

ಪ್ರತಿಪಕ್ಷದ ವರ್ತನೆ ಬೇಜವಾಬ್ದಾರಿಯುತ: ಶಾ

ಪುಟ 9➜ **ಪ್ರತಿಪಕ್ಷದ ವರ್ತನೆಯೇ ಕಾರಣ:** ಗೊಗೊಯ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅಮಿತ್ ಶಾ, ರಿಜಿಜು ಹೆಚ್ಚು ಬಾರಿ ಮಧ್ಯಪ್ರವೇಶ ಮಾಡಿದ್ದಾರೆ ಎಂಬುದನ್ನು ಒಪ್ಪಿಕೊಂಡರೂ, ಅದಕ್ಕೆ ಕಾರಣ ಪ್ರತಿಪಕ್ಷದ ವರ್ತನೆ ಎಂದು ಹೇಳಿದರು. ಹೌದು, ರಿಜಿಜು ಅವರು ಹೆಚ್ಚು ಬಾರಿ ಮಧ್ಯಪ್ರವೇಶ ಮಾಡಿದ್ದಾರೆ. ಆದರೆ ಇಷ್ಟು ಬೇಜವಾಬ್ದಾರಿಯುತ ಪ್ರತಿಪಕ್ಷವನ್ನು ನಾವು ಹಿಂದೆ ಕಂಡಿಲ್ಲ ಎಂದು ಶಾ ಹೇಳಿದರು. ಸಂಸತ್ತಿನ ನಿಯಮಗಳನ್ನು ಉಲ್ಲಂಘಿಸಿದಾಗ ಮಧ್ಯಪ್ರವೇಶ ಮಾಡುವುದು ಅಗತ್ಯವಾಗುತ್ತದೆ ಎಂದು ಶಾ ಸ್ಪಷ್ಟಪಡಿಸಿದರು.



ನಿರ್ಣಯಕ್ಕೆ 50ಕ್ಕೂ ಹೆಚ್ಚು ಸಂಸದರ ಬೆಂಬಲ: ಲೋಕಸಭಾ ಸ್ಪೀಕರ್ ಓಂ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಕಾಂಗ್ರೆಸ್ ಸಂಸದ ಮೊಹಮ್ಮದ್ ಜಾವೇದ್ ಮಂಡಿಸಿದರು. ಈ ನಿರ್ಣಯಕ್ಕೆ 50ಕ್ಕೂ ಹೆಚ್ಚು ಸಂಸದರು ಬೆಂಬಲ ಸೂಚಿಸಿದ ನಂತರ ಸಭಾಧ್ಯಕ್ಷ ಸ್ಥಾನದಲ್ಲಿದ್ದ ಬಿಜೆಪಿ ಸಂಸದ ಜಗದಾಂಬಿಕಾ ಪಾಲ್ ಚರ್ಚೆಗೆ ಅನುಮತಿ ನೀಡಿದರು. ಈ ವಿಷಯದ ಚರ್ಚೆಗೆ ಒಟ್ಟು 10 ಗಂಟೆಗಳ ಸಮಯ ನೀಡಲಾಗಿದೆ ಎಂದು ಪಾಲ್ ತಿಳಿಸಿದ್ದಾರೆ.

ಪ್ರತಿಪಕ್ಷದ ಆರೋಪಗಳೇನು?: ಒಟ್ಟು 118 ಪ್ರತಿಪಕ್ಷ ಸಂಸದರು ಈ ನಿರ್ಣಯಕ್ಕೆ ಸಹಿ ಹಾಕಿದ್ದಾರೆ. ಸ್ಪೀಕರ್ ಪಕ್ಷಪಾತಿ ರೀತಿಯಲ್ಲಿ ನಡೆದುಕೊಂಡಿದ್ದಾರೆ ಎಂಬ ಆರೋಪವನ್ನು ವಿಪಕ್ಷ ಸದಸ್ಯರು ಮಾಡಿದ್ದಾರೆ. ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ಲೋಕಸಭೆಯಲ್ಲಿ ಮಾತನಾಡಲು ಅವಕಾಶ ನೀಡಲಾಗಲಿಲ್ಲ ಎಂಬುದು ಪ್ರಮುಖ ಕಾರಣಗಳಲ್ಲಿ ಒಂದಾಗಿದೆ. ಗೊಗೊಯ್ ತಮ್ಮ ಭಾಷಣದಲ್ಲಿ, ಈ ನಿರ್ಣಯವನ್ನು ವೈಯಕ್ತಿಕ ವೈಮನಸ್ಸಿನಿಂದ ತರಲಾಗಿಲ್ಲ, ಸಂಸದೀಯ ಸದನದ ಗೌರವವನ್ನು ಕಾಪಾಡುವ ಜವಾಬ್ದಾರಿಯ ಭಾಗವಾಗಿ ಈ ನಿರ್ಣಯವನ್ನು ತರಲಾಗಿದೆ ಎಂದು ಹೇಳಿದರು.

ಉಪಸಭಾಪತಿ ನೇಮಿಸಲು ಆಗ್ರಹ: ಇದೇ ವೇಳೆ, ಎಐಎಂಐಎಂ ಸಂಸದ ಅಸಾದುದ್ದೀನ್ ಓವೈಸಿ, ಲೋಕಸಭೆ ಉಪಸಭಾಪತಿಯ ನೇಮಕ ಕುರಿತು ಪ್ರಸ್ತಾಪಿಸಿದರು. ಕೇಂದ್ರ ಸರ್ಕಾರವು ಕಳೆದ ಹಲವಾರು ವರ್ಷಗಳಿಂದ ಉಪಸಭಾಪತಿಯನ್ನು ನೇಮಿಸಿಲ್ಲ, ಇದು ಸಾಂವಿಧಾನಿಕ ನಿರ್ವಾತವನ್ನು ಸೃಷ್ಟಿಸಿದೆ ಎಂದು ಕಾಂಗ್ರೆಸ್ ಸಂಸದ ಕೆ.ಸಿ.ವೇಣುಗೋಪಾಲ್ ಹೇಳಿದರು. ಪೀಠದಲ್ಲಿ ಕುಳಿತಿದ್ದ ಜಗದಾಂಬಿಕಾ ಪಾಲ್ ಅವರ ಅಧಿಕಾರ ವ್ಯಾಪ್ತಿಯನ್ನು ಪ್ರಶ್ನಿಸಿದ ಅವರು, ನಿಮ್ಮನ್ನು ಲೋಕಸಭಾ ಸ್ಪೀಕರ್ ನೇಮಿಸಿದ್ದಾರೆ. ಸ್ಪೀಕರ್ ವಿರುದ್ಧದ ನಿರ್ಣಯದ ಚರ್ಚೆಯನ್ನು ಉಪಸಭಾಪತಿಗಳ ಅಧ್ಯಕ್ಷತೆಯಲ್ಲಿ ನಡೆಯಬೇಕಲ್ಲವೇ ಎಂದು ಪ್ರಶ್ನಿಸಿದರು.

ವಿಪಕ್ಷಗಳ ಆಕ್ಷೇಪಣೆಗಳಿಗೆ ತಿರುಗೇಟು ನೀಡಿದ ಬಿಜೆಪಿ ಸಂಸದರಾದ ರವಿಶಂಕರ್ ಪ್ರಸಾದ್ ಮತ್ತು ನಿಶಿಕಾಂತ್ ದುಬೆ, ಈ ಆಕ್ಷೇಪವೇ ಆಧಾರರಹಿತ ಎಂದರು. ಕೇಂದ್ರ ಸಂಸದೀಯ ಸಚಿವ ಕಿರಣ್ ರಿಜಿಜು ಮಾತನಾಡಿ, ಉಪ ಸಭಾಪತಿಗಳ ವಿಷಯವನ್ನು ಚರ್ಚಿಸುವ ಅಗತ್ಯವೇ ಇಲ್ಲ ಎಂದರು.

ಬಜೆಟ್‌ನಲ್ಲಿ ಜನರಿಗೆ ಅನ್ಯಾಯ: ಅಶೋಕ

ಪುಟ 9➜ ಹಿಂದಿನ ಯೋಜನೆಗಳ ಪ್ರಗತಿಯನ್ನು ಹೇಳದೆ ಸಾಲ ಮಾತ್ರ ಮಾಡಿದ್ದಾರೆ ಎಂದು ಟೀಕಿಸಿದರು.



ಈ ಬಾರಿಯ ಬಜೆಟ್‌ನಲ್ಲಿ 11 ಜಿ ಎಂದು ಉಲ್ಲೇಖಿಸಿದ್ದು, ನಗರಾಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದ್ದೇವೆ ಎಂದಿದ್ದಾರೆ. ಆದರೆ ಆಂಧ್ರಪ್ರದೇಶ ಸಿಎಂ ರೇವಂತ್ ರೆಡ್ಡಿ ಬೆಂಗಳೂರನ್ನು ತೆಗಳಿದ್ದಾರೆ. ಬೆಂಗಳೂರಿನ ಯಾವುದೇ ರಸ್ತೆಯು ಕಸಮುಕ್ತವಾಗಿಲ್ಲ, 10 ಸಾವಿರ ರೂ. ಲಂಚ ಪಡೆದು ಇ ಖಾತಾ ಮಾಡುತ್ತಿದ್ದಾರೆ. ಜನರ ಹೆಸರಿನ ಖಾತೆಯನ್ನು ಮರಳಿ ಜನರ ಹೆಸರಿಗೇ ಮಾಡಿಸಿಕೊಡುತ್ತಿದ್ದಾರೆ. ಇದರಿಂದಾಗಿ ಅಧಿಕಾರಿಗಳಿಗೆ ಲಾಭವಾಗಿದೆ ಎಂದು ಆರೋಪಿಸಿದರು.

ಅವೈಜ್ಞಾನಿಕ ಗ್ಯಾರಂಟಿಗಳಿಂದ ಸಾಲ: 2018ರಿಂದ 2023ರವರೆಗೆ ಜಿಎಸ್‌ಡಿಪಿ ಬೆಳವಣಿಗೆ ದರ ಸರಾಸರಿ ಶೇ.12.16ರಷ್ಟು ಇತ್ತು. ಈಗ ಶೇ.11.51ಕ್ಕೆ ಬಂದಿದೆ. ಕೋವಿಡ್ ಸಮಯದ ಹೊರತುಪಡಿಸಿ ಬಿಜೆಪಿ ಅವಧಿಯಲ್ಲಿ ಎಂದೂ ಹೀಗೆ ಕುಸಿತವಾಗಿರಲಿಲ್ಲ. ಅವೈಜ್ಞಾನಿಕ ಗ್ಯಾರಂಟಿಗಳಿಂದ 2024ರಲ್ಲಿ 92,025 ಕೋಟಿ ರೂ. 2025ರಲ್ಲಿ 1.16 ಲಕ್ಷ ಕೋಟಿ ರೂ. ಸಾಲ ಮಾಡಲಾಗಿದೆ. 3 ವರ್ಷಗಳಲ್ಲಿ 2,89,025 ಕೋಟಿ ರೂ. ಸಾಲ ಮಾಡಲಾಗಿದೆ. ಸಿದ್ದರಾಮಯ್ಯ ಅವರೇ ಮುಂದುವರಿದರೆ ಒಟ್ಟು 6 ಲಕ್ಷ ಕೋಟಿ ರೂ. ಆಗಲಿದೆ. ಇದು ಸಿದ್ದರಾಮಯ್ಯ ಅವರದ್ದೇ ಪ್ರತ್ಯೇಕ ದಾಖಲೆ ಎಂದರು.

ಕಡಿಮೆ ವೆಚ್ಚ: ಕಳೆದ ಬಜೆಟ್‌ನಲ್ಲಿ ಶೇ.59.43ರಷ್ಟು ಹಣವನ್ನು ಮಾತ್ರ ಈವರೆಗೆ ಖರ್ಚು ಮಾಡಲಾಗಿದೆ. ಉಳಿದ 41ರಷ್ಟು ಹಣ ಬಳಸಿಯೇ ಇಲ್ಲ. ಬಜೆಟ್ ಗಾತ್ರ ದೊಡ್ಡದಿದ್ದರೂ ಅನುದಾನ ಚಿಕ್ಕದಾಗಿದೆ. ಕಳೆದ ವರ್ಷದ ವೆಚ್ಚಕ್ಕೆ ಹೋಲಿಸಿದರೆ ಶೇ.3.44ರಷ್ಟು ಕಡಿಮೆಯಾಗಿದೆ. ಇಲಾಖೆಗಳಿಗೆ 2,44,465 ಕೋಟಿ ರೂ. ಹಂಚಲಾಗಿದೆ. ಅದರಲ್ಲಿ 2,07,954 ಕೋಟಿ ರೂ. ಮಾತ್ರ ಖರ್ಚು ಮಾಡಲಾಗಿದೆ. 36,510 ಕೋಟಿ ರೂ. ಇನ್ನೂ ಖರ್ಚು ಮಾಡಿಲ್ಲ. ಕಳೆದ ವರ್ಷಕ್ಕೆ ಹೋಲಿಸಿದರೆ 5,239.10 ಕೋಟಿ ರೂ. ಕಡಿಮೆ ವೆಚ್ಚ ಮಾಡಲಾಗಿದೆ ಅಂಕಿ ಅಂಶಗಳನ್ನು ಮುಂದಿಟ್ಟರು.

ಎಸ್‌ಸಿಪಿ, ಟಿಎಸ್‌ಪಿ ಹಣ ವರ್ಗಾವಣೆ

ಎಸ್‌ಸಿಪಿ, ಟಿಎಸ್‌ಪಿಯ ಹಣದಲ್ಲಿ 2026-27ರಲ್ಲಿ ಗೃಹಲಕ್ಷ್ಮಿಗೆ 8296 ಕೋಟಿ ರೂ., ಶಕ್ತಿಗೆ 1,537 ಕೋಟಿ ರೂ. ಅನ್ನಭಾಗ್ಯಕ್ಕೆ 1,612 ಕೋಟಿ ರೂ. ಗೃಹಜ್ಯೋತಿಗೆ 2,591 ಕೋಟಿ ರೂ. ಯುವನಿಧಿಗೆ 1,062 ಸೇರಿ ಒಟ್ಟು 14,198 ಕೋಟಿ ರೂ. ಹಣವನ್ನು ವರ್ಗಾವಣೆ ಮಾಡಲಾಗಿದೆ. ಒಟ್ಟಾರೆಯಾಗಿ 53,059.45 ಕೋಟಿ ರೂ. ಹಣ ವರ್ಗಾಯಿಸಲಾಗಿದೆ. ಗ್ಯಾರಂಟಿ ಹೊರತುಪಡಿಸಿ ಯೋಜನೆಗಳಿಗೆ 30 ಸಾವಿರ ಕೋಟಿ ರೂ. ಹಣ ದುರ್ಬಳಕೆಯಾಗಿದೆ ಎಂದು ಗಮನ ಅಶೋಕ ಗಮನ ಸೆಳೆದರು.

ಕೇಂದ್ರದ ನೆರವು

ಕೇಂದ್ರ ಸರ್ಕಾರದಿಂದ 63,049 ಕೋಟಿ ರೂ. ಅನುದಾನ ಬಂದಿದೆ. 50 ವರ್ಷಕ್ಕೆ ಬಡ್ಡಿ ರಹಿತ ಸಾಲ ನೀಡಲಾಗಿದೆ. 8191 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ. ಭಾರತ್ ಮಾಲ ಯೋಜನೆಯಲ್ಲಿ ಕರ್ನಾಟಕಕ್ಕೆ 63,304 ಕೋಟಿ ರೂ. ವೆಚ್ಚದ ಕಾರಿಡಾರ್ ಸಿಕ್ಕಿದೆ. ಮೋದಿ ಅವರಿಂದ ಬೋಯಿಂಗ್ ಸಂಸ್ಥೆ, ಎಚ್‌ಎಎಲ್ ಫ್ಯಾಕ್ಟರಿ ಸಿಕ್ಕಿದೆ. ಕೇಂದ್ರ ಸರ್ಕಾರ ಇಷ್ಟೊಂದು ಹಣ ನೀಡಿದ್ದರೂ ಆರೋಪ ಮಾಡಲಾಗುತ್ತಿದೆ ಅಶೋಕ ಹೇಳಿದರು.

ಯುಸಿಸಿ ಸಮಯ ಬಂದಿದೆ

ಪುಟ 9➜ 1937ರ ಷರಿಯತ್ ಕಾಯ್ದೆ ತೆಗೆದುಹಾಕಿದರೆ, ನಂತರ ಏನು ಆಗುತ್ತದೆ? ಅದು ಅನಗತ್ಯ ಶೂನ್ಯತೆ ಉಂಟುಮಾಡುವುದಿಲ್ಲವೇ? ಎಂದು ಅರ್ಜಿದಾರರ ಪರ ವಕೀಲ ಪ್ರಶಾಂತ್ ಭೂಷಣ್ ಅವರನ್ನು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಪ್ರಶ್ನಿಸಿದರು.

ಭೇದಭಾವದ ವಿಚಾರದಲ್ಲಿ ನಿಮ್ಮ ಬಳಿ ಬಹಳ ಉತ್ತಮ ಪ್ರಕರಣ ಇದೆ. ಆದರೆ ಇದನ್ನು ಶಾಸಕಾಂಗದ ವಿವೇಕಕ್ಕೆ ಬಿಟ್ಟರೆ ಉತ್ತಮವಲ್ಲವೇ? ನಿರ್ದೇಶಕ ತತ್ವಗಳ ಪ್ರಕಾರ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರುವ ಅಧಿಕಾರ ಶಾಸನಸಭೆಗಿದೆ ಎಂದು ಸಿಜೆಐ ಹೇಳಿದರು.

ಒಬ್ಬ ಪುರುಷನಿಗೆ ಒಬ್ಬ ಹೆಂಡತಿ ಎಂಬ ನಿಯಮ ಎಲ್ಲ ಸಮುದಾಯಗಳಿಗೂ ಸಮಾನವಾಗಿ ಅನ್ವಯವಾಗುತ್ತಿಲ್ಲ. ಆದರೆ ಅದರಿಂದಲೇ ಎಲ್ಲಾ ದ್ವಿವಿವಾಹಗಳನ್ನು ಕೋರ್ಟ್ ಅಸಂವಿಧಾನಿಕ ಎಂದು ಘೋಷಿಸಬಹುದೇ? ನಿರ್ದೇಶಕ ತತ್ವಗಳನ್ನು ಜಾರಿಗೆ ತರುವುದು ಶಾಸಕಾಂಗದ ಅಧಿಕಾರ. ಆದ್ದರಿಂದ ಈ ವಿಷಯವನ್ನು ಶಾಸನಸಭೆಯ ವಿವೇಕಕ್ಕೆ ಬಿಡುವುದು ಉತ್ತಮ ಎಂದು ನ್ಯಾ. ಬಾಗ್ಚಿ ಮತ್ತಷ್ಟು ಹೇಳಿದರು. ಈ ನ್ಯಾಯಾಲಯವು ಹಲವು ಬಾರಿ ಶಾಸನಸಭೆಗೆ ಯುಸಿಸಿ ಜಾರಿಗೆ ತರಲು ಶಿಫಾರಸು ಮಾಡಿದೆ ಎಂದು ಕೂಡ ಅವರು ಹೇಳಿದರು.

ಇದಕ್ಕೂ ಮುನ್ನ ಭೂಷಣ್ ಅವರು, ಮುಸ್ಲಿಂ ಮಹಿಳೆಯರಿಗೆ ಪುರುಷರಂತೆ ಸಮಾನ ವಾರಸುದಾರಿಕೆ ಹಕ್ಕುಗಳಿವೆ ಎಂದು ಕೋರ್ಟ್ ಘೋಷಿಸಬಹುದು ಎಂದು ವಾದಿಸಿದರು. 1937ರ ಮುಸ್ಲಿಂ ವೈಯಕ್ತಿಕ ಕಾನೂನು(ಷರಿಯತ್‌ಯತ್) ಅಪ್ಲಿಕೇಷನ್ ಕಾಯ್ದೆ ರದ್ದುಪಡಿಸಿದರೆ ಭಾರತೀಯ ಉತ್ತರಾಧಿಕಾರ ಕಾಯ್ದೆ ಅನ್ವಯವಾಗಬಹುದು ಎಂದು ಅವರು ಹೇಳಿದರು.

ಈ ವೇಳೆ ಪೀಠವು, ಕೋರ್ಟ್ ವೈಯಕ್ತಿಕ ಧಾರ್ಮಿಕ ಕಾನೂನುಗಳ ಸಂವಿಧಾನಿಕ ಸಿಂಧುತ್ವವನ್ನು ಪರಿಶೀಲಿಸಬಹುದೇ ಎಂಬ ಪ್ರಶ್ನೆಯನ್ನು ಎತ್ತಿತು. 1951ರ ಬಾಂಬೆ ಹೈಕೋರ್ಟ್‌ನ ಪ್ರಸಿದ್ಧ ನರಸು ಅಪ್ಪಾ ಮಾಳಿ ಪ್ರಕರಣವನ್ನು ಉಲ್ಲೇಖಿಸಿ, ವೈಯಕ್ತಿಕ ಕಾನೂನುಗಳು ಸಂವಿಧಾನದ ಆರ್ಟಿಕಲ್ 13 ಅನ್ವಯ ಕಾನೂನು ಎಂದು ಪರಿಗಣಿಸಲಾಗುವುದಿಲ್ಲ, ಆದ್ದರಿಂದ ಅವುಗಳನ್ನು ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ಪ್ರಶ್ನಿಸಲು ಸಾಧ್ಯವಿಲ್ಲ ಎಂದು ಹೇಳಿತು. ಇದಕ್ಕೆ ಪ್ರತಿಯಾಗಿ ಭೂಷಣ್ ಅವರು 2017ರಲ್ಲಿ ಸುಪ್ರೀಂ ಕೋರ್ಟ್ ತ್ರಿವಳಿ ತಲಾಖ್ ಪದ್ಧತಿಯನ್ನು ಅಸಂವಿಧಾನಿಕ ಎಂದು ಘೋಷಿಸಿದ್ದನ್ನು ನೆನಪಿಸಿದರು.

ಇನ್ನಷ್ಟು ಅಧ್ಯಯನ ಮಾಡಿ, ಹೆಚ್ಚಿನ ಉಲ್ಲೇಖಗಳು ಮತ್ತು ಪರ್ಯಾಯ ಪರಿಹಾರಗಳನ್ನು ನೀಡಿ. 1937ರ ಕಾಯ್ದೆಯಿಂದ ಹೊರಬರಲು ಬಯಸುವ ಕೆಲವು ಮುಸ್ಲಿಂ ಮಹಿಳೆಯರು ಮುಂದೆ ಬಂದರೆ ನ್ಯಾಯಾಂಗದ ಹಸ್ತಕ್ಷೇಪ ಸೂಕ್ತವಾಗಬಹುದು ಎಂದು ಪೀಠವು ಅಭಿಪ್ರಾಯಪಟ್ಟಿತು. ಅರ್ಜಿಯನ್ನು ತಿದ್ದುಪಡಿ ಮಾಡಲು ಅನುಮತಿ ನೀಡಿ, ನಾಲ್ಕು ವಾರಗಳ ನಂತರ ಮುಂದಿನ ವಿಚಾರಣೆ ನಡೆಸಲಾಗುತ್ತದೆ ಎಂದು ನ್ಯಾಯಪೀಠ ಹೇಳಿದೆ.

ಕೆಪಿಸಿಸಿ ಅಧ್ಯಕ್ಷ ಡಿಕೆಶಿಗೆ ಶುಭ ಹಾರೈಸಿದ ಸಿಎಂ

ಪುಟ 9➜ ವಿರೋಧ ಪಕ್ಷವಾದ ಬಿಜೆಪಿ ಸುಳ್ಳು ಪ್ರಕರಣಗಳನ್ನು ಹಾಕಿ ಹಲವು ಬಾರೀ ಕಿರುಕಳ ನೀಡಿದರೂ, ಶಿವಕುಮಾರ್ ಅವರು ಮಣಿಯದೆ ಪಕ್ಷಕ್ಕೆ ನಿಷ್ಠರಾಗಿ ಉಳಿದಿರುವುದು ಕಾಂಗ್ರೆಸ್ ಬಗ್ಗೆ ಅವರಲ್ಲಿರುವ ರಾಜಿಯಿಲ್ಲದ ನಿಷ್ಠೆಗೆ ಸಾಕ್ಷಿಯಾಗಿದೆ. ಇದು ಕಾಂಗ್ರೆಸ್‌ನ ಲಕ್ಷಾಂತರ ಕಾರ್ಯಕರ್ತರಿಗೆ ಸ್ಫೂರ್ತಿದಾಯಕ ನಡವಳಿಕೆ ಆಗಿದೆ ಎಂದು ಹೇಳಿದ್ದಾರೆ. ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜತೆಯಲ್ಲಿ ಡಿ.ಕೆ.ಶಿವಕುಮಾರ್ ಹಗಲಿರುಳು ದುಡಿದಿದ್ದಾರೆ. ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮತ್ತೆ ಕಟ್ಟುವಲ್ಲಿ ಶಿವಕುಮಾರ್ ನನ್ನ ಹೆಗಲಿಗೆ ಹೆಗಲಾಗಿ ನಿಂತಿದ್ದಾರೆ. ನನಗಿಂತ ಕಿರಿಯರಾದ ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆಯಾಗಿದೆ. ಇದಕ್ಕಾಗಿ ನಡೆಯುವ ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡಾ ಜತೆಯಿರುತ್ತೇನೆ ಎಂದು ಪೋಸ್ಟ್‌ನಲ್ಲಿ ಹಂಚಿಕೊಂಡಿದ್ದಾರೆ.

ವೈದ್ಯರ ಮುಷ್ಕರ ವಾಪಸ್

ಪುಟ 9➜ ಮುಂದಿನ 3 ತಿಂಗಳಿನಲ್ಲಿ ಎಲ್ಲ ಬೇಡಿಕೆ ಈಡೇರಿಸುವುದಾಗಿ ತಿಳಿಸಿದೆ. ಸರ್ಕಾರದ ಈ ಭರವಸೆಗೆ ವೈದ್ಯಾಧಿಕಾರಿಗಳ ಸಂಘ ಕೂಡ ಸಮ್ಮತಿಸಿದ್ದು, ಮಾ.11ರಿಂದ ಕೈಗೊಳ್ಳಬೇಕಾದ ಮುಷ್ಕರವನ್ನು ಹಿಂಪಡೆದುಕೊಂಡಿದೆ. ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮುಖ್ಯಮಂತ್ರಿಗಳ ಸೂಚನೆ ಮೇರೆಗೆ ವೈದ್ಯಾಧಿಕಾರಿಗಳ ಜತೆಗೆ ಸಭೆ ನಡೆಸಿದ್ದೇವೆ. ಸಿಎನ್‌ಆರ್ ಮಾಡುತ್ತೇವೆ ಎಂದು ಹೇಳಿದ್ದೇವೆ. ಜೇಷ್ಠತಾಪಟ್ಟಿಯೂ ಸಿದ್ಧವಾಗಿದೆ. ಪಿಜಿ ಕೋರ್ಸ್ ಮಾಡಿ ಎಂದು ಕೇಳಿದ್ದರು ಅದಕ್ಕೂ ಒಪ್ಪಿದ್ದೇವೆ. ಉಳಿದಂತೆ ಹಲವು ವಿಚಾರಗಳನ್ನು ಚರ್ಚಿಸಿ, ತೀರ್ಮಾನ ಮಾಡುತ್ತೇವೆ ಎಂದರು.

ಪಶ್ಚಿಮ ಬಂಗಾಳಕ್ಕೆ ತರಾಟೆ

ಪುಟ 9➜ ನಿಮಗೆ ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಂಬಿಕೆ ಇಲ್ಲವೆಂದು ನಿಮ್ಮ ಅರ್ಜಿ ನೋಡಿದರೆ ತಿಳಿಯುತ್ತದೆ. ನ್ಯಾಯಾಂಗ ಅಧಿಕಾರಿಗಳನ್ನು ಯಾರೂ ಪ್ರಶ್ನಿಸುವಂತಿಲ್ಲ, ಭಾರತದ ಮುಖ್ಯ ನ್ಯಾಯಮೂರ್ತಿಯಾಗಿ ನಾನಿದನ್ನು ಸಹಿಸಲಾರೆ ಎಂದು ಎಚ್ಚರಿಕೆ ನೀಡಿದ್ದಾರೆ.

ಎಸ್‌ಐಆರ್ ಮೇಲುಸ್ತುವಾರಿ ನೋಡಿಕೊಳ್ಳುವುದಕ್ಕಾಗಿ ಸುಪ್ರೀಂ ಕೋರ್ಟ್ ನೇಮಿಸಿದ ಅಧಿಕಾರಿಗಳ ನಿಷ್ಠೆಯನ್ನು ಪ್ರಶ್ನಿಸುವ ಪ್ರಯತ್ನ ಮಾಡುವವರಿಗೆ ಸುಪ್ರೀಂ ಕೋರ್ಟ್ ನ್ಯಾಯಪೀಠ ಎಚ್ಚರಿಕೆ ನೀಡಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಆರ್.ಮಹಾದೇವನ್ ಮತ್ತು ನ್ಯಾಯಮೂರ್ತಿ ಜೊಯ್‌ಮಲ್ಯ ಬಾಗ್ಚಿ ಅವರನ್ನು ಒಳಗೊಂಡ ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠವು ನ್ಯಾಯಾಂಗ ವ್ಯವಸ್ಥೆಯ ಪ್ರಾಮಾಣಿಕತೆ ಪ್ರಶ್ನಿಸುವ ಅರ್ಜಿಗಳಿಗೆ ಛೀಮಾರಿ ಹಾಕಿದ್ದಾರೆ. ಮತದಾರ ಪಟ್ಟಿಯಿಂದ ತಮ್ಮ ಹೆಸರನ್ನು ಅಳಿಸಿಹೋಗುವ ಭಯದಿಂದ ಸಲ್ಲಿಸಿದ ಅರ್ಜಿಗಳ ಮತ್ತು ಆಕ್ಷೇಪಗಳನ್ನು ನ್ಯಾಯಾಂಗ ಅಧಿಕಾರಿಗಳು ಪರಿಶೀಲಿಸಬಾರದು ಎಂದ ಕೋರಿ ಸಲ್ಲಿಸಲಾದ ಹೊಸ ಅರ್ಜಿಯೊಂದರ ಬಗ್ಗೆ ತ್ರಿಸದಸ್ಯ ಪೀಠವು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

10.16 ಲಕ್ಷ ಅರ್ಜಿ ಪರಿಶೀಲನೆ

ಮಾ.9ರ ಸಂಜೆಯವರೆಗೆ, ಮತದಾರ ಪಟ್ಟಿಯಿಂದ ಹೆಸರು ಅಳಿಸಿಹೋಗುವ ಆತಂಕ ವ್ಯಕ್ತಪಡಿಸಿ ಸಲ್ಲಿಸಿರುವ ಸುಮಾರು 10.16 ಲಕ್ಷ ಅರ್ಜಿ ಮತ್ತು ಆಕ್ಷೇಪಣೆಗಳನ್ನು ನ್ಯಾಯಾಂಗ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ತಿಳಿಸಿದೆ. ಆನ್‌ಲೈನ್ ಪೋರ್ಟಲ್‌ನ ತಾಂತ್ರಿಕ ದೋಷಗಳನ್ನು ಶೀಘ್ರ ಪರಿಹರಿಸಲು ಸೂಚಿಸಿದೆ.

ಕಿರುಸುದ್ದಿ

ಹೊಸ ಬಸ್ ನಿಲ್ದಾಣಕ್ಕೆ ಕಿತ್ತೂರ ಚನ್ನಮ್ಮ ಹೆಸರಿಡಲು ಆಗ್ರಹ



ಹುಬ್ಬಳ್ಳಿ: ಇಲ್ಲಿಯ ಗೋಕುಲ ರಸ್ತೆಯ ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆ ಹೊಸ ಬಸ್ ನಿಲ್ದಾಣಕ್ಕೆ ವೀರ ರಾಣಿ ಕಿತ್ತೂರ ಚನ್ನಮ್ಮ ಹೆಸರು ನಾಮಕರಣ ಮಾಡಬೇಕು ಎಂದು ವೀರಶೈವ ಲಿಂಗಾಯತ ಸಮಾಜದ ಹು-ಧಾ ಘಟಕ ಶಾಸಕ ಮಹೇಶ ಟೆಂಗಿನಕಾಯಿ ಅವರಿಗೆ ಭೇಟಿ ಮಾಡಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸತೀಶ್ ನೂಲ್ವಿ, ಸುರೇಶ್ ಲಿಂಬಿಕಾಯಿ, ಸಿದ್ದಣ್ಣ ಶೆಟ್ಟರ್, ಶಾಂತೇಶ , ರವಿ ಪಾಟೀಲ್, ಶಿವಪ್ಪ ಬೆಂಗೇರಿ, ಸಿದ್ದು ಹಂಡೆದ ,ಕುಮಾರ್ ಗೌಡ , ಗಿರೀಶ ನಲ್ವಡಿ ಇದ್ದರು. ಇದೇ ಬಸ್ ನಿಲ್ದಾಣಕ್ಕೆ ಜಗಜ್ಯೋತಿ ಬಸವೇಶ್ವರ ಅವರ ಹೆಸರು ನಾಮಕರಣ ಮಾಡಬೇಕು ಎಂದು ಅಂಬಣ್ಣವರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಪದಾಧಿಕಾರಿಗಳು ಶಾಸಕ ಮಹೇಶ ಟೆಂಗಿನಕಾಯಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಮಾ.29ರಿಂದ ಭಜನಾ ಸ್ಪರ್ಧೆ

ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮೀಜಿ ಟ್ರಸ್ಟ್ ಕಮಿಟಿ ವತಿಯಿಂದ ಸಿದ್ಧಾರೂಢ ಸ್ವಾಮಿ ಜಯಂತ್ಯುತ್ಸವ ಅಂಗವಾಗಿ ಶ್ರೀ ಮಠದ ಆವರಣದಲ್ಲಿ ರಾಜ್ಯಮಟ್ಟದ 11ನೇ ಭಜನಾ ಸ್ಪರ್ಧೆಯನ್ನು ಮಾ. 29ರಿಂದ ಏ.3 ರ ವರೆಗೆ ಆಯೋಜಿಸಲಾಗಿದೆ ಎಂದು ರಾಜ್ಯ ಮಟ್ಟದ ಭಜನಾ ಸ್ಪರ್ಧೆಯ ಅಧ್ಯಕ್ಷ ಹಾಗೂ ಶ್ರೀಮಠದ ಧರ್ಮದರ್ಶಿ ಶಾಮಾನಂದ ಪೂಜೇರಿ ತಿಳಿಸಿದರು.

ಶ್ರೀ ಸಿದ್ಧಾರೂಢ ಸ್ವಾಮಿಗಳ ಮಠದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಪರ್ಧೆಯಲ್ಲಿ ಭಾಗವಹಿಸುವ ಭಜನಾ ತಂಡದವರು ಮಾ.28ರ ಒಳಗಾಗಿ ಶ್ರೀಮಠದ ಟ್ರಸ್ಟ್ ಕಮಿಟಿಯ ಕಾರ್ಯಾಲಯದಲ್ಲಿ ಅಥವಾ ವಾಟ್ಸಪ್ ಸಂಖ್ಯೆ 9738681660 ಮೂಲಕವೂ ಹೆಸರು ನೋಂದಾಯಿಸಿಕೊಳ್ಳಬಹುದು ಎಂದರು.

ಮೂರು ಪದ್ಯಗಳನ್ನು ಹಾಡುವ ಅವಕಾಶ ಪ್ರತಿಯೊಂದು ತಂಡದವರಿಗೆ ನೀಡಲಾಗುವುದು. ಮೂರೂ ಪದ್ಯಗಳನ್ನು 18 ನಿಮಿಷಗಳಲ್ಲಿ ಹಾಡಬೇಕು. ಪ್ರತಿ ತಂಡದವರು ಎರಡು ಪದ್ಯಗಳನ್ನು ಕೈವಲ್ಯ ಸಾಹಿತ್ಯದ ಮೇಲೆ ಹಾಡಬೇಕು. ಮೂರನೇ ಪದ್ಯವನ್ನು ಸಿದ್ಧಾರೂಢರ ಮೇಲೆ ಅಥವಾ ದಾಸಸಾಹಿತ್ಯ, ತತ್ವಪದ ಹಾಗೂ ವಚನ ಸಾಹಿತ್ಯದ ಮೇಲೆ ಹಾಡಬೇಕು ಎಂದು ತಿಳಿಸಿದರು.

ಶ್ರೀಮಠದ ಮುಖ್ಯ ಆಡಳಿತಾಧಿಕಾರಿ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಅವರು ಮಾ. 29 ರಂದು ಬೆಳಗ್ಗೆ 11.30ಕ್ಕೆ ಭಜನಾ ಸ್ಪರ್ಧೆಗೆ ಚಾಲನೆ ನೀಡುವರು. ವಿಜೇತ ತಂಡಕ್ಕೆ ಪ್ರಥಮ ಬಹುಮಾನವಾಗಿ 1.11 ಲಕ್ಷ ರೂ., ದ್ವಿತೀಯ 90 ಸಾವಿರ ರೂ. ಹಾಗೂ 80 ಸಾವಿರ ರೂ.ಗಳನ್ನು ತೃತೀಯ ಬಹುಮಾನವಾಗಿ ನೀಡಲಾಗುವುದು. ಹತ್ತು ತಂಡಗಳಿಗೆ ಸಮಾಧಾನಕರ ಬಹುಮಾನವಾಗಿ ತಲಾ 10 ಸಾವಿರ ರೂ., 16 ವರ್ಷದ ಒಳಗಿನ ಬಾಲಕ ಹಾಗೂ ಬಾಲಕಿಯರ ತಂಡಕ್ಕೆ 11 ಸಾವಿರ ಮತ್ತು ಒಂದು ಮಹಿಳಾ ಭಜನಾ ತಂಡಕ್ಕೆ 11 ಸಾವಿರ ರೂ. ಬಹುಮಾನ ನೀಡಲಾಗುವುದು. ಇದರ ಜೊತೆಗೆ ವೈಯಕ್ತಿಕ ಬಹುಮಾನವಾಗಿ ಉತ್ತಮ ಹಾಡುಗಾರರಿಗೆ 3,500 ರೂ.(ಇಬ್ಬರಿಗೆ). ಉತ್ತಮ ಹಾರ್ಮೋನಿಯಂ ವಾದಕರಿಗೆ 3,500ರೂ.(ಇಬ್ಬರಿಗೆ), ಉತ್ತಮ ತಬಲಾ ವಾದಕರಿಗೆ 3,500ರೂ.(ಇಬ್ಬರಿಗೆ), ಉತ್ತಮ ತಾಳ ವಾದಕರಿಗೆ 3,500ರೂ.(ಇಬ್ಬರಿಗೆ) ಹಾಗೂ ಉತ್ತಮ ಧಮಡಿ ವಾದಕರಿಗೆ 3,500ರೂ.(ಇಬ್ಬರಿಗೆ) ಬಹುಮಾನ ನೀಡಲಾಗುವುದು. 150 ಭಜನಾ ತಡಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದರು.

ಪ್ರತಿ ದಿನ 25 ತಂಡಗಳಿಗೆ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗುವುದು. ಮಾ. 29 ರಿಂದ ಏ. 1ರ ವರೆಗೆ ಪ್ರಥಮ ಸುತ್ತು, ಏ.2 ರಂದು ಅಂತಿಮ ಸುತ್ತು ನೆರವೇರಲಿದ್ದು, ಏ.3 ರಂದು ಬಹುಮಾನ ವಿತರಣೆ ಮಾಡಲಾಗುವುದು. ಪಾಲ್ಗೊಂಡ ಎಲ್ಲ ಭಜನಾ ತಂಡಗಳಿಗೂ ನೆನಪಿನ ಕಾಣಿಕೆ ಮತ್ತು ಪ್ರಶಸ್ತಿ ಪತ್ರ ನೀಡಲಾಗುವುದು ಎಂದು ಹೇಳಿದರು.

ರಾಜ್ಯ ಮಟ್ಟದ ಭಜನಾ ಸ್ಪರ್ಧೆಯ ಉಪಾಧ್ಯಕ್ಷ ಡಾ.ಗೋವಿಂದ ಮಣ್ಣೂರ, ಕಾರ್ಯದರ್ಶಿ ಉದಯಕುಮಾರ ನಾಯಕ ಹಾಗೂ ಸಹ ಕಾರ್ಯದರ್ಶಿ ಗೀತಾ ಕಬಾಡೆ ಇದ್ದರು.

ವಿಶ್ವ ಹಿಂದು ಪರಿಷತ್ ಮುಖಂಡರು, ವಾಯು ವಿಹಾರಿಗಳಿಂದ ಪ್ರತಿಭಟನೆ

ವಿವೇಕಾನಂದರ ಪುತ್ಥಳಿ ತೆರವು: ಆಕ್ರೋಶ



ಹುಬ್ಬಳ್ಳಿ: ಇಲ್ಲಿಯ ಕೇಶ್ವಾಪುರ ರಸ್ತೆ ನೈರುತ್ಯ ರೈಲ್ವೆ ಗಾಲ್ಫ್ ಮೈದಾನದಲ್ಲಿ ಬನ್ನಿ ಮಹಾಕಾಳಿ ದೇವಿ ದೇವಸ್ಥಾನ ಹಾಗೂ ಸ್ವಾಮಿ ವಿವೇಕಾನಂದರ ಪುತ್ಥಳಿ ತೆರವುಗೊಳಿಸಿರುವುದನ್ನು ಖಂಡಿಸಿ ವಿಶ್ವ ಹಿಂದು ಪರಿಷತ್ ಮುಖಂಡರು ಹಾಗೂ ವಾಯು ವಿಹಾರಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಮಂಗಳವಾರ ವಾಯು ವಿಹಾರಕ್ಕೆ ಹೋಗಿದ್ದ ಕೆಲವರು ದೇವಸ್ಥಾನ ಹಾಗೂ 5 ಅಡಿ ಎತ್ತರ ಸ್ವಾಮಿ ವಿವೇಕಾನಂದರ ಪುತ್ಥಳಿ ತೆರುವಾಗಿರುವುದನ್ನು ಕಂಡು ಮೈದಾನ ಎದುರಿಗೆ ಪ್ರತಿಭಟನೆ ನಡೆಸಿದರು. ಮಧ್ಯಾಹ್ನ ವಿಶ್ವ ಹಿಂದು ಪರಿಷತ್ ಹಾಗೂ ಭಜರಂಗದಳದ ಮುಖಂಡರು ಮೈದಾನಕ್ಕೆ ಭೇಟಿ ನೀಡಿ ರೈಲ್ವೆ ಇಲಾಖೆ ಅಧಿಕಾರಿಗಳ ನಡೆಯನ್ನು ಖಂಡಿಸಿದರು.

ರೈಲ್ವೆ ವಿಭಾಗೀಯ ವ್ಯವಸ್ಥಾಪಕಿ ಬೇಲಾ ಮೀನಾ ಹಾಗೂ ರೈಲ್ವೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ನೈರುತ್ಯ ರೈಲ್ವೆ ಹುಬ್ಬಳ್ಳಿ ವಿಭಾಗೀಯ ಕಚೇರಿಗೆ ಮುತ್ತಿಗೆ ಹಾಕಿದರು. ರೈಲ್ವೆ ಅಧಿಕಾರಿಗಳು ಸರಿಯಾಗಿ ಸ್ಪಂದಿಸದ ಕಾರಣ ವಿಭಾಗೀಯ ವ್ಯವಸ್ಥಾಪಕ ಕಚೇರಿಗೆ ನುಗ್ಗಿ, ಅವರ ಹೆಸರಿನ ನಾಮಫಲಕ ಕಿತ್ತೆಸೆದು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಹಿಂದು ಮುಖಂಡರು ಹಾಗೂ ಆರ್‌ಪಿಎಫ್ ವಿಭಾಗೀಯ ಆಯುಕ್ತ ಅಧಿಕಾರಿ ಅಲೋಕ ಕುಮಾರ ಮಧ್ಯೆ ವಾಗ್ವಾದ ನಡೆಯಿತು. ಕೆಲ ಹೊತ್ತು ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ವಿಭಾಗೀಯ ವ್ಯವಸ್ಥಾಪಕ ಬರುವರೆಗೂ ಪ್ರತಿಭಟನೆ ನಡೆಸಲಾಗುವುದು ಎಂದು ಹೋರಾಟಗಾರರು ಪಟ್ಟು ಹಿಡಿದರು. ಕೊನೆಗೆ ವಿಭಾಗೀಯ ಸಹ ವ್ಯವಸ್ಥಾಪಕ ಟಿ.ವಿ. ಭೋಷಣ್ ಅವರು ಪ್ರತಿಭಟನಾಕಾರರ ಸಮಾಧಾನ ಪಡಿಸಿ ಮನವಿ ಸ್ವೀಕರಿಸಿದ ಬಳಿಕ ಪ್ರತಿಭಟನೆ ಕೈಬಿಟ್ಟರು.

ಹಿಂದು ಮುಖಂಡ ಜಯತೀರ್ಥ ಕಟ್ಟಿ ಮಾತನಾಡಿ, ರೈಲ್ವೆ ಗಾಲ್ಫ್ ಮೈದಾನದಲ್ಲಿ ಸುಮಾರು 70 ವರ್ಷದ ಹಿಂದಿನ ಬನ್ನಿ ಮಹಾಕಾಳಿ ದೇವಿ ದೇವಸ್ಥಾನ ಹಾಗೂ ಸ್ವಾಮಿ ವಿವೇಕಾನಂದ ಪುತ್ಥಳಿ ತೆರವುಗೊಳಿಸಿ ನೈರುತ್ಯ ರೈಲ್ವೆ ವಿಭಾಗೀಯ ವ್ಯವಸ್ಥಾಪಕಿ ಬೇಲಾ ಮೀನಾ ಎಂಬುವರು ಹಿಂದುಗಳ ಭಾವನೆಗೆ ಧಕ್ಕೆ ತಂದಿದ್ದಾರೆ. ಇದು ಖಂಡನೀಯ. ನಿಮಗೆ ತಾಕತ್ತು ಇದ್ದರೆ ರೈಲ್ವೆ ಆಸ್ತಿ ವ್ಯಾಪ್ತಿಯಲ್ಲಿ ದರ್ಗಾ ಹಾಗೂ ಚರ್ಚ್‌ಗಳಿದ್ದು, ಅವರುಗಳನ್ನು ತೆರವು ಮಾಡಬೇಕು ಎಂದು ಆಗ್ರಹಿಸಿದರು.

ಹಿಂದು ದೇವಸ್ಥಾನ ತೆಗೆದಿರುವುದು ಮೂರ್ಖತನದ ಪರಮಾವಧಿ. ಬರುವ ಶನಿವಾರದೊಳಗೆ ದೇವಸ್ಥಾನ ಹಾಗೂ ಪುತ್ಥಳಿ ಪುರನರ್‌ಸ್ಥಾಪಿಸಬೇಕು. ಇಲ್ಲವಾದರೆ ಹಿಂದು ಸಂಘಟನೆಯಿಂದ ಉಗ್ರ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ವಿಶ್ವ ಹಿಂದು ಪರಿಷತ್ ಹು-ಧಾ ಮಹಾನಗರ ಕಾರ್ಯದರ್ಶಿ ರಮೇಶ ಕದಂ, ಚೇತನ್ ರಾವ್, ಪ್ರಶಾಂತ ನರಗುಂದ, ಶಂಕರ ಕಮತರ, ಸಂತೋಷ, ಸುಭಾಸಿಂಗ್ ಜಮಾದಾರ, ಗಣೇಶ ಇದ್ದರು.

ವಾಯು ವಿಹಾರಿಗಳಿಂದ ಪ್ರತಿಭಟನೆ

ವಾಯುವಿಹಾರಕ್ಕೆ ಹೋಗಿದ್ದ ಜನರು ದೇವಸ್ಥಾನ ಹಾಗೂ ಸ್ವಾಮಿ ವಿವೇಕಾನಂದ ಪುತ್ಥಳಿ ತೆರುವುಗೊಳಿಸಿರುವುದನ್ನು ಖಂಡಿಸಿ ಮಂಗಳವಾರ ಬೆಳಗ್ಗೆ ದಿಢೀರ್ ಪ್ರತಿಭಟನೆ ನಡೆಸಿದರು. ಮಾರ್ಚ್ 14ರ ಒಳಗೆ ರೈಲ್ವೆ ಇಲಾಖೆ ಪ್ರತಿಮೆ ಪುನರ್ ಪ್ರತಿಷ್ಠಾಪನೆ ಹಾಗೂ ದೇವಸ್ಥಾನ ನಿರ್ಮಾಣ ಮಾಡಿಕೊಡಬೇಕು ಎಂದು ಗಡುವು ನೀಡಿದರು. ದೇವಸ್ಥಾನ ಹಾಗೂ ಪುತ್ಥಳಿ ತೆರವು ಮಾಡಿಸಿದ ಅಧಿಕಾರಿಯನ್ನು ತಕ್ಷಣ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು. ಬೇಡಿಕೆ ಈಡೇರದಿದ್ದರೆ ಉಗ್ರ ಸ್ವರೂಪದಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು. ಬಸವರಾಜ ಕುಂದಗೋಳಮಠ, ಗಲ್ಫ ಲಿಂಕ್ ಆಫೀಸರ್ಸ್ ಕಾಲೋನಿ ವಾಕರ್ಸ್ ಅಸೋಸಿಯೇಷನ್ ಅಧ್ಯಕ್ಷ ವೆಂಕಟೇಶ ಹಬೀಬ, ಪ್ರಭು ನವಲಗುಂದಮಠ, ಬಸವರಾಜ ಶಿರಕೋಳ, ಶೇಖರ ಜಾಧವ ಇದ್ದರು.

ಹೊಸ ವಿಚಾರ ಕಲಿಯಿರಿ: ಜಿಲ್ಲಾಧಿಕಾರಿ

ಗದಗ: ಗ್ರಾಮೀಣ ಮಟ್ಟದಲ್ಲಿ ಕೃಷಿ ಹಾಗೂ ಹೈನುಗಾರಿಕೆ ಜ್ಞಾನವನ್ನು ಮರುಸ್ಥಾಪಿಸುವಲ್ಲಿ ಕೃಷಿ ಸಖಿ ಮತ್ತು ಪಶು ಸಖಿಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಹೇಳಿದರು.

ನಗರದ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವಾದ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಕೃಷಿ ಸಖಿ ಮತ್ತು ಪಶು ಸಖಿಗಳ ಪ್ರಗತಿ ಪರಿಶೀಲನೆ ಹಾಗೂ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕೃಷಿ ಮತ್ತು ಪಶು ಸಖಿಯರು ಕೇವಲ ವೇತನಕ್ಕಾಗಿ ಕೆಲಸ ಮಾಡದೆ ಹಳ್ಳಿಗಳಲ್ಲಿ ಇತರ ಮಹಿಳೆಯರು ನಿರ್ವಹಿಸದ ಜವಾಬ್ದಾರಿಗಳನ್ನು ಹೊತ್ತು ಸ್ವಯಂಪ್ರೇರಿತರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೀಗಾಗಿ ಅವರ ಸೇವೆ ಸಮಾಜಕ್ಕೆ ಅತ್ಯಗತ್ಯವಾಗಿದೆ. ಹಿಂದಿನ ಕಾಲದಲ್ಲಿ ಕೃಷಿ ಮತ್ತು ಪಶುಪಾಲನೆಯು ಮಹಿಳೆಯರ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಆದರೆ ಪ್ರಸ್ತುತ ದಿನಗಳಲ್ಲಿ ಆ ಜ್ಞಾನ ಮರೆಯಾಗುತ್ತಿದ್ದು, ಅದನ್ನು ಮರುನೆನಪಿಸುವ ಕೆಲಸವನ್ನು ಸಖಿಯರು ಮಾಡಬೇಕಿದೆ ಎಂದರು.

ನಮಗೆಲ್ಲವೂ ಗೊತ್ತಿದೆ ಎಂಬ ಅಹಂಕಾರವನ್ನು ಬಿಟ್ಟು, ಹೊಸ ವಿಚಾರಗಳನ್ನು ಕಲಿಯುವತ್ತ ಗಮನಹರಿಸಬೇಕು. ನಿಂತ ನೀರಾಗಿ ಕೊಳೆಯುವ ಬದಲು, ನಿರಂತರವಾಗಿ ಬದಲಾಗುತ್ತಾ, ಸುಧಾರಣೆಗೊಳ್ಳಬೇಕು'' ಎಂದು ಕರೆ ನೀಡಿದರು. ಗುರು ಇದ್ದರೆ ಗುರಿ ಎಂಬ ಮಾತಿನಂತೆ, ಪ್ರತಿಯೊಂದು ಹಂತದಲ್ಲೂ ಗ್ರಾಮೀಣ ಮಹಿಳೆಯರಿಗೆ ಮಾರ್ಗದರ್ಶನ ನೀಡುವ ಗುರುವಿನ ಸ್ಥಾನದಲ್ಲಿ ಸಖಿಯರು ಕಾರ್ಯನಿರ್ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಎಂ.ವಿ.ಚಳಗೇರಿ, ಪಶುಸಂಗೋಪನಾ ಇಲಾಖೆ ಉಪನಿರ್ದೇಶಕ ಡಾ. ಹುಲಗಣ್ಣವರ್, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ರಘುನಾಥಗೌಡ ಪಾಟೀಲ್, ಕೃಷಿ ಮತ್ತು ಪಶುಸಖಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು. ಬಸವರಾಜ ಮೂಲಿಮನಿ ನಿರೂಪಿಸಿದರು.



ಸಾರ್ವಜನಿಕ ಸ್ಥಳಗಳ ಅಭಿವೃದ್ಧಿಗೆ ಸಹಕರಿಸಿ



ಗಜೇಂದ್ರಗಡ : ಸಾರ್ವಜನಿಕ ಸ್ಥಳಗಳ ಅಭಿವೃದ್ಧಿಗೆ ಜನಪ್ರತಿನಿಧಿಗಳೊಂದಿಗೆ ನೆರೆಹೊರೆ ಗುಂಪುಗಳು ಸಹಕರಿಸಿದಾಗ ಶೀಘ್ರ ಅಭಿವೃದ್ಧಿ ಸಾಧ್ಯ. ನಿಮ್ಮ ಮನೆಯಿಂದಲೇ ಸ್ವಚ್ಚತೆಗೆ ನಾಂದಿ ಹಾಡುವ ಮೂಲಕ ನೀವೂ ವಾಸಿಸುವ ಪ್ರದೇಶ, ನಿಮ್ಮ ಊರಿನ ಸ್ವಚ್ಚತೆಗೆ ಯೋಜನೆ ರೂಪಿಸುವದು ಹಾಗೂ ಅಭಿವೃದ್ಧಿ ಪೂರಕವಾದ ವಾತಾವರಣ ರೂಪಿಸುವ ಕೆಲಸವನ್ನು ನೆರೆಹೊರೆ ಗುಂಪಿನವರು ಮಾಡಬೇಕು ಎಂದು ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ ಸಲಹೆ ನೀಡಿದರು.

ನಗರದ ಕಟ್ಟಿಬಸವೇಶ್ವರ ರಂಗಮಂದಿರದಲ್ಲಿ ಪುರಸಭೆ ವತಿಯಿಂದ ಮಂಗಳವಾರ ನಡೆದ ನೆರೆಹೊರೆ ಗುಂಪು ಪ್ರದೇಶ ಸಭಾ ಮತ್ತು ವಾರ್ಡ ಸಮಿತಿ ಸಭೆಯನ್ನು ಉದ್ದೇಶಿಸಿ ಮಾತನಾಡಿ, ಸಾರ್ವಜನಿಕರು ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು. ನೆರೆಹೊರೆ ಗುಂಪಿನ ಸದಸ್ಯರು ತಮ್ಮ ಪ್ರದೇಶಗಳ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿ ನಿಮ್ಮ ಜನಪ್ರತಿನಿದಿಗಳ ಗಮನಕ್ಕೆ ತನ್ನಿ ಎಂದರು. ಮಿಥುನ್ ಪಾಟೀಲ, ಅಶೋಕ ಭಾಗಮಾರ,ಸಿದ್ದಣ್ಣ ಬಂಡಿ, ಮಂಜುಳಾ ರೇವಡಿ, ಶಿವರಾಜ ಘೋರ್ಪಡೆ,ವೀರಣ್ಣ ಶೆಟ್ಟರ, ಎಚ್. ಎಸ್. ಸೋಂಪುರ, ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬೆಂಕಿ ನಂದಿಸಲು ಸಿಬ್ಬಂದಿ ಹರಸಾಹಸ



ಧಾರವಾಡ: ನಗರದ ಹೊಸಯಲ್ಲಾಪುರದ ತ್ಯಾಜ್ಯದ ಗುಡ್ಡಕ್ಕೆ ಹೊತ್ತಿದ ಬೆಂಕಿಯ ವಿಷದ ಗಾಳಿ ಮಂಗಳವಾರ ವಿದ್ಯಾಕಾಶಿ ಆವರಿಸಿದ್ದು, ಬೆಂಕಿಯನ್ನು ನಂದಿಸಲು ಮಹಾನಗರ ಪಾಲಿಕೆಯ ಸಿಬ್ಬಂದಿ ಹರಸಾಹಸಪಟ್ಟರು.

ಜೆಟ್ ವಾಹನಗಳು, ಅಗ್ನಿಶಾಮಕ ವಾಹನ, ಜೆಸಿಬಿ, ಹಿಟ್ಯಾಚ್ ವಾಹನ ಬಳಸಿ ಬೆಂಕಿ ನಂದಿಸಲು ಪ್ರಯತ್ನಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ. ನೀರು ಸಿಂಪಡಿಸಿ ಮತ್ತು ಮಣ್ಣು ಸುರಿದು ಬೆಂಕಿ ನಂದಿಸಲಾಗಿದೆ. ಈ ವಿಷದ ಗಾಳಿಗೆ ಕಂಗೆಟ್ಟ ತ್ಯಾಜ್ಯದ ಗುಡ್ಡದಲಿನ ಸುತ್ತಮುತ್ತಲಿನ ಸಾರ್ವಜನಿಕರು ಮಂಗಳವಾರವೂ ಹೊಸಯಲ್ಲಾಪೂರದ ರುದ್ರಭೂಮಿಗೆ ಹೋಗುವ ರಸ್ತೆಯಲ್ಲಿ ಕೆಲಕಾಲ ಧರಣಿ ನಡೆಸಿ, ಆಕ್ರೋಶ ವ್ಯಕ್ತಪಡಿಸಿದರು. ಬೆಂಕಿ ಹೊತ್ತಿದ ಸ್ಥಳಕ್ಕೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಸಿ.ಡಿ,ಪಾಲಿಕೆ ಮೇಯರ್ ಜ್ಯೋತಿ ಪಾಟೀಲ ಸೇರಿ ಹಿರಿಯ ಅಧಿಕಾರಿಗಳು ಭೇಟಿ ನೀಡಿ, ಬೆಂಕಿ ಆರಿಸುವ ಕಾರ್ಯಾಚರಣೆ ಚುರುಕುಗೊಳಿಸಲು ಸೂಚಿಸಿದರು. ಪರಿಸ್ಥಿತಿ ಕೈಮೀರುವುದು ಅರಿತ ಪಾಲಿಕೆ ಆಯುಕ್ತ ರುದ್ರೇಶ ಘಾಳಿ, ಸ್ವತಃ ಬೆಂಕಿ ನಂದಿಸುವ ಕಾರ್ಯಾಚರಣೆ ನೇತೃತ್ವ ವಹಿಸಿದಾಗ, ಅಲ್ಲಿನ ಜನ ಆಯುಕ್ತರನ್ನು ತೀವ್ರವಾಗಿ ತರಾಟೆ ತೆಗೆದುಕೊಂಡ ಘಟನೆ ನಡೆಯಿತು. ಸಾರ್ವಜನಿಕರನ್ನು ಸಮಾಧಾನ ಪಡಿಸಿದ ಆಯುಕ್ತ ರುದ್ರೇಶ ಘಾಳಿ, ಜೆಟ್ ವಾಹನ ಹಾಗೂ ಅಗ್ನಿಶಾಮಕ ವಾಹನ ಬಂದಿವೆ. ಬುಧವಾರ ತ್ಯಾಜ್ಯಕ್ಕೆ ಹೊತ್ತಿದ ಬೆಂಕಿ ಹತೋಟಿಗೆ ಬರಲಿದೆ ಎಂದು ಹೇಳಿದರು.

ಬೆಣ್ಣೆ ಹಳ್ಳ ಕಾಮಗಾರಿಗೆ ಹೆಚ್ಚಿನ ಅನುದಾನಕ್ಕೆ ಹೇಮನಗೌಡ ಆಗ್ರಹ



ಹುಬ್ಬಳ್ಳಿ: ಪ್ರಸ್ತುತ ನಡೆಯುತ್ತಿರುವ ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಬೆಣ್ಣೆ ಹಳ್ಳ ಶಾಶ್ವತ ಪರಿಹಾರಕ್ಕೆ 3 ಸಾವಿರ ಕೋಟಿ ಅನುದಾನ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ರತ್ನ ಭಾರತ ರೈತ ಸಮಾಜದ ವತಿಯಿಂದ ಮಾ.12ರಂದು ಬೆಳಗ್ಗೆ 11 ಗಂಟೆಗೆ ಕುಂದಗೋಳ ತಾಲೂಕಿನ ಜಿಗಳೂರ ಹತ್ತಿರ ರಾಷ್ಟ್ರೀಯ ಹೆದ್ದಾರಿ ತಡೆದ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘಟನೆ ರಾಷ್ಟ್ರೀಯ ಉಪಾಧ್ಯಕ್ಷ ಹೇಮನಗೌಡ ಬಸನಗೌಡರ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಸದ್ಯ 200 ಕೋಟಿ ಬಿಡುಗಡೆ ಮಾಡಿ ಬೆಣ್ಣೆ ಹಳ್ಳ ಕಾಮಗಾರಿ ಆರಂಭಿಸಿದೆ. ಅದು ಬಹುತೇಕ ನವಲಗುಂದ ವಿಧಾನಸಭಾ ಕ್ಷೇತ್ರ ಒಳಗೊಂಡಿದೆ. ಆದರೆ ಶಿಗ್ಗಾವಿ ಹಾಗೂ ಕುಂದಗೋಳ ತಾಲೂಕಿನಲ್ಲಿರುವ ಬಹುತೇಕ ಗ್ರಾಮಗಳಲ್ಲಿ ಕಾಮಗಾರಿ ಕೈಗೊಳ್ಳದ ಕಾರಣ ಮುಂದೆ ಪ್ರವಾಹದ ಸಮಸ್ಯೆ ಅನುಭವಿಸಬೇಕಾಗುತ್ತದೆ. ರಾಜ್ಯ ಸರ್ಕಾರ ಹೆಚ್ಚಿನ ಅನುದಾನ ನೀಡಿದರೆ ಈ ಭಾಗದಲ್ಲಿ ಬೆಣ್ಣೆ ಹಳ್ಳ ಪ್ರವಾಹದ ಸಮಸ್ಯೆಗೆ ಪರಿಹಾರ ದೊರೆಯಲಿದೆ ಎಂದರು. ಈಗಾಗಲೇ ಬೆಣ್ಣೆ ಹಳ್ಳ ಕಾಮಗಾರಿ ಕುಂದಗೋಳ ತಾಲೂಕಿನ ಯರಿನಾರಾಯಣ ಕೊಪ್ಪದಿಂದ ಆರಂಭಿಸಲಾಗಿದ್ದು, ಅದು ಸಹ ಪರಿಪೂರ್ಣವಾಗುವಂತೆಕಾಣುತ್ತಿಲ್ಲ. ಹಳ್ಳದ ಒಂದು ಕಡೆ ಮಾತ್ರ ತಡೆಗೋಡೆ ನಿರ್ಮಿಸಲಾಗುತ್ತಿದೆ. ಎರಡು ಕಡೆ ನಿರ್ಮಿಸಬೇಕು. ಶಾಸಕ ಎನ್.ಎಚ್. ಕೋನರಡ್ಡಿ ಅವರ ಗಮನಕ್ಕೆ ತಂದರೆ ಕುಂದಗೋಳ ಕ್ಷೇತ್ರದ ಶಾಸಕರ ಕಡೆ ಬೊಟ್ಟು ಮಾಡುತ್ತಿದ್ದಾರೆ. ತಾತ್ಕಾಲಿಕ ಕಾಮಗಾರಿ ಕೈಗೊಳ್ಳುವುದರಿಂದ ಏನು ಪ್ರಯೋಜನವಾಗಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ಅಧಿವೇಶನ ಮುಗಿಯುವುದರೊಳಗೆ ಅನುದಾನ ಬಿಡುಗಡೆ ಮಾಡಬೇಕು. ಇಲ್ಲವಾದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.ವಿರೂಪಾಕ್ಷಪ್ಪ ಕಳ್ಳಿಮನಿ, ದೇವಪ್ಪ ಇಚ್ಚಂಗಿ ಇದ್ದರು.

ಸ್ತ್ರೀಯರಿಗೆ ಆರೋಗ್ಯ ಕಾಳಜಿ ಅಗತ್ಯ: ಡಾ.ಅಜಿತ ಪ್ರಸಾದ



ಧಾರವಾಡ: ಮಹಿಳೆಯರು ಒತ್ತಡ ನಿವಾರಣೆಗೆ ನಿಮಮಿತ ವ್ಯಾಯಾಮದ ಜೊತೆ ಸಾತ್ವಿಕ ಆಹಾರ ಸೇವನೆ ಮೂಲಕ ಆರೋಗ್ಯದ ಕುರಿತು ಹೆಚ್ಚಿನ ಕಾಳಜಿ ವಹಿಸುವಂತೆ ಜನತಾ ಶಿಕ್ಷಣ ಸಮಿತಿಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಸಲಹೆ ನೀಡಿದರು.

ನವನಗರದ ಬಿ.ಆರ್.ಪಾಟೀಲ ಕ್ಯಾನ್ಸರ್ ಆಸ್ಪತ್ರೆ ಹಾಗೂ ಇಂಡಿಯನ್ ಕ್ಯಾನ್ಸರ್ ಸೊಸೈಟಿ ಸಹಯೋಗದಲ್ಲಿ ನಗರದ ಜನತಾ ಶಿಕ್ಷಣ ಸಮಿತಿ ಉತ್ಸವ ಭವನದಲ್ಲಿ ಮಂಗಳವಾರ ಏರ್ಪಡಿಸಿದ್ದ ಮಹಿಳೆಯರ ಆರೋಗ್ಯ ತಪಾಸಣೆ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಒತ್ತಡಕ್ಕೆ ಸಿಲುಕಿದ ಮಹಿಳೆ, ಮಾರಕವಾದ ವಿವಿಧ ಕ್ಯಾನ್ಸರ್ ರೋಗ ಸೇರಿ ಹಲವು ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವುದು ಬೇಸರದ ಸಂಗತಿ. ಮಹಿಳೆಯರು ಕಚೇರಿ ಕೆಲಸ, ಕುಟುಂಬದ ಜೊತೆ ವೈಯಕ್ತಿಕ ಆರೋಗ್ಯಕ್ಕೂ ಆದ್ಯತೆ ನೀಡಲು ತಿಳಿಸಿದರು.

ಧೂಮಪಾನ, ಮದ್ಯಪಾನ, ಅನಿಯಮಿತ ಆಹಾರ ಸೇವನೆ ಮತ್ತು ವ್ಯಾಯಾಮದ ಕೊರತೆ ಹಾಗೂ ಕಲುಷಿತ ಪರಿಸರದಿಂದ ಕ್ಯಾನ್ಸರ್ ರೋಗ ಬರುತ್ತಿದೆ. ಕೆಮ್ಮು, ರಕ್ತ ಕೆಮ್ಮು, ತೂಕದಲ್ಲಿ ಇಳಿಕೆ ಕ್ಯಾನ್ಸರ್ ಲಕ್ಷಣಗಳು. ಸೂಕ್ತ ಚಿಕಿತ್ಸೆ ಪಡೆಯಲು ಹೇಳಿದರು.

ಸಂಪನ್ಮೂಲ ವ್ಯಕ್ತಿ ಡಾ. ರಮೇಶಕುಮಾರ್ ಆರ್ ಮಾತನಾಡಿ, ಸ್ತ್ರೀಯರು ಮನೆ ಹಾಗೂ ಹೊರಗಡೆ ಕೆಲಸದ ನಿರ್ವಹಣೆಯಿಂದ ಬೇಗನೆ ಆರೋಗ್ಯ ಸಮಸ್ಯೆಗೆ ತುತ್ತಾಗುತ್ತಾರೆ. ಸದೃಢವಾಗಿರಲು ನಿತ್ಯವೂ ವ್ಯಾಯಾಮ ಮಾಡುವಂತೆ ಸಲಹೆ ನೀಡಿದರು.

ಈಚೆಗೆ ಹೆಣ್ಣು ಮಕ್ಕಳಲ್ಲಿ ಸ್ತನ ಕ್ಯಾನ್ಸರ್, ಗರ್ಭಕಂಟಕ ಕ್ಯಾನ್ಸರ್ ಹೆಚ್ಚು ಕಂಡು ಬರುತ್ತಿದೆ. ಕ್ಯಾನ್ಸರ್ ರೋಗಿಗಳಲ್ಲಿ ಭಾರತ ಮೂರನೇ ಸ್ಥಾನದಲ್ಲಿದೆ. ಹೀಗಾಗಿ ಈ ಖಾಯಿಲೆ ಕಂಡು ಬಂದಾಕ್ಷಣ, ಚಿಕಿತ್ಸೆ ಪಡೆದರೆ ಗುಣಮುಖರಾಗಲು ಸಾಧ್ಯವಿದೆ ಎಂದರು.

ಕ್ಯಾನ್ಸರ್ ಆಸ್ಪತ್ರೆ ವೈದ್ಯ ಡಾ. ಉಮೇಶ ಹಳ್ಳಿಕೇರಿ ಮಾತನಾಡಿದರು. ಶಿಬಿರದಲ್ಲಿ ಸುಮಾರು 300 ಜನ ಮಹಿಳೆಯರಿಗೆ ತಪಾಸಣೆ ನಡಸಲಾಯಿತು. ಅರಿಹಂತ ಪ್ರಸಾದ, ಮಹಾವೀರ ಉಪಾದ್ಯೆ, ಸಂತಾನಿ ದಂಡಿನ, ಭಾರತಿ ಶಾನಭಾಗ ಇತರರಿದ್ದರು.

ಅಡುಗೆ ಅನಿಲದ ಕೊರತೆ: ಹೋಟೆಲ್‌ಗಳು ಬಂದ್

ಹುಬ್ಬಳ್ಳಿ: ಮಧ್ಯಪ್ರಾಚ್ಯದಲ್ಲಿ ಯುದ್ಧ ಹೆಚ್ಚಿದ ಕಾರಣ ಅದರ ತೀವ್ರತೆ ವಾಣಿಜ್ಯ ನಗರಿ ಹುಬ್ಬಳ್ಳಿಗೂ ತಟ್ಟಿದೆ. ವಾಣಿಜ್ಯ ಅಡುಗೆ ಅನಿಲದ ಕೊರತೆ ಹೆಚ್ಚಾಗಿದ್ದು, ನಗರದ ಕೆಲವು ಹೋಟೆಲ್‌ಗಳು ಮಂಗಳವಾರ ಬೇಗ ಬಂದ ಮಾಡಲಾಯಿತು.

ಯುದ್ಧದ ಹಿನ್ನೆಲೆ ಕಚ್ಚಾ ತೈಲದ ಬೆಲೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರೀ ಏರಿಕೆ ಕಂಡಿದ್ದರಿಂದ, ವಾಣಿಜ್ಯ ಬಳಕೆಯ ಅಡುಗೆ ಅನಿಲ ಪೂರೈಕೆ ಗಣನೀಯವಾಗಿ ಇಳಿಕೆ ಕಂಡಿದೆ.

I, **AYUB AHMED SHIVAMOGGA KADEKAL** (old name) Resident of 7th Cross Lest Side Azmath Manjil Tippu Nagar Shivamogga - 577201, have changed my name as **AYUB AHAMED SHIVAMOGGA KADEKAL** (new name) henceforth I will be called and recognized by new name for all future purposes, dated: 10/03/2026.

CHANGE OF NAME

I, **SHIFA TAJ** (old name) Resident of Kasturba Nagar 2nd Cross Sirsi 581402 (address), have changed my name as **SHIFA TAJ FAIROZ AHAMED KAGAL** (new name) henceforth I will be called and recognized by new name for all future purposes, dated: 10/03/2026.

CHANGE OF NAME

I, **NETRA BHORASHETTAR** (old name) Resident of #70, Shettar Oni, Shirahatti Gadag Karnataka - 582120, have changed my name as **NETRA SHEKHAPPA BHORASHETTAR** (new name) henceforth I will be called and recognized by new name for all future purposes, dated: 10/03/2026.

CHANGE OF NAME

I, **PRABHU K** (old name) Resident of Kodihalli, Davanagere Karnataka - 577589, have changed my name as **PRABHUDEVA KOTEHAL VEERAPPA** (new name) henceforth I will be called and recognized by new name for all future purposes, dated: 10/03/2026.

CHANGE OF NAME

I, **MUMTAZ BEGUM** (old name) Resident of H No 185, Bailpar, Dandeli, Dist; Uttara Kannada - 581325, Karnataka, India, have changed my name as **MUMTAZ NASIR KHAN** (new name) henceforth I will be called and recognized by new name for all future purposes, dated: 10/03/2026.

ಶಿಕ್ಷಕರಿಗೆ ಬೀದಿ ನಾಯಿ ಕಾಯುವ ಹೊಣೆಗಾರಿಕೆ ರಾಜ್ಯ ಸರ್ಕಾರದ ವಿರುದ್ಧ ಹೊರಟ್ಟಿ ಆಕ್ರೋಶ

◆ **ಹುಬ್ಬಳ್ಳಿ:** ರಾಜ್ಯ ಸರ್ಕಾರ ಶಿಕ್ಷಕರಿಗೆ ಬೀದಿ ನಾಯಿಗಳನ್ನು ಕಾಯುವ ಹೊಣೆಗಾರಿಕೆ ನೀಡಿರುವುದನ್ನು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಖಂಡಿಸಿದ್ದಾರೆ.



ಈ ಕುರಿತು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆಯುವ ಮೂಲಕ ಆದೇಶ ಹಿಂಪಡೆಯುವಂತೆ ಒತ್ತಾಯಿಸಿದ್ದಾರೆ. ರಾಜ್ಯದ ಎಲ್ಲಾ ಶಿಕ್ಷಕರು ಮತದಾನದ ಕೆಲಸಗಳು, ಜನಗಣತಿ, ಜಾತಿಗಣತಿ, ಮತದಾರರ ಪಟ್ಟಿ ಪರಿಷ್ಕರಣೆ, ಮಕ್ಕಳಿಗೆ ಹಾಲು, ಮೊಟ್ಟೆ ವಿತರಣೆ ಇನ್ನೂ ಮುಂತಾದ ಕೆಲಸಗಳನ್ನು ನಿರ್ವಹಿಸುವುದರ ಜೊತೆಗೆ ಇದೀಗ ಸರ್ಕಾರವು ಬೀದಿ ನಾಯಿಗಳನ್ನು ಕಾಯುವ ಹೊಣೆಗಾರಿಕೆಯನ್ನು ಶಿಕ್ಷಕರಿಗೆ ನೀಡಿರುವ ನಿಜಕ್ಕೂ ಬಹಳ ಬೇಸರದ ಸಂಗತಿಯಾಗಿದೆ ಎಂದು ತಿಳಿಸಿದ್ದಾರೆ. ಬೀದಿ ನಾಯಿಗಳ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಮುಂದಾಗಿರುವ ಸರ್ಕಾರವು ಶಾಲಾ ಶಿಕ್ಷಕರನ್ನೇ ನೋಡೆಲ್ ಅಧಿಕಾರಿಗಳನ್ನಾಗಿ ನೇಮಕ ಮಾಡುವಂತೆ ಸೂಚಿಸಿದೆ. ಇದು ನಿಜವಾಗಲೂ ಶಿಕ್ಷಕರು ಮಕ್ಕಳಿಗೆ ಶಿಕ್ಷಣ ಬೋಧಿಸುವ ಕೆಲಸ ಬಿಟ್ಟು ಬೀದಿ ನಾಯಿಗಳನ್ನು ಕಾಯುವ ಕೆಲಸ ಮಾಡುವಂತಾಗುತ್ತಿದ್ದು, ಸರ್ಕಾರವು ಶಿಕ್ಷಕರನ್ನು ನಾಯಿಗಳಿಗಿಂತ ಕಡೆಯದಾಗಿ ನೋಡುತ್ತಿದೆ ಎನ್ನುವ ಅರ್ಥದಲ್ಲಿ ಬಿಂಬಿತವಾಗುತ್ತದೆ ಎಂದು ಕಿಡಿಕಾರಿದ್ದಾರೆ.

ದಲಿತರಿಗೆ ದೇವಸ್ಥಾನ ಪ್ರವೇಶ ನಿಷೇಧ: ಖಂಡನೆ

◆ **ಕಾರವಾರ:** ಗೌರಿಬಿದನೂರು ತಾಲೂಕಿನ ಉಚ್ಚೋದನಹಳ್ಳಿಯ ಜೀರ್ಣೋದ್ಧಾರಗೊಂಡ ಸಲ್ಲಾಪುರದಮ್ಮ ದೇವಸ್ಥಾನಕ್ಕೆ ಪರಿಶಿಷ್ಟ ಜಾತಿಯ ಜನರಿಗೆ ಪ್ರವೇಶ ನಿರಾಕರಿಸಿರುವ ಘಟನೆ ಅಮಾನವೀಯವಾಗಿದ್ದು, ಇದು ಇಡೀ ನಾಗರಿಕ ಸಮಾಜ ತಲೆತಗ್ಗಿಸುವಂತಹ ವಿಚಾರ ಎಂದು ಜಿಲ್ಲಾ ಜನಶಕ್ತಿ ವೇದಿಕೆಯ ಅಧ್ಯಕ್ಷರಾದ ಮಾಧವ ನಾಯಕ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದರೂ, ಇಂದಿಗೂ ದೇವಸ್ಥಾನ ಪ್ರವೇಶದಂತಹ ಹಕ್ಕುಗಳಿಗಾಗಿ ಹೋರಾಡಬೇಕಿರುವುದು ಖೇದನೀಯ. ಬಸವಣ್ಣ, ಅಂಬೇಡ್ಕರ್ ಅವರಂತಹ ಮಹನೀಯರು ಸಮಾನತೆಯ ಸಂದೇಶ ಸಾರಿದ ಈ ನಾಡಿನಲ್ಲಿ ಇಂತಹ ಅನಿಷ್ಟ ಪದ್ಧತಿಗಳು ಮರುಕಳಿಸುತ್ತಿರುವುದು ಸಾಮಾಜಿಕ ವ್ಯವಸ್ಥೆಯ ದುರಂತ ಎಂದಿದ್ದಾರೆ. ಘಟನೆಗೆ ಸಂಬಂಧಿಸಿದವರ ವಿರುದ್ಧ ಕರ್ನಾಟಕ ಸರ್ಕಾರ ಮತ್ತು ಜಿಲ್ಲಾಡಳಿತ ಕೂಡಲೇ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಕೇವಲ ಶಿಕ್ಷೆಯಷ್ಟೇ ಸಾಲದು, ಅಧಿಕಾರಿಗಳು ಗ್ರಾಮ ಮಟ್ಟದಲ್ಲಿ ಅಸ್ಪೃಶ್ಯತೆ ವಿರುದ್ಧ ಸಮರೋಪಾದಿಯಲ್ಲಿ ಜನಜಾಗೃತಿ ಮೂಡಿಸಬೇಕು ಎಂದಿದ್ದಾರೆ.

ರಾಜ್ಯದ ಆರ್ಥಿಕ ಪರಿಸ್ಥಿತಿ ಅಧೋಗತಿ: ಚಂದ್ರಶೇಖರ

◆ **ಬಾಗಲಕೋಟೆ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 17ನೇ ಬಜೆಟ್ ಮಂಡಿಸಿದ್ದೇನೆ ಎಂದು ಹೇಳಿದ್ದು, ಇಡೀ ರಾಜ್ಯದ ಆರ್ಥಿಕ ಪರಿಸ್ಥಿತಿ ಅಧೋಗತಿಗೆ ತಳ್ಳಿದ್ದಾರೆ. ಇದೊಂದು ಬುರಡೆ ಬಜೆಟ್‌ಆಗಿದೆ. ಯುವ ನಿಧಿಯನ್ನು ಪಂಚ ಗ್ಯಾರಂಟಿಯಿಂದ ಹಾಳು ಮಾಡಿದ್ದಾರೆ. ಯುವ ನಿಧಿಗೆ ಯಾವುದೇ ಅನುದಾನ ಕೂಡ ನೀಡಿಲ್ಲ ಎಂದು ಬಿಜೆಪಿ ರಾಜ್ಯ ವಕ್ತಾರ ಚಂದ್ರಶೇಖರ ಆರೋಪಿಸಿದರು.

ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ಮತ್ತು ದಲಿತರ ನಿಗಮಗಳಿಗೆ 550 ಕೋಟಿ ಕೊಟ್ಟಿದ್ದಾರೆ. ಅದೇ ಅಲ್ಪ ಸಂಖ್ಯಾತರ ನಿಗಮಕ್ಕೆ ಸಾವಿರಕ್ಕೂ ಹೆಚ್ಚು ಕೋಟಿ ಕೊಟ್ಟಿದ್ದಾರೆ. ಮುಸ್ಲಿಂ ಮಹಿಳೆಯರಿಗೆ ಶಾದಿ ಭಾಗ್ಯ ಕೊಟ್ಟರು. ದಲಿತ, ಹಿಂದುಳಿದ ವರ್ಗದಲ್ಲಿ ಬಡವರು ಇಲ್ಲವಾ. ಜಾತಿಗಳ ಮಧ್ಯೆ ಬೆಂಕಿ ಹಚ್ಚುವ ಕೆಲಸ ಮಾಡಿದ್ದಾರೆ. ಸಾರಿಗೆ ಸಂಸ್ಥೆಯ ನೌಕರರಿಗೆ 38 ತಿಂಗಳಿಗೆ ಸಂಬಳ ಕೊಟ್ಟಿಲ್ಲ, ಕೇಳಿದರೆ, ಸರ್ಕಾರದ ಪರಿಸ್ಥಿತಿ ಅರ್ಥ ಮಾಡಿಕೊಳ್ಳಿ ಎಂದು ಡಿಸಿಎಂ ಶಿವಕುಮಾರ ಹೇಳುತ್ತಾರೆ. ಆದರೆ, 118 ಜನ ಶಾಸಕರಿಗೆ, ಪ್ರಮುಖ ಕಾರ್ಯಕರ್ತರಿಗೆ ಸಚಿವ ಸ್ಥಾನಮಾನ ಕೊಟ್ಟು, ಹೊಸ ಕಾರು ಕೊಟ್ಟಿದ್ದೀರಿ. ಯುವನಿಧಿ ಯೋಜನೆಗೆ ಈ ಬಜೆಟ್‌ನಲ್ಲಿ ಹಣ ಕೊಟ್ಟಿಲ್ಲ ಎಂದು ಹೇಳಿದರು. ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ಮಾಧ್ಯಮ ವಕ್ತಾರ ಸತ್ಯನಾರಾಯಣ ಹೇಮಾದ್ರಿ ಇದ್ದರು.

ಇಂದಿನ ಉತ್ಪನ್ನವಾರು ದರ
ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಆಲಸಂದೆ ಕಾಳು	1219	6219
ಕಡಲೆಬೇಳೆ	6500	6550
ಕಡಲೆಕಾಳು	2011	5258
ಉದ್ದಿನಬೇಳೆ	10200	10200
ಉದ್ದಿನಕಾಳು	6511	7111
ಒಣ ಮೆಣಸಿನಕಾಯಿ	33000	42500
ಹೆಸರುಬೇಳೆ	8900	9100
ಬಟಾಣಿ	5851	5900
ಹೆಸರುಕಾಳು	989	5200
ನೆಲಗಡಲೆ (ಶೇಂಗಾ)	4180	7227
ಹುರುಳಿ ಕಾಳು	2817	3321
ಬೆಲ್ಲ	4150	4150
ಜೋಳ	1100	3666
ಮೆಕ್ಕೆಜೋಳ	1501	1795
ಮಡಿಕೆ (ಮಟಕಿ)	8777	13371
ಸಾಸುವೆ	5416	5586
ಈರುಳ್ಳಿ	500	2100
ಆಲೂಗಡ್ಡೆ	1100	1700
ಅಕ್ಕಿ	5400	5415
ಕುಸುಬೆ	4611	5011
ಸೋಯಾಬಿನ್	1509	5500
ತೊಗರಿ	3101	5366
ತೊಗರಿ ಬೇಳೆ	10800	12601
ಗೋಧಿ	2129	4011

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು-1 ರವರ ಕಚೇರಿ, ಬೆಂಘತ್ಯಾನಿನಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು-560052

ಸಂಖ್ಯೆ: ಉಪ್ರವ್ಯ-1/ಬೆಂಘತ್ಯಾನಿನಿ/ಟೆಂಡ್/20/2025-26 ದಿನಾಂಕ: 10.03.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) 3ನೇ ಕರೆ

ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತದ ವ್ಯವಸ್ಥಾಪಕರು, ಬೆಂಘತ್ಯಾನಿನಿ ಬೆಂಗಳೂರಿನ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರು-1, ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಸೇವೆಗಳಿಗೆ ಅರ್ಹ ಬಿಡ್ದರ್‌ಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇಎಂಡಿ (ರೂ.ಗಳಲ್ಲಿ)	ಗುತ್ತಿಗೆ ಅವಧಿ
1	ಬೆಂಗಳೂರು ದಕ್ಷಿಣ-1 ವಿಭಾಗದಲ್ಲಿ ಪುರಸಭೆ ಘನ ತ್ಯಾಜ್ಯ [ಎಂಎಸ್‌ಡಬ್ಲ್ಯೂ] ಮತ್ತು ಬೀದಿ ಕಸ ಗುಡಿಸಿದ ತ್ಯಾಜ್ಯಗಳ ಪ್ರಾಥಮಿಕ ಸಂಗ್ರಹ ಹಾಗೂ ದ್ವಿತೀಯ ಹಂತದ ಸಾಗಾಣಿಕೆ ಮಾಡುವುದು. [ಪ್ಯಾಕೇಜ್-20] 3ನೇ ಕರೆ	1,438.14	ರೂ. 1,00,000/- ಗಳನ್ನು ಆನ್‌ಲೈನ್/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಅಡಿಯಲ್ಲಿ ವಿದ್ಯುನ್ಮಾನ ಮೂಲಕ ಪಾವತಿ ಮತ್ತು ಉಳಿಕೆ ರೂ.14,00,000/- ಗಳನ್ನು ರಾಷ್ಟ್ರೀಕೃತ/ಅನುಸೂಚಿತ ಬ್ಯಾಂಕುಗಳು ವಿತರಿಸುವ ಬ್ಯಾಂಕ್ ಗ್ಯಾರಂಟಿ/ಎಫ್‌ಡಿಆರ್ ಮೂಲಕ ಪಾವತಿಸುವುದು	84 ತಿಂಗಳು

1) ಬಿಡ್ ಪೂರ್ವ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:15.03.2026ರಂದು 5:30 ಗಂಟೆಯವರೆಗೆ. 2) ಟೆಂಡರ್ ಪೂರ್ವ ಬಿಡ್ ಸಭೆ ದಿನಾಂಕ:16.03.2026ರಂದು ಮಧ್ಯಾಹ್ನ 3:00 ಗಂಟೆಗೆ ಮೇಲ್ಕಂಡ ಕಚೇರಿಯಲ್ಲಿ. 3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ:25.03.2026 ರಂದು ಸಂಜೆ 5:30 ಗಂಟೆಯವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:26.04.2026ರಂದು ಸಂಜೆ 4:30 ಗಂಟೆಯ ನಂತರ.

ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಡಿಐಪಿಆರ್/ಸಿಪಿ/6169/ಸಿಸಿಎಲ್/2025-26 ಉಪ ಪ್ರಧಾನ ವ್ಯವಸ್ಥಾಪಕರು-1, ಬೆಂ.ಘ.ತ್ಯಾ.ನಿ.ನಿ, ಬೆಂಗಳೂರು

ಕಿರುಸುದ್ದಿ

ಸಾಮಾನ್ಯ ಸಭೆ ಇಂದು

ಗದಗ: ತಾಲೂಕಿನ ಲಕ್ಕುಂಡಿ ಗ್ರಾಮ ಪಂಚಾಯತಿಯ ಪ್ರಸಕ್ತ ಸಾಲಿನ ಅಂತಿಮ ಸಾಮಾನ್ಯ ಸಭೆಯನ್ನು ಮಾ.11 ರಂದು ಬೆಳಗ್ಗೆ 11ಕ್ಕೆ ಗ್ರಾಮ ಪಂಚಾಯತಿ ಸಭಾಭವನದಲ್ಲಿ ಆಯೋಜಿಸಲಾಗಿದೆ.

ಪೂರ್ವಭಾವಿ ಸಭೆ

ಗದಗ: ಏ.5ರಂದು ಹಸಿರು ಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಮ್ 119ನೇ ಹಾಗೂ ಏ.14 ರಂದು ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ 135 ನೇ ಜನ್ಮ ದಿನಾಚರಣೆ ಹಿನ್ನೆಲೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾ.17 ರಂದು ಮಧ್ಯಾಹ್ನ 3ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯ ಆಡಿಟೋರಿಯಮ್ ಹಾಲ್‌ನಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಮಾ.14ಕ್ಕೆ ಮಹಿಳಾ ದಿನಾಚರಣೆ

ಮುಂಡರಗಿ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ತಾಲೂಕು ಘಟಕ,ಕದಳಿ ಮಹಿಳಾ ವೇದಿಕೆ ಮುಂಡರಗಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಕದಳಿಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವು ಮಾ.14ರಂದು ಸಂಜೆ 4.30ಕ್ಕೆ ಅಂಭಾಭವಾನಿ ಕಲ್ಯಾಣ ಮಂಟಪದಲ್ಲಿ ಜರುಗಲಿದೆ. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎ.ಬಳಿಗಾರ ವಹಿಸುವರು. ಉದ್ಘಾಟನೆಯನ್ನು ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ನೆರವೇರಿಸುವರು. ಮುಖ್ಯ ಅತಿಥಿಗಳಾಗಿ ಕದಳಿ ಮಹಿಳಾ ವೇದಿಕೆಯ ಜಿಲ್ಲಾ ಅಧ್ಯಕ್ಷೆ ಸುಧಾ ಹುಚ್ಚಣ್ಣವರ ಭಾಗವಹಿಸುವರು. ಈ ವರ್ಷದ ಕದಳಿಶ್ರೀ ಪ್ರಶಸ್ತಿಗೆ ಮುಂಡರಗಿಯ ಚೈತನ್ಯ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ನಿರ್ದೇಶಕಿ ವೀಣಾ ಪಾಟೀಲ ಭಾಜನರಾಗಿದ್ದಾರೆ. ಕದಳಿ ಮಹಿಳಾ ವೇದಿಕೆ ತಾಲೂಕು ಘಟಕದ ಅಧ್ಯಕ್ಷೆ ಸೀತಾ ಬಸಾಪೂರ, ಶಸಾಪದ ಅಧ್ಯಕ್ಷ ಡಾ.ಸಂತೋಷ ಹಿರೇಮಠ, ಶೋಭಾ ಮೇಟಿ, ಅಶೋಕ ಸಿದ್ಲಿಂಗ್ ಉಪಸ್ಥಿತರಿರುವರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಕಾರಿಣಿ ಸದಸ್ಯರಾದ ಸಂತೋಷ ಮುರಡಿ, ಮಹಾಲಿಂಗಯ್ಯ ಹಿರೇಮಠ ಮತ್ತು ತಾಲೂಕಾ ಕಾನಿಪಸಂ ಅಧ್ಯಕ್ಷ ಶಿವಮೂರ್ತಿ ಹೊಂಬಳಗಟ್ಟಿ, ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನಗೌಡ ಪಾಟೀಲ, ಗದಗ ಜಿಲ್ಲಾ ಕನ್ನಡ ಜಾಗೃತಿ ಸಮಿತಿಯ ಸದಸ್ಯ ಮುತ್ತು ಹಾಳಕೇರಿ ಇವರನ್ನು ಸನ್ಮಾನಿಸಲಾಗುವುದು.

ಅಭಿವೃದ್ಧಿಗೆ ಬಜೆಟ್ ಮಾರಕ: ಸಂಕನೂರ



ಗದಗ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿರುವ 56431 ಹುದ್ದೆಗಳನ್ನು ತುಂಬುವುದಾಗಿ ಇತ್ತೀಚೆಗೆ ಘೋಷಣೆ ಮಾಡಿದ್ದಾರೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ 15000 ಶಿಕ್ಷಕರ ಹುದ್ದೆಗಳನ್ನು, ಉನ್ನತ ಶಿಕ್ಷಣದಲ್ಲಿ 2000 ಬೋಧಕ ಹುದ್ದೆಗಳನ್ನು ಹಾಗೂ ವಿಶ್ವವಿದ್ಯಾಲಗಳಲ್ಲಿ 1000 ಸಾವಿರ ಹುದ್ದೆಗಳನ್ನು ತುಂಬಲು ಬಜೆಟ್‌ನಲ್ಲಿ ಪ್ರಾಸ್ತಾಪಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಲ್ಲಿ 2500 ಹುದ್ದೆಗಳನ್ನು, ಅರಣ್ಯ ಮತ್ತು ಪರಿಸರ ಇಲಾಖೆಯಲ್ಲಿ 358 ಗೃಹ ಇಲಾಖೆಯಲ್ಲಿ 8000 ಒಟ್ಟು 28858 ಹುದ್ದೆಗಳನ್ನು ಮಾತ್ರ ತುಂಬಿಕೊಳ್ಳಲು ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಆದರೆ ಉಳಿದ 27573 ಹುದ್ದೆಗಳ ನೇಮಕಾತಿ ಬಗ್ಗೆ ಯಾವ ಪ್ರಸ್ತಾಪ ಮಾಡದೇ ಇರುವುದು ಖಂಡನೀಯ ಎಂದು ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ ಆರೋಪಿಸಿದ್ದಾರೆ.

ಮುಖ್ಯಮಂತ್ರಿಗಳು ಮಂಡಿಸಿರುವ ಬಜೆಟ್ 448004 ಕೋಟಿ ರೂಪಾಯಿಗಳ ಬೃಹತ್ ಆಕಾರದಾಗಿದ್ದು, ಇದರಲ್ಲಿ 1.32 ಲಕ್ಷ ಕೋಟಿ ರೂ.ಸಾಲ ಪಡೆಯುವುದಾಗಿ ತಿಳಿಸಲಾಗಿದೆ. ಒಟ್ಟಾರೆ ಈ ಒಂದು ಬಜೆಟ್ ಜನರ ಮೇಲೆ ಸಾಲ ಹೊರಿಸುವ ಮತ್ತು ಹೆಚ್ಚು ಟ್ಯಾಕ್ಸ್ ವಸೂಲಿ ಮಾಡುವ ಅಲ್ಲದೇ ಅಭಿವೃದ್ಧಿಗೆ ಮಾರಕವಾಗಿರುವ ಬಜೆಟ್ ಆಗಿದೆ ಎಂದು ದೂರಿದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಶೇಂಗಾ	5409-9040
ಅಜವಾನ	6050-9150
ಅಲಸಂದಿಕಾಳು	4029-6239
ಕಡಲೆ	1412-5469
ಉದ್ದು	6719-6719
ಹೆಸರು	517-8191
ಹುರಳಿ	3000-5209
ಜೋಳ	1109-4337
ಸಾಸವಿ	4069-4869
ಕುಸಬಿ	4089-5870
ಸೂರ್ಯಕಾಂತಿ	6469-6752
ತೊಗರಿ	2000-5814
ಗೋಧಿ	1787-4869
ಸಬ್ಬಸಗಿ	3650-3650



ಲಕ್ಷ್ಮೇಶ್ವರ: ಶಾಸಕ ಡಾ.ಚಂದ್ರು ಲಮಾಣಿ ಅವರು ನ್ಯಾಯಾಂಗ ಬಂಧನದಿಂದ ಆದಷ್ಟು ಬೇಗ ಬಿಡುಗಡೆಯಾಗಲಿ ಎಂದು ಶಿರಹಟ್ಟಿ ಮತಕ್ಷೇತ್ರದಾದ್ಯಂತ ಅವರ ಅಭಿಮಾನಿಗಳು, ಕಾರ್ಯಕರ್ತರು ಬಹುತೇಕ ಗ್ರಾಮಗಳಲ್ಲಿನ ಆರಾಧ್ಯ ದೇವರಿಗೆ ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಿದರು. ತಾಲೂಕಿನ ಬಟ್ಟೂರ, ಶಿಗ್ಲಿ, ಕುಂದ್ರಳ್ಳಿ ಸೇರಿ ಅನೇಕ ಗ್ರಾಮಗಳಲ್ಲಿ ಪೂಜೆ ಸಲ್ಲಿಸಿ ಪ್ರಾರ್ಥಿಸಲಾಯಿತು.

ಬೇಡಿಕೆಗೆ ಬಜೆಟ್‌ನಲ್ಲಿ ಸ್ಪಂದನೆ: ಮಕಾನದಾರ

ಗದಗ: ಉತ್ತರ ಕರ್ನಾಟಕ ಭಾಗದ ಮುಸ್ಲಿಂ ಸಮುದಾಯದ ಬಹುದಿನಗಳ ಕನಸಾಗಿದ್ದ ಹಜ್ ಭವನ ನಿರ್ಮಾಣದ ಬೇಡಿಕೆಗೆ ಪ್ರಸಕ್ತ ಸಾಲಿನ ರಾಜ್ಯ ಬಜೆಟ್‌ನಲ್ಲಿ ಸ್ಪಂದನೆ ದೊರೆತಿದೆ. ಹುಬ್ಬಳ್ಳಿ ನಗರದಲ್ಲಿ ಹಜ್ ಭವನ ನಿರ್ಮಾಣಕ್ಕೆ ಘೋಷಣೆ ಮಾಡುವ ಮೂಲಕ ರಾಜ್ಯದ ಕಾಂಗ್ರೆಸ್ ಸರ್ಕಾರ ಈ ಭಾಗದ ಮುಸ್ಲಿಂ ಸಮುದಾಯದ ದೀರ್ಘಕಾಲದ ಆಶಯವನ್ನು ಸಾಕಾರಗೊಳಿಸಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಜಿಲ್ಲಾ ಕೆಡಿಪಿ ಸದಸ್ಯ ಎಸ್.ಡಿ.ಮಕಾನದಾರ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕ ಭಾಗದ ಯಾತ್ರಿಕರು ಹಜ್ ಯಾತ್ರೆಗೆ ತೆರಳುವ ಸಂದರ್ಭದಲ್ಲಿ ಅಗತ್ಯವಿರುವ ಮಾರ್ಗದರ್ಶನ, ತರಬೇತಿ, ವಸತಿ ಹಾಗೂ ಆಡಳಿತಾತ್ಮಕ ವ್ಯವಸ್ಥೆಗಳ ಕೊರತೆಯನ್ನು ಅನುಭವಿಸುತ್ತಿದ್ದರು. ಈ ಭಾಗದಲ್ಲಿ ಹಜ್ ಭವನ ನಿರ್ಮಾಣವಾಗುವುದರಿಂದ ಸಾವಿರಾರು ಹಜ್ ಯಾತ್ರಿಕರಿಗೆ ಮಹತ್ತರವಾದ ಅನುಕೂಲವಾಗಲಿದೆ ಎಂದರು. ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ ಅವರು ಉತ್ತರ ಕರ್ನಾಟಕ ಭಾಗದಲ್ಲಿ ಹಜ್ ಭವನ ಸ್ಥಾಪನೆ ಅತ್ಯಾವಶ್ಯಕವೆಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು, ಈ ಕುರಿತು ಮನವರಿಕೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದರು.

ಮೌಲಾನ ಇನಾಯತವುಲ್ಲಾ ಪಿರಜಾದೆ, ಮುಫ್ತಿ ಶಬ್ಬೀರ್ ಅಹ್ಮದ್ ಬೊದ್ಲೆಖಾನ್, ಯೂಸುಫ್ ನಮಾಜಿ, ರಿಯಾಜ್ ಅತ್ತಾರ, ಉಮರ್ ಫಾರೂಖ್ ಹುಬ್ಬಳ್ಳಿ, ಬಾಬಾಜನ್ ಬಳಗನೂರು, ಸಲೀಂ ನರಗುಂದ, ಮಹಮ್ಮದ್ ಅಲಿ ಅಕ್ಕಿ, ಅನ್ವರಸಾಬ ತಹಶೀಲ್ದಾರ್ ಇದ್ದರು.



ಗದಗ: ತಾಲೂಕಿನ ಕದಡಿ ಗ್ರಾಮದಲ್ಲಿ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಹಕಾರದೊಂದಿಗೆ ಗ್ರಾಮೀಣ ಅಭಿವೃದ್ಧಿ ಬೃಹತ್ ಕುಡಿಯುವ ನೀರಿನ ಕೆರೆ ಅಭಿವೃದ್ಧಿಗೆ ಚಾಲನೆ ನೀಡಲಾಯಿತು. ಮಾಜಿ ಶಾಸಕ ಬಿ.ಆರ್. ಯಾಗವಲ, ಗ್ರಾಮ ಪಂಚಾಯತಿ ಮಾಜಿ ಸದಸ್ಯ ರುದ್ರಪ್ಪ ಅಡಿಗಿಮನಿ, ವಿ.ಆರ್. ಗೋಜನೂರ್, ಬಸವರಾಜ್ ಶಿರೂರು, ಕಳಕಪ್ಪ ಇಟಗಿ, ಮಹೇಶಗೌಡ ಚಿಕ್ಕನಗೌಡ್ರ, ಇತರರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ-1: ಪೂರ್ವ ಸಿದ್ಧತಾ ಸಭೆ | ಡಿಸಿ ಶ್ರೀಧರ್ ಸೂಚನೆ

ವ್ಯವಸ್ಥಿತ ಪರೀಕ್ಷೆಗೆ ಕ್ರಮವಹಿಸಿ

ಗದಗ: ಜಿಲ್ಲೆಯಲ್ಲಿ ಮಾರ್ಚ 18 ರಿಂದ ಏ.2ರವರೆಗೆ ಜರುಗುವ ಎಸ್ ಎಸ್ ಎಲ್ ಸಿ ಪರೀಕ್ಷೆ-1 ಯನ್ನು ವ್ಯವಸ್ಥಿತವಾಗಿ ಹಾಗೂ ಅಚ್ಚುಕಟ್ಟಾಗಿ ನಡೆಸಲು ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ಎಸ್ ಎಸ್ ಎಲ್ ಸಿ ಪರೀಕ್ಷೆ-1 ಕುರಿತು ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಪರೀಕ್ಷೆಗಳಲ್ಲಿ ಯಾವುದೇ ಅಕ್ರಮಗಳು ಅವ್ಯವಹಾರಗಳು ನಡೆಯದಂತೆ ನೋಡಿಕೊಳ್ಳಬೇಕು. ಪರೀಕ್ಷಾ ಕೇಂದ್ರಗಳಲ್ಲಿ ಸೂಕ್ತ ಆಸನದ ವ್ಯವಸ್ಥೆ ಇರುವಂತೆ ಕ್ರಮ ಜರುಗಿಸಬೇಕು. ಜಿಲ್ಲೆಯಲ್ಲಿ ಒಟ್ಟು 61 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯಲಿದ್ದು ಅಲ್ಲಿ ಕುಡಿಯುವ ನೀರು, ವಿದ್ಯುತ್ ವ್ಯವಸ್ಥೆ ಸೇರಿದಂತೆ ಮೂಲಭೂತ ಸೌಲಭ್ಯಗಳು ಇರುವಂತೆ ನೋಡಿಕೊಳ್ಳಬೇಕು. ಪರೀಕ್ಷಾ ಅವಧಿಯಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು ಪರೀಕ್ಷಾ ಅವಧಿಯಲ್ಲಿ ಯಾವುದೇ ಲೋಪದೋಷಗಳಾಗದಂತೆ ಕ್ರಮ ಜರುಗಿಸಬೇಕು. ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆ-1 ಪರೀಕ್ಷೆಗಳು ಶಾಂತಿಯುತವಾಗಿ, ಪಾರದರ್ಶಕವಾಗಿ ನಡೆಯುವಂತೆ ಕ್ರಮ ವಹಿಸಬೇಕೆಂದು ಅವರು ಸೂಚಿಸಿದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆ- 1 ವೇಳಾಪಟ್ಟಿ: ಮಾ.18 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1.15ರವರೆಗೆ ಪ್ರಥಮ ಭಾಷೆ (ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್ , ಇಂಗ್ಲಿಷ್ ಎನ್‌ಸಿಇಆರ್‌ಟಿ, ಸಂಸ್ಕೃತ); ಮಾ.23 ರಂದು ಕೋರ್ ಸಬ್ಜೆಕ್ಟ್ - ವಿಜ್ಞಾನ ಬೆಳಗ್ಗೆ 10 ರಿಂದ ಮಧ್ಯಾಹ್ನ 1.15, ರಾಜ್ಯಶಾಸ್ತ್ರ ಬೆಳಗ್ಗೆ 10 ರಿಂದ ಮಧ್ಯಾಹ್ನ 1.15, ಹಿಂದೂಸ್ಥಾನಿ ಸಂಗೀತ / ಕರ್ನಾಟಕ ಸಂಗೀತ ಮಧ್ಯಾಹ್ನ 2 ರಿಂದ ಸಾಯಂಕಾಲ 5.15ರವರೆಗೆ, ಮಾ.25 ರಂದು ದ್ವಿತೀಯ ಭಾಷೆ ಇಂಗ್ಲಿಷ್, ಕನ್ನಡ ಬೆಳಗ್ಗೆ 10 ರಿಂದ ಮಧ್ಯಾಹ್ನ 1ರವರಗೆ, ಮಾ.28ರಂದು ಕೋರ್ ಸಬ್ಜೆಕ್ಟ್ ಗಣಿತ, ಸಮಾಜ ಶಾಸ್ತ್ರ ಬೆಳಗ್ಗೆ 10 ರಿಂದ ಮಧ್ಯಾಹ್ನ 1.15ರವರೆಗೆ, ಮಾ.30 ರಂದು ತೃತೀಯ ಭಾಷೆ (ಹಿಂದಿ ಎನ್‌ಸಿಇಆರ್‌ಟಿ), ಹಿಂದಿ, ಕನ್ನಡ, ಇಂಗ್ಲಿಷ್ , ಅರೇಬಿಕ್, ಉರ್ದು, ಸಂಸ್ಕೃತ, ಕೊಂಕಣಿ , ತುಳು, ಮರಾಠಿ) ಬೆಳಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ/ ಎನ್.ಎಸ್.ಕ್ಯೂ ಎಫ್ ವಿಷಯಗಳು, ಮಾಹಿತಿ ತಂತ್ರಜ್ಞಾನ, ರಿಟೇಲ್, ಆಟೋಮೊಬೈಲ್, ಬ್ಯೂಟಿ ಆಂಡ್ ವೆಲ್‌ನೆಸ್, ಅಪರೆಲ್ ಮೇಡ್ ಆಪ್ಸ್ ಹೋಮ್ ಫರ್ನಿಷಿಂಗ್, ಎಲೆಕ್ಟ್ರಾನಿಕ್ಸ್ ಹಾರ್ಡವೇರ್ ಬೆಳಗ್ಗೆ 10 ರಿಂದ ಮಧ್ಯಾಹ್ನ 12.15ರವರೆಗೆ, ಏ.1ರಂದು ಎಲಿಮೆಂಟ್ಸ್ ಆಫ್ ಎಲೆಕ್ಟ್ರಿಕಲ್ ಎಂಜಿನಿಯರಿಂಗ್, ಎಲಿಮೆಂಟ್ಸ್ ಆಫ್ ಮೆಕ್ಯಾನಿಕಲ್ ಇಂಜನೀಯರಿಂಗ್, ಎಲಿಮೆಂಟ್ಸ್ ಆಫ್ ಮೆಕ್ಯಾನಿಕಲ್ ಎಂಜಿನಿಯರಿಂಗ್, ಪ್ರೋಗ್ರಾಮಿಂಗ್ ಇನ್, ಅರ್ಥಶಾಸ್ತ್ರ ಬೆಳಗ್ಗೆ 10 ರಿಂದ ಮಧ್ಯಾಹ್ನ 1.15ರವರೆಗೆ, ಏ.2ರಂದು ಕೋರ್ ಸಬ್ಜೆಕ್ಟ್ - ಸಮಾಜ ವಿಜ್ಞಾನ ಬೆಳಗ್ಗೆ 10 ರಿಂದ ಮಧ್ಯಾಹ್ನ 1.15ರವರೆಗ ಜರುಗಲಿವೆ.

- ಎಸ್‌ಎಸ್‌ಎಲ್‌ಸಿ-1 ಪರೀಕ್ಷೆಯು ಮಾ.18 ರಿಂದ ಏ.2 ರವರೆಗೆ ಜಿಲ್ಲೆಯ 61 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿವೆ
- ಒಟ್ಟು 17146 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ
- ಪರೀಕ್ಷಾ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯ ಒದಗಿಸಲು ಕ್ರಮ ವಹಿಸಲಾಗಿದೆ ಪರೀಕ್ಷೆಗಳನ್ನು ಅಚ್ಚುಕಟ್ಟಾಗಿ ನಡೆಸಲು ಸಕಲ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್. ಎಸ್.ಬುರುಡಿ

ಡಿವೈಎಸ್‌ಪಿ ಮಹಾಂತೇಶ ಸಜ್ಜನ, ಡಯಟ್ ಪ್ರಾಚಾರ್ಯ ಜೆ.ಎಂ. ಮುಂದಿನಮನಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಹಾಜರಾಗಿದ್ದರು.

ನೂತನ ಬಾಡಿಗೆ ದರ ನಿಗದಿ ಪಡಿಸಲು ಒತ್ತಾಯ

ಶಿರಹಟ್ಟಿ: ಪಟ್ಟಣದ ಎಪಿಎಂಸಿ ಮಳಿಗೆಗಳು ದುಬಾರಿ ಬಾಡಿಗೆ ಕಾರಣದಿಂದ ಉಪಯೋಗವಾಗದೇ ವ್ಯರ್ಥವಾಗಿ ಬಿದ್ದಿದ್ದು, ಅಧಿಕಾರಿಗಳು ಮಳಿಗೆಗಳ ದರ ಮರುಪರಿಶೀಲನೆ ನಡೆಸಿ ನೂತನ ಬಾಡಿಗೆ ದರ ನಿಗದಿ ಪಡಿಸಿ, ಇಲಾಖೆಯ ಆದಾಯದ ಮೂಲ ಹೆಚ್ಚಿಸುವ ಮೂಲಕ ಜನರ ಉಪಯೋಗಕ್ಕೆ ಕಲ್ಪಿಸಬೇಕು ಎಂದು ಸ್ಥಳೀಯ ಕುಂದುಕೊರತೆ ನಿವಾರಣಾ ಸಮಿತಿ ಅಧ್ಯಕ್ಷ ಅಕ್ಬರ ಯಾದಗಿರಿ ಆಗ್ರಹಿಸಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಸ್ಥಳೀಯ ಕುಂದುಕೊರತೆ ನಿವಾರಣಾ ಸಮಿತಿ ವತಿಯಿಂದ ಎ.ಪಿ.ಎಂ.ಸಿ ಮಳಿಗೆಗಳ ಬಾಡಿಗೆ ದರ ಕಡಿಮೆಗೊಳಿಸಿ ಆದೇಶ ಹೊರಡಿಸುವಂತೆ ಆಗ್ರಹಿಸಿ ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಅವರ ಮೂಲಕ ಕೃಷಿ ಮಾರುಕಟ್ಟೆ ಇಲಾಖೆ ಸಚಿವ ಶಿವಾನಂದ ಪಾಟೀಲ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದರು. ಎಪಿಎಂಸಿ ಮಳಿಗೆ ನಿರ್ಮಿಸಿ ವರ್ಷಗಳು ಗತಿಸುತ್ತಿವೆ. ಅತ್ಯಂತ ದುಬಾರಿ ಬಾಡಿಗೆ ನಿಗದಿ ಮಾಡಿರುವುದರಿಂದ ವ್ಯಾಪಾರಸ್ಥರು ಬಾಡಿಗೆ ತಗೆದುಕೊಳ್ಳಲು ಮುಂದೆ ಬರುತ್ತಿಲ್ಲ, ಇದರಿಂದ ಸರ್ಕಾರಕ್ಕೆ ಹೋಗಬೇಕಾದ ಆದಾಯವು ಹೋಗುತ್ತಿಲ್ಲ, ಆದ್ದರಿಂದ ಸರ್ಕಾರ ಮಳಿಗೆಗಳ ದರವನ್ನು ಸ್ಥಳೀಯ ವ್ಯಾಪಾರ-ವಹಿವಾಟು ನೋಡಿಕೊಂಡು ವೈಜ್ಞಾನಿಕ ಬಾಡಿಗೆ ನಿಗದಿ ಮಾಡಬೇಕು. ಅಂದಾಗ ವ್ಯಾಪಾರಸ್ಥರಿಗೆ ಅನುಕೂಲವಾಗುತ್ತದೆ ಎಂದರು.

ಕೋಟ್ಯಾಂತರ ರೂ. ಬೆಲೆ ಬಾಳುವ ಎಪಿಎಂಸಿ ಜಾಗ ಜನನಬೀಡಿ ಪ್ರದೇಶದಲ್ಲಿ ಇದ್ದರೂ ಸಹ ರೈತರು ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬಾರದೆ ಅನೈತಿಕ ಚಟುವಟಿಕೆಗಳ ತಾಣವಾಗಿ ಮಾರ್ಪಟಿದೆ. ಅಧಿಕಾರಿಗಳು ವರ್ಷಕ್ಕೊಮ್ಮೆ ಸ್ವಚ್ಛತೆ ನೆಪದಲ್ಲಿ ಲಕ್ಷಾಂತರ ರೂ. ಖರ್ಚು ಮಾಡಿಸಿ ಅಭಿವೃದ್ಧಿ ಕೆಲಸ ಮಾಡದೇ ಸುಮ್ಮನೆ ಬೀಡುತ್ತಾರೆ. ಆದ್ದರಿಂದ ಸರ್ಕಾರ ಎಪಿಎಂಸಿ ಜಾಗವನ್ನು ಅಭಿವೃದ್ಧಿ ಪಡಿಸಿ ರೈತರು, ಸಾರ್ವಜನಿಕರ ಉಪಯೋಗಕ್ಕೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ನಾಗರಾಜ ಲಕ್ಕುಂಡಿ, ಶ್ರೀನಿವಾಸ ಬಾರಬಾರ, ಮುನ್ನಾ ಢಾಲಾಯತ್, ಜಾಫರ ಖಾದರ, ಅಪ್ಪಣ್ಣ ಕುಬೇರ, ಈರಣ್ಣ ಬಾಗೇವಾಡಿ, ರಫೀಕ ಕೆರಿಮನಿ, ಗೌಸ ಕಲಾವಂತ, ಇಂತ್ಯಾಜ ಶಿಗ್ಲಿ, ಶ್ರೀನಿವಾಸ ಕಪಟಗಾರ ಇದ್ದರು.



ಹಳೆ ಮೀಸಲಾತಿ ಪದ್ಧತಿ ಯಥಾವತ್ತಾಗಿ ಜಾರಿಗೊಳಿಸಿ

ಗದಗ: 2022ರ ಪೂರ್ವದಲ್ಲಿನ ಹಳೆ ಮೀಸಲಾತಿ ಪದ್ಧತಿಯನ್ನು ಯಥಾವತ್ತಾಗಿ ಜಾರಿಗೊಳಿಸುವಂತೆ ಆಗ್ರಹಿಸಿ ಅಖಿಲ ಕರ್ನಾಟಕ ಬಂಜಾರ, ಭೋವಿ, ಕೊರಚ ಮತ್ತು ಕೊರಮ ಸಮಾಜಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಬಂಜಾರ ಸಮಾಜದ ಹಿರಿಯರಾದ ಕುಬೇರಪ್ಪ ಪವಾರ ಮಾತನಾಡಿ, 2022ರ ಪೂರ್ವದಲ್ಲಿನ ಹಳೆ ಮೀಸಲಾತಿ ಪದ್ಧತಿಯನ್ನು ಯಥಾವತ್ತಾಗಿ ಜಾರಿಗೊಳಿಸುವಂತೆ ನಮ್ಮ ಸಂಘವು ಚರ್ಚಿಸಿ ನಿರ್ಣಯ ತೆಗೆದುಕೊಂಡಿದೆ. ಹಳೆಯ ಮೀಸಲಾತಿಯ ನಿಯಮ ಶೇಕಡಾ 50ರ ಅನ್ವಯ ನೇಮಕಾತಿ ಮತ್ತು ಶೈಕ್ಷಣಿಕ ಪ್ರವೇಶ ಪ್ರಕ್ರಿಯೆಯನ್ನು ಮುಂದುವರಿಸುವುದಾಗಿ ರಾಜ್ಯ ಸರ್ಕಾರ ಪ್ರಕಟಣೆ ಮಾಡಿರುವುದು ಸ್ವಾಗತಾರ್ಹ. ಇದನ್ನು ತ್ವರಿತವಾಗಿ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ಈ ಹಿಂದೆ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ (17%) ಮತ್ತು ಪರಿಶಿಷ್ಟ ಪಂಗಡಗಳ (7%) ಮೀಸಲಾತಿಯನ್ನು ಹೆಚ್ಚಳ ಮಾಡಿರುವ ಆದೇಶವನ್ನು ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಸೇರಿಸಲು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ಪ್ರಧಾನಿಗಳ ಬಳಿ ನಿಯೋಗ ಹೋಗಬೇಕು. ಒತ್ತಡ ಹೇರಬೇಕು. ರಾಜ್ಯದಲ್ಲಿ ಒಳ ಮೀಸಲಾತಿಯ ಪ್ರಕ್ರಿಯೆಯ ನಡೆಸುವ ಮುನ್ನ ನಮ್ಮ ಸಮುದಾಯಗಳ ಮುಖಂಡರ ಜೊತೆಗೆ ಸಮಾಲೋಚನೆ ಮಾಡಬೇಕು. ಶಿಕ್ಷಣ ಪ್ರವೇಶ, ಹಾಸ್ಟೆಲ್ ಪ್ರವೇಶ ಮತ್ತು ಉದ್ಯೋಗ ನೇಮಕಾತಿ ರೋಸ್ಟರ್ ಹಂಚಿಕೆ ಮಾಡಿ ಈ ಹಿಂದೆ ಸರ್ಕಾರ ಹೊರಡಿಸಿರುವ ಎಲ್ಲಾ ಆದೇಶ, ಸುತ್ತೋಲೆಗಳನ್ನು ಹಿಂಪಡೆಯಬೇಕು. ಈಗಾಗಲೇ ನಡೆಸಲಾಗಿರುವ ವಿವಿಧ ನೇಮಕಾತಿಗಳನ್ನು ರದ್ದುಗೊಳಿಸಬೇಕು. ಪರಿಶಿಷ್ಟ ಜಾತಿ ಪರ್ವಗ ಎ, ಬಿ, ಸಿ ಎಂದು ನಮೂದಿಸಿ ನೀಡಲಾಗಿರುವ ಜಾತಿ ಪ್ರಮಾಣಪತ್ರಗಳನ್ನು ಹಿಂಪಡೆಯಬೇಕು. ಹಳೆಯ ಜಾತಿ ಪ್ರಮಾಣ ಪತ್ರಗಳನ್ನೆ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಉಚ್ಚನ್ಯಾಯಾಲದ ತೀರ್ಪಿನ ನಂತರವೆ ಒಳ ಮೀಸಲಾತಿ ಮಾಡಬೇಕು. ಕೇರಳ ಮಹಾರಾಷ್ಟ್ರ, ಗೋವಾ ಮುಂತಾದ ರಾಜ್ಯಗಳಿಗೆ ವಲಸೆ ಹೋಗಿರುವ ಬಂಜಾರ ಕೂಲಿ ಕಾರ್ಮಿಕರ ಸಮೀಕ್ಷೆ ಮಾಡಲು ಪ್ರತ್ಯೇಕ ಸಮೀಕ್ಷಾ ತಂಡವನ್ನು ರಚನೆ ಮಾಡಿದ ನಂತರವೇ ಒಳಮೀಸಲಾತಿಯನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಬಂಜಾರ ಸಮಾಜದ ಕುಬೇರಪ್ಪ ಪವಾರ, ಪಾಂಡಪ್ಪ ಪೂಜಾರಿ, ಕೇಶಪ್ಪ ನಭಾಪುರ, ಪುಟ್ಟಪ್ಪ ಚನ್ನಳ್ಳಿ, ಶಿವು ನಾಯಕ, ಕೇಶವ, ಕೇಶವ ಛಬ್ಬಿ, ಧನಂಜಯ್ ನಭಾಪುರ, ವಿನಾಯಕ್ ರಾಥೋಡ, ತುಕಾರಾಮ ಲಮಾಣಿ, ತಿಪ್ಪಣ್ಣ ಪೂಜಾರಿ ಇದ್ದರು.



ಲಕ್ಷ್ಮೇಶ್ವರ ಪಟ್ಟಣ ಸಮಸ್ಯೆಗಳಿಂದ ಮುಕ್ತಗೊಳ್ಳಲಿ: ಪೂರ್ಣಾಜಿ ಖರಾಟೆ



ಲಕ್ಷ್ಮೇಶ್ವರ: ಪಟ್ಟಣವು ಹಲವಾರು ವರ್ಷಗಳಿಂದ ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದು, ಇವುಗಳಿಗೆ ಮುಕ್ತಿ ದೊರಕಿಸುವ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಮತ್ತು ಉಸ್ತುವಾರಿ ಸಚಿವರು ವಿಶೇಷ ಗಮನ ನೀಡಬೇಕು. ಸಮಸ್ಯೆಗಳ ಸುಳಿಯಿಂದ ಪಟ್ಟಣದ ಅಭಿವೃದ್ಧಿ ಕುಂಠಿತವಾಗುತ್ತಿದೆ ಎಂದು ನಿವೃತ್ತ ಶಿಕ್ಷಕ ಹಾಗೂ ಬಿಜೆಪಿಯ ಎಸ್‌ಸಿ ಮೋರ್ಚಾದ ಜಿಲ್ಲಾ ಘಟಕದ ಮಾಜಿ ಉಪಾಧ್ಯಕ್ಷ ಪೂರ್ಣಾಜಿ ಖರಾಟೆ ಹೇಳಿದರು.

ಈ ಕುರಿತು ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಹತ್ತು ವರ್ಷಗಳ ಹಿಂದೆಯೇ ಒಳಚರಂಡಿ ಯೋಜನೆಗಾಗಿ ಸುಸ್ಥಿತಿಯಲ್ಲಿದ್ದ ರಸ್ತೆಗಳನ್ನು ಅಗೆದು ಪೂಪ್‌ಲೈನ್ ಜೋಡಿಸುವ ಕಾರ್ಯಕ್ಕೆ ಲಕ್ಷಾಂತರ ರೂ.ಗಳ ವೆಚ್ಚ ಮಾಡಲಾಗಿದೆ. ಅಂದಿನ ವೇಳೆಯಲ್ಲಿ ಅಗೆದ ರಸ್ತೆಗಳನ್ನು ಸರಿಯಾಗಿ ದುರಸ್ತಿ ಮಾಡದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿನ ಬಹುತೇಕ ರಸ್ತೆಗಳ ಪರಿಸ್ಥಿತಿ ಅಯೋಮಯವಾಗಿದೆ. ಸರಿಯಾದ ನಿರ್ವಹಣೆ ಕೊರತೆಯಿಂದ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಿ ಜನರು ಪರದಾಡುವಂತಾಗಿದೆ. ಲಕ್ಷ್ಮೇಶ್ವರ ನೂತನ ತಾಲೂಕು ಕೇಂದ್ರವಾಗಿ ಎಂಟು ವರ್ಷ ಕಳೆದರೂ ಕೂಡ ಇನ್ನೂ ಎಲ್ಲ ಕಚೇರಿಗಳು ಆರಂಭವಾಗಿಲ್ಲ. ಗದಗ-ಯಲವಗಿ ರೈಲ್ವೆ ನಿರ್ಮಾಣ ಕಾರ್ಯ ನನೆಗುದಿಗೆ ಬಿದ್ದಿದೆ. ಇಳಕಲ್ಲ-ಕೈಗಾ ರಸ್ತೆ ನಿರ್ಮಾಣ ಕೂಡ ಇನ್ನೂ ಆರಂಭವಾಗಿಲ್ಲ, ರೈಲ್ವೆ ಮಾರ್ಗ ನಿರ್ಮಾಣ ಹಾಗೂ ಇಳಕಲ್ಲ ಕೈಗಾ ರಸ್ತೆ ಕುರಿತು ಈಗಾಗಲೇ ಸಂಸದರು ಧ್ವನಿ ಎತ್ತಿದ್ದರೂ ಕೂಡ ಅವು ಅನುಷ್ಠಾನಕ್ಕೆ ಬಂದಿಲ್ಲ ಎಂದರು. ಇಲ್ಲಿನ ಪುರಾತನ ಇಟ್ಟಿಗೇರಿ ಕೆರೆ ನಾಲ್ಕೂ ದಿಕ್ಕಿನಿಂದ ಒತ್ತುವರಿ ಆಗಿದ್ದು ಇಡೀ ಕೆರೆಯ ಅಸ್ತಿತ್ವಕ್ಕೆ ಧಕ್ಕೆ ಬಂದಿದೆ. ಕೆರೆ ಅಭಿವೃದ್ಧಿ ನೆಪದಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಮಣ್ಣಿನ ಒಡ್ಡು ನಿರ್ಮಿಸಲಾಗಿತ್ತು. ಆದರೆ ಯಾವುದೋ ಕಾರಣಕ್ಕೆ ಹಾಕಿದ ಒಡ್ಡನ್ನು ಪುರಸಭೆಯವರು ಒಂದು ಕಡೆ ತೆರವುಗೊಳಿಸುತ್ತಿರುವುದು ಏಕೆ ಎಂದು ಪ್ರಶ್ನಿಸಿದರಲ್ಲದೆ, ಜನರ ತೆರಿಗೆ ದುಡ್ಡನ್ನು ಈ ರೀತಿ ಪೋಲು ಮಾಡುವುದು ತಪ್ಪು ಎಂದರು. ಈ ಸಂದರ್ಭದಲ್ಲಿ ಶಿಗ್ಲಿ ಗ್ರಾಮದ ಸಾಮಾಜಿಕ ಹೋರಾಟಗಾರ ಸೋಮಣ್ಣ ಡಾಣಗಲ್ಲ ಇದ್ದರು.

ಕಸಕ್ಕೆ ಬೆಂಕಿ: ಕೃಷಿ ಪರಿಕರ ಭಸ್ಮ



ಲಕ್ಷ್ಮೇಶ್ವರ: ಸಮೀಪದ ಅಡರಕಟ್ಟಿ ಗ್ರಾಮದ ಹತ್ತಿರ ಸೋಮವಾರ ಯಾರೋ ಜಮೀನಿನಲ್ಲಿನ ಕಸಕ್ಕೆ ಹಚ್ಚಿದ ಬೆಂಕಿ ಆವರಿಸಿ ರೈತರ ಹೊಟ್ಟು-ಮೇವು, ಕೃಷಿ ಪರಿಕರಗಳು, ನೀರಾವರಿ ಸ್ಪಿಂಕ್ಲರ್ ಸೆಟ್ ಸುಟ್ಟು ಅಪಾರ ಹಾನಿ ಸಂಭವಿಸಿದೆ.

ಗ್ರಾಮದ ರೈತರಾದ ಯಲ್ಲಪ್ಪ ರೊಳ್ಳಿ, ಅಶೋಕ ರೊಳ್ಳಿ, ನಿಂಗಪ್ಪ ಚಿಕ್ಕಣ್ಣವರ, ಉಮೇಶ ಚಿಕ್ಕಣ್ಣವರ, ಬಸವರಾಜ ಕಳ್ಳಿಮನಿ ಮತ್ತಿತರ ರೈತರು ಜಾನುವಾರುಗಳಿಗಾಗಿ ಸಂಗ್ರಹಿಸಿಟ್ಟಿದ್ದ ಕಡಲೆ, ಶೇಂಗಾ, ಮೆಕ್ಕೆಜೋಳದ ಹೊಟ್ಟು-ಮೇವು, ನೀರಾವರಿ ಉಪಕರಣಗಳು ಬೆಂಕಿ ಕೆನ್ನಾಲಿಗೆಗೆ ಸುಟ್ಟು ಕರಕಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ರೈತರ ಸಹಕಾರದಿಂದ ಬೆಂಕಿ ನಂದಿಸುವ ಮೂಲಕ ಹೆಚ್ಚಿನ ಹಾನಿ ತಪ್ಪಿಸಿದ್ದಾರೆ.

ಬೇಸಿಗೆಯಲ್ಲಿ ಮಕ್ಕಳ ಬಗ್ಗೆ ಕಾಳಜಿ ವಹಿಸಿ

ನರಗುಂದ: ಅಂಗನವಾಡಿ ಕೇಂದ್ರವನ್ನು ಪೂರ್ವ ಪ್ರಾಥಮಿಕ ಶಾಲೆಯನ್ನಾಗಿ ಆಯ್ಕೆ ಮಾಡಿದ್ದರಿಂದ ಮಕ್ಕಳಿಗೆ ಸಮಯ ಪಾಲನೆ, ಶಿಸ್ತು, ಶಾಲಾ ಪೂರ್ವ ಶಿಕ್ಷಣ ಪಾಠ ದೊರೆಯುವಂತಾಗುತ್ತದೆ. ಬೇಸಿಗೆಯಲ್ಲಿ ಮಕ್ಕಳ ಬಗ್ಗೆ ಸಾಕಷ್ಟು ಕಾಳಜಿ ವಹಿಸಬೇಕು ಎಂದು ಸಿಡಿಪಿಒ ವೆಂಕಪ್ಪ ಗಿರಿತಿಮ್ಮಣ್ಣವರ ಹೇಳಿದರು. ಅವರು ತಾಲೂಕಿನ ಬೆನಕನಕೊಪ್ಪ ಗ್ರಾಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನೆ ವತಿಯಿಂದ 46ನೇ ಅಂಗನವಾಡಿ ಕೇಂದ್ರವನ್ನು ಪೂರ್ವ ಪ್ರಾಥಮಿಕ ಶಾಲೆಯನ್ನಾಗಿ ಆಯ್ಕೆ ಮಾಡಿದ್ದರ ಪ್ರಾರಂಭೋತ್ಸವ ಉದ್ಘಾಟಿಸಿ ಮಾತನಾಡಿದರು. ಮೇಲ್ವಿಚಾರಕಿ ಭಾರತಿ ಕಾಲಚೆಟ್ಟಿ ಮಾತನಾಡಿದರು. ಮೊದಲ ಗರ್ಭಿಣಿಯರಿಗೆ ಸೀಮಂತ ಕಾರ್ಯಕ್ರಮ ಜರುಗಿತು. ಮಕ್ಕಳಿಗೆ ಸಮವಸ್ತ್ರ ಹಾಗೂ ಪುಸ್ತಕ ವಿತರಿಸಲಾಯಿತು. ರೇಖಾ ಭೂಮಣ್ಣವರ ನಿರೂಪಿಸಿದರು.



ವಿದ್ಯಾರ್ಥಿಗಳಿಗೆ ಪರೀಕ್ಷಾ ಪೂರ್ವಸಿದ್ಧತೆ ಅವಶ್ಯ

ಗದಗ: ಪರೀಕ್ಷೆ ಎಂದಾಕ್ಷಣ ಅನೇಕ ವಿದ್ಯಾರ್ಥಿಗಳಿಗೆ ಭಯ, ಆತಂಕ, ದುಗಡ, ದೈಹಿಕ ಮಾನಸಿಕ ಒತ್ತಡಗಳು ಕಾಡುತ್ತಿವೆ ಎಂದು ಖ್ಯಾತ ವೈದ್ಯ ಮತ್ತು ಸಾಹಿತಿ ಡಾ.ಕಲ್ಮೇಶ ಮೂರಶಿಳ್ಳಿನ ಹೇಳಿದರು.

ನಗರದ ಯೋಗ ಪಾಠಶಾಲೆಯ ಬಸವ ಯೋಗ ಮಹಾವಿದ್ಯಾಲಯ ಯೋಗ ಸರ್ಟಿಫಿಕೇಟ್ ಮತ್ತು ಪಿ.ಜಿ.ಡಿಪ್ಲೋಮಾ ಇನ್ ಯೋಗ ಸ್ಟಡೀಜ್ ಕೋರ್ಸಿನ ಪ್ರಸಕ್ತ ಸಾಲಿನ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಪರೀಕ್ಷಾ ಪೂರ್ವ ಸಿದ್ಧತೆ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಪರೀಕ್ಷಾ ಪೂರ್ವಸಿದ್ದತೆ ಇಲ್ಲದ ವಿದ್ಯಾರ್ಥಿಗಳು ಪರೀಕ್ಷೆ ಬಗ್ಗೆ ಭಯ ಪಡುತ್ತಾರೆ. ಪರೀಕ್ಷಾ ಪೂರ್ವಸಿದ್ಧತೆ ಎಂದರೆ ವಿದ್ಯಾರ್ಥಿಗಳು ಪ್ರತಿನಿತ್ಯದ ಕ್ಲಾಸುಗಳಲ್ಲಿ ಗುರುಗಳು ಹೇಳುವುದನ್ನು ಗಮನವಿಟ್ಟು ಕೇಳುವುದು ಮತ್ತು ಕೇಳಿದ್ದನ್ನು ಮನನ ಮಾಡುವುದು. ಪರೀಕ್ಷೆಗಾಗಿ ಬೇಕಾದ ವಿಷಯಗಳ ಟಿಪ್ಪಣಿ ಮಾಡುವುದು. ಹಿಂದಿನ 3-4 ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವುದು. ಗುರುಗಳ ಇಲ್ಲವೆ ಸಹಪಾಠಿ, ಸಹಮಿತ್ರರ ಜೊತೆಯಲ್ಲಿ ಸಂದೇಹ, ಸಮಸ್ಯೆ ವಿಷಯಗಳನ್ನು ಚರ್ಚಿಸುವುದು. ಮುಖ್ಯವಾಗಿ ಪರೀಕ್ಷೆಗಾಗಿರುವ ವಿಷಯ ಪಠ್ಯ ಗ್ರಂಥಗಳನ್ನು ಅಧ್ಯಯನ ಮಾಡುವುದು. ಇದರಿಂದ ಪರೀಕ್ಷೆಯಲ್ಲಿ ಕೇಳುವ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗುವುದು. ಈ ಹಿನ್ನೆಲೆಯಲ್ಲಿ ಪಠ್ಯಗ್ರಂಥಗಳ ಅಧ್ಯಯನ ಪರೀಕ್ಷಾರ್ಥಿಗಳ ಶ್ರೇಯೋಭಿವೃದ್ಧಿಗೆ ಸಹಕಾರಿ ಎಂದರು.

ಡಾ.ಎಂ.ಡಿ. ಸಮುದ್ರಿ, ಡಾ.ಎಂ.ಡಿ.ಸಮುದ್ರಿ, ಡಾ.ಎಂ.ಎಸ್. ಆರೇರ, ಲಕ್ಷ್ಮೀದೇವಿ ಪಾಂಡುರಂಗಿ, ಪ್ರಾಚಾರ್ಯ ಕೆ.ಎಸ್.ಪಲ್ಲೇದ, ಪ್ರಾಚಾರ್ಯ ಎಸ್.ಎಸ್. ಹಿರೇಮಠ, ಎಚ್.ವೈ. ಕೊಪ್ಪದ, ಸುನಂದಾ ಜ್ಯಾನೋಪಂತರ, ಡಿ.ಸಿ.ಪಾವಟೆ, ಎಂ.ಎಂ.ನದಾಫ, ಬಸವ ಯೋಗ ಮಹಾವಿದ್ಯಾಲಯದ ಗೌರವ ಉಪನ್ಯಾಸಕಿ ಕಲಾವತಿ ಸಂಕನಗೌಡ್ರ, ಡಾ.ಲೋಕೇಶ ಕಲಾಲ ಇದ್ದರು.



ವಿದ್ಯಾರ್ಥಿಗಳು ಆರೋಗ್ಯದ ಬಗ್ಗೆಯೂ ಚಿಂತಿಸಲಿ

ವಿದ್ಯಾರ್ಥಿಗಳಾದವರು ಪರೀಕ್ಷಾ ಸಿದ್ಧತೆ ಓದಿನ ಜೊತೆಗೆ ತಮ್ಮ ಆರೋಗ್ಯ ಬಗ್ಗೆಯೂ ಚಿಂತಿಸಬೇಕು. ಅದಕ್ಕಾಗಿ ಪ್ರತಿನಿತ್ಯ ಯೋಗ, ವ್ಯಾಯಾಮ, ಸೂರ್ಯನಮಸ್ಕಾರ, ನಡಿಗೆ, ಕ್ರೀಡೆ ಇವುಗಳಲ್ಲಿ ತಮಗಿಷ್ಟವಾದುದನ್ನು ಕನಿಷ್ಠ ಅರ್ಧಗಂಟೆಯಾದರೂ ಸಾಧನೆ ಮಾಬೇಕು. ಇದರಿಂದ ದೈಹಿಕ, ಮಾನಸಿಕ ಆರೋಗ್ಯ ದೊರೆಯುವುದೆಂದು ಕಾರ್ಯಾಗಾರದಲ್ಲಿ ಪಾಲ್ಗೊಂಡ ಅಭ್ಯರ್ಥಿಗಳಿಗೆ ಡಾ.ಕಲ್ಮೇಶ ಮೂರಶಿಳ್ಳಿನ ಹೇಳಿದರು.

ಗರ್ಭಕಂಠ ಕ್ಯಾನ್ಸರ್ ತಡೆಗೆ ಎಚ್‌ಪಿವಿ ಲಸಿಕೆ ಹಾಕಿಸಿ: ಮೀನಾಕ್ಷಿ

ನರಗುಂದ: 2011 ಮಾರ್ಚ 1 ರಿಂದ 2012 ಫೆಬ್ರವರಿ 28 ರ ಅವಧಿಯಲ್ಲಿ ಜನಿಸಿದ 14 ವರ್ಷದ ಹೆಣ್ಣು ಮಕ್ಕಳಿಗೆ ಗರ್ಭಕಂಠಕ ಕ್ಯಾನ್ಸರ್ ತಡೆಗಟ್ಟಲು ಎಚ್.ಪಿ.ವಿ ಲಸಿಕೆಯನ್ನು ಹಾಕಲಾಗುತ್ತಿದೆ. ಈ ಲಸಿಕೆ ಸುರಕ್ಷತೆ ಮತ್ತು ಪರಿಣಾಮಕಾರಿಯಾಗಿದೆ. ವ್ಯಾಪಕವಾಗಿ ಹರಡುತ್ತಿರುವ ಕ್ಯಾನ್ಸರ್ ತಡೆಗಟ್ಟಲು ಸರ್ಕಾರಿ ತಾಲೂಕಾಸ್ಪತ್ರೆಗೆ ಭೇಟಿ ನೀಡಿ ಎಚ್.ಪಿ.ವಿ ಲಸಿಕೆ ಹಾಕಿಸಿಕೊಳ್ಳಿರೆಂದು ಜಿಲ್ಲಾ ಆರ್‌ಸಿಎಚ್‌ಒ ಮೀನಾಕ್ಷಿ ಕೆ. ಹೇಳಿದರು.

ಪಟ್ಟಣದ ಬಾಬಾಸಾಹೇಬ ಭಾವೆ ಸರ್ಕಾರಿ ತಾಲೂಕಾಸ್ಪತ್ರೆಯಲ್ಲಿ ಮಂಗಳವಾರ 14 ವರ್ಷದ ಹೆಣ್ಣು ಮಕ್ಕಳ ಗರ್ಭಕಂಠ ಕ್ಯಾನ್ಸರ್ ತಡೆಗಟ್ಟುವ ಎಚ್.ಪಿ.ವಿ ಲಸಿಕೆಯನ್ನು 8ನೇ ತರಗತಿಯ ಭವಾನಿ ಪವಾರ ವಿದ್ಯಾರ್ಥಿನಿಗೆ ಹಾಕುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಕಳೆದ ಫೆ.28ರಂದು ಪ್ರಧಾನಿ ನರೇಂದ್ರ ಮೋದಿ ಅವರು ಗರ್ಭಕಂಠ ಕ್ಯಾನ್ಸರ್ ಲಸಿಕೆ ತಡೆಗಟ್ಟಲು ದೇಶಾದ್ಯಂತ ಚಾಲನೆ ನೀಡಿದ್ದಾರೆ. ಈಗಾಗಲೇ ದೇಶದಲ್ಲಿ ವರ್ಷಕ್ಕೆ 1 ಲಕ್ಷಕ್ಕೆ 4 ಯುವತಿಯರು ಸಾವನ್ನಪ್ಪುತ್ತಿದ್ದರೆ, 15 ಬಾಲಕಿಯರು ರೋಗದಿಂದ ಬಳಲುತ್ತಿದ್ದಾರೆ. ಈ ರೋಗ ತಡೆಗಟ್ಟಲು ಎಚ್.ಪಿ.ವಿ ಲಸಿಕೆಯನ್ನು ಪ್ರಧಾನಿ ಮೋದಿ ಅವರು ಫೆ.28ರಂದು ಲಾಂಚ್ ಮಾಡಿದ್ದಾರೆ. ನರಗುಂದ ತಾಲೂಕಿಗೆ ಈಗಾಗಲೇ 600 ಡೋಜ್ ಲಸಿಕೆ ಬಂದಿವೆ. ತಾಲೂಕಿನಲ್ಲಿ 1025 ಹೆಣ್ಣುಮಕ್ಕಳು ಇದ್ದಾರೆ. ಆರೋಗ್ಯದ ಸುರಕ್ಷತೆಗಾಗಿ 14 ವರ್ಷದ ಎಲ್ಲ ಹೆಣ್ಣುಮಕ್ಕಳು ಈ ಲಸಿಕೆಯನ್ನು ಹಾಕಿಸಿಕೊಳ್ಳಬೇಕು. ತಂದೆ ತಾಯಿಗಳು ತಮ್ಮ ಮಕ್ಕಳ ಭವಿಷ್ಯದ ದೃಷ್ಟಿಯಿಂದ ಆರೋಗ್ಯ ಸುರಕ್ಷತೆಗಾಗಿ ಎಚ್.ಪಿ.ವಿ ಲಸಿಕೆಯನ್ನು ಕೂಡಲೇ ಹಾಕಿಸಿಕೊಳ್ಳಬೇಕು ಎಂದರು.

ಈ ಸಂದರ್ಭದಲ್ಲಿ ತಾಲೂಕಿನ ವೈದ್ಯಾಧಿಕಾರಿ ಡಾ.ರೇಣುಕಾ ಕೊರವನವರ, ಡಾ.ಸಹನಾ ಚಿಕ್ಕನರಗುಂದ, ಡಾ.ರೂಪಾ ಯರಗುಪ್ಪಿ, ಡಾ.ನಿಖಿಲ್ ಪಾಟೀಲ, ಡಾ.ಸಹನಾ ಪಿಳ್ಳೆ, ಐ ಆರ್ ಗಂಜಿ, ಸಂಪತ್ತಕುಮಾರ, ಎಂ.ಪಿ. ಶಿರಗಾಂವಕರ, ಪ್ರೇಮಾ ಜವಳಿ, ಅಕ್ಕಮ್ಮ ಕಾಡದೇವರಮಠ, ಎಸ್.ಆರ್. ಹಿಪ್ಪ, ಸಿ.ಎಫ್. ಕುಂಬಾರ, ಮಲ್ಲಿಕಾರ್ಜುನ ಹಿರೇಮಠ ಸೇರಿದಂತೆ ಅನೇಕರಿದ್ದರು.



> ತಾಲೂಕಾಸ್ಪತ್ರೆಯಲ್ಲಿ ವಾರದಲ್ಲಿ ಎರಡು ದಿನ ಮಾತ್ರ ಮಂಗಳವಾರ ಹಾಗೂ ಗುರುವಾರದಂದು ಎಚ್.ಪಿ.ವಿ ವ್ಯಾಕ್ಸಿನ್ ಹಾಕಲಾಗುತ್ತದೆ. ವ್ಯಾಕ್ಸಿನ್ ಹಾಕಿಸಿಕೊಳ್ಳಲು ಬರುವ ಹೆಣ್ಣುಮಕ್ಕಳು ಆಧಾರ ಕಾರ್ಡ ಅಥವಾ ಶಾಲಾ ದಾಖಲಾತಿ ತೆಗೆದುಕೊಂಡು ಬರಬೇಕು.
>
> ■ ಡಾ.ಜಡೇಶ ಭದ್ರಗೌಡ, ಆಡಳಿತ ವೈದ್ಯಾಧಿಕಾರಿ

ಇರಾನ್‌ಗೆ ನೌಕಾಬಲ, ಸಂಪರ್ಕ ವ್ಯವಸ್ಥೆ, ವಾಯುಪಡೆ ಸೌಲಭ್ಯ ಕೂಡ ಇಲ್ಲ ಎಂದ ಟ್ರಂಪ್

ಜಲಸಂಧಿಯನ್ನೇ ವಶಪಡಿಸಿಕೊಳ್ಳುವುದಾಗಿ ಎಚ್ಚರಿಕೆ!

ಟೆಹ್ರಾನ್: ಇರಾನ್ ಅತಿ ಬುದ್ಧಿವಂತಿಕೆ ಮೆರೆದು ಮಧ್ಯಪ್ರಾಚ್ಯದಲ್ಲಿನ ಅಮೆರಿಕದ ಹಾಗೂ ಇಸ್ರೇಲಿ ನೆಲೆಗಳ ಮೇಲೆ ಇನ್ನಷ್ಟು ದಾಳಿ ನಡೆಸಿದಲ್ಲಿ, ನಿರ್ಣಾಯಕ ಹೊರ್ಮುಜ್ ಜಲಸಂಧಿ ಮೇಲೆ ತಾನು ನಿಯಂತ್ರಣ ಸಾಧಿಸುವುದಾಗಿ ಅಮೆರಿಕ ಅಧ್ಯಕ್ಷ ಟ್ರಂಪ್ ಗುಡುಗಿದ್ದಾರೆ.

ಇರಾನ್, ಖಮೇನಿಪುತ್ರ ಆಯತೊಲ್ಲಾ ಮೊಜ್ತಾಬಾ ಖಮೇನಿಯನ್ನು ಇರಾನ್‌ನ ಸರ್ವೋಚ್ಚ ನಾಯಕನಾಗಿ ಆರಿಸಿದ ಬೆನ್ನಲ್ಲೇ ತೈಲ ಬೆಲೆಗಳು 2022ರ ನಂತರ ಕಂಡರಿಯದ ರೀತಿಯಲ್ಲಿ ಗಗನಕ್ಕೇರಿದ್ದು, ಈ ಹಿನ್ನೆಲೆಯಲ್ಲಿ ಟ್ರಂಪ್ ಪ್ರಸ್ತುತ ಎಚ್ಚರಿಕೆ ನೀಡಿದ್ದಾರೆ.

ಸುಮಾರು ಶೇ. 20 ಜಾಗತಿಕ ತೈಲ ಸರಬರಾಜಾಗುವುದು ಹೊರ್ಮುಜ್ ಜಲಸಂಧಿಯಿಂದಾಗಿ. ಇರಾನ್ ನಿರ್ಬಂಧದಿಂದಾಗಿ ಈ ಜಲಸಂಧಿ ಮುಖೇನ ವಾಣಿಜ್ಯಿಕ ನೌಕೆಗಳ ಓಡಾಟ ವಸ್ತುಶಃ ದುಸ್ತರವಾಗಿದೆ. ನನ್ನ ಪ್ರಕಾರ ಯುದ್ಧ ಪೂರ್ತಿಯಾಗಿದೆ ಎಂದು ಟ್ರಂಪ್ ಸಿಬಿಎಸ್ ನ್ಯೂಸ್‌ಗೆ ಫೋನ್ ಸಂದರ್ಶನದಲ್ಲಿ ತಿಳಿಸಿದ್ದಾರೆ. ಇರಾನ್‌ಗೆ ನೌಕಾಬಲ ಇಲ್ಲ, ಸಂಪರ್ಕ ವ್ಯವಸ್ಥೆ ಇಲ್ಲ, ವಾಯುಪಡೆ ಕೂಡ ಇಲ್ಲ. ಅವರ ಕ್ಷಿಪಣಿಗಳು ಧ್ವಂಸಗೊಂಡಿವೆ. ಅವರ ಡ್ರೋನ್ ತಯಾರಿ ಘಟಕಗಳ ಸಹಿತ ಅವರ ಡ್ರೋನ್‌ಗಳು ಎಲ್ಲಾ ಕಡೆ ಹೊತ್ತುರಿದಿವೆ ಎಂದು ಟ್ರಂಪ್ ಸಂದರ್ಶನದಲ್ಲಿ ಹೇಳಿದ್ದಾರೆ. ಮಿಲಿಟರಿ ದೃಷ್ಟಿಯಿಂದ ಇರಾನ್ ಬಳಿ ಏನೂ ಉಳಿದಿಲ್ಲ ಎಂದಿದ್ದಾರೆ. ಜಲಮಾರ್ಗವನ್ನು ನಿರ್ಬಂಧಿಸಿದಲ್ಲಿ ಹೊರ್ಮುಜ್ ಜಲಸಂಧಿ ಮೇಲೆ ನಿಯಂತ್ರಣ ಸಾಧಿಸುವುದಾಗಿಯೂ ಟ್ರಂಪ್ ಗುಡುಗಿದ್ದಾರೆ. ಇರಾನ್ ಏನೆಲ್ಲಾ ದಾಳಿ ಮಾಡ್ಬೇಕೋ ಎಲ್ಲವನ್ನು ಮಾಡಿದೆ. ಇನ್ನೂ ಜಾಣತನ ಪ್ರದರ್ಶಿಸಿದಲ್ಲಿ ಆ ರಾಷ್ಟ್ರದ ಅಂತ್ಯವಾದೀತು. ಅವರೇನಾದರು ಕೆಡುಕು ಮಾಡಿದಲ್ಲಿ ಅದು ಇರಾನ್ ಅಂತ್ಯಕ್ಕೆ ದಾರಿಯಾದೀತು. ಇರಾನ್ ಹೆಸರನ್ನು ಮತ್ತೆ ನೀವು ಕೇಳಲಿಕ್ಕಿಲ್ಲ ಎಂದಿರುವ ಟ್ರಂಪ್, ಇದೀಗ ಜಲಸಂಧಿ ತೆರೆದುಕೊಂಡಿದೆ ಮತ್ತು ಹಡಗುಗಳು ಜಲಸಂಧಿ ಪ್ರವೇಶಿಸಲು ಶುರುವಿಟ್ಟಿವೆ ಎಂದಿದ್ದಾರೆ. ಸಂಘರ್ಷದ ಮೊದಲ ವಾರದಲ್ಲೇ ನಾವು ಇರಾನಿನ 5000 ನೆಲೆಗಳ ಮೇಲೆ ದಾಳಿ ಮಾಡಿದ್ದೇವೆಂದು ಅಮೆರಿಕನ್ ಮಿಲಿಟರಿ ಪಡೆ ಹೇಳಿಕೊಂಡಿದೆ.



ಕದನವಿರಾಮ ಬಯಸಲ್ಲ: ಇರಾನ್ ಸ್ಪೀಕರ್!

ಅಮೆರಿಕ ಮತ್ತು ಇಸ್ರೇಲ್‌ನೊಂದಿಗಿನ ಯುದ್ಧದಲ್ಲಿ ಇರಾನ್ ಕದನವಿರಾಮ ಮಾಡಿಕೊಳ್ಳಲು ಬಯಸುವುದಿಲ್ಲ. ಆಕ್ರಮಣಕಾರಿಗಳನ್ನು ಶಿಕ್ಷೆಗೆ ಒಳಪಡಿಸುವುದೇ ನಮ್ಮ ಗುರಿ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಖಾರ್ ಖಾಲಿಬಫ್ ಹೇಳಿದ್ದಾರೆ. ಸೋಮವಾರ ತಡರಾತ್ರಿ ಸಂದರ್ಶನದಲ್ಲಿ ಮಾತನಾಡಿದ ಬಖಾರ್, ಶತ್ರುಗಳು ಯಾವುದೇ(ನೆರೆಯ) ರಾಷ್ಟ್ರಗಳಿಂದ ದಾಳಿ ನಡೆಸಿದರೂ, ನಾವು ಪ್ರಖರ ಪ್ರತಿದಾಳಿ ನಡೆಸುತ್ತೇವೆ ಎಂದು ಬಖಾರ್ ಎಚ್ಚರಿಸಿದ್ದಾರೆ. ಸ್ಪೀಕರ್ ಎಚ್ಚರಿಕೆಯ ನಂತರ ಇರಾನ್ ದಾಳಿ ಇನ್ನಷ್ಟು ಹೆಚ್ಚಿಸಿದೆ.

ಭಾರತದಿಂದ ಹೆಚ್ಚುವರಿ ಡೀಸೆಲ್‌ಗೆ ಬಾಂಗ್ಲಾ ಮನವಿ

ಹೊಸದಿಲ್ಲಿ: ಇಂಧನ ಸಂಗ್ರಹವನ್ನು ಸುಧಾರಿಸಲು ಮತ್ತು ಕೊರತೆಯನ್ನು ತಡೆಗಟ್ಟಲು, ಬಾಂಗ್ಲಾದೇಶವು ಮುಂದಿನ ನಾಲ್ಕು ತಿಂಗಳಲ್ಲಿ ಮಾರ್ಚ್-ಜೂನ್ ಅವಧಿಯಲ್ಲಿ ಭಾರತದಿಂದ ಹೆಚ್ಚುವರಿ 50,000 ಮೆಟ್ರಿಕ್ ಟನ್ ಡೀಸೆಲ್ ಅನ್ನು ನೀಡುವಂತೆ ಔಪಚಾರಿಕವಾಗಿ ವಿನಂತಿಸಿದೆ. ಈ ಕೊರತೆಯನ್ನು ಹಣಕಾಸು ಸಚಿವ ಆಮೀರ್ ಖಸ್ರು ಮಹಮೂದ್ ಚೌಧರಿ ಅವರು ಭಾರತೀಯ ಹೈಕಮಿಷನರ್ ಪ್ರಣಯ್ ವರ್ಮಾ ಅವರಿಗೆ ತಿಳಿಸಿದರು. ಬಾಂಗ್ಲಾದೇಶವು ವಿದ್ಯುತ್ ಉತ್ಪಾದನೆ ಮತ್ತು ಇತರ ಅಗತ್ಯಗಳಿಗಾಗಿ ಆಮದು ಮಾಡಿಕೊಂಡ ಇಂಧನಗಳಾದ ತೈಲ, ಅನಿಲ, ಕಲ್ಲಿದ್ದಲನ್ನು ಹೆಚ್ಚು ಅವಲಂಬಿಸಿದೆ. ಇತ್ತೀಚಿನ ಜಾಗತಿಕ ಅಡೆತಡೆಗಳು ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷಕ್ಕೆ ಸಂಬಂಧಿಸಿವೆ.

ಪಾಕ್‌ನಲ್ಲಿ ಸೋಮವಾರದಿಂದ ಶಾಲೆಗೆ ರಜೆ ನಾಲ್ಕೇ ದಿನ ಕೆಲಸ

ಮಧ್ಯಪ್ರಾಚ್ಯ ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದು, ಇದು ಜಗತ್ತನ್ನೆ ತಲ್ಲಣಗೊಳಿಸುತ್ತಿದೆ. ಇಂಧನ ಕೊರತೆ ಇಡೀ ಜಗತ್ತನ್ನೇ ತತ್ತರಿಸುತ್ತಿದೆ. ಜಾಗತಿಕ ತೈಲ ಪೂರೈಕೆಯು ಹೆಚ್ಚುತ್ತಿರುವ ಒತ್ತಡ ಎದುರಿಸುತ್ತಿದೆ. ಹಲವಾರು ಪ್ರದೇಶಗಳಲ್ಲಿ ಅಡೆತಡೆ ಎದುರಾಗುತ್ತಿದೆ. ಈ ತೈಲ ಬಿಸಿಯು ಪಾಕಿಸ್ತಾನವನ್ನೂ ತಲುಪಿದೆ. ಹೊಡೆತವನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ, ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಇರಾನ್ ಯುದ್ಧದಿಂದಾಗಿ ನಡೆಯುತ್ತಿರುವ ಪೂರೈಕೆ ಅಡೆತಡೆಗಳ ನಡುವೆ ಇಂಧನವನ್ನು ಉಳಿಸುವ ಗುರಿ ಹೊಂದಿರುವ ಸರ್ಕಾರಿ ವೆಚ್ಚ ಕಡಿತ, ಮನೆಯಿಂದ ಕೆಲಸ ಮಾಡುವ ಮಾರ್ಗಸೂಚಿಗಳಿಂದ ಹಿಡಿದು ಇತರ ಹೊಸ ಕ್ರಮಗಳನ್ನು ಕೈಗೊಂಡಿದ್ದಾರೆ. ದೇಶವನ್ನು ಉದ್ದೇಶಿಸಿ ಮಾತನಾಡಿದ ಷರೀಫ್, ಫೆಡರಲ್ ಮತ್ತು ಪ್ರಾಂತೀಯ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಈ ಕ್ರಮಗಳನ್ನು ಚರ್ಚಿಸಲಾಗಿದೆ ಎಂದು ಹೇಳಿದ್ದಾರೆ. ಕಠಿಣ ಪರಿಸ್ಥಿತಿ ಹಿನ್ನಲ್ಲೆ ಸರ್ಕಾರವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಯಿತು ಎಂದು ಹೇಳಿದರು. ಇಂಧನ ಉಳಿತಾಯ ಪ್ರಮುಖ ಕ್ರಮಗಳ ಪೈಕಿ, ಸರ್ಕಾರವು ಮುಂದಿನ ಎರಡು ತಿಂಗಳುಗಳ ಕಾಲ ಅಧಿಕೃತ ವಾಹನಗಳ ಇಂಧನ ಭತ್ಯೆಯನ್ನು ಶೇ.50ರಷ್ಟು ಕಡಿತಗೊಳಿಸಲಿದೆ.

ಯುದ್ಧ ಇನ್ನೂ ಮುಗಿದಿಲ್ಲ: ನೆತನ್ಯಾಹು

ಇಸ್ರೇಲ್ ಸೇನೆ ಇರಾನ್ ಬೆನ್ನೆಲುಬು ಮುರಿದಿದೆ. ಆದರೆ ಯುದ್ಧ ಇನ್ನೂ ಮುಗಿದಿಲ್ಲ. ಇರಾನ್‌ನಲ್ಲಿ ಇಸ್ಲಾಮಿಕ್ ಆಡಳಿತವನ್ನು ಅಂತ್ಯಗೊಳಿಸದವರೆಗೂ ನಾವು ಯುದ್ಧವನ್ನು ನಿಲ್ಲಿಸುವುದಿಲ್ಲ. ದಬ್ಬಾಳಿಕೆಯಿಂದ ಇರಾನ್ ಜನರಿಗೆ ಸ್ವಾತಂತ್ರ್ಯ ನೀಡುವುದು ನಮ್ಮ ಪ್ರಮುಖ ಗುರಿಗಳಲ್ಲಿ ಒಂದಾಗಿದೆ. ಇಲ್ಲಿಯವರೆಗಿನ ಯುದ್ಧದಲ್ಲಿ ನಾವು ಇರಾನ್ ಬೆನ್ನೆಲುಬು ಮುರಿದಿದ್ದೇವೆ. ಇದು ಇನ್ನೂ ಮುಗಿದಿಲ್ಲ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಎಚ್ಚರಿಕೆ ನೀಡಿದ್ದಾರೆ. ಇತ್ತೀಚೆಗೆ ಕ್ಷಿಪಣಿ ದಾಳಿಗೆ ನೆತನ್ಯಾಹು ಗಾಯಗೊಂಡಿದ್ದಾರೆ. ಇದರಿಂದ ನೆತನ್ಯಾಹು ಸಾರ್ವಜನಿಕವಾಗಿ ಕಾಣಿಸಿಕೊಳ್ಳುತ್ತಿಲ್ಲ ಎಂಬ ವದಂತಿಯನ್ನು ಇರಾನ್ ಹಬ್ಬಿಸಿತ್ತು. ಮಂಗಳವಾರ ನೆತನ್ಯಾಹು ರಾಷ್ಟ್ರೀಯ ಆರೋಗ್ಯ ಕೇಂದ್ರಕ್ಕೆ ಸಾರ್ವಜನಿಕ ಭೇಟಿ ನೀಡಿದ್ದಾರೆ.

ಇನ್ನು 1 ಟನ್ ಬಾಂಬ್ ಅಷ್ಟೇ ಬಳಸುತ್ತೆ ಇರಾನ್!

ಮಧ್ಯ ಪ್ರಾಚ್ಯ ಯುದ್ಧದಲ್ಲಿ ಇಸ್ರೇಲ್ ಮತ್ತು ಅಮೆರಿಕ ಸೇನಾ ನೆಲೆಗಳ ಮೇಲೆ ದಾಳಿ ತೀವ್ರತೆ ಹೆಚ್ಚಿಸಲು ಇರಾನ್ ಹೊಸ ಕಾರ್ಯತಂತ್ರವನ್ನು ರೂಪಿಸಿದೆ. ಯುದ್ಧದಲ್ಲಿನ್ನು 1,000 ಕೆ.ಜಿ. (1 ಟನ್) ಅಥವಾ ಆದಕ್ಕಿಂತ ಹೆಚ್ಚು ಭಾರದ ವಾರ್‌ಹೆಡ್ ಹೊರಬಲ್ಲ ಕ್ಷಿಪಣಿಗಳನ್ನು ಮಾತ್ರ ಉಡಾಯಿಸುವುದಾಗಿ ಇರಾನ್ ಸೇನಾ ಕಮಾಂಡರ್ ನಿಲುವು ತೆಗೆದುಕೊಂಡಿದ್ದಾರೆ. ಇದರಿಂದ ಯುದ್ಧ ಇನ್ನಷ್ಟು ಉಲ್ಬಣಿಸುವುದು ಖಚಿತ. ಶತ್ರುಗಳಿಗೆ ಹೆಚ್ಚಿನ ಹಾನಿಯಾಗಬೇಕು ಎಂಬ ಉದ್ದೇಶದಿಂದ ಇರಾನ್ 1,000 ಕೆ.ಜಿ. ಅಥವಾ ಆದಕ್ಕಿಂತ ಹೆಚ್ಚಿನ ಭಾರದ ಸ್ಫೋಟಕಗಳನ್ನು ಬಳಸಲು ಆರಂಭಿಸಿದೆ.



ಭಾರದ ಸ್ಫೋಟಕಗಳನ್ನು ಕ್ಷಿಪಣಿಗಳಲ್ಲಿ ಬಳಸಿದಾಗ ಕ್ಷಿಪಣಿಯೊಂದರ ದಾಳಿ ವ್ಯಾಪ್ತಿ ಮತ್ತು ಹಾನಿ ಮಾಡಬಲ್ಲ ಶಕ್ತಿ ದ್ವಿಗುಣಗೊಳ್ಳುತ್ತದೆ. ಈವರೆಗೆ ಇರಾನ್ 300ರಿಂದ 500 ಕೆಜಿ. ಭಾರದ ಸ್ಫೋಟಕಗಳನ್ನು ಇರಾನ್ ಕ್ಷಿಪಣಿಗಳು ಹೊತ್ತೊಯ್ಯುತ್ತಿದ್ದವು. ಆದರೆ ಇನ್ನು ಕನಿಷ್ಠಪಕ್ಷ 1000 ಕೆಜಿ ಭಾರದ ಸ್ಫೋಟಕಗಳನ್ನು ಬಳಸಲು ಇರಾನ್ ನಿರ್ಧರಿಸಿದೆ.

ಇರಾನ್ ಕ್ಷಿಪಣಿ ಬತ್ತಳಿಕೆ ಹೀಗಿದೆ: ಮಧ್ಯ ಪ್ರಾಚ್ಯದಲ್ಲಿ ಇರಾನ್ ಅತಿ ದೊಡ್ಡ ಮತ್ತು ವಿವಿಧ ರೀತಿಯ ಕ್ಷಿಪಣಿಗಳನ್ನು ಹೊಂದಿದೆ. ಅಣ್ವಸ್ತ್ರ ಸಾಮರ್ಥ್ಯದ 3,000 ಕಿ.ಮೀ. ವ್ಯಾಪ್ತಿಯ ಸೌಮಾರ್, 2,000 ಕಿ.ಮೀ. ವ್ಯಾಪ್ತಿಯ ಸೆಜ್ಜಿಲ್ ಎಂಬ ಖಂಡಾಂತರ ಕ್ಷಿಪಣಿಯನ್ನು ಇರಾನ್ ಬಳಿಯಿದೆ. ಉತ್ತರ ಕೊರಿಯಾದ ಹ್ವಾಸೊಂಗ್-10 ಕ್ಷಿಪಣಿಗೆ ಹೋಲುವ 2,000ದಿಂದ 3,000 ವ್ಯಾಪ್ತಿಯ ಖೋರಮ್‌ಶಹರ್ ಕ್ಷಿಪಣಿ ಇರಾನ್ ಬತ್ತಳಿಕೆಯಲ್ಲಿದ್ದು, ಇದರ ಪೇಲೋಡ್ ಸಾಮರ್ಥ್ಯ 1,800 ಕೆ.ಜಿ. ಆಗಿದೆ.

ಐಇಎ ಯೋಜನೆಗೆ ಭಾರತ ಸೇರಲ್ಲ

ತೈಲ ಬೆಲೆಗಳನ್ನು ತಗ್ಗಿಸುವ ಪ್ರಯತ್ನದ ಭಾಗವಾಗಿ ಕಾರ್ಯತಂತ್ರದ ತೈಲ ನಿಕ್ಷೇಪಗಳನ್ನು ಬಿಡುಗಡೆ ಮಾಡುವ ಅಂತಾರಾಷ್ಟ್ರೀಯ ಇಂಧನ ಸಂಸ್ಥೆ (ಐಇಎ)ಯೋಜನೆಗೆ ಭಾರತ ಸೇರುವುದಿಲ್ಲ ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ. ವಿಶ್ವದ ಮೂರನೇ ಅತಿದೊಡ್ಡ ತೈಲ ಆಮದು ಮತ್ತು ಬಳಕೆದಾರ ರಾಷ್ಟ್ರವಾದ ಭಾರತವು 53.3 ಲಕ್ಷ ಟನ್ ಭೂಗತ ವ್ಯೂಹಾತ್ಮಕ ನಿಕ್ಷೇಪಗಳನ್ನು ಹೊಂದಿದೆ. ಆದರೆ, ಸದ್ಯ ಶೇ.80ರಷ್ಟು ಮಾತ್ರ ಭರ್ತಿಯಾಗಿವೆ. ಹೆಚ್ಚುತ್ತಿರುವ ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆಯಲ್ಲಿ ಕಚ್ಚಾ ತೈಲದ ಬೆಲೆಗಳು ಪ್ರತಿ ಬ್ಯಾರೆಲ್‌ಗೆ 120 ಡಾಲರ್‌ಗೆ ಹತ್ತಿರವಾಗುತ್ತಿರುವ ಹಿನ್ನಲ್ಲೇ ಜಿ7 ರಾಷ್ಟ್ರಗಳು ತೈಲ ನಿಕ್ಷೇಪಗಳನ್ನು ಬಿಡುಗಡೆ ಮಾಡುವ ಸಾಧ್ಯತೆಯ ಬಗ್ಗೆ ಚರ್ಚಿಸಲಿವೆ. ಬಿಕ್ಕಟ್ಟು ನಮ್ಮ ಸೃಷ್ಟಿಯಲ್ಲ. ಇದಕ್ಕೆ ಕಾರಣರಾದವರು ಅದನ್ನು ನಿಭಾಯಿಸಬೇಕು ಮತ್ತು ಸರಾಗಗೊಳಿಸುವ ಪರಿಸ್ಥಿತಿಗಳನ್ನು ಸೃಷ್ಟಿಸಬೇಕು ಎಂದು ಭಾರತೀಯ ಮೀಸಲುಗಳನ್ನು ಬಿಡುಗಡೆ ಮಾಡುವುದನ್ನು ತಳ್ಳಿಹಾಕಿದ ಮೂಲಗಳು ಹೇಳಿವೆ.

ರಫ್ತುದಾರರಿಗೆ ಸಹಾಯ ಮಾಡಲು ಕೇಂದ್ರ ಸಿದ್ಧತೆ

ಹೊಸದಿಲ್ಲಿ: ಪಶ್ಚಿಮ ಏಷ್ಯಾದ ಬಿಕ್ಕಟ್ಟನ್ನು ಎದುರಿಸಲು ಸಹಾಯ ಮಾಡಲು ವಿಮಾ ಕ್ಷೇತ್ರದಲ್ಲಿ ರಫ್ತುದಾರರಿಗೆ ಸಹಾಯ ಮಾಡಲು ಸರ್ಕಾರ ಚಿಂತಿಸುತ್ತಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮಂಗಳವಾರ ಹೇಳಿದ್ದಾರೆ. ಅಂತರ-ಸಚಿವಾಲಯದ ಗುಂಪು ಪ್ರತಿದಿನ ಬೆಳವಣಿಗೆಗಳ ಮೇಲೆ ನಿಗಾ ಇಡುತ್ತಿದೆ. ರಫ್ತುದಾರರೊಂದಿಗೆ ಸಂವಹನ ನಡೆಸುತ್ತಿದೆ ಎಂದು ಹೇಳಿದರು. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ ಹಾರ್ಮುಜ್ ಜಲಸಂಧಿಯ ಮುಚ್ಚುವಿಕೆ ಮತ್ತು ಕಡಲ ಮಾರ್ಗಗಳಲ್ಲಿನ ಅಡೆತಡೆಗಳಿಂದಾಗಿ ಭಾರತೀಯ ಬಂದರುಗಳಿಗೆ ಹಿಂದಿರುಗುವ ರಫ್ತು ಸರಕುಗಳನ್ನು ಎದುರಿಸಲು ಕಸ್ಟಮ್ಸ್ ಇಲಾಖೆಯು ಮಾನದಂಡಗಳನ್ನು ಹೊರತಂದಿದೆ.



ಕಪ್ಪು ಮಳೆಗೆ ತತ್ತರಿಸಿದ ಇರಾನ್ ಜನ

ಟೆಹ್ರಾನ್ ನಗರಕ್ಕೆ ಕಪ್ಪು ಮಳೆ ಸುರಿದಂತೆ ವಿಚಿತ್ರ ವಿದ್ಯಮಾನವನ್ನು ಅನುಭವಿಸಿದೆ. ಇರಾನ್‌ನ ರಾಜಧಾನಿ ನಗರದ ನಿವಾಸಿಗಳು ಈ ಮಳೆಯಿಂದ ಉಳಿದ ತೈಲ ಅವಶೇಷವು ಕಟ್ಟಡಗಳು, ಕಾರುಗಳು ಮತ್ತು ರಸ್ತೆಗಳನ್ನು ಆವರಿಸಿದೆ. ಸುಟ್ಟ ಪೆಟ್ರೋಲ್‌ನಂತಹ ಗಾಳಿಯ ವಾಸನೆಯ ಬರುತ್ತಿದೆ ಎಂದು ನಿವಾಸಿಗಳು ಆತಂಕಪಡುತ್ತಿದ್ದಾರೆ. ಅನೇಕರು ಉಸಿರಾಟದ ತೊಂದರೆ ಮತ್ತು ಮೈಗ್ರೇನ್ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಈ ಹಿನ್ನಲ್ಲೇ ಪ್ರತಿಯೊಬ್ಬರೂ ತಮ್ಮ ಮನೆಗಳಿಂದ ಹೊರಹೋಗುವಾಗ ಮಾಸ್ಕ್ ಧರಿಸುವಂತೆ ಟೆಹ್ರಾನ್‌ನ ರಾಜ್ಯಪಾಲರು ಹೇಳಿಕೆ ನೀಡಿದ್ದಾರೆ. ಹಲವಾರು ಗಂಟೆಗಳ ಕಾಲ ನಗರವನ್ನು ಸುಟ್ಟುಹಾಕಿದ ನಗರದ ಹಲವಾರು ಇಂಧನ ಸಂಗ್ರಹಣೆ ಮತ್ತು ತೈಲ ಸೌಲಭ್ಯಗಳ ಮೇಲೆ ಇಸ್ರೇಲ್ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಈ ಘಟನೆ ಸಂಭವಿಸಿದೆ.

ಕಿರುಸುದ್ದಿ

ಒಳನುಸುಳುವಿಕೆ ಯತ್ನ ವಿಫಲ: ಉಗ್ರನ ವಧೆ

ಶ್ರೀನಗರ: ಜಮ್ಮು-ಕಾಶ್ಮೀರದ ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿ (ಎಲ್‌ಒಸಿ) ಸೇನಾ ಪಡೆಗಳು ಮಂಗಳವಾರ ಒಳನುಸುಳುವಿಕೆ ಯತ್ನ ವಿಫಲಗೊಳಿಸಿದ್ದು, ಎನ್‌ಕೌಂಟರ್‌ನಲ್ಲಿ ಓರ್ವ ಭಯೋತ್ಪಾದಕನನ್ನು ಹೊಡೆದುರುಳಿಸಿದ್ದಾರೆ. ಗುಪ್ತಚರ ಮಾಹಿತಿ ಆಧಾರದ ಮೇಲೆ, ಭದ್ರತಾ ಪಡೆಗಳು ಎಲ್‌ಒಸಿ ನೌಶೇರಾ ಸೆಕ್ಟರ್‌ಲ್ಲಿರುವ ಝೂಂಗರ್‌ನ ಸಾಮಾನ್ಯ ಪ್ರದೇಶದಲ್ಲಿ ಮಧ್ಯಾಹ್ನ 3 ಗಂಟೆಗೆ ಇಬ್ಬರು ಭಯೋತ್ಪಾದಕರ ಚಲನವಲನವನ್ನು ಪತ್ತೆಹಚ್ಚಿವೆ ಎಂದು ವೈಟ್ ನೈಟ್ ಕಾರ್ಪ್ಸ್ ಎಕ್ಸ್‌ನಲ್ಲಿ ತಿಳಿಸಿದೆ. ಅನಂತರ ನಡೆದ ಗುಂಡಿನ ಚಕಮಕಿಯಲ್ಲಿ, ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದಕನೊಬ್ಬನನ್ನು ವಧೆ ಮಾಡಲಾಗಿದೆ ಎಂದು ಹೇಳಿದೆ.

ಗೋಡೆ ಕುಸಿದು ಏಳು ಕಾರ್ಮಿಕರು ಸಾವು

ಗುರುಗ್ರಾಮ: ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಗೋಡೆ ಕುಸಿದು ಏಳು ಕಾರ್ಮಿಕರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ. ಗುರುಗ್ರಾಮ್‌ನ ಸಿದ್ರಾವಳಿ ಪ್ರದೇಶದ ಸಿಗ್ನೇಚರ್ ಗ್ಲೋಬಲ್ ಸೊಸೈಟಿಯಲ್ಲಿ ಸೋಮವಾರ ಸಂಜೆ ಈ ಘಟನೆ ನಡೆದಿದೆ. ಪೊಲೀಸರ ಪ್ರಕಾರ, ದೊಡ್ಡ ಶಬ್ದದಿಂದ ಗೋಡೆ ಕುಸಿದು ಸುಮಾರು 12ರಿಂದ 15 ಕಾರ್ಮಿಕರು ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದರು. ಸ್ಥಳೀಯ ಪೊಲೀಸರು, ಆಡಳಿತ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಿದವು. ಅಧಿಕಾರಿಗಳು ಭಾರೀ ಯಂತ್ರೋಪಕರಣಗಳನ್ನು ಬಳಸಿ ಅವಶೇಷಗಳನ್ನು ತೆಗೆದುಹಾಕಿದ್ದಾರೆ.

ಹೊಸೂರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮತ್ತೊಂದು ವಿಘ್ನ

ಚೆನ್ನೈ: ಹೊಸೂರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮತ್ತೊಂದು ತಡೆ ಎದುರಾಗಿದ್ದು, ಸರ್ಕಾರದ ನಿರ್ಧಾರದ ವಿರುದ್ಧ ರೈತರು ಭಾರೀ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದ್ದಾರೆ. ಹೊಸೂರಿನಲ್ಲಿ ಗ್ರೀನ್ ಫೀಲ್ಡ್ ವಿಮಾನ ನಿಲ್ದಾಣವನ್ನು ನಿರ್ಮಿಸುವುದು ಸೇರಿದಂತೆ ಮೂಲಸೌಕರ್ಯ ಯೋಜನೆಗಳಿಗಾಗಿ ಸಾವಿರಾರು ಎಕರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಕ್ರಮವನ್ನು ವಿರೋಧಿಸಿ ರೈತರು ಮೆರವಣಿಗೆ ನಡೆಸಿದ್ದಾರೆ. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ವಿಮಾನ ನಿಲ್ದಾಣವು ಕಾರ್ಯಗತಗೊಳಿಸಿದ ರಾಷ್ಟ್ರೀಯ ಪ್ರಾಮುಖ್ಯತೆಯ ರಕ್ಷಣಾ ಯೋಜನೆಗಳಿಗೆ ಆದ್ಯತೆ ನೀಡುವ ಸಲುವಾಗಿ ತಮಿಳುನಾಡು ಮಂಡಿಸಿದ ಹೊಸೂರು ವಿಮಾನ ನಿಲ್ದಾಣ ಯೋಜನೆಯ ಪ್ರಸ್ತಾಪವನ್ನು ಶಿಫಾರಸು ಮಾಡಿರಲಿಲ್ಲ. ಈ ಬೆನ್ನಲ್ಲೇ ರೈತರು ಕೂಡ ಈ ನಿಲ್ದಾಣ ನಿರ್ಮಿಸುವುದನ್ನು ವಿರೋಧಿಸಿದ್ದಾರೆ.

ಅರ್ಹ ಮತದಾರರನ್ನು ಪಟ್ಟಿಯಿಂದ ಹೊರಗಿಡಲ್ಲ

ಕೋಲ್ಕತ್ತಾ: ಯಾರೇ ಅರ್ಹ ಮತದಾರರ ಹೆಸರನ್ನು ಮತದಾರರ ಯಾದಿಯಿಂದ ಕಿತ್ತುಹಾಕುವುದಿಲ್ಲ. ರಾಜ್ಯದಲ್ಲಿ ಮುಕ್ತ, ನ್ಯಾಯೋಚಿತ ಹಾಗೂ ಶಾಂತಿಯುತ ಚುನಾವಣೆ ನಡೆಯಬೇಕೆಂಬುದು ಚುನಾವಣಾ ಆಯೋಗದ ಆಶಯ ಮತ್ತು ಇದಕ್ಕೇ ಪ್ರಾಧಾನ್ಯತೆ ನೀಡುತ್ತದೆ ಎಂದು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮಂಗಳವಾರ ಹೇಳಿದ್ದಾರೆ.

ಚುನಾವಣಾ ಹೊಸ್ತಿನಲ್ಲಿರುವ ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಸಿದ್ಧತೆ ಕುರಿತು ವಿವಿಧ ರಾಜಕೀಯ ಪಕ್ಷಗಳು, ಹಿರಿಯ ಆಡಳಿತಾತ್ಮಕ ಅಧಿಕಾರಿಗಳ ಜತೆ, ಆಯೋಗದ ಎಲ್ಲಾ ಅಧಿಕಾರಿಗಳ ಸಹಿತ ಸರಣಿ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಆಯೋಗದ ಆಶಯವನ್ನು ಸ್ಪಷ್ಟಪಡಿಸಿದರು. ಚುನಾವಣಾ ಆಯೋಗದ ಅಧಿಕಾರಿಗಳ ತಂಡ ದಿಲ್ಲಿಗೆ ಮರಳಿದ ಬಳಿಕ ರಾಜ್ಯದ ಚುನಾವಣಾ ದಿನಾಂಕ ಮತ್ತು ಎಷ್ಟು ಹಂತಗಳಲ್ಲಿ ಚುನಾವಣೆ ನಡೆಸಬೇಕೆಂಬುದನ್ನು ನಿರ್ಧರಿಸುವುದು ಎಂದು ಹೇಳಿದರು.

ರಾಜ್ಯದಲ್ಲಿ ನಿರ್ಭೀತಿಯಿಂದ ಮತ್ತು ಕಟ್ಟುನಿಟ್ಟಾಗಿ ಕಾನೂನು ಸುವ್ಯವಸ್ಥೆ ಅನುಷ್ಠಾನಿಸಲು ಆಯೋಗವು ಅಧಿಕಾರಿಗಳಿಗೆ ನಿರ್ದೇಶವಿತ್ತಿದೆ. ರಾಜ್ಯದ ಕಾನೂನು ಸ್ಥಿತಿಗತಿಗಳನ್ನು ನಾವು ಪರಾಮರ್ಶಿಸಿದ್ದೇವೆ. ಚುನಾವಣೆ ಹಿಂಸಾಚಾರಮುಕ್ತವಾಗಿ ಮತ್ತು ಯಾವುದೇ ಪ್ರಚೋದನೆ ರಹಿತ ನಡೆಯುವುದೆಂದು ಪ.ಬಂಗಾಳ ಸರಕಾರದ ಮುಖ್ಯ ಕಾರ್ಯದರ್ಶಿಗಳು, ಡಿಜಿಪಿ, ಸಿಪಿಗಳು, ಎಸ್‌ಪಿಗಳು ಆಯೋಗಕ್ಕೆ ಆಶ್ವಾಸನೆ ನೀಡಿರುವುದಾಗಿ ಹೇಳಿದರು. ಚುನಾವಣಾ ಪ್ರಕ್ರಿಯೆಗಳ ಸಂದರ್ಭ ರಾಜ್ಯದ ಅಧಿಕಾರಿಗಳು ನಿರ್ದಿಷ್ಟ ಪರಿಮಿತಿಯೊಳಗೆ ಕಾರ್ಯ ನಿರ್ವಹಿಸಬೇಕೆಂದು ಆಯೋಗಕ್ಕೆ ನಿರೀಕ್ಷೆಯಿರುತ್ತದೆ.

ಸ್ವದೇಶಿ ಏರ್ ಡ್ರಾಪೆಬಲ್ ಕಂಟೇನರ್ ಪರೀಕ್ಷೆ ಯಶ

ಹೊಸದಿಲ್ಲಿ: ಡಿಆರ್‌ಡಿಒ ಮತ್ತು ಭಾರತೀಯ ನೌಕಾಪಡೆಯು ಸ್ಥಳೀಯವಾಗಿ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿದ ಏರ್ ಡ್ರಾಪೆಬಲ್ ಕಂಟೇನರ್ ವ್ಯವಸ್ಥೆಯ ನಾಲ್ಕು ಯಶಸ್ವಿ ಇನ್-ಫ್ಲೈಟ್ ಬಿಡುಗಡೆ ಪ್ರಯೋಗಗಳನ್ನು ನಡೆಸಿದೆ. ಇದು ನೌಕಾ ಹಡಗಿಗೆ 150 ಕೆಜಿ ತೂಕದ ಪೇಲೋಡ್ ಅನ್ನು ತಲುಪಿಸಬಲ್ಲದು. ಎಲ್ಲಾ ಅಭಿವೃದ್ಧಿ ವಿಮಾನ ಪ್ರಯೋಗಗಳು ಯಶಸ್ವಿಯಾಗಿ ಪೂರ್ಣಗೊಂಡಿರುವುದರಿಂದ, ಈ ವ್ಯವಸ್ಥೆಯನ್ನು ಶೀಘ್ರದಲ್ಲೇ ನೌಕಾಪಡೆಗೆ ಸೇರಿಸುವ ನಿರೀಕ್ಷೆಯಿದೆ ಎಂದು ರಕ್ಷಣಾ ಸಚಿವಾಲಯ ಮಂಗಳವಾರ ತಿಳಿಸಿದೆ. ನೌಕಾಪಡೆಯ ಅಗತ್ಯವನ್ನು ಪೂರೈಸಲು, ಪಿ8ಐ ವಿಮಾನಕ್ಕಾಗಿ ಎಡಿಸಿ-150 ವ್ಯವಸ್ಥೆಯನ್ನು ಅಲ್ಪಾವಧಿಯಲ್ಲಿಯೇ ಅಭಿವೃದ್ಧಿಪಡಿಸಲಾಯಿತು ಮತ್ತು ಅರ್ಹತೆ ಪಡೆಯಲಾಯಿತು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ನೌಕಾಪಡೆ ಜಂಟಿಯಾಗಿ ಫೆಬ್ರವರಿ 21 ರಿಂದ ಮಾರ್ಚ್ 1ರ ನಡುವೆ ಗೋವಾ ಕರಾವಳಿಯಲ್ಲಿ ಪಿ8ಐ ವಿಮಾನದಿಂದ ಸ್ಥಳೀಯ ಏರ್ ಡ್ರಾಪೆಬಲ್ ಕಂಟೇನರ್ ಎಡಿಸಿ-150ನ ನಾಲ್ಕು ಯಶಸ್ವಿ ಇನ್-ಫ್ಲೈಟ್ ಬಿಡುಗಡೆ ಪ್ರಯೋಗಗಳನ್ನು ನಡೆಸಿದವು ಎಂದು ಸಚಿವಾಲಯ ತಿಳಿಸಿದೆ. 150 ಕೆಜಿ ಪೇಲೋಡ್ ಅನ್ನು ತಲುಪಿಸಲು ಸ್ಥಳೀಯವಾಗಿ ವಿನ್ಯಾಸಗೊಳಿಸಲಾಗಿರುವ ಮತ್ತು ಅಭಿವೃದ್ಧಿಪಡಿಸಲಾಗಿರುವ 'ಏರ್ ಡ್ರಾಪೆಬಲ್ ಕಂಟೇನರ್' ಕರಾವಳಿಯಿಂದ ದೂರದಲ್ಲಿ ನಿಯೋಜಿಸಲಾಗಿರುವ ಸಮುದ್ರದಲ್ಲಿ ಸಂಕಷ್ಟದಲ್ಲಿರುವ ನೌಕಾ ಹಡಗುಗಳಿಗೆ ತ್ವರಿತ ಪ್ರತಿಕ್ರಿಯೆ ನೀಡಲು, ನಿರ್ಣಾಯಕ ಮಳಿಗೆಗಳು ಅಥವಾ ಉಪಕರಣಗಳು, ವೈದ್ಯಕೀಯ ನೆರವು ಇತ್ಯಾದಿಗಳಿಗೆ ನೌಕಾ ಕಾರ್ಯಾಚರಣೆಯ ಲಾಜಿಸ್ಟಿಕ್ಸ್ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ ಎಂದು ಹೇಳಿದೆ.

ಭಾರತ-ನೇಪಾಳ ಸಂಬಂಧ ಗಾಢವಾಗುವುದು ಖಚಿತ

ಕಠ್ಮಂಡು: ಐತಿಹಾಸಿಕ ನೇಪಾಳ-ಭಾರತ ಸಂಬಂಧಗಳನ್ನು ಮತ್ತಷ್ಟು ಗಾಢವಾಗಿಸುವ ವಿಶ್ವಾಸವನ್ನು ರಾಷ್ಟ್ರೀಯ ಸ್ವತಂತ್ರ ಪಕ್ಷದ (ಆರ್‌ಎಸ್‌ಪಿ) ಪ್ರಧಾನಿ ಅಭ್ಯರ್ಥಿ ಬಲೇಂದ್ರ ಷಾ ಅವರು ಮಂಗಳವಾರ ವ್ಯಕ್ತಪಡಿಸಿದ್ದಾರೆ. ಇವರು ನೇಪಾಳದ ಮೊದಲ ಮಧೇಶಿ ಪ್ರಧಾನಿಯಾಗಲು ಸಿದ್ಧರಾಗಿದ್ದಾರೆ. ಪಕ್ಷದ



ಚುನಾವಣಾ ಯಶಸ್ಸಿಗೆ ಶುಭ ಹಾರೈಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಶುಭಾಶಯಗಳಿಗೆ ಧನ್ಯವಾದಗಳು ಎಂದು ಅವರು ಪೋಸ್ಟ್‌ನಲ್ಲಿ ಬರೆದಿದ್ದಾರೆ. ಮುಂಬರುವ ದಿನಗಳಲ್ಲಿ ನೇಪಾಳ ಮತ್ತು ಭಾರತದ ನಡುವೆ ಇರುವ ಐತಿಹಾಸಿಕ, ನಿಕಟ ಮತ್ತು ಬಹು ಆಯಾಮದ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು, ಗಾಢವಾಗಿಸಲು ಮತ್ತು ಹೆಚ್ಚು ಫಲಿತಾಂಶ ಆಧಾರಿತವಾಗಿಸಲು ನಾವು ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ನಾನು ನನ್ನ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ ಎಂದು ಹೇಳಿದರು. ಸತತವಾಗಿ ಎರಡು ಬಾರಿ ವಿಶ್ವಕಪ್ ಪ್ರಶಸ್ತಿಯನ್ನು ಯಶಸ್ವಿಯಾಗಿ ಗೆದ್ದ ಭಾರತ ಸರ್ಕಾರ ಮತ್ತು ಭಾರತೀಯ ಜನರಿಗೆ ಷಾ ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅಭಿನಂದನೆಗಳನ್ನು ತಿಳಿಸಿದ್ದಾರೆ. ಮೋದಿ ಅವರು ಸೋಮವಾರ ಆರ್‌ಎಸ್‌ಪಿ ಮುಖ್ಯಸ್ಥ ರಬಿ ಲಮಿಚಾನೆ ಮತ್ತು ಪಕ್ಷದ ಹಿರಿಯ ನಾಯಕ ಷಾ ಅವರನ್ನು ಅವರ ಚುನಾವಣಾ ವಿಜಯಕ್ಕಾಗಿ ಅಭಿನಂದಿಸಿದ್ದರು. ಉಭಯ ದೇಶಗಳ ಪರಸ್ಪರ ಸಮೃದ್ಧಿ, ಪ್ರಗತಿ ಮತ್ತು ಯೋಗಕ್ಷೇಮಕ್ಕಾಗಿ ಅವರೊಂದಿಗೆ ಕೆಲಸ ಮಾಡುವ ಭಾರತದ ಬದ್ಧತೆಯನ್ನು ತಿಳಿಸಿದ್ದರು.

ಮಹಿಳಾ ಮೀಸಲಾತಿ ಶೀಘ್ರ ಕಾಯ್ದೆ ಜಾರಿ?

ಹೊಸದಿಲ್ಲಿ: ಲೋಕಸಭಾ ಮತ್ತು ವಿಧಾನಸಭಾ ಕ್ಷೇತ್ರಗಳಿಗೆ ಜನಗಣತಿಯ ನಂತರದ ಡಿಲಿಮಿಟೇಶನ್ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲೇ ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೆ ತರುವ ಸಾಧ್ಯತೆಯನ್ನು ಸರ್ಕಾರ ಪರಿಶೀಲಿಸುತ್ತಿದೆ. ಕೇಂದ್ರ ಸಚಿವ ಸಂಪುಟಕ್ಕೆ ಔಪಚಾರಿಕ ಪ್ರಸ್ತಾಪವನ್ನು ಸಿದ್ಧಪಡಿಸಲು ಇನ್ನೂ ಯಾವುದೇ ಸೂಚನೆಗಳನ್ನು ನೀಡಲಾಗಿಲ್ಲವಾದರೂ, 2023ರಲ್ಲಿ ಸಂಸತ್ತು ಅಂಗೀಕರಿಸಿದ ಕಾನೂನನ್ನು ತಿದ್ದುಪಡಿ ಮಾಡುವ ಸಾಧ್ಯತೆಯನ್ನು ಅನ್ವೇಷಿಸಲು ಯೋಜನೆಗಳು ನಡೆಯುತ್ತಿವೆ ಎಂದು ಮೂಲಗಳು ತಿಳಿಸಿವೆ. ಸಂವಿಧಾನವನ್ನು ತಿದ್ದುಪಡಿ ಮಾಡುವ ಮೂಲಕ ಲೋಕಸಭಾ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಒದಗಿಸುವ ನಿಬಂಧನೆ ತರಲಾಯಿತು. ಆದರೆ ಇದು ಡಿಲಿಮಿಟೇಶನ್ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಜಾರಿಗೆ ಬರುತ್ತದೆ. ಡಿಲಿಮಿಟೇಶನ್ ಆಯೋಗವು ಲೋಕ ಸಭಾ, ವಿಧಾನಸಭಾ ಕ್ಷೇತ್ರಗಳನ್ನು ಮರುಹೊಂದಿಸಲು ಕಡ್ಡಾಯವಾದ ಸಂಸ್ಥೆಯಾಗಿದೆ. ಅದರ ನಿರ್ಧಾರಗಳನ್ನು ಸುಪ್ರೀಂ ಕೋರ್ಟ್‌ನಲ್ಲಿ ಸಹ ಪ್ರಶ್ನಿಸಲು ಸಾಧ್ಯವಿಲ್ಲ.

100 ಕೋಟಿ ರೂ. ವೆಚ್ಚದಲ್ಲಿ ಸ್ವದೇಶಿ ಉತ್ಪನ್ನಗಳ ಅಪರೂಪದ ವೇದಿಕೆ

ಬರಲಿದೆ ಪಿಎಂ ಏಕತಾ ಮಾಲ್

ಹೊಸದಿಲ್ಲಿ: ದೇಶಾದ್ಯಂತ ತಯಾರಾದ ಸ್ವದೇಶಿ ಉತ್ಪನ್ನಗಳು, ಸ್ಥಳೀಯ ಕರಕುಶಲ ವಸ್ತುಗಳು ಮತ್ತು ವೈವಿಧ್ಯಮಯ ಅಡುಗೆಗಳ ಪ್ರದರ್ಶನ- ವಿಕ್ರಯಕ್ಕೆ ಉತ್ತೇಜಕ ವೇದಿಕೆ ರೂಪದ ಪಿಎಂ ಏಕತಾ ಮಾಲ್ ಶೀಘ್ರದಲ್ಲೇ ದಿಲ್ಲಿಯಲ್ಲಿ ಮೈದಳೆಯಲಿದೆ. ಸುಮಾರು 100 ಕೋಟಿ ರೂ.ವೆಚ್ಚದಲ್ಲಿ ಪಿಎಂ ಏಕತಾ ಮಾಲ್ ನಿರ್ಮಾಣವಾಗಲಿದೆ.



ಪ್ರತೀ ರಾಜ್ಯಕ್ಕೆ ತಲಾ100 ಕೋಟಿ ರೂ.ಬೆಂಬಲ: ದಿಲ್ಲಿ ಪ್ರವಾಸೋದ್ಯಮ ಮತ್ತು ಸಾರಿಗೆ ಅಭಿವೃದ್ಧಿ ನಿಗಮ ಪ್ರಸ್ತಾವಿಸಿರುವ ಪ್ರಸ್ತುತ ಯೋಜನೆಯು, ರಾಜ್ಯಗಳಿಗೆ ಬಂಡವಾಳ ಹೂಡಿಕೆಗಾಗಿ ಕೇಂದ್ರದ ವಿಶೇಷ ನೆರವಿನ ಯೋಜನೆಯಲ್ಲಿ ಸಾಕಾರಗೊಳ್ಳಲಿದೆ. ಕೇಂದ್ರ ವಿಶೇಷ ನೆರವಿನ ಯೋಜನೆಯಲ್ಲಿ ರಾಜ್ಯಗಳಿಗೆ ಸುಮಾರು 50 ವರ್ಷಗಳ ಸುದೀರ್ಘಾವಧಿಯಲ್ಲಿ ಮರುಪಾವತಿಸಬಹುದಾದ ಬಡ್ಡಿಮುಕ್ತ ಸಾಲಸೌಲಭ್ಯ ಕಲ್ಪಿಸಲಾಗುತ್ತದೆ. ಅಂದರೆ ಪ್ರತೀ ರಾಜ್ಯಗಳಿಗೆ ಕನಿಷ್ಠ 100 ಕೋಟಿ ರೂ.ಹಣಕಾಸು ಬೆಂಬಲ ನೀಡಲಾಗುತ್ತದೆ. ದೇಶಾದ್ಯಂತ ಏಕತಾ ಮಾಲ್‌ಗಳ ನಿರ್ಮಾಣಕ್ಕಾಗಿ ಕೇಂದ್ರ ಸರಕಾರ 5ಸಾವಿರ ಕೋಟಿ ರೂ.ಮೀಸಲಿರಿಸಿದೆ.

ದೇಶದ ಕರಕುಶಲ ಕರ್ಮಿಗಳು ಗ್ರಾಹಕರೊಂದಿಗೆ ಸುಲಭವಾಗಿ ವ್ಯವಹರಿಸಲು ಅವಕಾಶವಿರುವ ಪಿಎಂ ಏಕತಾಮಾಲ್, ಕಾಯಂ ಮಾರುಕಟ್ಟೆ ಕೇಂದ್ರವಾಗಿ ಕಾರ್ಯ ನಿರ್ವಹಿಸಲಿದೆ. ವಾಣಿಜ್ಯಿಕವಾಗಿ ಲಾಭದಾಯಕವಾಗಬಲ್ಲ ಮತ್ತು ಜನರನ್ನು ಸೂಜಿಗಲ್ಲಂತೆ ಸೆಳೆಯಬಲ್ಲ ಹಣಕಾಸು ಕೇಂದ್ರ ಅಥವಾ ಪ್ರಮುಖ ಪ್ರವಾಸೀ ಕೇಂದ್ರದಲ್ಲಿ ಮಾಲ್ ತೆರೆಯಲಾಗುವುದು. ಐಎನ್‌ಎ ದಿಲ್ಲಿ ಹಾತ್‌ಗೆ ಸಮೀಪ ಪೀತಂಪುರದ ನೇತಾಜಿ ಸುಭಾಷ್ ಸ್ಥಳ ಅಥವಾ ಪುರಸಭೆಯ ಆಡಳಿತಾತ್ಮಕ ಸೌಕರ್ಯಗಳು ಈಗಾಗಲೆ ಇರುವ ಮಂಜು ಕಾ ತಿಲ್ಲಾದಲ್ಲಿ ಮಾಲ್ ತಲೆಯೆತ್ತೋ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳೀಯ ಉತ್ಪಾದಕರಿಗೆ ರಾಷ್ಟ್ರೀಯ ವೇದಿಕೆಯಿದು: ವಿವಿಧ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿಸುವ 36 ಸ್ಟಾಲ್‌ಗಳು ಮಾಲ್‌ನಲ್ಲಿರಲಿವೆ. ತನ್ಮೂಲಕ ಒಂದು ಜಿಲ್ಲೆ, ಒಂದು ಉತ್ಪನ್ನ ಉಪಕ್ರಮದಡಿ, ತಮ್ಮ ವಿಶಿಷ್ಟ ಉತ್ಪನ್ನಗಳ ಜನರಿಗೆ ಪರಿಚಯಿಸಲು ದೇಶದ ಪ್ರತಿಯೊಂದು ಜಿಲ್ಲೆಗೂ ಮಾಲ್ ಅತ್ಯುತ್ತಮ ವೇದಿಕೆಯಾಗಲಿದೆ. ಭಾರತದ ಪ್ರತಿಯೊಂದು ಜಿಲ್ಲೆಯ ವಿಶಿಷ್ಟ ಕರಕೌಶಲಗಳು ಹಾಗೂ ವಿಶೇಷತೆಗಳ ಎತ್ತಿ ಹಿಡಿಯೋದು, ತನ್ಮೂಲಕ ಸ್ಥಳೀಯ ಉತ್ಪಾದಕರಿಗೆ ರಾಷ್ಟ್ರೀಯ ವೇದಿಕೆಯನ್ನು ಸೃಜಿಸೋದು ಮಾಲ್‌ನ ಆಶಯವಾಗಿದೆ.

ಗಡಿ ರಾಷ್ಟ್ರಗಳಿಂದ ಹೂಡಿಕೆ ಹರಿದುಬರಲು ಪ್ರೋತ್ಸಾಹ

ನೆರೆರಾಷ್ಟ್ರಗಳಿಗೆ ಎಫ್‌ಡಿಐ ನಿರ್ಬಂಧ ಸಡಿಲ?

ಹೊಸದಿಲ್ಲಿ: ಭಾರತದೊಂದಿಗೆ ಗಡಿ ರೇಖೆ ಹಂಚಿಕೊಳ್ಳುವ ಚೀನಾ ಸಹಿತ ನೆರೆಯ ರಾಷ್ಟ್ರಗಳಿಂದ ಹರಿದುಬರುವ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಮೇಲಿನ ನಿರ್ಬಂಧಗಳನ್ನು ಕೇಂದ್ರ ಸರ್ಕಾರ ಸಡಿಲಗೊಳಿಸಿದೆ ಎಂದು ಸರ್ಕಾರಿ ಮೂಲಗಳು ಮಂಗಳವಾರ ತಿಳಿಸಿವೆ.

ಇವುಗಳಲ್ಲಿ ಬಾಂಗ್ಲಾದೇಶ, ಪಾಕಿಸ್ತಾನ, ಭೂತಾನ್, ನೇಪಾಳ, ಮ್ಯಾನ್ಮಾರ್ ಮತ್ತು ಅಫ್ಘಾನಿಸ್ತಾನವೂ ಒಳಗೊಂಡಿವೆ. ಚೀನಾದಿಂದ ಬರುವ ಎಫ್‌ಡಿಐ ಕಡಿಮೆಯಿದ್ದರೂ, ದ್ವಿಪಕ್ಷೀಯ ವ್ಯಾಪಾರ ಹಲವು ಪಟ್ಟು ಹೆಚ್ಚಾಗಿದೆ.

ಚೀನಾ ಈಗ ಭಾರತದ ಎರಡನೇ ಅತಿ ದೊಡ್ಡ ವ್ಯಾಪಾರ ಪಾಲುದಾರ ದೇಶವಾಗಿ ಹೊರಹೊಮ್ಮಿದೆ. ಆದರೆ ಈ ಬಗ್ಗೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್ ಯಾವುದೇ ಘೋಷಣೆಗಳನ್ನು ಮಾಡಿಲ್ಲ.

ಜೇವರ್ ವಿ.ನಿಲ್ದಾಣದ ರಸ್ತೆ ಅಭಿವೃದ್ಧಿಗೆ 3,630 ಕೋಟಿ: ಉತ್ತರಪ್ರದೇಶದ ನೂತನ ಜೇವರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ರಸ್ತೆ ಅಭಿವೃದ್ಧಿಗೊಳಿಸಲು 3,630.77 ಕೋಟಿ ರೂ. ವೆಚ್ಚವನ್ನು ಕೇಂದ್ರ ಸಚಿವ ಸಂಪುಟವು ಮಂಜೂರು ಮಾಡಿದೆ. ದಕ್ಷಿಣ ದಿಲ್ಲಿ, ಫರೀದಾಬಾದ್ ಮತ್ತು ಗುರುಗ್ರಾಮದಿಂದ ವಿಮಾನ ನಿಲ್ದಾಣವನ್ನು ನೇರ ಸಂಪರ್ಕಗೊಳಿಸುವ ಅತಿ ವೇಗದ 31.42 ಕಿ.ಮೀ. ರಸ್ತೆ ಯೋಜನೆ ಇದಾಗಿದೆ.

- ಮಧುರೈ ವಿಮಾನ ನಿಲ್ದಾಣವನ್ನು ಅಂತಾರಾಷ್ಟ್ರೀಯ ನಿಲ್ದಾಣವನ್ನಾಗಿ ಘೋಷಿಸಲು ಕೇಂದ್ರ ಸಂಪುಟ ಅನುಮತಿ. ಇದರಿಂದ ಮಧುರೈ ಮೀನಾಕ್ಷಿ, ಕೂಡಲ್ ಅಳಗರ್, ತಿರುಪ್ಪಾರನ್‌ಕೂಂಡ್ರಂ ಮುರುಗನ್, ಪಲಮುದಿರ್‌ಚೋಳೈ ಮುರುಗನ್ ಮತ್ತು ರಾಮೇಶ್ವರಂ ತೀರ್ಥಯಾತ್ರೆ ಇನ್ನಷ್ಟು ಸುಧಾರಣೆ
- ಪಶ್ಚಿಮ ಬಂಗಾಳ-ಜಾರ್ಖಂಡ್ ಸಂಪರ್ಕಿಸುವ 4,474 ಕೋಟಿ ರೂ. ವೆಚ್ಚದ 2 ರೈಲ್ವೆ ಯೋಜನೆಗಳಿಗೆ ಕೇಂದ್ರ ಗ್ರೀನ್ ಸಿಗ್ನಲ್

ದಿವಾಳಿ ಕಾನೂನು ತಿದ್ದುಪಡಿಗೆ ಒಪ್ಪಿಗೆ: ದಿವಾಳಿ ಕಾನೂನು ಮತ್ತು ಕಂಪನಿಗಳ ಕಾಯ್ದೆ 2013ರಲ್ಲಿನ ತಿದ್ದುಪಡಿಗಳಿಗೆ ಕೇಂದ್ರ ಸಂಪುಟ ಅನುಮೋದನೆ ನೀಡಿದೆ.

ಜಲ್ ಜೀವನ್ ಮಿಷನ್ ವಿಸ್ತರಣೆ: ಜಲ್ ಜೀವನ್ ಮಿಷನ್ ಯೋಜನೆಯನ್ನು 8.7 ಲಕ್ಷ ಕೋಟಿ ರೂ. ವೆಚ್ಚದಲ್ಲಿ ಡಿಸೆಂಬರ್ 2028ರವರೆಗೆ ವಿಸ್ತರಿಸಲು ಕೇಂದ್ರ ಸಂಪುಟ ಅನುಮೋದನೆ ನೀಡಿದ್ದಾಗಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಐಟಿಎಫ್ ಟೆನಿಸ್ ಟೂರ್ನಿ ಸಿಂಗಲ್ಸ್, ಡಬಲ್ಸ್ ಫೈನಲ್ ಗೆದ್ದ ಬಳಿಕ ಹೊಸ ದಿಗಂತದೊಂದಿಗೆ ವೈಷ್ಣವಿ ಅಡ್ಕರ್ ಮಾತು

ವೈಷ್ಣವಿ ಅಡ್ಕರ್‌ಗೆ ಜೋಡಿ ಕಿರೀಟದ ಖುಷಿ

▸ರಾಚಪ್ಪಾ ಜಂಬಗಿ

•**ಕಲಬುರಗಿ:** ಬಿಸಿಲು ನಾಡು ಕಲಬುರಗಿಯಲ್ಲಿ ಆಯೋಜಿಸಿದ್ದ ಐಟಿಎಫ್ ಡಬ್ಲ್ಯು 35 ಮಹಿಳಾ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಹಾಗೂ ಡಬಲ್ಸ್ ವಿಭಾಗಗಳಲ್ಲಿ ಚಾಂಪಿಯನ್ ಪಟ್ಟ ಗೆದ್ದು ಗಮನ ಸೆಳೆದ ಭಾರತದ ಉದಯೋನ್ಮುಖ ಆಟಗಾರ್ತಿ ವೈಷ್ಣವಿ ಅಡ್ಕರ್, ಅನುಭವಿ ಭಾರತೀಯ ಆಟಗಾರ್ತಿ ಅಂಕಿತಾ ವಿರುದ್ಧದ ಜಯವನ್ನು ಹೆಮ್ಮೆಯ ಕ್ಷಣವೆಂದು ಬಣ್ಣಿಸಿದರು.

ತಮ್ಮ ಗೆಲುವಿನ ಯಶಸ್ಸಿನ ಹಿಂದಿನ ಪರಿಶ್ರಮ, ಪಂದ್ಯಕ್ಕಾಗಿ ನಡೆಸಿದ ಸಿದ್ಧತೆ ಸೇರಿದಂತೆ ಹಲವು ಸಂಗತಿಗಳನ್ನು ಗೆಲುವಿನ ಬಳಿಕ ಹೊಸದಿಂಗದೊಂದಿಗೆ ಮಾತುಕತೆ ಮೂಲಕ ಹಂಚಿಕೊಂಡಿದ್ದಾರೆ.

★ ಇದು ನಿಮ್ಮ ಎರಡನೇ ಐಟಿಎಫ್ ಟೈಟಲ್. ಈ ಗೆಲುವಿನ ಅನುಭವ ನೀವು ಹೇಗೆ ವಿವರಿಸುತ್ತೀರಿ?

ಈ ಗೆಲುವು ನನಗೆ ತುಂಬಾ ಸಂತೋಷ ತಂದಿದೆ. ಕಳೆದ ವಾರವೇ ಫೈನಲ್‌ಗೆ ತಲುಪಿದ್ದರೂ ಆಗ ಜಯ ಸಾಧಿಸಲು ಸಾಧ್ಯವಾಗಿರಲಿಲ್ಲ. ಆದರೆ, ಆ ಅನುಭವದಿಂದ ಪಾಠ ಕಲಿತು, ನನ್ನ ಆಟದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡೆ. ಈ ಬಾರಿ ಕೋರ್ಟ್‌ನಲ್ಲಿ ಆತ್ಮವಿಶ್ವಾಸದಿಂದ ಆಟ ಆಡಲು ಸಾಧ್ಯವಾಯಿತು. ಜೊತೆಗೆ ಅಂಕಿತಾ ರೈನಾ ಅವರೊಂದಿಗೆ



ಡಬಲ್ಸ್‌ನಲ್ಲಿ ಆಡಿದ ಅನುಭವವೂ ಫೈನಲ್ ಪಂದ್ಯದಲ್ಲಿ ನನಗೆ ಸಹಾಯವಾಯಿತು ಎಂದು ಅನಿಸುತ್ತದೆ.

2009 ಬಳಿಕ ಸಾನಿಯಾ ಮಿರ್ಜಾ ನಂತರ ಡಬ್ಲ್ಯು 100 ಅಥವಾ ಅದಕ್ಕಿಂತ ಮೇಲಿನ ಮಟ್ಟದ ಟೂರ್ನಿಯಲ್ಲಿ ಫೈನಲ್ ತಲುಪಿದ ಮೊದಲ ಭಾರತೀಯ ಮಹಿಳೆಯಾಗಿದ್ದು ನನಗೆ ಹೆಮ್ಮೆ. ಈ ಸಾಧನೆಯಿಂದ ರ‍್ಯಾಂಕಿಂಗ್ 690ರಿಂದ ಏರಿಕೆ ಕಂಡು 466ಕ್ಕೆ ತಲುಪಿದ್ದು ಮತ್ತೊಂದು ಮೈಲಿಗಲ್ಲು. ನನಗೆ ವೈಲ್ಡ್‌ಕಾರ್ಡ್ ಅವಕಾಶ ನೀಡಿದ ಕೆ.ಎಸ್.ಎಲ್.ಟಿ.ಎ.ಗೆ ತುಂಬಾ ಕೃತಜ್ಞೆ.

■ ವೈಷ್ಣವಿ ಅಡರ್, ಭಾರತದ ಟೆನಿಸ್ ಆಟಗಾರ್ತಿ

★ ಅನುಭವಿ,ಹಿರಿಯ ಆಟಗಾರ್ತಿ ಅಂಕಿತಾಗೆ ಎದುರಿಸುವಾಗ ನಿಮ್ಮ ಪ್ಲಾನ್ ಏನಿತ್ತು?

ಅಂಕಿತಾ ರೈನಾ ಭಾರತೀಯ ಟೆನಿಸ್‌ನ ಪ್ರಮುಖ ಆಟಗಾರ್ತಿಯರಲ್ಲಿ ಒಬ್ಬರು. ಅವರ ಆಟ ನೋಡುತ್ತಲೇ ನಾನು ಬೆಳೆದಿದ್ದೇವೆ. ತುಂಬಾ ಹೋರಾಟ ಮನೋಭಾವದ ಆಟಗಾರ್ತಿ. ಕೊನೆಯ ಕ್ಷಣದವರೆಗೂ ಪಂದ್ಯ ಬಿಡುವುದಿಲ್ಲ, ಆದ್ದರಿಂದ ಪಂದ್ಯಕ್ಕೆ ಇಳಿಯುವ ಮೊದಲು ಫಲಿತಾಂಶದ ಬಗ್ಗೆ ಹೆಚ್ಚು ಯೋಚಿಸದೆ, ನನ್ನ ಆಟದ ಮೇಲೆ ಗಮನ ಕೇಂದ್ರೀಕರಿಸಬೇಕೆಂದು ತೀರ್ಮಾನಿಸಿದ್ದೆ. ಪ್ರತಿಯೊಂದು ಪಾಯಿಂಟ್‌ಗಾಗಿ ಹೋರಾಟ ನಡೆಸಿ, ಅವಕಾಶ ಸಿಕ್ಕಾಗ ಅದನ್ನು ಬಳಸಿಕೊಳ್ಳಲು ಪ್ರಯತ್ನಿಸಿದೆ.

★ ಮೊಣಕಾಲಿನ ಶಸ್ತ್ರಚಿಕಿತ್ಸೆಯ ನಂತರ ಕೋರ್ಟ್‌ಗೆ ಹೇಗೆ ಕಂಬ್ಯಾಕ್ ಸಾಧಿಸಿದ್ದೀರಿ?

ಸುಮಾರು ನಾಲ್ಕು ವರ್ಷಗಳ ಹಿಂದೆ ನನಗೆ ಮೊಣಕಾಲಿನ ಶಸ್ತ್ರಚಿಕಿತ್ಸೆ ಆಗಿತ್ತು. ಆದರ ನಂತರ ಸುಮಾರು ಎಂಟು ತಿಂಗಳು ಕೋರ್ಟ್‌ನಿಂದ ದೂರ ಉಳಿಯಬೇಕಾಯಿತು. ಅದು ನನ್ನ ಕರಿಯರ್‌ನಲ್ಲಿ ಸವಾಲಿನ ಸಮಯವಾಗಿತ್ತು. ಆದರೆ, ಪುನಃಶ್ರಮಪಟ್ಟು ತರಬೇತಿ ಮುಂದುವರಿಸಿ, ಜೂನಿಯರ್ ಮಟ್ಟದಲ್ಲಿ ಮತ್ತೆ ಉತ್ತಮ ಪ್ರದರ್ಶನ ನೀಡುವ ಮೂಲಕ ಟೆನಿಸ್‌ಗೆ ಮರಳಿ ಬಂದೆ. ಈಗ ಶಾರೀರಿಕವಾಗಿ ಸಂಪೂರ್ಣವಾಗಿ ಫಿಟ್ ಆಗಿದ್ದೇನೆ.

“ದಿಗಂತ ಸಂದರ್ಶನ”

★ ಒಂದೇ ಟೂರ್ನಿಯಲ್ಲಿ 2 ಟೈಟಲ್ ಗೆದ್ದಿರುವುದು ಎಂತಹ ಭಾವನೆ ನೀಡುತ್ತಿದೆ?

ಕಲಬುರಗಿಯಲ್ಲಿ ಈ ಸಮಯದಲ್ಲಿ ಬಿಸಿಲಿನ ತಾಪಮಾನ ಹೆಚ್ಚು ಇರುವುದರಿಂದ ಆದಕ್ಕೆ ಹೊಂದಿಕೊಳ್ಳುವುದು ಸ್ವಲ್ಪ ಕಷ್ಟವಾಗಿತ್ತು. ಒಂದೇ ದಿನದಲ್ಲಿ ಎರಡು ಪಂದ್ಯಗಳನ್ನು ಆಡಬೇಕಾಗಿದ್ದುದರಿಂದ ಅದು ಇನ್ನಷ್ಟು ಸವಾಲಾಗಿತ್ತು. ಆದರೂ ಕೋರ್ಟ್‌ನಲ್ಲಿ ಕೊನೆಯವರೆಗೂ ಗಮನ ಕೇಂದ್ರೀಕರಿಸಿ ಆಡಲು ಸಾಧ್ಯವಾಯಿತು. ಪ್ರತಿಯೊಂದು ಎದುರಾಳಿಯ ವಿರುದ್ಧವೂ ಪರಿಸ್ಥಿತಿಗೆ ತಕ್ಕಂತೆ ಗೇಮ್ ಪ್ಲಾನ್ ಬದಲಾಯಿಸುತ್ತಾ ಮುಂದೆ ಬಂದೆ. ಈ ಟೂರ್ನಿಯನ್ನು ಅತ್ಯುತ್ತಮವಾಗಿ ಆಯೋಜಿಸಿದ್ದು, ಆಟಗಾರರಿಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಚೆನ್ನಾಗಿ ಮಾಡಲಾಗಿತ್ತು.

★ಮುಂದಿನ ಟೂರ್ನಿಗಳಿಗಾಗಿ ನಿಮ್ಮ ತಯಾರಿ ಮತ್ತು ಗುರಿ ಏನು?

ಮುಂದಿನ ದಿನಗಳಲ್ಲಿ ಹಲವಾರು ಪ್ರಮುಖ ಟೂರ್ನಿಗಳಿವೆ. ಆದರಲ್ಲೂ ಬಿಲ್ಲಿ ಜೀನ್ ಕಿಂಗ್ ಕಪ್ ಸೇರಿದಂತೆ ಹಲವು ಸ್ಪರ್ಧೆಗಳಿದ್ದು, ಅದಕ್ಕಾಗಿ ಈಗಿನಿಂದಲೇ ತಯಾರಿ ಆರಂಭವಾಗಿದೆ. ನಿರಂತರವಾಗಿ ಟೂರ್ನಿಗಳಲ್ಲಿ ಭಾಗವಹಿಸುವುದು ಮತ್ತು ನಿಯಮಿತ ತರಬೇತಿ ನಡೆಸುವುದು ನನ್ನ ಪ್ರಮುಖ ಗಮನ. ಮುಂದಿನ ದಿನಗಳಲ್ಲಿ ಭಾರತವನ್ನು ಪ್ರತಿನಿಧಿಸುವ ಉತ್ತಮ ಆಟಗಾರ್ತಿಯಾಗಿ ಹೊರಹೊಮ್ಮಿ, ಟೆನಿಸ್ ಕ್ಷೇತ್ರಕ್ಕೆ ನನ್ನಿಂದ ಸಾಧ್ಯವಾದಷ್ಟು ಕೊಡುಗೆ ನೀಡಲು ಪ್ರಯತ್ನಿಸುತ್ತೇನೆ.

ಕಿರುಸುದ್ದಿ

ಅರ್ಶದೀಪ್‌ಗೆ ಐಸಿಸಿ ದಂಡ

•**ಅಹಮದಾಬಾದ್** ಟಿ20 ವಿಶ್ವಕಪ್ ಫೈನಲ್ ಪಂದ್ಯದ ವೇಳೆ ಆಕ್ರಮಣಕಾರಿ ವರ್ತನೆಗೈದಿರುವ ಭಾರತದ ವೇಗಿ ಅರ್ಶದೀಪ್ ಸಿಂಗ್ ಅವರಿಗೆ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ(ಐಸಿಸಿ) ದಂಡ ವಿಧಿಸಿದೆ. ವಿಶ್ವಕಪ್ ಮುಡಿಗೇರಿಸಿಕೊಂಡ ಭಾರತ ತಂಡದ ಭಾಗವಾಗಿದ್ದ ಅರ್ಶದೀಪ್ ಪಂದ್ಯದ ವೇಳೆ ನ್ಯೂಜಿಲೆಂಡ್‌ನ ಡ್ಯಾರೆಲ್ ಮಿಚೆಲ್ ಮೇಲೆ ಆಕ್ರಮಣಕಾರಿಯಾಗಿ ಚೆಂಡೆಸೆದಿದ್ದರು. ಪರಿಣಾಮ ಫೈನಲ್ ಪಂದ್ಯದ ಶೇಕಡಾ 15 ರಷ್ಟು ದಂಡ ವಿಧಿಸಲಾಗಿದೆ. ಜೊತೆಗೆ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿದೆ. ನ್ಯೂಜಿಲೆಂಡ್ ಇನ್ನಿಂಗ್ಸ್‌ನ 11 ನೇ ಓವರ್‌ನಲ್ಲಿ ಮಿಚೆಲ್, ಅರ್ಶದೀಪ್ ಸಿಂಗ್ ಅವರ ಓವರ್‌ನಲ್ಲಿ ಎರಡು ಸಿಕ್ಸರ್‌ಗಳನ್ನು ಬಾರಿಸಿದರು. ಎರಡು ಸಿಕ್ಸರ್‌ಗಳನ್ನು ಹೊಡೆಸಿಕೊಂಡ ನಂತರ ಅರ್ಶದೀಪ್ ಕೊಂಚ ತಾಳ್ಮೆ ಕಳೆದುಕೊಂಡವರಂತೆ ವರ್ತಿಸಿದರು. ಅರ್ಶದೀಪ್ ಅವರ ಐದನೇ ಎಸೆತದಲ್ಲಿ, ಡ್ಯಾರಿಲ್ ಮಿಚೆಲ್ ಶಾಟ್ ಆಡಲು ಪ್ರಯತ್ನಿಸಿದರು, ಆದರೆ ಚೆಂಡು ನೇರವಾಗಿ ಅರ್ಶದೀಪ್ ಕಡೆಗೆ ಹೋಯಿತು. ನಂತರ ಅರ್ಶದೀಪ್ ಚೆಂಡನ್ನು ಹಿಡಿದು ಡ್ಯಾರಿಲ್ ಮಿಚೆಲ್ ಕಡೆಗೆ ಎಸೆದರು.

ಭೂತಾನ್ ಫುಟ್ಬಾಲ್ ಹೈ ಪರ್ಫಾರ್ಮೆನ್ಸ್ ನಿರ್ದೇಶಕರಾಗಿ ಕೊಡಗಿನ ಜೀತ್

•**ಮಡಿಕೇರಿ:** ಕೊಡಗು ಮೂಲದ ಕುಲ್ಲೇಟಿರ ಜೀತ್ ದೇವಯ್ಯ ಅವರನ್ನು ಭೂತಾನ್ ಫುಟ್ಬಾಲ್ ಫೆಡರೇಷನ್, ಹೈ ಪರ್ಫಾರ್ಮೆನ್ಸ್ ನಿರ್ದೇಶಕರನ್ನಾಗಿ ನೇಮಿಸಿದೆ. ದೇವಯ್ಯ ಅವರು ಗಣ್ಯ ಕ್ರೀಡಾ ಪ್ರದರ್ಶನದಲ್ಲಿ ಎರಡು ದಶಕಗಳಿಗೂ ಹೆಚ್ಚಿನ ಮತ್ತು ಕ್ರೀಡಾ ಆಡಳಿತದಲ್ಲಿ ಸುಮಾರು 29 ವರ್ಷಗಳ ಅನುಭವವನ್ನು ಹೊಂದಿದ್ದು, ಉನ್ನತ-ಕಾರ್ಯಕ್ಷಮತೆಯ ವ್ಯವಸ್ಥೆಗಳು, ಕ್ರೀಡಾಪಟುಗಳ ಅಭಿವೃದ್ಧಿ ಮತ್ತು ಕ್ರೀಡಾ ವಿಜ್ಞಾನದಲ್ಲಿ ವ್ಯಾಪಕ ಪರಿಣತಿಯನ್ನು ಹೊಂದಿದ್ದಾರೆ. ನಾನು ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಸ್ಪೆಷಲಿಸ್ಟ್ ಮತ್ತು ಈ ಹಿಂದೆ ಫುಟ್‌ಬಾಲ್, ಕ್ರಿಕೆಟ್ ಮತ್ತು ಹಾಕಿ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ಹಲವಾರು ವೃತ್ತಿಪರ ತಂಡಗಳು ಮತ್ತು ಸಂಸ್ಥೆಗಳೊಂದಿಗೆ ಕೆಲಸ ಮಾಡಿದ್ದೇನೆ.



ಡೆನ್ಮಾರ್ಕ್‌ನಲ್ಲಿ ಎಸ್ಬ್ಜೆರ್ಗ್ ಎಫ್ ಸಿಯೊಂದಿಗೆ ಸ್ಟ್ರೆಂತ್ ಮತ್ತು ಕಂಡೀಷನಿಂಗ್ ಕೋಚ್ ಆಗಿ ಕೆಲಸ ಮಾಡಿದ ಅಂತಾರಾಷ್ಟ್ರೀಯ ಅನುಭವವನ್ನು ಹೊಂದಿದ್ದೇನೆ. ನಾನು ಇಂಡಿಯನ್ ಪ್ರೀಮಿಯರ್ ಲೀಗ್ ಫ್ರಾಂಚೈಸಿಗಳಾದ ರಾಜಸ್ಥಾನ್ ರಾಯಲ್ಸ್ ಮತ್ತು ದೆಹಲಿ ಡೇರ್‌ಡೆವಿಲ್ಸ್ (ಈಗ ದೆಹಲಿ ಕ್ಯಾಪಿಟಲ್ಸ್) ನೊಂದಿಗೆ ಸಹ ಕೆಲಸ ಮಾಡಿದ್ದೇನೆ ಎಂದು ಹೇಳಿದರು.

ಫುಟ್ಬಾಲ್: ಸೋಲಿನೊಂದಿಗೆ ಭಾರತ ಅಭಿಯಾನ ಅಂತ್ಯ

•**ಹೊಸದಿಲ್ಲಿ:** ಗುಂಪು ಹಂತದ ಕೊನೆಯ ಪಂದ್ಯದಲ್ಲಿ ತೈವಾನ್ ತಂಡದೊಂದಿಗೆ ಸೋತ ಭಾರತ ಮಹಿಳಾ ತಂಡವು ಫುಟ್‌ಬಾಲ್ ಏಷ್ಯನ್‌ಕಪ್ ಪಂದ್ಯಾವಳಿಯಲ್ಲಿ ಲೀಗ್ ಹಂತದಲ್ಲೇ ಹೊರಬಿದ್ದಿತು. ಮಂಗಳವಾರ ನಡೆದ ತಮ್ಮ ಕೊನೆಯ ಪಂದ್ಯದಲ್ಲಿ ಬ್ಲ್ಯು ಟೈಗರ್ಸ್ ತೈವಾನ್‌ನೊಂದಿಗೆ 1-3ರ ಸೋಲು ಕಂಡಿದೆ. ತೈವಾನ್ ಪರ ಯು ಸು 12ನೇ ನಿಮಿಷದಲ್ಲಿ, ಚೇನ್ 77ನೇ ನಿಮಿಷದಲ್ಲಿ ಗೋಲು ಗಳಿಸಿದರು. ಭಾರತ ಒಂದೇ ಗೋಲು ಗಳಿಸಿತು. ಈ ಸೋಲಿನೊಂದಿಗೆ ಭಾರತದ ವಿಶ್ವಕಪ್ ಅರ್ಹತೆ ಕನಸು ಭಗ್ನವಾಗಿದೆ. ವಿಶ್ವಕಪ್ ಪ್ರವೇಶಕ್ಕೆ ಈಗ ಅರ್ಹತಾ ಸುತ್ತು ಒಂದೇ ದಾರಿಯಾಗಿದೆ .

ಗುರುವಾರದಂದು ಮೊದಲ ಹಂತದ ವೇಳಾಪಟ್ಟಿ | ಮಾ.28 ರಿಂದ ಐಪಿಎಲ್ | ಪಂದ್ಯ ಸಂಖ್ಯೆ ಹೆಚ್ಚಳ ಸಾಧ್ಯತೆ

ಐಪಿಎಲ್‌ನಲ್ಲಿ ಈ ಬಾರಿ 84 ಪಂದ್ಯ?

•**ಮುಂಬೈ:** ವಿಶ್ವ ಕ್ರಿಕೆಟ್‌ನ ಮದಗಜವಾಗಿ ಬೆಳೆದು ನಿಂತ ನಂತರ ಅತಿ ಶ್ರೀಮಂತ ಮತ್ತು ಅತಿ ದೊಡ್ಡ ಲೀಗ್ ಎಂಬ ಹೆಸರು ಪಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಪಂದ್ಯಾವಳಿಯು ಈಗ ಇನ್ನಷ್ಟು ವಿಸ್ತಾರವಾಗಲಿದ್ದು, 19ನೇ ಆವೃತ್ತಿಯಲ್ಲಿ 84 ಪಂದ್ಯಗಳು ನಡೆಯುವ ಸಾಧ್ಯತೆ ಇದೆ.

ಸುಮಾರು 2 ತಿಂಗಳಿಗೂ ಹೆಚ್ಚು ಕಾಲ ನಡೆದು ಜನರನ್ನು ರಂಜಿಸುವ ಐಪಿಎಲ್ ಟೂರ್ನಿ ಈಗ ಇನ್ನಷ್ಟು ಹಿಗ್ಗಲಿದೆ. ಇದೇ ಮೊದಲ ಬಾರಿಗೆ ಪಂದ್ಯದ ಸಂಖ್ಯೆಯನ್ನು 84ಕ್ಕೇರಿಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮುಂದಾಗಿದೆ. ಎಲ್ಲಾ ಹತ್ತೂ ತಂಡಗಳಿಗೆ 8 ತವರು, 8 ಹೊರಪ್ರದೇಶ ಪಂದ್ಯಗಳು ಸಿಗಬೇಕೆಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

2008ರಲ್ಲಿ ಪಂದ್ಯಾವಳಿ ಆರಂಭವಾಗಿತ್ತು. ಮೊದಲಿಗೆ 8 ತಂಡಗಳಿದ್ದವು, ಕೊಚ್ಚಿ ಅಂತಹ ತಂಡಗಳು ಐಪಿಎಲ್‌ನಿಂದ ಹೊರನಡೆದವು. 2016-17ರಲ್ಲಿ ಎರಡು ತಂಡಗಳನ್ನು ನಿಷೇಧಿಸಲಾಗಿತ್ತು. ಆಗ ಎರಡು ಬೇರೆ ತಂಡಗಳನ್ನು ಸೇರಿಸಲಾಗಿತ್ತು. ಇಷ್ಟಾದರೂ ಬಿಸಿಸಿಐ ಹೆಚ್ಚು ಪಂದ್ಯಗಳನ್ನಾಡಿಸಲು ಮುಂದಾಗಿರಲಿಲ್ಲ. ಆದರೆ ಇದೇ ಮೊದಲ ಬಾರಿಗೆ 80ಕ್ಕೂ ಅಧಿಕ ಪಂದ್ಯಗಳನ್ನಾಡಿಸುವ ಉದ್ದೇಶ ಹೊಂದಿದೆ.

ಬರೋಬ್ಬರಿ 84 ಪಂದ್ಯಗಳು: ಕಳೆದ ಬಾರಿ ಅಂದರೆ 18ನೇ ಆವೃತ್ತಿಯ ಐಪಿಎಲ್‌ನಲ್ಲಿ 74 ಪಂದ್ಯಗಳನ್ನಾಡಿಸಲಾಗಿತ್ತು. ಒಂದು ತಂಡ 14ರಂತೆ ಲೀಗ್ ಪಂದ್ಯಗಳಲ್ಲಿ ಆಡುತ್ತಿತ್ತು. ಆದರೆ ಎಲ್ಲಾ 10 ತಂಡಗಳು ಎರಡು ಬಾರಿ ಎದುರಾಗುತ್ತಿರಲಿಲ್ಲ. ಎರಡು ತಂಡಗಳು ಒಂದೇ ಬಾರಿ ಎದುರಾಗಬೇಕಾದ ಅನಿವಾರ್ಯತೆ ಇತ್ತು. ಉದಾಹರಣೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಎಲ್ಲಾ 9 ಎದುರಾಳಿಗಳೊಂದಿಗೆ 2 ಪಂದ್ಯಗಳನ್ನಾಡುತ್ತಿರಲಿಲ್ಲ. 2 ತಂಡಗಳ ಎದುರಿಗೆ ಕೇವಲ ಒಂದು ಪಂದ್ಯ ಆಡುಬೇಕಾಗಿತ್ತು. ಈ ಬಗ್ಗೆ ಕಾಳಜಿ ವಹಿಸಿರುವ ಬಿಸಿಸಿಐ ಪಂದ್ಯಾವಳಿಯನ್ನೇ ವಿಸ್ತರಿಸುವ ಯೋಜನೆ ಹಾಕಿಕೊಂಡಿದೆ. 80 ಲೀಗ್ ಪಂದ್ಯಗಳು ಇರಲಿದ್ದು, ನಾಲ್ಕು ಪ್ಲೇಆಫ್ ಪಂದ್ಯಗಳು ನಡೆಯಲಿವೆ.



ಎಷ್ಟು ತಂಡಗಳಿದ್ದಾಗ ಎಷ್ಟು ಪಂದ್ಯಗಳು?

8 ತಂಡಗಳು	60 ಪಂದ್ಯಗಳು
9 ತಂಡಗಳು	76 ಪಂದ್ಯಗಳು
10 ತಂಡಗಳು	74 ಪಂದ್ಯಗಳು (ಸಾಮಾನ್ಯ ಮಾದರಿ)
10 ತಂಡಗಳು	84 ಪಂದ್ಯಗಳು (ಈ ಬಾರಿಯ ವಿಸ್ತಾರ)

ಕಳೆದ ಬಾರಿ ಇದ್ದದ್ದು 74 ಪಂದ್ಯ: ಐಪಿಎಲ್ ಆರಂಭಿಕ ಆವೃತ್ತಿಯಲ್ಲಿ 59 ಪಂದ್ಯಗಳನ್ನು ಮಾತ್ರ ಆಡಿಸಲಾಗಿತ್ತು. ನಂತರ ಎರಡು ಬಾರಿ ಬದಲಾವಣೆಯಾಗಿ ಹಲವು ಬಾರಿ 60 ಮತ್ತು 76 ಪಂದ್ಯಗಳನ್ನಾಡಿಸಿತ್ತು. ಐಪಿಎಲ್‌ನಲ್ಲಿ ಹೆಚ್ಚು ಬಾರಿ 60 ಪಂದ್ಯಗಳನ್ನೇ ಆಡಿಸಲಾಗಿದೆ. 2021ರಲ್ಲಿ 60 ಪಂದ್ಯಗಳನ್ನೇ ಆಡಿಸಲಾಗಿತ್ತು. 2023ರಲ್ಲಿ ಎರಡು ಹೊಸ ತಂಡಗಳು ಸೇರ್ಪಡೆಯಾದವು. ಹೀಗಾಗಿ ಪಂದ್ಯದ ಸಂಖ್ಯೆ 74ಕ್ಕೆ ವಿಸ್ತಾರವಾಗಿತ್ತು. 2022ರಿಂದ 18ನೇ ಆವೃತ್ತಿವರೆಗೂ 74 ಪಂದ್ಯಗಳನ್ನೇ ಆಡಿಸಲಾಗಿತ್ತು.

ಬದಲಾಗಿದ್ದು ಏನು? ಐಪಿಎಲ್‌ನಲ್ಲಿ ಮೊದಲಿಗೆ 8 ತಂಡಗಳು ಮಾತ್ರ ಇದ್ದವು. ಹೀಗಾಗಿ ಎಲ್ಲಾ ತಂಡಗಳು ಎಲ್ಲಾ ತಂಡಗಳನ್ನು ತಲಾ ಎರಡು ಬಾರಿ ಎದುರಿಸುತ್ತಿದ್ದವು. ಆದರೆ 10 ತಂಡಗಳಿಗೆ ಕೂಟ ಬದಲಾಯಿತು. ಆದಾಗ್ಯೂ ಪಂದ್ಯಗಳ ಸಂಖ್ಯೆ ಏರಿಸಲಾಗಿರಲಿಲ್ಲ. ಅಂದರೆ ಒಂದು ತಂಡ 14 ಮಾತ್ರ ಲೀಗ್ ಪಂದ್ಯಗಳನ್ನಾಡುತ್ತಿತ್ತು. ಇದನ್ನು ಈಗ 16ಕ್ಕೇರಿಸಲಾಗುತ್ತದೆ. ಅಂದರೆ ಪ್ರತಿಯೊಂದು ತಂಡವೂ 8 ತವರು ಮತ್ತು 8 ಹೊರಪ್ರದೇಶದ ಪಂದ್ಯಗಳನ್ನಾಡಲಿವೆ. ವಾಸ್ತವವಾಗಿ ಎಲ್ಲಾ ತಂಡಗಳು ಎರಡು ಬಾರಿ ಎದುರಾದರೆ ಒಂದು ತಂಡ 18 ಪಂದ್ಯಗಳನ್ನಾಡಬೇಕಾಗುತ್ತದೆ. ಆದರೆ ಈ ಬಾರಿ ಅಂತಹ ಯೋಜನೆಗಳನ್ನು ಹಾಕಿಕೊಂಡಿಲ್ಲ ಎಂದು ಹೇಳಲಾಗುತ್ತಿದೆ.

2 ಹಂತದಲ್ಲಿ ವೇಳಾಪಟ್ಟಿ: ದೇವಜೀತ್ ಸೈಕಿಯಾ

ಮಾರ್ಚ್ 28ರಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ವೇಳಾಪಟ್ಟಿ ಗುರುವಾರದಂದು ಬಿಡುಗಡೆಯಾಗಲಿದೆ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜೀತ್ ಸೈಕಿಯಾ ತಿಳಿಸಿದ್ದಾರೆ. ಭಾನುವಾರದಂದು ಐಪಿಎಲ್ ಶುರುವಾಗುವ ದಿನಾಂಕಗಳನ್ನು ಘೋಷಿಸಲಾಗಿದೆ. ಮೊದಲ ಪಂದ್ಯ ಮಾರ್ಚ್ 28ಕ್ಕೆ ನಡೆಯಲಿದೆ. ಫೈನಲ್ ಪಂದ್ಯ ಮೇ 31ರಂದು ನಡೆಯಲಿದೆ. ಈ ಬಗ್ಗೆ ಮಾತನಾಡಿರುವ ಸೈಕಿಯಾ, ಹಲವು ರಾಜ್ಯಗಳಲ್ಲಿ ಚುನಾವಣೆಗಳಿರುವುದರಿಂದ ವೇಳಾಪಟ್ಟಿ ತಡವಾಗಿದೆ. 5 ರಾಜ್ಯಗಳಲ್ಲಿ ಚುನಾವಣೆ ನಡೆಯಲಿದೆ. ಈ ಬೆನ್ನಲ್ಲೇ ನಾವು ವೇಳಾಪಟ್ಟಿಯನ್ನು ಎರಡು ಹಂತದಲ್ಲಿ ಬಿಡುಗಡೆ ಮಾಡಲು ನಿರ್ಧರಿಸಿದ್ದೇವೆ. ಮೊದಲ ಹಂತದ ವೇಳಾಪಟ್ಟಿ ಗುರುವಾರದಂದು ಬಿಡುಗಡೆ ಮಾಡುತ್ತೇವೆ. ಎರಡನೇ ಹಂತದ ವೇಳಾಪಟ್ಟಿಯನ್ನು ಚುನಾವಣೆಯ ಆಧಾರದ ಮೇಲೆ ಬಿಡುಗಡೆ ಮಾಡುತ್ತೇವೆ ಎಂದಿದ್ದಾರೆ.

ವಿಶ್ವಕಪ್ ಅರ್ಹತಾ ಸುತ್ತು: ಭಾರತ ಪಂದ್ಯ ಡ್ರಾ

•**ಹೈದರಾಬಾದ್:** ಎಫ್‌ಐಎಚ್ ಮಹಿಳಾ ವಿಶ್ವಕಪ್ ಅರ್ಹತಾ ಸ್ಪರ್ಧೆಯಲ್ಲಿ ಉರುಗ್ವೆಯನ್ನು ಸುಲಭವಾಗಿ ಸೋಲಿಸಿದ ನಂತರ ಭಾರತಕ್ಕೆ ಸ್ಕಾಟ್ಲೆಂಡ್ ವಿರುದ್ಧ ಕಠಿಣ ಸವಾಲು ಎದುರಾಯಿತು. ಎರಡೂ ತಂಡಗಳ ನಿರಂತರ ಪರಿಶ್ರಮ ಹಾಗೂ ಕರಾರುವಾಕ್ ಆಟದೊಂದಿಗೆ ಪಂದ್ಯ ಡ್ರಾದಲ್ಲಿ ಅಂತ್ಯವಾಗಿದೆ.

ಜಿ.ಎಂ.ಸಿ ಬಾಲಯೋಗಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಭಾರತ ಆರಂಭದಲ್ಲಿ ಹಿನ್ನಡೆ ಅನುಭವಿಸಿದರೂ ನಂತರ ಕಂಬ್ಯಾಕ್ ಮಾಡಿತ್ತು. ಡಿಫೆನ್ಸ್ ಮೂಲಕ ಭಾರತ ಮುನ್ನಡೆ ಕೂಡ ಪಡೆಯಿತು. ಆದರೆ ಸ್ಕಾಟ್ಲೆಂಡ್ ಹೋರಾಟದಿಂದ ಮರಳಿ ಬಂದು ಪಂದ್ಯವನ್ನು 2-2 ಸಮಬಲದಲ್ಲಿ ಮುಗಿಸಿತು.



ಆರಂಭದಲ್ಲೇ ಗೋಲು!: ಆರನೇ ನಿಮಿಷದಲ್ಲಿ ಸ್ಕಾಟ್ಲೆಂಡ್ ಪೆನಾಲ್ಟಿ ಕಾರ್ನರ್ ಗಳಿಸಿ ಮುನ್ನಡೆ ಪಡೆದಿತು. ಜೆನ್ನಿಫರ್ ಈಡಿ ಅವರ ಡ್ರ್ಯಾಗ್‌ಫ್ಲಿಕ್ ಅನ್ನು ಹೀದರ್ ಮೆಕ್‌ಇವನ್ ಡಿಫ್ಲೆಕ್ಷನ್ ಮೂಲಕ ಗೋಲಾಗಿ ಪರಿವರ್ತಿಸಿದರು. ಮೂರನೇ ಕ್ವಾರ್ಟರ್ ಆರಂಭವಾದ ಮೂರು ನಿಮಿಷಗಳಲ್ಲೇ ಭಾರತ ಸಮಬಲ ಸಾಧಿಸಿತು. ಪೆನಾಲ್ಟಿ ಕಾರ್ನರ್ ಅನ್ನು ನವ್ನೀತ್ ಕೌರ್-ಸುಶೀಲಾ ಚಾನು ಭಾರತಕ್ಕೆ ಮೊದಲ ಗೋಲು ತಂದುಕೊಟ್ಟರು. ಮೊದಲಾರ್ಧ ಮುಕ್ತಾಯಕ್ಕೂ ಮೊದಲು ಭಾರತ ಮುನ್ನಡೆ ಪಡೆದಿತು. ರುತುಜಾ ಪಿಸಾಲ್ ಗಳಿಸಿದ ಪೆನಾಲ್ಟಿ ಕಾರ್ನರ್ ಬಳಿಕ ಉಂಟಾದ ಗೊಂದಲದಲ್ಲಿ ಸುನೆಲಿತಾ ಟೊಪ್ಪೊ ಗೋಲು ಗಳಿಸಿದರು. ಆದರೆ ಮೂರನೇ ಕ್ವಾರ್ಟರ್‌ನಲ್ಲಿ ಫಿಯೋನಾ ಬರ್ನೆಟ್ ಗೋಲು ಬಾರಿಸಿ ಸ್ಕಾಟ್ಲೆಂಡ್ ಸಮಬಲ ಸಾಧಿಸಿತು. ನಂತರ ಎರಡೂ ತಂಡಗಳು ಅವಕಾಶಗಳನ್ನು ಸೃಷ್ಟಿಸಿದರೂ ಗೋಲು ಸಾಧ್ಯವಾಗದೆ ಪಂದ್ಯ 2-2 ಡ್ರಾ ಆಗಿ ಮುಕ್ತಾಯವಾಯಿತು.

24 ಕ್ರೀಡಾಪಟುಗಳಿಗೆ ನಿವೇಶನ ಭರವಸೆ

•**ಬೆಂಗಳೂರು:** ಏಷ್ಯನ್ ಗೇಮ್ಸ್, ಒಲಿಂಪಿಕ್ಸ್ ಸೇರಿದಂತೆ ವಿವಿಧ ಕ್ರೀಡೆಗಳಲ್ಲಿ ರಾಷ್ಟ್ರವನ್ನು ಪ್ರತಿನಿಧಿಸಿ ಪದಕ ಪಡೆದಿರುವ ರಾಜ್ಯದ ಹಲವು ಕ್ರೀಡಾಪಟುಗಳಿಗೆ ನಿವೇಶನ ಹಂಚಿಕೆ ಮಾಡುವಂತೆ ರಾಜ್ಯ ಒಲಿಂಪಿಕ್ಸ್ ಸಂಸ್ಥೆಯ ಅಧ್ಯಕ್ಷ, ವಿಧಾನ ಪರಿಷತ್ ಸದಸ್ಯ ಡಾ. ಕೆ. ಗೋವಿಂದರಾಜು ಅವರು ರಾಜ್ಯ ಗೃಹ ಮಂಡಳಿಗೆ ಮನವಿ ಸಲ್ಲಿಸಿದ್ದಾರೆ. ಮನವಿ ಸ್ವೀಕರಿಸಿರುವ ಸಚಿವ ಜಮೀರ್ ಅಹ್ಮದ್, ಎಲ್ಲರಿಗೂ ನಿವೇಶನ ನೀಡುವುದಾಗಿ ಭರವಸೆ ನೀಡಿದ್ದು, ತಕ್ಷಣದಿಂದಲೇ ಕ್ರಮ ಕೈಗೊಳ್ಳುವಂತೆ ಸೂಚಿಸುವುದಾಗಿ ಹೇಳಿದ್ದಾರೆ. ಒಟ್ಟು 24 ಕ್ರೀಡಾಪಟುಗಳಿಗೆ ನಿವೇಶನ ಸಿಕ್ಕಿಲ್ಲ, ಈ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ಭರವಸೆ ನೀಡಲಾಗಿದೆ.



ವಿಶ್ವಕಪ್ ಗೆದ್ದ ಬೆನ್ನಲ್ಲೇ ಬಹುಮಾನ ಘೋಷಿಸಿದ ಬಿಸಿಸಿಐ

ಭಾರತ ತಂಡಕ್ಕೆ ₹131 ಕೋಟಿ!

•**ಮುಂಬೈ:** ಭಾರತದ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತನ್ನದೇ ದಾಖಲೆ ಮುರಿದು, 2026ರ ಟಿ20 ವಿಶ್ವಕಪ್ ಗೆದ್ದ ಭಾರತೀಯ ತಂಡಕ್ಕೆ ಭರ್ಜರಿ 131 ಕೋಟಿ ರೂ. ನಗದು ಬಹುಮಾನ ಘೋಷಿಸಿದೆ.

2024ರಲ್ಲಿ ರೋಹಿತ್ ಶರ್ಮ ನಾಯಕತ್ವದಲ್ಲಿ ಬಾರ್ಬಡೋಸ್‌ನಲ್ಲಿ ಭಾರತ ವಿಶ್ವಕಪ್ ಗೆದ್ದಾಗ ಬಿಸಿಸಿಐ 125 ಕೋಟಿ ರೂ. ಬಹುಮಾನ ನೀಡಿತ್ತು. ಇದೀಗ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಜಯ ಸಾಧಿಸಿದ ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡ ಕ್ಕೆ ಬಹುಮಾನ ನೀಡುವುದರಲ್ಲಿ ಇತಿಹಾಸ ನಿರ್ಮಿಸಿದೆ.

ಈ ಜಯದೊಂದಿಗೆ ಭಾರತ ಟಿ20 ವಿಶ್ವಕಪ್ ಅನ್ನು ಸರಿಯಾಗಿ ಎರಡನೇ ಬಾರಿ ಉಳಿಸಿಕೊಂಡ ಮೊದಲ ತಂಡವಾಗಿದ್ದು, ಒಟ್ಟಾರೆ ಮೂರು ಬಾರಿ ಈ ಪ್ರಶಸ್ತಿ ಗೆದ್ದ ಮೊದಲ ತಂಡ ಎಂಬ ದಾಖಲೆ ಕೂಡ ನಿರ್ಮಿಸಿದೆ. ಬಿಸಿಸಿಐ ಪ್ರಕಟಣೆಯಲ್ಲಿ ಆಟಗಾರರು, ತರಬೇತಿ ಸಿಬ್ಬಂದಿ ಹಾಗೂ ಆಯ್ಕೆ ಸಮಿತಿಗೆ ಅಭಿನಂದನೆ ತಿಳಿಸಿ, ಈ ಐತಿಹಾಸಿಕ ಸಾಧನೆ ಭಾರತೀಯ ಕ್ರಿಕೆಟ್‌ಗೆ ಹೆಮ್ಮೆ ತರುತ್ತದೆ ಎಂದು ಹೇಳಿದೆ.

ಐಸಿಸಿಯಿಂದಲೂ ಭರ್ಜರಿ ಬಹುಮಾನ: ಇದರ ಜೊತೆಗೆ ಅಂತರಾಷ್ಟ್ರೀಯ ಕ್ರಿಕೆಟ್ ಮಂಡಳಿಯು ಕೂಡ ಭಾರತಕ್ಕೆ 3



ಮಿಲಿಯನ್ ಅಮೆರಿಕನ್ ಡಾಲರ್ (ಸುಮಾರು 27.48 ಕೋಟಿ ರೂಪಾಯಿ) ಬಹುಮಾನ ನೀಡಿದೆ. ಈ ಬಾರಿ ವಿಶ್ವಕಪ್ ಟೂರ್ನಿಯ ಒಟ್ಟು ಬಹುಮಾನ ಮೊತ್ತ 13.5 ಮಿಲಿಯನ್ ಡಾಲರ್ ಆಗಿದ್ದು, ಹಿಂದಿನ ಆವೃತ್ತಿಗಿಂತ ಸುಮಾರು 20 ಶೇಕಡಾ ಹೆಚ್ಚಳ ಕಂಡಿದೆ. ಗುಂಪು ಹಂತ ಮತ್ತು ಸೂಪರ್ ಎಂಟು ಹಂತಗಳಲ್ಲಿ ಪ್ರತಿ ಪಂದ್ಯ ಜಯಿಸಿದಾಗಲೂ ತಂಡಕ್ಕೆ ಸುಮಾರು 31,154 ಡಾಲರ್ (ಸುಮಾರು 28.6 ಲಕ್ಷ ರೂಪಾಯಿ) ಹೆಚ್ಚುವರಿ ಬಹುಮಾನ ನೀಡಲಾಗಿದೆ.

ಯಾರ್‍ಯಾರಿಗೆ ಸೇರಲಿದೆ ಬಹುಮಾನ? ವಿಶ್ವಕಪ್ ತಂಡದ ಭಾಗವಾಗಿರುವ ಪ್ರತಿಯೊಬ್ಬ ಆಟಗಾರರಿಗೂ ಸಮಾನ ಬಹುಮಾನ ಸೇರಲಿದೆ. ಇದಲ್ಲದೆ, ಪ್ರಧಾನ ಕೋಚ್, ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್ ಕೋಚ್ ಸೇರಿದಂತೆ ಎಲ್ಲಾ ತರಬೇತಿ ಸಿಬ್ಬಂದಿ ಮತ್ತು ತಂಡದ ವೈದ್ಯಕೀಯ ಹಾಗೂ ಬೆಂಬಲ ಸಿಬ್ಬಂದಿಗೂ ಹಂಚಿಕೆಯಾಗಲಿದೆ.

ದಾಖಲೆಯ ಬಹುಮಾನ

ಇಲ್ಲಿಯವರೆಗೂ ಯಾವುದೇ ತಂಡ ಯಾವುದೇ ವಿಶ್ವಕಪ್ ಗೆದ್ದರೂ ಇಷ್ಟೊಂದು ಬಹುಮಾನ ಈವರೆಗೂ ಯಾವುದೇ ಸಂಸ್ಥೆ ನೀಡಿರಲಿಲ್ಲ. 2024ರಲ್ಲೇ ಭಾರತ ಅತಿ ಹೆಚ್ಚು ಮೊತ್ತದ ನಗದು ಬಹುಮಾನ ನೀಡಿದ ಸಂಸ್ಥೆ ಅನಿಸಿಕೊಂಡಿತ್ತು. ಈ ದಾಖಲೆಯನ್ನೇ ಮುರಿದಿರುವ ಬಿಸಿಸಿಐ, 133 ಕೋಟಿ ರೂ. ಘೋಷಿಸಿದೆ.

3 ವರ್ಷದಲ್ಲಿ ಬಿಸಿಸಿಐ ಕೊಟ್ಟಿದ್ದು 335 ಕೋಟಿ

ಬಿಸಿಸಿಐ ಮೂರು ವರ್ಷಗಳಲ್ಲಿ ಬರೋಬ್ಬರಿ 335 ಕೋಟಿ ರೂ. ಬಹುಮಾನ ನೀಡಿದೆ. 2024ರಲ್ಲಿ ಭಾರತ ಟಿ20 ವಿಶ್ವಕಪ್, 2025ರಲ್ಲಿ ಚಾಂಪಿಯನ್ಸ್ ಟ್ರೋಫಿ ಹಾಗೂ ಈ ಬಾರಿ ಮತ್ತೊಮ್ಮೆ ಟಿ20 ವಿಶ್ವಕಪ್ ಗೆದ್ದಿರುವ ಭಾರತಕ್ಕೆ ಭಾರೀ ಬಹುಮಾನ ನೀಡಲಾಗಿದೆ. ಅಲ್ಲದೆ ಕಳೆದ ಬಾರಿ ಏಷ್ಯಾಕಪ್ ಕೂಡ ಭಾರತ ಗೆದ್ದುಕೊಂಡಿದೆ. ಆಗಲೂ ಬಿಸಿಸಿಐ ಭರ್ಜರಿ ಬಹುಮಾನ ನೀಡಿತ್ತು.

ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟ್

ಕನ್ನಡಗರಿಗೆ 11 ಪದಕ



ಬೆಂಗಳೂರು: 7ನೇ ರಾಷ್ಟ್ರೀಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರರು ಅತ್ಯುತ್ತಮ ಪ್ರದರ್ಶನ ನೀಡಿ ಒಟ್ಟು 11 ಪದಕಗಳನ್ನು ಗೆದ್ದಿದ್ದಾರೆ. ರಾಜ್ಯದ ತಂಡವು 2 ಚಿನ್ನ, 4 ಬೆಳ್ಳಿ ಹಾಗೂ 5 ಕಂಚಿನ ಪದಕಗಳನ್ನು ಗಳಿಸಿ ಗಮನಾರ್ಹ ಸಾಧನೆ ಮಾಡಿದೆ. ಚಾಂಪಿಯನ್‌ಶಿಪ್‌ನಲ್ಲಿ ಕನ್ನಡತಿ ಪಲ್ಲವಿ ಕೆ.ಎಂ ಅವರ ಪ್ರದರ್ಶನ ವಿಶೇಷವಾಗಿತ್ತು. ಅವರು ಮಹಿಳಾ ಸಿಂಗಲ್ಸ್ ವಿಭಾಗ ಮತ್ತು ಮಹಿಳಾ ಡಬಲ್ಸ್ ವಿಭಾಗಗಳಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದರು. ಜೊತೆಗೆ ಮಿಶ್ರ ಡಬಲ್ಸ್ ವಿಭಾಗದಲ್ಲಿ ಒಂದು ಬೆಳ್ಳಿ ಪದಕ ಪಡೆದು ಶ್ರೇಷ್ಠ ಸಾಧನೆ ಮಾಡಿದ್ದಾರೆ.

ಯಾರ್‍ಯಾರಿಗೆ ಯಾವ್ಯಾವ ಪದಕ?

ಅಮ್ಮು ಮೋಹನ್ ಕೂಡ ಉತ್ತಮ ಪ್ರದರ್ಶನ ನೀಡಿದರು. ಅವರು ಮಹಿಳಾ ಡಬಲ್ಸ್ ವಿಭಾಗದಲ್ಲಿ ಒಂದು ಬೆಳ್ಳಿ ಪದಕ ಮತ್ತು ಮಹಿಳಾ ಸಿಂಗಲ್ಸ್ ಹಾಗೂ ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದರು. ಶಾರ್ಟ್ ಹೈಟ್ ವಿಭಾಗದಲ್ಲಿ ಧನೇಶ್ವರಿ ಅವರು ಮಹಿಳಾ ಡಬಲ್ಸ್‌ನಲ್ಲಿ ಬೆಳ್ಳಿ ಪದಕ ಮತ್ತು ಮಹಿಳಾ ಸಿಂಗಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದರು. ಇದೇ ವಿಭಾಗದಲ್ಲಿ ಜನನಿ ಆರ್ ಅವರು ಮಹಿಳಾ ಡಬಲ್ಸ್‌ನಲ್ಲಿ ಒಂದು ಬೆಳ್ಳಿ ಪದಕ ಪಡೆದರು. ಪುರುಷರ ವಿಭಾಗದಲ್ಲಿ ಸಿದ್ದಣ್ಣ ಸಾಹುಕಾರ್ ಅವರು ಪುರುಷರ ಸಿಂಗಲ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದರು. ಜಮ್ಮಾದ್ ಎಂ ಇ ಅವರು ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ, ಹಾಗೂ ಮಂಜುನಾಥ್ ಸಿ ಅವರು ಪುರುಷರ ಡಬಲ್ಸ್‌ನಲ್ಲಿ ಕಂಚಿನ ಪದಕ ಗಳಿಸಿದರು.

ರಾಷ್ಟ್ರೀಯ ಶೂಟಿಂಗ್: ಮನುಗೆ ಮೊದಲ ಸ್ಥಾನ

•**ಹೊಸದಿಲ್ಲಿ:** ಒಲಿಂಪಿಯನ್ ಮನು ಭಾಕರ್ ರಾಷ್ಟ್ರೀಯ ಆಯ್ಕೆ ಪರೀಕ್ಷೆಗಳ ಟಿ3 (ಗುಂಪು ಎ) ಸ್ಪರ್ಧೆಯ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ಫೈನಲ್‌ನಲ್ಲಿ ಮೊದಲ ಸ್ಥಾನ ಪಡೆದುಕೊಂಡಿದ್ದಾರೆ. ಇಲ್ಲಿನ ಡಾ. ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ಮಂಗಳವಾರ ಸ್ಪರ್ಧೆ ಮುಕ್ತಾಯಗೊಂಡಿತು.

ಫೈನಲ್‌ಗೆ ಕೊನೆಯ ಅರ್ಹತೆಯಾಗಿ ಪ್ರವೇಶಿಸಿದ್ದ ಮನು ಭಾಕರ್ ಎರಡನೇ ಸರಣಿಯ ಅಂತ್ಯದಿಂದಲೇ ಮುನ್ನಡೆ ಕಾಯ್ದುಕೊಂಡು 246.1 ಅಂಕಗಳೊಂದಿಗೆ ಪ್ರಶಸ್ತಿ ಗೆದ್ದರು. ವಿಶ್ವಕಪ್ ಫೈನಲ್ ಬೆಳ್ಳಿ ಪದಕ ವಿಜೇತೆ ಸೈನ್ಯಮ್ 241.9 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆದರು. ಏಷ್ಯನ್ ಚಾಂಪಿಯನ್‌ಶಿಪ್ ಚಿನ್ನ ಹಾಗೂ ವಿಶ್ವ ಚಾಂಪಿಯನ್‌ಶಿಪ್ ಕಂಚು ಪದಕ ವಿಜೇತೆ ಈಶಾ ಸಿಂಗ್ 220.6 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟರು.

ಏಷ್ಯನ್ ಗೇಮ್ಸ್ ಚಾಂಪಿಯನ್ ಪಾಲಕ್ ಗುಲಿಯಾ 200.2 ಅಂಕಗಳೊಂದಿಗೆ ನಾಲ್ಕನೇ



ಸ್ಥಾನ ಪಡೆದರು. ನಂತರ ಅಂಜಲಿ ಚೌಧರಿ 179.8, ಸುರ್ಬಿ ರಾವ್ 158.2 ಅಂಕಗಳೊಂದಿಗೆ ಕ್ರಮವಾಗಿ ಐದನೇ ಹಾಗೂ ಆರನೇ ಸ್ಥಾನ ಪಡೆದರು. ಪ್ರಾಂಜಲಿ ಪ್ರಶಾಂತ್ ಧುಮಾಲ್ 138.7 ಮತ್ತು ಮುಸ್ಕಾನ್ 117.0 ಅಂಕಗಳೊಂದಿಗೆ ಮೊದಲ ಎಂಟು ಸ್ಥಾನಗಳನ್ನು ಪೂರ್ಣಗೊಳಿಸಿದರು.

ಇತರ ಫಲಿತಾಂಶಗಳು

ಪುರುಷರ 50 ಮೀಟರ್ ರೈಫಲ್ ಪ್ರೋನ್
1. ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ 628.3
2. ನಿರಾಜ್ ಕುಮಾರ್ 622.6
3. ಗೋಲ್ಡಿ ಗುರ್ಜರ್ 622.2

ಮಹಿಳೆಯರ 50 ಮೀಟರ್ ರೈಫಲ್ ಪ್ರೋನ್
1. ಸಿಫ್ಟ್ ಕೌರ್ ಸಮ್ರಾ 628.3
2. ಆಕೃತಿ ದಹಿಯಾ 627.0
3. ಮನಿನಿ ಕೌಶಿಕ್ 626.6

ಅರ್ಹತಾ ಸುತ್ತಿನಲ್ಲಿ ಈಶಾ ಸಿಂಗ್ 58021 ಎಕ್ಸ್ ಅಂಕಗಳೊಂದಿಗೆ ಅಗ್ರಸ್ಥಾನ ಪಡೆದಿದ್ದರು. ಸುರ್ಬಿ ರಾವ್ 578-12 ಎಕ್ಸ್ ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದರು. ಈ ಶೂಟರ್‌ಗಳು ಮಾರ್ಚ್ 11 ರಿಂದ ಮಾರ್ಚ್ 21ರವರೆಗೆ ನವದೆಹಲಿಯಲ್ಲಿ ನಡೆಯುವ ತರಬೇತಿ ಶಿಬಿರದಲ್ಲಿ ಭಾಗವಹಿಸಲಿದ್ದಾರೆ.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5920

5919 ಉತ್ತರ

ಎಡದಿಂದ ಬಲಕ್ಕೆ:
1.ಬಯಲುಸೀಮೆ
3.ಹಂಬಲ 4.ಹಗಲು
5.ವಾಣಿ 6.ತನು
7.ಭಾಜನ 8.ಅರಡಿ
10.ಜಟಿಲ 12.ಆದಾಯ
13.ಲಿಪಿ 14.ರಾಮ
15.ತಾಂಡವ 16.ಶಂಕಿಸು
17.ಗಿಡಮೂಲಿಕೆ
ಮೇಲಿನಿಂದ ಕೆಳಕ್ಕೆ
: 1.ಬಲವಾನ
2.ಮೆಲುನುಡಿ 7.ಭಾವಜ
9.ಆಶಯ 11.ಲಲಿತಾಂಗಿ
12.ಆಮಶಂಕೆ

ಎಡದಿಂದ ಬಲಕ್ಕೆ
1.ಈ ಸಲ ಬರುವೆನೆಂದ ಶಕ್ತಿವಂತ (3)
4.ಪೂರ್ಣವಾಗಿ ಬಲಿತ ಬಣ್ಣಗೆಟ್ಟ ಪತ್ರೆ (3)
5.ಆಗಸದಲ್ಲಿ ಮೂಡುವ ಬಣ್ಣದ ಕಮಾನು (5)
6.ಕರ್ನಾಟಕ-ತಮಿಳುನಾಡಿನ ಸಾಂಪ್ರದಾಯಿಕ ಸಿಹಿತಿಂಡಿ (4)
8.ಮನದ ನಡುವೆ ಅಡಗಿದ ವಂಶ (4)
10.ಜಪ-ದನ ಸೇರಿ ಮಾನವ ಜನಾಂಗವಾಯ್ತು (4)
12.ಹೋಳೆಯುವಿಕೆ ದ್ವಿರುಕ್ತಿಯಲ್ಲಿದೆ (4)
15.ಅಭ್ರಕವನ್ನು ಹೀಗೂ ಹೇಳುತ್ತೇವೆ (5)
16.ಸರ ಧರಿಸಿದರೂ ಉಂಟಾದ ಬೇಜಾರು (3)
17.ವನದ ನಡುವೆ ಸಿಕ್ಕ ಜಹಗೀರು (3)
ಮೇಲಿನಿಂದ ಕೆಳಕ್ಕೆ
2.ಸೂಟಿಯ ದಿನಗಳು ತಲೆಕೆಳಗಾಗಿವೆ (4)
3.ಅನ್ಯವಲ್ಲದ, ಅದ್ವಿತೀಯ (3)
4.ದಂತಕ್ಕೆ ಬಂದ ನೋವು (4)
6.ಅಗ್ರಜನೊಂದಿಗೆ ಇರುವ ತಮ್ಮ (3)
7.ಕಾಳು-ಕಡ್ಡಿಗಳು ತಲೆಕೆಳಗಾಗಿವೆ (3)
8.ಆ ಕೂಡಲೆ ಎಂಬರ್ಥದ ಶಬ್ದ (3)
9.ಭೂಮಿಯ ಒಡೆಯನಾಗಿ ರಾಜ (3)
11.ಇದು ಪುಟ್ಟ ಹುಡುಗಿಯ ಲಂಗ (4)
13.ಕರವನ್ನು ಹಿಡಿದವಗೆ ಕೇಳಿದ ಮಧುರ ಧ್ವನಿ (4)
14.ಕೂಷ್ಮಾಂಡ-ತರಕಾರಿ ಕಾಯಿಯಿದು (3)

ಗುಮ್ಮಟ ನಗರಿಯಲ್ಲಿ ವಾಹನ ದಟ್ಟಣೆ ಬಗ್ಗೆ ಕೇಶವ್ ಪ್ರಸಾದ್ ಪ್ರಸ್ತಾಪ

ಇಕ್ಕಟ್ಟಾದ ರಸ್ತೆ: ಸದನದಲ್ಲಿ ಧ್ವನಿ

▸ ಪರಶುರಾಮ ಶಿವಶರಣ

ವಿಜಯಪುರ: ಗುಮ್ಮಟ ನಗರದ ಇಕ್ಕಟ್ಟಾದ ರಸ್ತೆ, ವಾಹನ ದಟ್ಟನೆ, ಮಾಸ್ಟರ್ ಪ್ಲ್ಯಾನ್ ನನೆಗುದಿ, ಮೆಟ್ರೋ ರೈಲು ಕುರಿತು ವಿಧಾನ ಪರಿಷತ್ ಕಲಾಪದ ಬಜೆಟ್ ಅಧಿವೇಶನದಲ್ಲಿ ಮಂಗಳವಾರ ಧ್ವನಿ ಮೊಳಗಿದೆ.

ಹೊಸ ದಿಗಂತ ಪತ್ರಿಕೆ ಕಳೆದ ಮಾ. 6, 2026ರಂದು ಗುಮ್ಮಟ ನಗರಿಯಲ್ಲಿ ವಾಹನ ದಟ್ಟಣೆ, ಸವಾರರ ಪರದಾಟ, ಮಾಸ್ಟರ್ ಪ್ಲ್ಯಾನ್ ನನೆಗುದಿಗೆ ಎಂಬ ತಲೆ ಬರಹದಡಿ ವಿಶೇಷ ವರದಿ ಪ್ರಕಟಿಸಿ ಗಮನ ಸೆಳೆದಿತ್ತು.

ಸದ್ಯ ಬೆಂಗಳೂರಿನ ವಿಧಾನಸೌಧದಲ್ಲಿ ನಡೆಯುತ್ತಿರುವ 2026-27ನೇ ಸಾಲಿನ ಬಜೆಟ್ ಅಧಿವೇಶನದಲ್ಲಿ ಬಿಜೆಪಿ ವಿಧಾನ ಪರಿಷತ್ ಸದಸ್ಯ ಕೇಶವ್ ಪ್ರಸಾದ್ ಎಸ್. ಅವರು, ವಿಜಯಪುರ ನಗರದಲ್ಲಿ ನನೆಗುದಿಗೆ ಬಿದ್ದಿರುವ ಮಾಸ್ಟರ್ ಪ್ಲ್ಯಾನ್ , ನಗರದ ಕಿರಿದಾದ ಒಳ ರಸ್ತೆಗಳು, ಮೆಟ್ರೋ ಯೋಜನೆ ಬಗ್ಗೆ ಪ್ರಶ್ನೆ ಕೇಳುವ ಮೂಲಕ ಧ್ವನಿ ಎತ್ತಿದ್ದಾರೆ.

ನಗರದ ಒಳಗೆ ಇರುವ ರಸ್ತೆಗಳು ತುಂಬಾ ಕಿರಿದಾಗಿವೆ. ಸಾರ್ವಜನಿಕರ ಓಡಾಟಕ್ಕೆ ತೀವ್ರ ತೊಂದರೆಯಾಗುತ್ತಿದೆ. ಈಗಾಗಲೇ ಜಾರಿಯಲ್ಲಿರುವ ಮಾಸ್ಟರ್ ಪ್ಲ್ಯಾನ್ ನನೆಗುದಿಗೆ ಬಿದ್ದಿರುವುದಕ್ಕೆ ಕಾರಣ ಒದಗಿಸುವಂತೆ ನಗರಾಭಿವೃದ್ಧಿ ಸಚಿವರಿಗೆ ಪ್ರಶ್ನೆ ಕೇಳಿದ ಅವರು, ನಗರ ಸಂಚಾರ ದಟ್ಟಣೆ ನಿವಾರಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸದಸ್ಯರ ಪ್ರಶ್ನೆಗೆ ಉತ್ತರಿಸಿದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ ಅವರು, ಈಗಾಗಲೇ ಸುಮಾರು 36.12 ಕೋಟಿ ರೂ.ಗಳ ವೆಚ್ಚದಲ್ಲಿ ವಿಜಯಪುರ ನಗರದ ಮಹಾತ್ಮ ಗಾಂಧಿ ರಸ್ತೆ, ಇಂಡಿ ರಸ್ತೆ, ಅಝಾದ್ ರಸ್ತೆ, ನವಭಾಗ ರಸ್ತೆ, ಹುಡ್ಕೋ ಮತ್ತು ಜೆ.ಎಂ. ರಸ್ತೆ ಸೇರಿ 6 ರಸ್ತೆಗಳ ಕಾರ್ಯ ಕೈಗೊಳ್ಳಲಾಗಿದೆ. ಆದಷ್ಟು ಬೇಗನೆ ಇತರೆ ರಸ್ತೆಗಳ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಹೇಳಿದರು. ಅಲ್ಲದೆ, ಇಲ್ಲಿನ ಮಹಾನಗರ ಪಾಲಿಕೆಗೆ 150 ಕೋಟಿ ರೂ.ಗಳನ್ನು ಶೀಘ್ರದಲ್ಲಿ ಬಿಡುಗಡೆಗೊಳಿಸಲಾಗುವುದು ಎಂದು ಹೇಳಿದರು.




ಗುಮ್ಮಟ ನಗರಿಯಲ್ಲಿ ವಾಹನ ದಟ್ಟಣೆ | ಸವಾರರ ಪರದಾಟ
ಮಾಸ್ಟರ್ ಪ್ಲ್ಯಾನ್ ನನೆಗುದಿಗೆ

ಮೆಟ್ರೋ ಬಗ್ಗೆ ಮೊದಲ ಧ್ವನಿ ಎತ್ತಿದ ಕೇಶವ್ ಪ್ರಸಾದ್

ವಿಶ್ವವಿಖ್ಯಾತಿ ಗೋಳಗುಮ್ಮಟ ಸೇರಿದಂತೆ 80 ಕ್ಕೂ ಹೆಚ್ಚು ಸ್ಮಾರಕಗಳನ್ನು ಒಳಗೊಂಡ ಗುಮ್ಮಟ ನಗರಿಗೆ ಮೆಟ್ರೋ ಯೋಜನೆ ಬಗ್ಗೆ ವಿಧಾನ ಪರಿಷತ್ ಸದಸ್ಯ ಕೇಶವ್ ಪ್ರಸಾದ್ ಎಸ್ ಅವರು, ಸದನದಲ್ಲಿ ಧ್ವನಿ ಎತ್ತಿದ ಮೊದಲಿಗರಾಗಿದ್ದಾರೆ. ನಗರದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ವಾಹನ ಸಂಖ್ಯೆಗಳಿಗೆ ಅನುಗುಣವಾಗಿ ಮಾಸ್ಟರ್ ಪ್ಲ್ಯಾನ್ ಮೂಲಕ ರಸ್ತೆ ಅಗಲೀಕರಣ ಮಾಡಿದಲ್ಲಿ ನಗರ ಸುಂದರ ಹಾಗೂ ಆಕರ್ಷಣೀಯವಾಗಲಿದ್ದು, ಇದು ಜಿಲ್ಲೆ ಅಭಿವೃದ್ಧಿಗೆ, ಪ್ರವಾಸೋದ್ಯಮ ಬೆಳವಣಿಗೆಗೆ ಪೂರಕವಾಗಲಿದೆ.

ಸಚಿವ ಭೈರತಿ ಸುರೇಶ ಅವರ ಮಾತಿಗೆ ಸದನದಲ್ಲಿ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಧ್ವನಿಗೂಡಿಸಿದರು. ಪರಿಷತ್ ಸದಸ್ಯ ಕೇಶವ ಪ್ರಸಾದ ಅವರು ಮರು ಪ್ರಶ್ನೆ ಮಾಡಿ, ವಿಜಯಪುರ ಮಹಾನಗರ ಸೇರಿದಂತೆ ರಾಜ್ಯದ ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿ ಸಂಚಾರ ದಟ್ಟಣೆ, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಮೆಟ್ರೋ ರೈಲು ಯೋಜನೆ ಜಾರಿಗೊಳಿಸುವ ಯೋಜನೆ ಇದೆಯಾ ಎಂದು ಪ್ರಶ್ನಿಸಿದರು.

ಆಗ ಸಚಿವ ಭೈರತಿ ಸುರೇಶ, ವಿಜಯಪುರ ನಗರ ಸೇರಿದಂತೆ ರಾಜ್ಯದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೆಟ್ರೋ ರೈಲು ಯೋಜನೆ ಪ್ರಾರಂಭಿಸುವ ಯಾವುದೇ ಪ್ರಸ್ತಾಪಗಳು ಸರ್ಕಾರದ ಮುಂದೆ ಇಲ್ಲ ಎಂದು ಉತ್ತರಿಸಿದರು.

ಸೂಪಾ ಯೋಜನೆ ನಿರಾಶ್ರಿತರ ಗೋಳು | ತಿನೇಕರ್‌ರಿಂದ ಮಾಹಿತಿ

54 ವರ್ಷ ಕಳೆದರೂ ಸಿಗದ ಭೂಮಿಯ ಹಕ್ಕು!

ಹಳಿಯಾಳ: ಕಾಳಿ ನದಿಗೆ ಸೂಪಾ ಬಳಿ ನಿರ್ಮಿಸಿರುವ ಅಣೆಕಟ್ಟು ಯೋಜನೆಗಾಗಿ ಸ್ವಂತ ಭೂಮಿ ತ್ಯಾಗ ಮಾಡಿ ಪುನರ್ವಸತಿ ಒಳಗಾದವರಿಗೆ 54 ವರ್ಷಗಳ ನಂತರವೂ, ಸ್ಥಳಾಂತರಗೊಂಡ ರೈತರ ಹೆಸರನ್ನು ದಾಖಲೆಗಳ ಖಾತಾ ಬದಲಾವಣೆ ಆಗಿಲ್ಲ, ಇದರಿಂದಾಗಿ ರೈತರು ತೀವ್ರ ತೊಂದರೆಗೆ ಒಳಗಾಗಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ಜಯಂತ ತಿನೇಕರ್ ಆರೋಪ ಮಾಡಿದ್ದಾರೆ.

ಮಂಗಳವಾರ ಕರೆದ ಸುದ್ದಿಗೋಷ್ಠಿಯಲ್ಲಿ ಈ ಕುರಿತಾದ ಎಲ್ಲ ದಾಖಲೆ ಬಿಡುಗಡೆಗೊಳಿಸಿ ಮಾತನಾಡಿದರು.

ಈ ಬಗ್ಗೆ ಜಿಲ್ಲಾಡಳಿತ ತಕ್ಷಣ ಕ್ರಮತೆಗೆದುಕೊಂಡು ನಿರಾಶ್ರಿತರಿಗೆ ಭೂಮಿಯ ಹಕ್ಕನ್ನು ನೀಡದಿದ್ದರೆ ಹೋರಾಟದ ಜೊತೆಗೆ ಕಾನೂನಿನ ಮೊರೆ ಹೋಗುವುದಾಗಿ ಎಚ್ಚರಿಸಿದ್ದಾರೆ.

1972 ಕರ್ನಾಟಕದಲ್ಲಿ ವಿದ್ಯುತ್ ಕೊರತೆ ಇರುವುದನ್ನು ನೋಡಿ, ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರು ಸೂಪಾ ತಾಲೂಕಿನಿಂದ ಹರಿಯುವ ಕಾಳಿ ನದಿಗೆ ಅಡ್ಡಲಾಗಿ ಅಣೆಕಟ್ಟು ಕಟ್ಟಿ ವಿದ್ಯುತ್ ಯೋಜನೆಯನ್ನು ಮಂಜೂರು ಮಾಡಿದ್ದರು. ಅಂದು ಏಷ್ಯಾದ ಎರಡನೇ ಅತಿದೊಡ್ಡ ಅಣೆಕಟ್ಟು ನಿರ್ಮಾಣವಾಯಿತು. ಮತ್ತು ಈ ಅಣೆಕಟ್ಟೆಯ ಹಿನ್ನೀರಿನಲ್ಲಿ ಮುಳುಗಡೆಯಾಗಲಿರುವ ರೈತರ ಎಲ್ಲಾ ಭೂಮಿಯನ್ನು ಸರ್ಕಾರವು ವಶಪಡಿಸಿಕೊಂಡು ಖಾನಾಪುರ ತಾಲೂಕಿನ ಅಕ್ರಾಲಿ, ಅಡಾಲಿ ಮತ್ತು ಸೀತಾವಾಡೆ ಗ್ರಾಮಗಳಲ್ಲಿ ಜನರನ್ನು ಸ್ಥಳಾಂತರಿಸಿತು. ಬಾಧಿತ ರೈತರಿಗೆ ಭೂ ಹಕ್ಕುಪತ್ರಗಳನ್ನು ನೀಡಲಾಯಿತು ಎಂದವರು ವಿವರ ನೀಡಿದರು.



ಖಾತಾ ಬದಲಾಗಿಲ್ಲ: ಈ ಭೂಮಿಯನ್ನು ನಿರಾಶ್ರಿತರಿಗೆ ನೀಡುವಾಗ ಖಾನಾಪುರ ತಾಲೂಕಿನ ಯಾವುದೇ ಇಲಾಖೆಯಿಂದ ಯಾವುದೇ ಸುಗಮ ದಾಖಲೆಗಳ ವರ್ಗಾವಣೆಯಿಲ್ಲದೆ ಕಾರವಾರ ಜಿಲ್ಲೆಯ ಜೋಯಿಡಾ ತಾಲೂಕಿಗೆ ಸೇರಿಸಲಾಯಿತು. ಮತ್ತು ಇದರ ಪರಿಣಾಮಗಳನ್ನು ಇಂದು 55 ವರ್ಷಗಳ ನಂತರ ರಾಮನಗರ ಗ್ರಾಮಗಳ ಅನೇಕ ರೈತರು ಎದುರಿಸುತ್ತಿದ್ದಾರೆ. ಈ ರೈತರು ತಮ್ಮ ಹೆಸರಿನ ಹಕ್ಕುಪ್ರತಿಯಲ್ಲಿ ಅವರ ತಂದೆ ಅಥವಾ ಅಜ್ಜ ನಿಧನರಾಗಿದ್ದರೆ, ಭೂಮಿಯನ್ನು ಮಾರಾಟ, ವಿಭಜನೆ ಮಾಡಬೇಕಾದರೆ ಜೋಯಿಡಾ ತಹಶೀಲ್ದಾರ್ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದರೆ, ಈ ಭೂಮಿ ಸರ್ಕಾರಕ್ಕೆ ಸೇರಿರುವ ದಾಖಲೆಗಳನ್ನು ಇನ್ನೂ ಸರಿಪಡಿಸಲಾಗಿಲ್ಲ, ಆದ್ದರಿಂದ ನಿಮ್ಮ ಅರ್ಜಿಯನ್ನು ಅನುಮೋದಿಸಲಾಗಿಲ್ಲವೆಂದು ಉತ್ತರ ನೀಡುತ್ತಿದ್ದಾರೆ ಎಂದು ತಿನೇಕರ್ ಆರೋಪ ಮಾಡಿದರು.

ಕಾನೂನು ಸಮರದ ಎಚ್ಚರಿಕೆ

ಕಾರವಾರ ಜಿಲ್ಲಾಧಿಕಾರಿ, ಭೂ ದಾಖಲೆ ವಿಭಾಗದ ಜಂಟಿ ನಿರ್ದೇಶಕಿ ಮತ್ತು ಕಾರವಾರ ಸಹಾಯಕ ನಿರ್ದೇಶಕಿ, ಜೋಯಿಡಾ ತಹಶೀಲ್ದಾರ್ ಇವರೆಲ್ಲರೂ ರಾಮನಗರಕ್ಕೆ ಸಂಬಂಧಿಸಿದ ಅಕ್ರಲೆ, ಅದಾನಿ ಮತ್ತು ಶೇತವಾಡೆ ಗ್ರಾಮಗಳ ಭೂ ದಾಖಲೆಗಳನ್ನು ದಾಖಲಿಸಿ ರೈತರಿಗೆ ಒದಗಿಸುವ ವ್ಯವಸ್ಥೆ ಮಾಡಲು ಒತ್ತಾಯಿಸಿದರು ಮತ್ತು ಒಂದು ವೇಳೆ ವಿಫಲರಾದಲ್ಲಿ ಕಾನೂನಿನ ಸಮರ ಸಾರುವುದಾಗಿ ತಿಳಿಸಿದರು.

ಕಾನೂನಿನ ಮೊರೆ: ಕಳೆದ ಎರಡೂವರೆ ವರ್ಷಗಳ ಹಿಂದೆ ಈ ಬಗ್ಗೆ ಮಾಹಿತಿಸಿಕ್ಕಾಗ ನಾವು ಸಾಕ್ಷ್ಯಗಳ ಜೊತೆಗೆ

ವಿವಿಧ ಇಲಾಖೆಗಳ ಜೊತೆಗೆ ಸತತವಾಗಿ ಪ್ರಯತ್ನ ನಡೆಸಿದರೂ ಕೂಡ ಇಂದಿಗೂ ಸಮಸ್ಯೆ ಬಗೆ ಹರಿದಿಲ್ಲ.

54 ವರ್ಷಗಳ ನಂತರವೂ, ಸ್ಥಳಾಂತರ ಗೊಂಡ ರೈತರ ಹೆಸರನ್ನು ದಾಖಲೆಗಳ ಖಾತಾ ಬದಲಾವಣೆ ಮಾಡದಿರುವುದು ದುರದೃಷ್ಟಕರ.ಇಡೀ ದೇಶದಲ್ಲಿ ಇದು ಏಕೈಕ ಉದಾಹರಣೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕನಿಷ್ಠ 20 ರಿಂದ 50 ವರ್ಷ ಶಾಸಕ ಸಚಿವರಾಗಿರುವ ಯಾವುದೇ ರಾಜಕಾರಣಿ ಇದನ್ನು ಪರಿಹರಿಸಲು ಪ್ರಯತ್ನಿಸಿಲ್ಲದಿರುವುದು ದುರದೃಷ್ಟಕರ ಎಂದು ಹೇಳಿದ್ದಾರೆ.

ಕಿರುಸುದ್ದಿ

ಅಗ್ನಿ ದುರಂತ: ಮೂವರಿಗೆ ಗಾಯ

ರನ್ನ ಬೆಳಗಲಿ: ಪಟ್ಟಣದ ಬಸವೇಶ್ವರ ಹೋಟೆಲ್‌ನಲ್ಲಿ ಮಂಗಳವಾರ ಮುಂಜಾನೆ ಸಿಲಿಂಡರ್ ಸೋರಿಕೆಯಿಂದ ಅಗ್ನಿ ದುರಂತ ಸಂಭವಿಸಿದ್ದು, ಮೂವರಿಗೆ ಗಾಯಗಳಾಗಿವೆ. ಸಿಲಿಂಡರ್ ಸೋರಿಕೆ ತಡೆಯಲು ಆಗಮಿಸಿದ ರಾಜಸ್ಥಾನಿ ಶಿವಾ ಚಹಾ ಅಂಗಡಿಯ ಸುರೇಂದ್ರನಿಗೆ ದೇಹದ ಮುಂಭಾಗ ಬೆಂಕಿಯಿಂದ ಹಾನಿಗೊಂಡಿದ್ದು, ಹೋಟೆಲಿನ ಮಾಲಕಿ ದ್ರಾಕ್ಷಾಯಿಣಿ ಒಂಟಗೋಡಿ, ಅಡುಗೆ ಸಹಾಯಕಿ ಕಲ್ಲವ್ವ ಕೊಣ್ಣೂರ ಗಾಯಗೊಂಡು ಮಹಾಲಿಂಗಪೂರ ನಗರದ ರೀತಿ ಆಸ್ಪತ್ರೆಗೆ ದಾಖಲುಗೊಂಡು ಚಿಕಿತ್ಸೆ ಪಡುತ್ತಿದ್ದಾರೆ. ಮಾಲಿಂಗೇಶ್ವರ ಪೆಟ್ರೋಲ್ ಬಂಕಿನ ಸಿಬ್ಬಂದಿ ಶ್ರೀಶೈಲ ಪಾಲಭಾವಿ, ಪಟ್ಟಣದ ನಾಗರಿಕರು ಅಗ್ನಿ ದುರಂತ ತಡೆಯಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಮುಧೋಳದ ಅಗ್ನಿಶಾಮಕ ದಳದ ಅಧಿಕಾರಿ ಮತ್ತು ಸಿಬ್ಬಂದಿ ಆಗಮಿಸಿ ಅಪಾರ ಹಾನಿ ತಡೆದರು. ಹೋಟೆಲ್ ಮಾಲೀಕರಾದ ಮಹಾಲಿಂಗಪ್ಪ ಒಂಟಿಗೋಡಿ ಮಾತನಾಡಿ, ನಮ್ಮೂರ ಜಾತ್ರೆಯ ಅಂಗವಾಗಿ ನಾನು ಸುಮಾರು ಒಂದುವರೆ ಲಕ್ಷದ ದಾಸ್ತಾನು ಖರೀದಿಸಿದ್ದೆ. ಅಗ್ನಿಯ ಜ್ವಾಲೆಗೆ ತುತ್ತಾಗಿ ಹಾಳಾಗಿದ್ದು, ಸಂಪೂರ್ಣ ನನ್ನ ಹೊಟ್ಟೆಯಲ್ ಸುಟ್ಟು ಭಸ್ಮವಾಗಿದೆ ಎಂದು ತಮ್ಮ ಅಳಲು ತೋಡಿಕೊಂಡರು.

ಗಾಂಜಾ ಸೇವಿಸುತ್ತಿದ್ದವನ ಬಂಧನ

ಭಟ್ಕಳ: ಪಟ್ಟಣದ ಸಾಗರ ರಸ್ತೆಯ ಸಾರ್ವಜನಿಕ ರಸ್ತೆಯಲ್ಲಿ ಗಾಂಜಾ ಸೇವನೆ ಮಾಡಿ ವಿಚಿತ್ರವಾಗಿ ವರ್ತಿಸುತ್ತಿದ್ದ ವ್ಯಕ್ತಿಯನ್ನು ಗ್ರಾಮೀಣ ಠಾಣಾ ಪೊಲೀಸರು ಬಂಧಿಸಿದ್ದಾರೆ. ತಾಲೂಕಿನ ಹೆಬಳೆ ಜಾಮಿಯಾಬಾದ್ ನಿವಾಸಿ ಅರಬಾಜ್ ಹುಮಾಯುನ್ ಪಾಷಾ ಖಾನ್ (26) ಬಂಧಿತ ಆರೋಪಿ. ವೈದ್ಯಕೀಯ ತಪಾಸಣೆ ಬಳಿಕ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂಸ್ಕೃತಿ ಉಳಿಸಲು ಸನ್ನದ್ಧರಾಗಿ: ಪೇಜಾವರ ಶ್ರೀ

ಹುಬ್ಬಳ್ಳಿ: ನಮ್ಮ ಅಮೂಲ್ಯ ಸಂಸ್ಕೃತಿ ಧಾರ್ಮಿಕತೆಯನ್ನು ಉಳಿಸಿ ಬೆಳೆಸುವ ಕಾರ್ಯದತ್ತ ನಾವಿಂದು ಸನ್ನದ್ಧರಾಗಬೇಕಿದೆ ಎಂದು ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ತಿಳಿಸಿದರು.

ಉಣಕಲ್ ಸಿದ್ದಪ್ಪಜ್ಜನ ಜಾತ್ರಾಮಹೋತ್ಸವ ಅಂಗವಾಗಿ ಮಂಗಳವಾರ ಸಂಜೆ ಉಣಕಲ್ ಹೊಸ್ಮಠ ಸಭಾಂಗಣ ಜರುಗುತ್ತಿರುವ ನಿತ್ಯ ಪ್ರವಚನದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಧರ್ಮ ಪರಂಪರೆ ಮರೆತು ಶೋಕಿಗೆ ಒಳಗಾದ ನಾವಿಂದು ಅರ್ಥವಿಲ್ಲ ಅಸಂಬದ್ಧ ಹೆಸರುಗಳನ್ನು ಮಕ್ಕಳಿಗೆ ಇಡುವುದರಿಂದ ಭವಿಷ್ಯದ ದಿನಗಳು ಗೊಂದಲ ಉಂಟಾಗುತ್ತವೆ. ಅದನ್ನು ತಡೆಯಲು ಹಾಗೂ ಧರ್ಮ ಜಾಗ್ರತ ಮನೋಭಾವ ಬೆಳೆಸಲು ಸಮಾಜದ ದೇವಾಲಯ,ಧಾರ್ಮಿಕ ಸಂಘ-ಸಂಸ್ಥೆಗಳು ಅಗತ್ಯವಿದ್ದ ಮಕ್ಕಳಿಗೆ ಅರ್ಥಪೂರ್ಣ ಹೆಸರನ್ನು ಪುನರ್ ನಾಮಕರಣ ಮಾಡುವ ಆಂದೋಲನ ಕೈಕೊಳ್ಳಲು ಸಲಹೆ ಮಾಡಿದರು.

ಶ್ರೀರಾಮಚಂದ್ರ ಹಾಗೂ ಶ್ರೀಕೃಷ್ಣ ದೇವಾಂಶ ಸಂಭೂತರಾದರೂ ತಮಗೆ ಗುರುಗಳು ಮುಖ್ಯವೆಂದು ಸಾರಿ ಹೇಳಿ ಗುರು ಮಹಿಮೆಯ ಅರಿವು ಮೂಡಿಸುವಲ್ಲಿ ಯಶಸ್ವಿಯಾದರು ಎಂದು ಹೇಳಿದರು.

ಬೃಹತ್ ಶಿಲಾಮಂಟಪ ನಿರ್ಮಿಸಿದ ಹಿರಿಮೆ ಮಾತ್ರ ಸಾಲದು ಅದು ಶತ ಶತಮಾನ ಸಂಸ್ಕೃತಿಯ ಕೇಂದ್ರವಾಗಿ ಬೆಳಗುವ ವಾತಾವರಣ ಅಲ್ಲಿ ಸೃಷ್ಟಿಸಿ ಶಿಲಾಮಂಟಪ ನಿರ್ಮಿಸಿದ ಶ್ರಮ ಸಾರ್ಥಕ ಪಡಿಸಿಕೊಳ್ಳುವ ಗುರುತರವಾದ ಜವಾಬ್ದಾರಿ ನಮ್ಮಮೇಲಿದೆ ಎಂದು ಹೇಳಿ ಉಣಕಲ್ ಸಿದ್ದಪ್ಪಜ್ಜನ ಶಿಲಾಮಂಟಪ ನಿರ್ಮಿಸಿದ ಸಮಿತಿ ಹಾಗೂ ಮುಕ್ತಸಹಕಾರ ನೀಡಿದ ಭಕ್ತರನ್ನು ಅವರು ಅಭಿನಂದಿಸಿದರು.

ಧಾರವಾಡ ಮುರುಘಾಮಠದ ಜಗದ್ಗುರು ನಂತರ ಆಶೀರ್ವಚನ ನೀಡಿದರು. ಬಸವ ಬೆಳವಿ ಚರಂತೇಶ್ವರ ಮಠದ ಶರಣ ಬಸವ ದೇವರು ಸಿದ್ದಪ್ಪಜ್ಜನ ಮಹಿಮೆ ವಿವರಿಸಿದರು. ಸಮಿತಿ ಅಧ್ಯಕ್ಷ ರಾಜಣ್ಣ ಕೊರವಿ, ಡಾ.ವಿಶ್ವನಾಥ ಕೊರವಿ, ರಾಮಣ್ಣ ಪದ್ಮಣ್ಣವರ,ಶಿವಾಜಿ ಕನ್ನಿಕೊಪ್ಪ, ಗುರುಸಿದ್ದಪ್ಪ ಬೆಂಗೇರಿ, ಗುರುಸಿದ್ದಪ್ಪ ಮೆಣಸಿನಕಾಯಿ ಮುಂತಾದವರು ಶ್ರೀಗಳನ್ನು ಗೌರವಿಸಿದರು. ಎಸ್ .ಐ.ನೇಕಾರ ಸ್ವಾಗತಿಸಿದರು. ಹುಲಿಗೆಮ್ಮ ಟೀಚರ್ ವಂದಿಸಿದರು. ಕೀರ್ತಿ ಪೂಜಾರ ಭಕ್ತಿ ಗೀತೆ ಹಾಡಿದರು.



ಲಕ್ಕುಂಡಿ ಗ್ರಾಮದಲ್ಲಿ ನಿಧಿ ಪತ್ತೆ ಪ್ರಕರಣ

ವಿಜಯನಗರ ಕಾಲದ ಆಭರಣ ಇರಬಹುದು: ತಜ್ಞರ ಸಮಿತಿ

ಗದಗ: ಜಿಲ್ಲೆಯ ಐತಿಹಾಸಿಕ ಸ್ಥಳ ಲಕ್ಕುಂಡಿಯಲ್ಲಿ ಪತ್ತೆಯಾಗಿರುವ ಚಿನ್ನದ ನಿಧಿ ಕುರಿತು ಪರಿಶೀಲನೆ ನಡೆಸಿದ ತಜ್ಞ ಸಮಿತಿಯ ಅಧ್ಯಕ್ಷ ಡಾ.ಎಂ.ಎಸ್.ಕೃಷ್ಣಮೂರ್ತಿ ಅವರು ಲಕ್ಕುಂಡಿಯಲ್ಲಿ ದೊರೆತ ಚಿನ್ನಾಭರಣಗಳು ವಿಜಯನಗರ ಅರಸರ ಕಾಲದ್ದಾಗಿರಬಹುದು ಎಂದು ತಿಳಿಸಿದ್ದಾರೆ.

ನಗರದ ಜಿಲ್ಲಾಡಳಿತ ಭವನದಲ್ಲಿ ಮಂಗಳವಾರ ನಿಧಿ ಕಾಲಾವಧಿ ಬಗ್ಗೆ ಪರಿಶೀಲನೆ ನಡೆಸಿ ಮಾತನಾಡಿದ ಅವರು, ನಿಧಿಯ ಆಕಾರ, ವಿನ್ಯಾಸ, ರೂಪರೇಷೆ ಹಾಗೂ ಶಿಲ್ಪ ಆಭರಣಗಳ ಕಲಾತ್ಮಕ ವಿನ್ಯಾಸಗಳ ಬಗ್ಗೆ ಪರಿಶೀಲನೆ ನಡೆಸಲಾಗಿದೆ. ಈ ಚಿನ್ನದ ನಿಧಿ ಸುಮಾರು 500ರಿಂದ 600 ವರ್ಷಗಳ ಹಿಂದಿನ ವಿಜಯನಗರ ಕಾಲದ ಅರಸರ ಅವಧಿಯ ಆಭರಣಗಳು ಇರಬಹುದು ಎಂದು ಅವರು ಹೇಳಿದರು.

ಪತ್ತೆಯಾದ ಆಭರಣಗಳು ಕಂಚಿನ ದೇವತೆಯ ಅಲಂಕಾರದ ಆಭರಣಗಳು ಆಗಿವೆ. ಸಿಂಹ ಮತ್ತು ಕೀರ್ತಿ ಮುಖದ ಆಕೃತಿ ಜೊತೆಗೆ ನೀಲಮಣಿ, ಮುತ್ತು, ಪಚ್ಚೆ, ಹವಳ ಹಾಗೂ ಹರಳುಗಳನ್ನು ಅಲಂಕಾರಿಕ ಚಿನ್ನಾಭರಣಗಳಲ್ಲಿ ಬಳಸಲಾಗುತ್ತದೆ. ಹೀಗಾಗಿ

ಹೆಣ್ಣು ದೇವರ ಮೂರ್ತಿಗಳಿಗೆ ಅಲಂಕರಿಸಲು ಬಳಸಿದ ಆಭರಣಗಳು ಇರಬಹುದು. ಕಿವಿಯೋಲೆಗಳು, ನಾಗರಹೆಡೆ ಮಾದರಿಯ ಆಭರಣಗಳು ಹಾಗೂ ಸೂಕ್ಷ್ಮ ಕೆತ್ತನೆಗಳು ಆಭರಣಗಳಲ್ಲಿ ಸ್ಪಷ್ಟವಾಗಿ ಕಾಣುತ್ತವೆ ಎಂದು ಹೇಳಿದರು.

ಈ ಚಿನ್ನದ ಆಭರಣಗಳ ಇಂದಿನ ಬಂಗಾರದ ಮೌಲ್ಯ ಸುಮಾರು 80 ಲಕ್ಷ ರೂ. ಆಗಬಹುದು. ಆದರೆ, ಇವು ಅಪರೂಪದ ಪುರಾತನ ಆಭರಣಗಳಾಗಿರುವುದರಿಂದ ಅದರ ನಿಖರ ಮೌಲ್ಯ ಈಗಿನ ಮೌಲ್ಯಕ್ಕಿಂತ 10 ಪಟ್ಟು ಅಧಿಕ ಆಗುತ್ತದೆ. ಅದಕ್ಕಿಂತಲೂ ಹೆಚ್ಚಾಗಬಹುದು ಎಂದರು.



ಡಾ.ಎಂ.ಎಸ್.ಕೃಷ್ಣಮೂರ್ತಿ, ಡಾ.ರಾಘವೇಂದ್ರರಾವ್ ಕುಲಕರ್ಣಿ, ಪ್ರೊ.ಚೂಡಾಮಣಿ ನಂದಗೋಪಾಲ, ಹನುಮಾಕ್ಷಿ ಗೋಗಿ, ಪ್ರಭು ಕಮ್ಮಾರ, ಡಾ.ಆರ್.ಶೈಜೇಶ್ವರ ತಜ್ಞರ ತಂಡ ಪರಿಶೀಲನೆ ಮಾಡಿದರು.

ಸಭೆಯಲ್ಲಿ ಡಿಸಿ ಸಿ.ಎನ್.ಶ್ರೀಧರ್, ಎಸಿ ಗಂಗಪ್ಪ, ತಹಶೀಲ್ದಾರ್ ಶ್ರೀನಿವಾಸಮೂರ್ತಿ ಕುಲಕರ್ಣಿ, ಲಕ್ಕುಂಡಿ ಪ್ರಾಧಿಕಾರ ಆಯುಕ್ತ ಶರಣು ಗೋಗೇರಿ, ಸದಸ್ಯ ಸಿದ್ದು ಪಾಟೀಲ ಇದ್ದರು.

ಶ್ರೀಮಂತ ವ್ಯಕ್ತಿಗಳ ಟಾರ್ಗೆಟ್

ಹನಿಟ್ರ್ಯಾಪ್ ಮಾಡುತ್ತಿದ್ದ ಮಹಿಳೆ ಬಂಧನ

ಬೆಳಗಾವಿ: ಶ್ರೀಮಂತ ವ್ಯಕ್ತಿಗಳನ್ನು ಟಾರ್ಗೆಟ್ ಮಾಡಿಕೊಂಡು ಹನಿಟ್ರ್ಯಾಪ್ ಮಾಡುತ್ತಿದ್ದ ಮಹಿಳೆಯನ್ನು ಟಿಳಕವಾಡಿ ಪೊಲೀಸರು ಬಂಧಿಸಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರ ಮೂಲದ ದೀಪಾ ಅವಟಗಿ (33) ಹನಿಟ್ರ್ಯಾಪ್ ಆರೋಪಿ ಇದೀಗ ಪೊಲೀಸರ ಅತಿಥಿಯಾಗಿದ್ದು, ಹನಿಟ್ರ್ಯಾಪ್‌ಗೆ ಸಾಥ್ ಕೊಡುತ್ತಿದ್ದ ಆಕೆಯ ಸ್ನೇಹಿತ ಶಿವಾನಂದ ಮಠಪತಿ ಪರಾರಿಯಾಗಿದ್ದಾನೆ.

ಶಿವಾನಂದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ನಿವಾಸಿಯಾಗಿದ್ದು, ಶ್ರೀಮಂತ ವ್ಯಕ್ತಿಗಳ ಬಗ್ಗೆ ಮಾಹಿತಿಯನ್ನು ದೀಪಾಗೆ ನೀಡುತ್ತಿದ್ದ ಎಂದು ಮಾಹಿತಿ ತಿಳಿದು ಬಂದಿದೆ.

ಆರೋಪಿ ದೀಪಾ ಇನ್ಸ್ಟಾಗ್ರಾಂ ಮತ್ತು ಫೇಸ್‌ಬುಕ್ ಮೂಲಕ ಶ್ರೀಮಂತ ವ್ಯಕ್ತಿಗಳೊಂದಿಗೆ ಪರಿಚಯ ಮಾಡಿಕೊಂಡು ಅವರನ್ನು ತನ್ನ ಬಲೆಗೆ ಬೀಳಿಸಿಕೊಳ್ಳುವುದೇ ಈಕೆಯ ದಿನನಿತ್ಯದ ಕೆಲಸವಾಗಿತ್ತು. ದೊಡ್ಡ ವ್ಯಕ್ತಿಗಳು ಪರಿಚಯ ಆದ ಬಳಿಕ ಅಶ್ಲೀಲ ಚಾಟ್ ನಡೆಸಿ, ಅವರನ್ನು ಬೆಳಗಾವಿ ನಗರದ ಲಾಡ್ಜ್‌ಗೆ ಭೇಟಿ ನೀಡಲು ಆಹ್ವಾನಿಸುತ್ತಿದ್ದಳು. ಲಾಡ್ಜ್‌ಗೆ ಬಂದ ವ್ಯಕ್ತಿಗೆ ಸ್ನಾನ ಮಾಡಿ ಬರಲು ಹೇಳಿ, ಆತ ಬಾಥ್‌ರೂಮ್‌ಗೆ ಹೋದ ಕೂಡಲೇ ಹೊರಗಿನಿಂದ ಬಾಗಿಲು ಹಾಕಿ ಲಾಕ್ ಮಾಡುತ್ತಿದ್ದಳು.

ಬಳಿಕ ಆತನ ಬಳಿ ಇದ್ದ ಮೊಬೈಲ್, ಹಣ ಹಾಗೂ ಕಾರಿನ ಕೀ ಕಳ್ಳತನ ಮಾಡಿ ಪರಾರಿಯಾಗುತ್ತಿದ್ದಳು. ಈ ರೀತಿಯಾಗಿ ಲಾಡ್ಜ್‌ಗೆ ಬಂದು ಪರಾರಿಯಾಗುತ್ತಿರುವ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿವೆ.

ಹನಿಟ್ರ್ಯಾಪ್‌ಗೆ ಒಳಗಾದ ವ್ಯಕ್ತಿಯೊಬ್ಬರ ದೂರಿನ ಮೇರೆಗೆ, ಬೆಳಗಾವಿ ಟಿಳಕವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಇನ್ಸ್‌ಪೆಕ್ಟರ್ ಪರಶುರಾಮ ಪೂಜೇರಿ ನೇತೃತ್ವದ ತಂಡವು ಹನಿಟ್ರ್ಯಾಪ್ ಆರೋಪಿ ದೀಪಾಳನ್ನು ಬಂಧಿಸುವಲ್ಲಿ ಯಶಸ್ವಿಯಾದ ಬಳಿಕ, ಆರೋಪಿಯನ್ನು ಸ್ಟೇಷನ್ ಬೇಲ್ ಮೇಲೆ ಬಿಡುಗಡೆ ಮಾಡಲಾಗಿದೆ.

ಆರೋಪಿಯಿಂದ ಒಟ್ಟು 32 ಲಕ್ಷ 86 ಸಾವಿರ ರೂ. ಮೌಲ್ಯದ ವಸ್ತುಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಈ ಕುರಿತು ಟಿಳಕವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಗೆಳೆಯನಿಂದಲೇ ಸಹಪಾಠಿಯ ಕೊಲೆ

ಬಾಗಲಕೋಟೆ: ಹೋಳಿ ಹಬ್ಬದ ಸಂದರ್ಭದಲ್ಲಿ ಸಹಪಾಠಿಗಳ ನಡುವೆ ಸಂಭವಿಸಿದ ಜಗಳ ಕೊಲೆಯಲ್ಲಿ ಅಂತ್ಯ ಕಂಡ ಘಟನೆ ಜಿಲ್ಲೆಯ ತೇರದಾಳ ಪಟ್ಟಣದಲ್ಲಿ ನಡೆದಿದೆ.

ಹೋಳಿ ಹಬ್ಬದಲ್ಲಿ ನಡೆದ ಗಲಾಟೆಯ ವಿಷಯವನ್ನೇ ಮುಂದಿಟ್ಟುಕೊಂಡ ಅಪ್ರಾಪ್ತ ಬಾಲಕನೊಬ್ಬ ರಾಹುಲ್ ಸಪ್ತಸಾಗರ (19)ನನ್ನು ಕೊಲೆ ಮಾಡಿದ್ದಾನೆ. ಕೊಲೆ ಮಾಡಿದ ಆರೋಪಿ ಕೂಡ ತೇರದಾಳದ ನಿವಾಸಿಯಾಗಿದ್ದಾನೆ. ಕೊಲೆಯಾದ ಯುವಕ, ಆರೋಪಿ ಇಬ್ಬರು ಸಹಪಾಠಿಗಳು ಆಗಿದ್ದರು ಒಂದೇ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ಮಾ.4ರಂದು ಹೋಳಿ ಹಬ್ಬದ ಸಂದರ್ಭದಲ್ಲಿ ರಾಹುಲ್ ಸಪ್ತಸಾಗರ ಮತ್ತು ಆರೋಪಿ ಅಪ್ರಾಪ್ತ ಬಾಲಕ ನಡುವೆ ಜಗಳವಾಗಿತ್ತು. ಈ ಘಟನೆ ಕುರಿತು ಆರೋಪಿ ತನ್ನ ಸ್ನೇಹಿತರಿಗೆ ವಿವರ ನೀಡುವಾಗ ಕೊಲೆಯಾದ ರಾಹುಲ್‌ನನ್ನು ಹೊಡೆದಿದ್ದೇನೆ ಎಂದು ತಿಳಿಸಿದಾಗ ರಾಹುಲ್‌ನನ್ನು ಕರೆದು ಮಾತನಾಡು ಎಂದು ಸಲಹೆ ನೀಡಿದ್ದಾರೆ. ಅದರಂತೆ ಮಾ.9ರಂದು ಇಬ್ಬರ ನಡುವೆ ಮತ್ತೆ ಜಗಳ ಉಂಟಾಗಿದೆ. ಆರೋಪಿ ಕಡೆಯಿದ್ದ ತೀಕ್ಷ್ಣ ವಸ್ತುವಿನಿಂದ ರಾಹುಲ್ ಕುತ್ತಿಗೆ ಭಾಗಕ್ಕೆ ಇರಿದಿದ್ದಾನೆ. ಇದರಿಂದ ರಾಹುಲ್ ಗಂಭೀರವಾಗಿ ಗಾಯಗೊಂಡು ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾನೆ.

ಈ ಸಂಬಂಧ ತೇರದಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ.

ತನಿಖೆಯ ವೇಳೆ ಅಪ್ರಾಪ್ತ ಬಾಲಕನನ್ನು ವಶಕ್ಕೆ ಪಡೆಯಲಾಗಿದೆ. ಘಟನೆಗೆ ಬಳಸಿದ ಆಯುಧವನ್ನು ಕೂಡಾ ಪತ್ತೆ ಹಚ್ಚಲಾಗಿದೆ. ಆರೋಪಿಯ ಬೈಕ್ ಕೀಲಿಯೊಂದಿಗೆ ಜೋಡಿಸಲಾದ ತೀಕ್ಷ್ಣ ವಸ್ತುವಾಗಿರುವುದು ತಿಳಿದುಬಂದಿದೆ. ಜೊತೆಗೆ ಘಟನೆ ವೇಳೆ ಧರಿಸಿದ್ದ ರಕ್ತದ ಕಲೆಗಳಿರುವ ಬಟ್ಟೆಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ. ಆರೋಪಿ ಅಪ್ರಾಪ್ತ ವಯಸ್ಕನಾಗಿರುವುದರಿಂದ, ಕಾನೂನು ಪ್ರಕಾರ ಅವರನ್ನು ಜುವೆನೈಲ್ ಜಸ್ಟಿಸ್ ಬೋರ್ಡ್ ಮುಂದೆ ಹಾಜರುಪಡಿಸಲಾಗಿದೆ. ತನಿಖೆ ಮುಂದುವರಿದಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ಬುಕ್ ಆಫ್ ರೆಕಾರ್ಡ್ಸ್‌ಗೆ ಆಯ್ಕೆ

ಯಲ್ಲಾಪುರ: ತನ್ನ ಅಸಾಧಾರಣ ಸ್ಮರಣಶಕ್ತಿ ಮತ್ತು ಬಾಲ್ಯದಲ್ಲೇ ಮಾಡಿದ ಸಾಧನೆಗಳನ್ನು ಗಮನಿಸಿ ಪಟ್ಟಣದ ಸಬಗೇರಿಯ ಪುಟ್ಟ ಪೋರಿ ಸಾನಿಯಾ ನದಾಫ್‌ಳನ್ನು ಕರ್ನಾಟಕ ಬುಕ್ ಆಫ್ ರೆಕಾರ್ಡ್ಸ್‌ಗೆ ಆಯ್ಕೆ ಮಾಡಿದ್ದಾರೆ.

ಕೇವಲ 3 ವರ್ಷ 8 ತಿಂಗಳ ಸಾನಿಯಾ ತನ್ನ ಚಿಕ್ಕ ವಯಸ್ಸಿನಲ್ಲಿಯೇ ಅಸಾಧಾರಣ ಸ್ಮರಣ ಶಕ್ತಿಯನ್ನು ಹೊಂದಿದ್ದು, ಹಣ್ಣುಗಳು, ವಾಹನಗಳು, 30ಕ್ಕೂ ಅಧಿಕ ರೈಮ್ಸ್‌ಗಳು, ಇಂಗ್ಲಿಷ್ ಶಬ್ದಗಳು, ನಾನಾ ತರನಾದ ಹಣ್ಣು ಹೂಗಳ ಹೆಸರುಗಳು ಮುಂತಾದವುಗಳನ್ನು ನೆನಪಿನಲ್ಲಿಟ್ಟುಕೊಳ್ಳುವ ಮೂಲಕ ಎಲ್ಲರನ್ನೂ ಚಕಿತಗೊಳಿಸಿದ್ದಾಳೆ.

ಈ ಪುಟಾಣಿಯ ಜ್ಞಾಪನಾ ಶಕ್ತಿಯನ್ನು ಗಮನಿಸಿ ಚಿಕ್ಕ ಮಕ್ಕಳ ವಿಭಾಗದಲ್ಲಿ ಕರ್ನಾಟಕ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ತನ್ನ ಹೆಸರು ದಾಖಲಿಸಿದ್ದಾಳೆ. ಈಕೆ ಕೇವಲ 8ತಿಂಗಳ ವಯಸ್ಸಿನಲ್ಲೇ ಮಾತನಾಡಲು ಪ್ರಾರಂಭಿಸಿ ಕುಟುಂಬದವರನ್ನು ಆಶ್ಚರ್ಯಗೊಳಿಸಿದ್ದಳು.

ಕೇವಲ ಒಂದೂವರೆ ವರ್ಷದ ವಯಸ್ಸಿನಲ್ಲೇ ಇಂಗ್ಲಿಷ್ ಅಕ್ಷರಮಾಲೆಯನ್ನು ಎ ಇಂದ ಝಡ್ ವರೆಗೆ ಸ್ಪಷ್ಟವಾಗಿ ಹೇಳುವ ಮೂಲಕ ತನ್ನ ಅಪೂರ್ವ ಕಲಿಕಾ ಸಾಮರ್ಥ್ಯವನ್ನು ಪ್ರದರ್ಶಿಸಿದ್ದಳು. ಈಕೆ ದಾಂಡೇಲಿಯ ಕಾಳಿ ಹುಲಿ ಸಂರಕ್ಷಿತ ಪ್ರದೇಶಲ್ಲಿ ಡಿಆರ್‌ಎಫ್‌ಓ ಆಗಿ ಕೆಲಸ ನಿರ್ವಹಿಸುತ್ತಿರುವ ಆಶಾಬಿ ನದಾಫ್ ಅವರ ಪುತ್ರಿಯಾಗಿದ್ದು, ಯಲ್ಲಾಪುರದ ತಾಲೂಕು ಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿ ಪಡೆದ ಮಮ್ತಾಜ್ ನದಾಫ್ ಅವರ ಮೊಮ್ಮಗಳಾಗಿದ್ದಾಳೆ. ಕೇವಲ ಬುದ್ಧಿಶಕ್ತಿಯಿಂದಷ್ಟೇ ಅಲ್ಲದೇ, ಛದ್ಮವೇಶ, ಹಾಡುವ ಸ್ಪರ್ಧೆಯಲ್ಲಿಯೂ ಸಹ ತನ್ನ ಛಾಪನ್ನು ಮೂಡಿಸುತ್ತಿದ್ದಾಳೆ. ಈ ಸಾಧನೆ ಕುಟುಂಬದವರಿಗೆ ಹಾಗೂ ಊರಿಗೆ ಹೆಮ್ಮೆ ತಂದಿದೆ.



Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೦೪

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

• **ಅಂಕೋಲಾ:** ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪೆನಿ ನಿಯಮಿತದ ಅಂಕೋಲಾ ಉಪವಿಭಾಗದಲ್ಲಿ 11 ಕೆ.ವಿ ಮತ್ತು 33 ಕೆ.ವಿ ಉಪ ವಿದ್ಯುತ್ ವಿತರಣಾ ಕೇಂದ್ರ, ಮಾಸ್ತಿಕಟ್ಟಾದ 11 ಕೆ.ವಿ ಮತ್ತು 33 ಕೆ.ವಿ ವಿದ್ಯುತ್ ವಿತರಣಾ ಕೇಂದ್ರ ಮತ್ತು ಬಾಳೆಗುಳಿಯ 110 ಕೆ.ವಿ, 33ಕೆ.ವಿ ಮತ್ತು 11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕೆಲಸ ನಡೆಯುವುದರಿಂದ ಇಂದು (ಮಾರ್ಚ 11) ಅಂಕೋಲಾ, ಸೀಬರ್ಡ್ ವಸ್ತಿ, ಬೆಲೆಕೇರಿ, ಅಗಸೂರು, ನವಗದ್ದೆ, ವ್ಯೊಡಾಪೋನ್, ಶಿರಗುಂಜಿ, ಹಳವಳ್ಳಿ, ಹೊನ್ನಳ್ಳಿ, ಮಾಸ್ತಿಕಟ್ಟಾ, ರಾಮನಗುಳಿ, ಹಡಿನಗದ್ದೆ, ಅಂಬಾರಕೊಡ್ಲ, ಗುಂಡಬಾಳ, ವಂದಿಗೆ, ಅಗ್ರಗೋಣ ವ್ಯಾಪ್ತಿಯ ಫೀಡರ್ ಗಳಿಗೆ ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆಯ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಸಹಕಾರ ನೀಡಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕಾರವಾರ-ಬೆಂಗಳೂರ ಪಲ್ಲಕ್ಕಿ ಬಸ್ ಸಂಚಾರ ಆರಂಭ

• **ಕಾರವಾರ:** ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಕಾರವಾರ-ಬೆಂಗಳೂರು ನಡುವೆ ನೂತನ ನಾನ್ ಎಸಿ ಸ್ಲೀಪರ್ ಪಲ್ಲಕ್ಕಿ ಬಸ್ ಸೇವೆಯು ಮಾ.11ರಿಂದ ಆರಂಭವಾಗಲಿದ್ದು, ಈ ಬಸ್ ಪ್ರತಿದಿನ ಅಂಕೋಲಾ-ಗೋಕರ್ಣ-ಶಿರಸಿ-ದಾವಣಗೆರೆ-ಚಿತ್ರದುರ್ಗ ಮಾರ್ಗವಾಗಿ ಬೆಂಗಳೂರು ತಲುಪಲಿದೆ. ಕಾರವಾರದಿಂದ ಸಂಜೆ 7.30 ಕ್ಕೆ ಹೊರಟು, ಅಂಕೋಲಾ ರಾತ್ರಿ 8.15, ಗೋಕರ್ಣ 8.50, ಶಿರಸಿ 10.45 ಹಾಗೂ ಬೆಂಗಳೂರಿಗೆ ಬೆ.7.30 ಕ್ಕೆ ತಲುಪಲಿದ್ದು, ಬೆಂಗಳೂರಿನಿಂದ ರಾತ್ರಿ 8.15 ಕ್ಕೆ ಹೊರಟು ಬೆಳಗ್ಗೆ 8 ಗಂಟೆಗೆ ಕಾರವಾರ ತಲುಪಲಿದೆ.ಈ ಬಸ್‌ಗಳಲ್ಲಿ ಮುಂಗಡ ಟಿಕೆಟ್ ಕಾಯ್ದಿರಿಸಲು ಆನ್‌ಲೈನ್ ಬುಕ್ಕಿಂಗ್ ಸೌಲಭ್ಯ ಒದಗಿಸಲಾಗಿದೆ ಎಂದು ವಾಕರಸಾ ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಇಂದು ವಿದ್ಯುತ್ ವ್ಯತ್ಯಯ

• **ಕಾರವಾರ:** ಹೆಸ್ಕಾಂ, ಹೊನ್ನಾವರ ವಿಭಾಗದ ಹೊನ್ನಾವರ ಭಟ್ಕಳ ತಾಲೂಕು ವ್ಯಾಪ್ತಿಯಲ್ಲಿ 110 ಕೆವಿ ಮಾರ್ಗದ 4 ಸ್ಥಳಗಳಲ್ಲಿ ತುರ್ತಾಗಿ ಜಂಪುಗಳನ್ನು ಬದಲಾವಣೆ ಮಾಡುವ ಇರುವುದರಿಂದ ಮಾ.11 ಮತ್ತು 12 ಮಧ್ಯಾಹ್ನ 1.30 ರಿಂದ 4 ಗಂಟೆಯವರೆಗೆ ಹೊನ್ನಾವರ ಹಾಗೂ ಭಟ್ಕಳ ತಾಲೂಕುಗಳ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುಂತೆ ಕೆಪಿಟಿಸಿಎಲ್ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಗಂಗಾ ಸುಬ್ರಾಯ ಭಟ್

• **ಶಿರಸಿ:** ತಾಲೂಕಿನ ಹೆಗಡೆಕಟ್ಟಾ ಚಟ್ಟೆಮನೆಯ ಸದ್ಗೃಹಿಣಿ ಗಂಗಾ ಸುಬ್ರಾಯ ಭಟ್ (90) ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ಐವರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.



ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60005	71899
ಬಿಳಿಗೋಟು	30200	39599
ಕೆಂಪುಗೋಟು	27800	44099
ಬೆಟ್ಟೆ	40518	51018
ರಾಶಿ	50018	54518
ಚಾಲಿ	43008	47699
ಬಿ.ಕಾಳುಮೆಣಸು	91869	91869

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	59000	60606
ರಾಶಿ	40669	58879
ಬೆಟ್ಟೆ	36969	51799
ಕೆಂಪುಗೋಟು	16899	39599
ಬಿಳಿಗೋಟು	15600	40811
ಚಾಲಿ ಹೊಸದು	36699	47599
ಚಾಲಿ	45000	49709
ಕೋಕಾ	10000	35902
ಕಾಳುಮೆಣಸು	51619	67089



ಅಂಕೋಲಾ: ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಸ್ವಾತಂತ್ರ್ಯ ಸಂಗ್ರಾಮದ ಗಂಡುಮೆಟ್ಟಿನ ಸ್ಥಳ ಬಾಸಗೋಡ ಗ್ರಾಮದಲ್ಲಿರುವ ಮಹಾತ್ಮ ಗಾಂಧಿ ಮಂದಿರಕ್ಕೆ ಚಲನ ಚಿತ್ರ ನಟಿ ಹಾಗೂ ಭುವನಂ ಫೌಂಡೇಶನ್ ಸಂಚಾಲಕಿ ಹರ್ಷಿಕಾ ಪೂಣಚ್ಚ ರವರು ಭೇಟಿ ನೀಡಿ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಸ್ವಾತಂತ್ರ್ಯ ಯೋಧರ ಮಗ ದೇವಾನಂದ ಬೊಮ್ಮಯ್ಯ ಗಾಂವಕರ ಹಾಗೂ ವನಿತಾ ದೇವಾನಂದ ಗಾಂವಕರ ಜೊತೆಗಿದ್ದರು.

ಅಭಿವೃದ್ಧಿ ಕಾಮಗಾರಿಗಳ ಲೋಕಾರ್ಪಣೆ

• **ಶಿರಸಿ:** ಪೂರ್ವಿಕರು ಸ್ಥಾಪಿಸಿದ ದೇವಸ್ಥಾನವನ್ನು ಮುಂದಿನ ತಲೆಮಾರಿಗೆ ಹಸ್ತಾಂತರಿಸಬೇಕು. ಅದು ನಮ್ಮ ಜವಾಬ್ದಾರಿ ಎಂದು ಹೈಕೋರ್ಟ ನ್ಯಾಯಾಧೀಶರಾದ ಶಂಕರ ಜಿ.ಪಂಡಿತ್ ಹೇಳಿದರು.ತಾಲೂಕಿನ ಮಂಜುಗುಣಿಯಲ್ಲಿ ಅವರು ಸುಮಾರು 50 ಕೋಟಿ ರೂಪಾಯಿ ವೆಚ್ಚದಲ್ಲಿ ಕೈಗೊಂಡ ಕಾಮಗಾರಿ ಸಮರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ದಾನಿಗಳಿಗೆ ಸನ್ಮಾನಿಸಿ ಮಾತನಾಡಿದರು.ವಿ.ಟಿ.ಹೆಗಡೆ ಜಾನ್ಮನೆ, ಇಂಜಿನೀಯರ್ ಅರುಣ ನಾಯಕ, ಆಡಳಿತ ಮಂಡಳಿಯ ಮಹಾಬಲೇಶ್ವರ ಹೆಗಡೆ ಕೂರ್ಸೆ, ಅನಂತ ಪೈ, ಭರಸಗುಣಿ ಶ್ರೀರಾಮ ಹೆಗಡೆ, ಅನಿತಾ ಪಂಡಿತ್ ಇದ್ದರು. ಹಲವು ಭಕ್ತ ದಾನಿಗಳನ್ನು ಗೌರವಿಸಲಾಯಿತು. ಅನಂತ ಶಾಸ್ತ್ರಿ ವೇದಘೋಷ ನಡೆಯಿತು. ಸುಬ್ರಹ್ಮಣ್ಯ ಭಟ್ಟ ಸ್ವಾಗತಿಸಿದರು. ಅನಿತಾ ಹೆಗಡೆ ಕಾರ್ಯಕ್ರಮ ನಿರ್ವಹಿಸಿದರು.ಮಂಜುಗುಣಿಯ ವೆಂಕಟರಮಣ ದೇವರು ಸಭೆಯ ಅಧ್ಯಕ್ಷತೆವಹಿಸಿತ್ತು.ಸುಮಾರು 50 ಕೋಟಿ ರೂಪಾಯಿ ವೆಚ್ಚದಲ್ಲಿ, 2000ನೇ ಇಸವಿಯಿಂದ ಹಂತಹಂತವಾಗಿ ಕೈಗೊಳ್ಳಲಾಗಿದ್ದ ದೇವಸ್ಥಾನದ ಪ್ರಾಕಾರ ಕಟ್ಟಡಗಳ ಸಮಗ್ರ ಜೀರ್ಣೋದ್ಧಾರ, ಗೋಶಾಲೆ, ತೀರ್ಥ ಕೆರೆಗಳ ನವೀಕರಣ ಹಾಗೂ ನಿತ್ಯ ಅನ್ನಪ್ರಸಾದ ವ್ಯವಸ್ಥೆ ಸೇರಿದಂತೆ ಹಲವು ಸೇವೆಗಳು ಲೋಕಾರ್ಪಣೆಗೊಂಡವು. ಕರ್ನಾಟಕದಲ್ಲಿಯೇ ಅತ್ಯಂತ ವಿಸ್ತಾರವೆನಿಸಿದ 185 ಅಡಿ ಉದ್ದ ಹಾಗೂ 111 ಅಡಿ ಅಗಲ ಬೃಹತ್ ಅಚ್ಛಾದನೆಯನ್ನು ದೇವಸ್ಥಾನಕ್ಕೆ ಅರ್ಪಿಸಲಾಯಿತು.ನೂತನವಾಗಿ ನಿರ್ಮಾಣಗೊಂಡ ಬೆಳ್ಳಿಯ ಭವ್ಯ ಕುಂಬದ್ವಾರ ಮಂಟಪ ಪ್ರವೇಶ ಹಾಗೂ ಶಿಲಾಮಯ ಗರ್ಭಗುಡಿಯನ್ನು ಸಮರ್ಪಣೆ ನಡೆಯಿತು.



ಶಿರಸಿ: ತಾಲೂಕಿನ ಮಂಜುಗುಣಿಯಲ್ಲಿ ಸುಮಾರು 50 ಕೋಟಿ ರೂಪಾಯಿ ವೆಚ್ಚದಲ್ಲಿ ಕೈಗೊಂಡ ಕಾಮಗಾರಿ ಸಮರ್ಪಣೆ ಕಾರ್ಯಕ್ರಮದಲ್ಲಿಹೈಕೋರ್ಟ ನ್ಯಾಯಾಧೀಶರಾದ ಶಂಕರ ಜಿ.ಪಂಡಿತ್ ಭಾಗವಹಿಸಿದರು.ಈ ವೇಳೆ ವಿ.ಟಿ.ಹೆಗಡೆ ಜಾನ್ಮನೆ, ಇಂಜನೀಯರ್ ಅರುಣ ನಾಯಕ, ಆಡಳಿತ ಮಂಡಳಿಯಮಹಾಬಲೇಶ್ವರ ಹೆಗಡೆ ಕೂರ್ಸೆ, ಅನಂತ ಪೈ, ಭರಸಗುಣಿ ಶ್ರೀರಾಮ ಹೆಗಡೆ, ಅನಿತಾ ಪಂಡಿತ್ ಇದ್ದರು.

ಬೃಹತ್ ಪ್ರತಿಭಟನಾ ಸಭೆ | ರಾಘವೇಶ್ವರ ಭಾರತೀ ಶ್ರೀಗಳ ಹೇಳಿಕೆ

ನದಿ ಜೋಡಣೆ ಯೋಜನೆ ನಿಲ್ಲಿಸಿ

• **ಹೊನ್ನಾವರ:** ಶರಾವತಿ ನದಿಯ ಮೇಲೆ ನಮಗೆ ಮಾತ್ರ ಹಕ್ಕಿಲ್ಲ. ಮುಂದಿನ ಪೀಳಿಗೆಗೆ ಬಿಟ್ಟುಕೊಡಬೇಕಿದೆ. ನದಿಯಿಂದ ಪ್ರಯೋಜನ ಪಡೆದು ಅನಾಹುತಕ್ಕೆ ಎಡೆ ಮಾಡಿಕೊಡಬಾರದು ಎಂದು ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಶ್ರೀಗಳು ಹೇಳಿದರು.

ಪಟ್ಟಣದ ಮೂಡಗಣಪತಿ ಸಭಾಭವನದಲ್ಲಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ವಿರೋಧಿಸಿ ಮಂಗಳವಾರ ಶರಾವತಿ ಉಳಿಸಿ ಹೋರಾಟ ಸಮಿತಿಯಿಂದ ಬೃಹತ್ ಪ್ರತಿಭಟನಾ ಸಭೆಯಲ್ಲಿ ಶ್ರೀಗಳು ಶರಾವತಿ ಕುಂಬಕ್ಕೆ ಆರತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರಕೃತಿ, ಸಂಸ್ಕೃತಿ ಹಾನಿ ಮಾಡುವ ಯಾವುದೇ ಹೆಜ್ಜೆಗೂ ನಮ್ಮ ವಿರೋಧವಿದೆ. ಎಲ್ಲಾ ಮಠಾಧೀಶರು ಒಂದಾಗಿ ಬೆಂಬಲ ಸೂಚಿಸಬೇಕು. ಯೋಜನೆ ನಿಲ್ಲಿಸದಿದ್ದರೆ ಕರಾವಳಿಗೆ ಕರಾವಳಿಯೆ ಬೆಂಕಿ ಹೊತ್ತಿಕೊಳ್ಳುತ್ತದೆ. ಅದು ರಾಷ್ಟ್ರಮಟ್ಟದಲ್ಲಿ ಸಂಚಲನ ಮೂಡಿಸುವ ರೀತಿಯ ಹೋರಾಟ ಆಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಶ್ರೀ ಕ್ಷೇತ್ರ ಬಂಗಾರಮಕ್ಕಿಯ ಧರ್ಮದರ್ಶಿ ಶ್ರೀ ಮಾರುತಿ ಗುರೂಜಿ ಮಾತನಾಡಿ, ಸೂಪರ್ ಸ್ಪೆಷಲಿಟಿ ಆಸ್ಪತ್ರೆ ಬಜೆಟ್‌ನಲ್ಲಿ ಘೋಷಣೆ ಆಗಿದೆ. ಆದರೆ ಅದು ಜಿಲ್ಲೆಯ ಹೃದಯ ಭಾಗವಾದ ಕುಮಟಾ ಅಥವಾ ಹೊನ್ನಾವರದಲ್ಲಿ ಘೋಷಣೆಯಾಗ ಬೇಕಾಗಿತ್ತು. ಉಸ್ತುವಾರಿ ಸಚಿವರು ಆ ಆದೇಶ ಮಾರ್ಪಾಡಾಗುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು.

ಸಂರಕ್ಷಿತ ಅರಣ್ಯ ಪ್ರದೇಶ, ಸಿಂಹದ ಬಾಲ ಹೊಂದಿರುವ ಸಿಂಗಳಿಕ. ಅಪರೂಪದ ಕಾಳಿಂಗ ಸಂರಕ್ಷಿತ ಪ್ರದೇಶ. ಅಭಯಾರಣ್ಯದಿಂದ ಯಾವತ್ತೂ ಬಾರದ ಹುಲಿ, ಚಿರತೆಗಳು ಮನೆ ಬಾಗಿಲಿಗೆ ಬರುತ್ತಿವೆ. ಯುನೆಸ್ಕೋದಿಂದ ಪಶ್ಚಿಮ ಘಟ್ಟಗಳ ರಕ್ಷಣೆಗಾಗಿ ಹಣ ವಿನಿಯೋಗಿಸಲಾಗುತ್ತಿದೆ ಇದರ ರಕ್ಷಣೆ ನಮ್ಮೆಲ್ಲರ ಹೊಣೆ ಎಂದರು.

ಶಾಸಕ ದಿನಕರ ಶೆಟ್ಟಿ ಮಾತನಾಡಿ, ಶರಾವತಿಯನ್ನು ಮುಂದಿನ ದಿನಕ್ಕೆ ಉಳಿಸಬೇಕಾಗಿದೆ. ಯೋಜನೆ ಬಂದ್ರೆ ನಾವು ಉಪ್ಪು ನೀರು ಕುಡಿಯಬೇಕಾಗುತ್ತದೆ ಎಂದರು.

ಉದ್ಯಮಿ ಮಾಸ್ತಪ್ಪ ನಾಯ್ಕ ಮಾತನಾಡಿ, ಶರಾವತಿ ಯೋಜನೆಯಿಂದಲೂ ಮಾರಣಾಂತಿಕ ತೊಂದರೆ ಇದೆ. ಕೇಂದ್ರ ಕೈಬಿಟ್ಟಿದೆ. ಸಚಿವರು ಬಾಯಿ ಬಿಡಬೇಕಾಗಿತ್ತು. ಕೇಂದ್ರ ಸರ್ಕಾರ ಕೈ ಬಿಟ್ಟಾಗ ಹೇಳಿಕೆ ಕೊಡೋದಿಲ್ಲ, ಶರಾವತಿ ಯೋಜನೆ ಕೈಬಿಡದಿದ್ದರೇ ಸಂಬಂಧಪಟ್ಟವರ ಪ್ರತಿಕೃತಿ ದಹನ ಮಾಡುತ್ತೇವೆ ಎಂದರು.

ಮಾಜಿ ಸಚಿವ ಶಿವಾನಂದ ನಾಯ್ಕ ಮಾತನಾಡಿ, ಶೇ 80ರಷ್ಟು ಉಪ್ಪು ನೀರಾಗಿದೆ. ಮುಂದಿನ ದಿನಗಳಲ್ಲಿ ನೀರಿಗೆ ತೊಂದರೆಯಾಗಲಿದೆ. ರಾಜ್ಯ ಸರ್ಕಾರ ಯೋಜನೆ ನಿಲ್ಲಿಸಬೇಕು ಎಂದರು. ಮಾಜಿ ಶಾಸಕ ಸುನೀಲ್ ನಾಯ್ಕ, ಜೆಡಿಎಸ್ ಮುಖಂಡ ಸೂರಜ್ ನಾಯ್ಕ ಸೋನಿ,ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಾಯಿನಾಥ ಗಾಂವಕರ,ಬಿಜೆಪಿ ಜಿಲ್ಲಾಧ್ಯಕ್ಷ ಎನ್.ಎಸ್.ಹೆಗಡೆ,ಈಶ್ವರ ನಾಯ್ಕ,ಗೋವಿಂದ ನಾಯ್ಕ,ಹೋರಾಟ ಸಮಿತಿಯ ಪ್ರಮುಖರಾದ ನ್ಯಾಯವಾದಿ ವಿಕ್ರಂ ನಾಯ್ಕ,ಜಿ.ಜಿ ಶಂಕರ,ಮಂಗಲದಾಸ ನಾಯ್ಕ,ಟಿ.ಟಿ ನಾಯ್ಕ ಇತರರಿದ್ದರು. ಹೋರಾಟ ಸಮಿತಿ ಅಧ್ಯಕ್ಷ ವೆಂಕಟ್ರಮಣ ಹೆಗಡೆ ಸ್ವಾಗತಿಸಿದರು. ಚಂದ್ರಕಾಂತ ಕೊಚರೇಕರ್ ಪ್ರಾಸ್ತಾವಿಸಿದರು. ವಿಶ್ವನಾಥ ನಾಯಕ ನಿರ್ವಹಿಸಿದರು.



> ಶಿರೂರು ಗುಡ್ಡ ಕುಸಿತದಲ್ಲಿ 11 ಜನ ಮೃತರಾದರು. ಐಆರ್ ಬಿ ಕಂಪನಿ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳಲಿಲ್ಲ. ಇನ್ನು ಪಂಪ್ಡ್ ಸ್ಟೋರೇಜ್ ಪ್ರಾಜೆಕ್ಟ್ ಬಂದರೆ 11ಸಾವಿರ ಜನ ಸಾಯಬಹುದು. ಅವೈಜ್ಞಾನಿಕ ಕೆಲಸ ಆಗುವಾಗ ಮೊದಲೇ ಕ್ರಮ ಕೈಗೊಳ್ಳಬೇಕು.
>
> ■ ಡಾ.ಶ್ರೀ ಪ್ರಣವಾನಂದ ಶ್ರೀಗಳು, ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿಪೀಠ

> ರಾಜಕಾರಣ ಮಾಡಲು ನನಗೆ ಹೊಸದಲ್ಲ. ಪೂಜ್ಯರನ್ನ ಇಟ್ಟುಕೊಂಡು ರಾಜಕಾರಣ ಮಾಡಿದ್ರೆ ಪರಿಸ್ಥಿತಿ ಕೆಟ್ಟದಾಗುತ್ತದೆ. ಅದ್ಭುತವಾಗಿ ಶರಾವತಿ ಹೋರಾಟ ಸಮಿತಿ ರಚನೆ ಮಾಡಿಕೊಂಡು ಹೋರಾಟ ಮಾಡಿಕೊಂಡು ಬರುತ್ತಿದ್ದಾರೆ. ಅಘನಾಶಿನಿ ಬೇಡ್ತಿ ಹೋರಾಟ ಸಮಿತಿ ಸಭೆಯಲ್ಲಿ ರಾಜಕಾರಣ ತರಬಾರದು. ಶ್ರೀಗಳವರ ಅಧ್ಯಕ್ಷತೆಯಲ್ಲಿ ನಾನು ಯೋಜನೆಗೆ ವಿರೋಧ ಮಾಡ್ತೇನೆ. ಕೇಂದ್ರ ಸರ್ಕಾರಕ್ಕೆ ಅಭಿನಂದಿಸುತ್ತೇನೆ.
>
> ■ ಮಂಕಾಳ ವೈದ್ಯ ,ಸಚಿವ

ಮಹಿಳೆ ಒಂದು ಶಕ್ತಿ: ನ್ಯಾ. ಪ್ರತಿಭಾ ಕುಲಕರ್ಣಿ

• **ಕಾರವಾರ:** ಮಹಿಳೆ ಒಬ್ಬ ವ್ಯಕ್ತಿಯಲ್ಲ ಒಂದು ಶಕ್ತಿ. ಮಹಿಳೆಯರು ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ವಿಜ್ಞಾನ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲೂ ಮುಂಚೂಣಿಲ್ಲಿದ್ದಾರೆ ಎಂದು ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶರು ಎಫ್‌ಎಸ್‌ಟಿಸಿ-1 ಪ್ರತಿಭಾ ಬಿ.ಕುಲಕರ್ಣಿ ಹೇಳಿದರು.

ಅವರು ಮಂಗಳವಾರ ಜಿಪಂ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರವಾರ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರ ಸಾಧನೆಗಳನ್ನು ಸ್ಮರಿಸುವುದಕ್ಕಾಗಿ, ಅವರಿಗೆ ತಮ್ಮ ಹಕ್ಕುಗಳ ಅರಿವು ಹಾಗೂ ಅಭಿವೃದ್ಧಿ ಹೊಂದಲು ಸಮಾನ ಅವಕಾಶ ಕಲ್ಪಿಸುವ ಬಗ್ಗೆ ಜಾಗೃತಿ ಮೂಡಿಸುವುದು ಮಹಿಳಾ ದಿನಾಚರಣೆಯ ಉದ್ದೇಶವಾಗಿದೆ. ಮಹಿಳೆಯರು ಕರ್ತವ್ಯದ ಜೊತೆಯಲ್ಲಿ ಕೌಟುಂಬಿಕ ಸಮಸ್ಯೆಗಳ ಮಧ್ಯೆಯೂ ಛಲಬಿಡದೇ ಮುನ್ನಡೆಯಬೇಕು ಎಂದರು. ಜಿಲ್ಲಾಧಿಕಾರಿ ಕೆ. ಲಕ್ಷ್ಮೀ ಪ್ರಿಯಾ ಮಾತನಾಡಿ, ಸರ್ಕಾರದ ಎಲ್ಲಾ ಇಲಾಖೆಯಲ್ಲಿ ಮಹಿಳಾ ಅಧಿಕಾರಿಗಳು ಇರುವುದನ್ನು ಕಾಣಬಹುದಾಗಿದೆ. ಮಹಿಳೆಯರ ಕೈಯಲ್ಲಿ ಎಲ್ಲವೂ ಸಾಧ್ಯ ಎಂಬುದನ್ನು ಸಾಬೀತುಪಡಿಸಿದ್ದಾರೆ. ಉತ್ತಮ ಸಮಾಜದ ನಿರ್ಮಾಣದ ಜೊತೆಯಲ್ಲಿ ಮಹಿಳೆಯರಿಗೆ ಉತ್ತಮ ಸುರಕ್ಷತೆಯ ಸಮಾಜವನ್ನು ನಿರ್ಮಾಣ ಮಾಡೋಣ ಎಂದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ದಿಲೀಶ್ ಶಶಿ ಮಾತನಾಡಿ, ಮಹಿಳೆಯರು ವಿವಿಧ ಕ್ಷೇತ್ರದಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿಸಿಕೊಂಡು ಇತರೆ ಮಹಿಳೆಯರಿಗೆ ಉದ್ಯೋಗ ನೀಡುವಂತರಾಗಬೇಕು. ಜಿಲ್ಲೆ ಮತ್ತು ರಾಜ್ಯಕ್ಕೆ ಹೆಸರನ್ನು ತರುವಂತಾಗಬೇಕು. ಮಹಿಳೆಯರು ಕುಟುಂಬ ಮತ್ತು ಸಮಾಜದ ಜವಾಬ್ದಾರಿಯನ್ನು ಹೊತ್ತುಕೊಂಡು ಒತ್ತಡದ ಜೀವನವನ್ನು ಸಾಗಿಸುತ್ತಿದ್ದು, ಆರೋಗ್ಯದ ಕಡೆ ಹೆಚ್ಚು ಗಮನಹರಿಸಬೇಕು ಎಂದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿವ್ಯಶ್ರೀ ಸಿ.ಎಂ ಮಾತನಾಡಿದರು. ಜಿಲ್ಲಾ ಮಟ್ಟದ ಮಹಿಳಾ ಅಧಿಕಾರಿಗಳಿಗೆ ಹಾಗೂ ಉತ್ತಮ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಸನ್ಮಾನಿಸಲಾಯಿತು. ಡಿವೈಎಸ್ಪಿ ಗಿರೀಶ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ಆಶಾ, ವಾ.ಕ.ರ.ಸಾ ಸಂಸ್ಥೆಯ ಡಿಪೋ ಮೆನೇಜರ್ ಸೌಮ್ಯ ನಾಯಕ, ಕಾರವಾರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕಿ ಡಾ. ಪೂರ್ಣಿಮಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾ ಇಲಾಖೆಯ ಜಿಲ್ಲಾ ಅಧಿಕಾರಿ ಡಾ. ಅಶ್ವಿನಿ ಬೋರ್ಕರ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕಿ ಲತಾ ನಾಯಕ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಅರ್ಚನ ನಾಯಿಕ್ ವಿವಿಧ ಇಲಾಖೆಯ ಅಧಿಕಾರಿಗಳು ಅಂಗನವಾಡಿ ಕಾರ್ಯಕರ್ತೆ ಮತ್ತಿತರರು ಇದ್ದರು.



ರಾಷ್ಟ್ರ ಮಟ್ಟದ ಸ್ಪರ್ಧೆ: ವಿಡಿಐಟಿ ವಿದ್ಯಾರ್ಥಿಗೆ ರಜತ ಪದಕ

• **ಹಳಿಯಾಳ:** ಪ್ರಥಮ ರಾಷ್ಟ್ರೀಯ ಶುಐ ಜಿಯೋ ಸ್ಪರ್ಧೆಯಲ್ಲಿ ಪಟ್ಟಣದ ವಿಡಿಐಟಿ ಮಹಾವಿದ್ಯಾಲಯದ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ವಿಭಾಗದ 4ನೇ ಸೆಮಿಸ್ಟರ್‌ನ ವಿದ್ಯಾರ್ಥಿ ಪ್ರಜ್ವಲ್ ರಾವಲ್ ರಜತ ಪದಕ ಪಡೆದುಕೊಂಡಿದ್ದಾರೆ.

ಲಕ್ನೌನ ಕೆ.ಡಿ.ಸಿಂಗ್ ಬಾಬು ಕ್ರೀಡಾಂಗಣದಲ್ಲಿ ಫೆ.20ರಿಂದ 22ರ ವರೆಗೆ ಜರುಗಿದ ಈ ಸ್ಪರ್ಧೆಯಲ್ಲಿ ಪ್ರಜ್ವಲ್ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ಶುಐ ಜಿಯೋ ಎಂಬುದು 4,000 ವರ್ಷಗಳಿಗಿಂತಲೂ ಹೆಚ್ಚಿನ ಇತಿಹಾಸ ಹೊಂದಿರುವ ಒಂದು ಪ್ರಾಚೀನ ಚೀನೀ ಜಾಕೆಟ್ ಕುಸ್ತಿ ಶೈಲಿಯಾಗಿದೆ.

ಕರ್ನಾಟಕ ಸರ್ಕಾರ ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆ,ಕರ್ನಾಟಕ ಒಲಿಂಪಿಕ್ ಸಂಸ್ಥೆ ಹಾಗೂ ತುಮಕೂರು ಜಿಲ್ಲಾಡಳಿತ ಆಯೋಜಿಸಿದ್ದ ಕರ್ನಾಟಕ ಕ್ರೀಡಾಕೂಟ 2025-26ದ ಓಶೋ/ವೊಶೋ ಸ್ಪರ್ಧೆಯಲ್ಲಿ ಪ್ರಜ್ವಲ್ ಕಂಚಿನ ಪದಕ ಗಳಿಸಿಕೊಂಡಿದ್ದಾರೆ. ಜನವರಿ 16ರಿಂದ 22ರ ವರೆಗೆ ನಡೆದ ಈ ಪಂದ್ಯಾವಳಿಯಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ.

ರಾಷ್ಟ್ರ ಹಾಗೂ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ವಿಜಯಶಾಲಿಯಾಗಿ ರಜತ ಹಾಗೂ ಕಂಚಿನ ಪದಕ ಗಳಿಸಿ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿರುವ ಪ್ರಜ್ವಲ್ ಸಾಧನೆಗೆ ಆಡಳಿತ ಮಂಡಳಿಯ ಅಧ್ಯಕ್ಷ ಪ್ರಶಾಂತ್ ಕುಲಕರ್ಣಿ, ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಸಂತಸ ವ್ಯಕ್ತಪಡಿಸಿದ್ದಾರೆ.

ಡೀನ್ ಡಾ.ಮಹೇಂದ್ರ ದೀಕ್ಷಿತ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥ ಡಾ.ನಾಗರಾಜ ಭಟ್, ದೈಹಿಕ ಶಿಕ್ಷಣ ನಿರ್ದೇಶಕ ಗದಿಗೆಪ್ಪಾ ಯಳ್ಳೂರ್ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.



ಸಿಲಿಂಡರ್ ರೀಫಿಲ್‌ಗೆ ಮುಂದಾದ ಜನತೆ

• **ಮುಂಡಗೋಡ:** ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಉಲ್ಬಣಗೊಂಡಿರುವ ಸಂಘರ್ಷದ ಕಾರಣ ಈ ವಾಣಿಜ್ಯ ಎಲ್‌ಪಿಜಿ ಬಿಕ್ಕಟ್ಟು ತೀವ್ರಗೊಂಡಿದೆ. ಇದರಿಂದಾಗಿ ಹೋಟೆಲ್ ಮಾಲೀಕರು ಹೋಟೆಲ್ ಮುಚ್ಚಬೇಕಾದ ಪರಿಸ್ಥಿತಿ ಬರಬಹುದು ಎಂಬ ಆತಂಕ ಮಾಲೀಕರನ್ನು ಕಾಡುತ್ತಿದೆ.

ಈಗಾಗಲೇ ಮನೆ ಬಳಕೆಯ ಅನಿಲ ಸಿಲಿಂಡರ್ ಬುಕಿಂಗ್‌ಗೆ ಮೊದಲು ಆದ್ಯತೆ ನೀಡಲಾಗುತ್ತಿದ್ದರೆ, ವಾಣಿಜ್ಯ ಬಳಕೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದಿಂದ ಉಂಟಾಗಿರುವ ಇಂಧನ ಪೂರೈಕೆಯ ಕೊರತೆಯ ಸಂಕಷ್ಟದ ಪರಿಸ್ಥಿತಿ ತಂದಿದೆ. ಇಲ್ಲಿನ ಸಿಲಿಂಡರ್ ವಿತರಕರು ಸೋಮವಾರದಿಂದಲೇ ವಾಣಿಜ್ಯ ಸಿಲಿಂಡರ್ ಸ್ಥಗಿತಗೊಳಸಲಾಗಿದೆ. ಇಂಧನದ ಕೊರತೆಯಿಂದಾಗಿ ಪಟ್ಟಣದ ಹೋಟೆಲ್‌ಗಳು ಮುಚ್ಚುವ ಆತಂಕದಲ್ಲಿದ್ದಾರೆ. ಗ್ರಾಹಕರು ಮುಗಿಬಿದ್ದು ಅಡುಗೆ ಅನಿಲವನ್ನು ಸಂಗ್ರಹಿಸಲು ಮುಂದಾದ ಹಿನ್ನೆಲೆಯಲ್ಲಿ, ಗೃಹಬಳಕೆಯ ಸಿಲಿಂಡರ್‌ಗಳ ಬುಕಿಂಗ್ ನಲ್ಲಿ ಭಾರೀ ಏರಿಕೆ ಕಂಡುಬಂದಿದೆ. ಅನೇಕ ಗ್ರಾಹಕರು ಮುನ್ನೆಚ್ಚರಿಕೆ ಕ್ರಮವಾಗಿ ತಮ್ಮ ಖಾಲಿ ಸಿಲಿಂಡರ್‌ಗಳನ್ನು ತುರ್ತಾಗಿ ರೀಫಿಲ್ ಮಾಡಿಕೊಳ್ಳುತ್ತಿದ್ದಾರೆ.ದೇಶಾದ್ಯಂತ ಸಮಸ್ಯೆಯಾಗಿದೆ. ಮನೆಯ ಸಿಲಿಂಡರ್ ದಾಸ್ತುನು ಇದೆ. ಆದರೆ ಗ್ರಾಹಕರು ಒಟಿಪಿ ನೀಡದವರಿಗೆ ಮಾತ್ರ ಸಿಲಿಂಡರ್ ವಿತರಿಸಲಾಗುತ್ತಿದೆ. ಸೋಮವಾರದಿಂದಲೇ ವಾಣಿಜ್ಯ ಸಿಲಿಂಡರ್ ಸ್ಥಗಿತಗೊಳಿಸಲಾಗಿದೆ. ಸರ್ಕಾರದ ಕ್ರೀಡಾ ವಸತಿ ನಿಲಯ, ಶಾಲೆ, ವಸತಿ ಶಾಲೆ ,ಆಸ್ಪತ್ರೆಗಳಿಗೆ ಮಾತ್ರ ವಾಣಿಜ್ಯ ಸಿಲಿಂಡರಗಳ ವಿತರಿಸಲು ಮೇಲಿಂದ ಸೂಚನೆ ಬಂದಿದೆ ಎಂದು ಗ್ಯಾಸ್ ವಿತರಕ ಬಸವರಾಜ ಓಶಿಮಠ ಹೇಳಿದರು.



ಮುಂಡಗೋಡ: ಕರಗಿನಕೊಪ್ಪ ಮುರಾರ್ಜಿ ಶಾಲೆಗೆ ಶಿರಶಿ ಸಹಾಯಕ ಕಮಿಷನರ್ ಚಂದ್ರಶೇಖರ ಆರ್.ಜಿ. ಅವರು ಮಂಗಳವಾರ ಭೇಟಿ ನೀಡಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಜತೆ ಸಮಾಲೋಚನೆ ನಡೆಸಿ ಪರೀಕ್ಷೆ ಪೂರ್ವ ಸಿದ್ಧತೆ ಬಗ್ಗೆ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದುಕೊಂಡರು.

ಅಧಿಕಾರಿ ವಜಾಗೊಳಿಸಲು ಒತ್ತಾಯ

• **ಯಲ್ಲಾಪುರ:** ತಾಲೂಕಾ ಮಾರ್ಕೆಟಿಂಗ್ ಸೊಸೈಟಿಯ ಆಡಳಿತ ಅಧಿಕಾರಿ ತನ್ನ ಅಧಿಕಾರ ವ್ಯಾಪ್ತಿ ಮೀರಿ ಕಾರ್ಯ ನಿರ್ವಹಿಸುತ್ತಿರುವುದು ಪಟ್ಟಭದ್ರರ ಕುತಂತ್ರಕ್ಕೆ ಮಣಿದು ಸುಮಾರು ಎರಡು ಸಾವಿರ ಸದಸ್ಯರ ಹಕ್ಕನ್ನು ಮೊಟಕು ಮಾಡಿ, ಟಿಎಂಎಸ ಜೀವನಾಡಿಯಾದ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ ಇವರನ್ನು ತಕ್ಷಣ ಅಧಿಕಾರದಿಂದ ವಜಾಗೊಳಿಸಬೇಕು ಎಂದು ಟಿಎಂಎಸ್‌ನ ಮಾಜಿ ಅಧ್ಯಕ್ಷ ಎನ್.ಕೆ.ಭಟ್ಟ ಅಗ್ಗಾಶಿ ಕುಂಬ್ರಿ ಆಗ್ರಹಿಸಿದ್ದಾರೆ.

ಅವರು ಮಂಗಳವಾರ ಪಟ್ಟಣದ ಶಕ್ತಿಗಣಪತಿ ದೇವಸ್ಥಾನದ ಸಭಾಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸರ್ಕಾರಿ ಅಧಿಕಾರಿ ತನ್ನ ವ್ಯಾಪತಿ ಮೀರಿ ಸಂಸ್ಥೆಯಲ್ಲಿ ದಬ್ಬಾಳಿಕೆ ಮಾಡುತ್ತಿರುವದನ್ನು ನಾವು ಖಂಡಿಸುತ್ತೇವೆ. ಈ ಕುರಿತು ಮಾ.11ರಂದು ಸಹಕಾರಿ ಸಂಘದ ಎದುರು ಪ್ರತಿಭಟನೆ ನಡೆಸುವುದಲ್ಲದೇ, ನಮ್ಮ ಪ್ರತಿಭಟನೆಗೆ ಹಿರಿಯ ಅಧಿಕಾರಿಗಳು ಸ್ಪಂದಿಸದಿದ್ದರೆ ಗುರುವಾರ ಶಿರಸಿ ರಸ್ತೆಯ ತಡೆ ಚಳುವಳಿ ನಡೆಸುತ್ತೇವೆ. ಇದು ಅಧಿಕಾರಿಯ ವ್ಯಾಪ್ತಿ ಮೀರಿ ನಡೆದಂತಾಗಿದೆ. ಆದ್ದರಿಂದ ಅವರನ್ನು ವಜಾಗೊಳಿಸಬೇಕು. ಸಂಸ್ಥೆಯನ್ನು ಉಳಿಸುವ ಬಗ್ಗೆ ನಮ್ಮ ಈ ಹೋರಾಟ. ನಮ್ಮ ಸಹಕಾರಿ ಸಂಘದಲ್ಲಿ ಮಾರ್ಚ್ ಕೊನೆಗೆ ರಿನೆವಲ್ ಆಗದೇ ರೈತರು ತೊಂದರೆಗೆ ಸಿಲುಕುವುದಲ್ಲದೇ ಏಪ್ರಿಲ್‌ನಲ್ಲಿ ಕೆಡಿಸಿಸಿ ಬ್ಯಾಂಕ್‌ನಲ್ಲೂ ರಿನೆವಲ್ ಆಗದೇ ಸಂಘದ ಸದಸ್ಯರು ತೊಂದರೆಗೆ ಸಿಲುಕಲಿದ್ದಾರೆ. ಯಾವದೇ ಪತ್ತಿನ ಜೋಡನೆಯಾಗದೇ ಇರುವದರಿಂದ ನಮ್ಮ ಅನೇಕ ಸದಸ್ಯರಿಗೆ ಆಸ್ಪತ್ರೆ, ಮದುವೆ ಮುಂಜಿ ಮಂಗಲ ಕಾರ್ಯ ಸೇರಿದಂತೆ ಹಲವಾರು ತುರ್ತು ಕಾರ್ಯಗಳಿಗೆ ಹಣ ದೊರೆಯದಂತಾಗಿ ಅಂತಹವರು ಇಂದು ಖಾಸಗಿ ಸಾಲಕ್ಕೆ ಬೀಳುವ ಪರಿಸ್ಥಿತಿ ನಿರ್ಮಾಣಗೊಂಡಿದೆ. ಸಾವಿರಾರು ಕೃಷಿಕರಿಗೆ ಟಿಎಂಎಸ್‌ಸಂಸ್ಥೆ ಜೀವನಾಡಿಯಾಗಿದೆ. ಆದ್ದರಿಂದ ಜನಪರವಾಗಿ ನಾವು ಹೋರಾಟ ಮಾಡುತ್ತಿದ್ದೇವೆ ಎಂದು ತಿಳಿಸಿದರು.ಹಿರಿಯರಾದ ಪ್ರಮೋದ ಹೆಗಡೆ, ಹರಿಪ್ರಕಾಶ ಕೋಣೆಮನೆ, ಗೋಪಾಲಕೃಷ್ಣ ಗಾಂವ್ಕರ, ಜಿ.ವಿ.ಹೆಗಡೆ, ವಿ.ಎನ್.ಭಟ್ಟ ಬೆಳ್ಳಿ, ವೆಂಕಟ್ರಮಣ ಕಿರುಕುಂಭತ್ತಿ, ಸುಬ್ಬಣ್ಣ ಬೋಳ್ಮನೆ, ನಾಗರಾಜ ಕವಡಿಕೆರೆ, ಗಣಪತಿ ಮಾನಿಗದ್ದೆ, ಅಪ್ಪು ಆಚಾರಿ, ಕೆ.ಟಿ ಹೆಗಡೆ, ರಾಜೇಂದ್ರ, ಗೌಡರ್ ಮತ್ತಿತರರು ಉಪಸ್ಥಿತರಿದ್ದರು.



ಭಾರೀ ಸ್ಫೋಟದ ಸದ್ದು: ಗೊಂದಲಗಳಿಗೆ ತೆರೆ

• **ಹಳಿಯಾಳ:** ಧಾರವಾಡ ರಾಜ್ಯ ಹೆದ್ದಾರಿಯ ಸಮೀಪದ ಬಿಕೆ ಹಳ್ಳಿ ವ್ಯಾಪ್ತಿಯ ಪ್ರದೇಶದಲ್ಲಿ ಕಲ್ಲು ಕ್ವಾರಿಯಲ್ಲಿ ಸೋಮವಾರ ಸಂಜೆ ಸಂಭವಿಸಿದ ಭಾರೀ ಸ್ಫೋಟದ ಸದ್ದಿನ ಬಗ್ಗೆ ಉಂಟಾಗಿದ್ದ ಗೊಂದಲಗಳಿಗೆ ಮಂಗಳವಾರ ತೆರೆ ಬಿದ್ದಿದೆ. ಸೋಮವಾರ ಸಾಯಂಕಾಲ 5 ಗಂಟೆ ಆಸುಪಾಸಿನ ಸಮಯದಲ್ಲಿ ಭಾರೀ ಸ್ಫೋಟದ ಸದ್ದು ಹಳಿಯಾಳ ಪಟ್ಟಣದವರೆಗೂ ಕೇಳಿಸಿತ್ತು. ಹಾಗೂ ಸಾರ್ವಜನಿಕರಲ್ಲಿ ಗೊಂದಲಗಳಿಗೆ ಕಾರಣವಾಗಿತ್ತು. ಭಾರೀ ಸ್ಫೋಟದ ಸದ್ದಿಗೆ ಹಲವರು ಭಯಭೀತರಾಗಿದ್ದರು.ವಿಷಯ ತಿಳಿದ ಹಳಿಯಾಳ ತಹಶೀಲ್ದಾರ್ ಫಿರೋಜ್ ಷಾ ಸೋಮನಕಟ್ಟಿ ಮತ್ತು ಪಿಎಸ್‌ಐ ಬಸವರಾಜ ಮಬನೂರ ಅವರು ಮಂಗಳವಾರ ಬೆಳಗ್ಗೆ ಧಾರವಾಡ ರಸ್ತೆಯ ಬಿಕೆ ಹಳ್ಳಿ ಗ್ರಾಮ ವ್ಯಾಪ್ತಿಗೆ ಬರುವ ಶಿವಾಜಿ ಬಂಡಿವಡ್ಡರವರಿಗೆ ಸೇರಿದ ಕಲ್ಲು ಕ್ವಾರಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭದಲ್ಲಿ ಕ್ವಾರಿಯ ಮಾಲೀಕರು ಎಲ್ಲಾ ಅಧಿಕೃತ ದಾಖಲೆಗಳನ್ನು ಅಧಿಕಾರಿಗಳಿಗೆ ಸಲ್ಲಿಸಿ, ನಿಯಮದಂತೆ, ಸ್ಫೋಟಕ್ಕೆ ಸಂಬಂಧಿಸಿದಂತೆ ಅಧಿಕೃತ ಪರಿಣಿತರನ್ನೇ ಕರೆಯಿಸಿ ಕಾರ್ಯಾಚರಣೆ ಮಾಡಲಾಗಿದೆ. ಸ್ಫೋಟದ ಸಂದರ್ಭದಲ್ಲಿ ಪಾಲಿಸಬೇಕಾದ ಎಲ್ಲಾ ನಿಯಮಗಳನ್ನು ಪಾಲಿಸಲಾಗಿದೆ ಎಂದು ಸ್ಥಳದಲ್ಲಿದ್ದ ಕ್ವಾರಿ ನಡೆಸುತ್ತಿರುವ ಬಂಡಿವಡ್ಡರ ಕುಟುಂಬದ ಮಂಜುನಾಥ್ ಅವರು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಹರ್ಷಿಕಾ ಪೂಣಚ್ಚ ಅಭಿಪ್ರಾಯ

ಸ್ವಾತಂತ್ರ್ಯದ ಯಶೋಗಾಥೆ ಸಾರುವ ಕಾರ್ಯಕ್ರಮ

• **ಅಂಕೋಲಾ:** ಸ್ವಾತಂತ್ರ್ಯ ಹೋರಾಟದ ಯಶೋಗಾಥೆಯನ್ನು ಯುವ ಪೀಳಿಗೆಗೆ ಒಯ್ಯುವ ಮತ್ತು ಪ್ರೇರಣೆ ನೀಡುವ ಗಾಂವಕರ್ ಮೆಮೋರಿಯಲ್ ಫೌಂಡೇಶನ್‌ನ ಕಾರ್ಯಕ್ರಮಗಳು ನಾಡಿಗೆ ಮಾದರಿಯಾಗಿದೆ ಎಂದು ಖ್ಯಾತ ಚಲನಚಿತ್ರ ನಟಿ ಹರ್ಷಿಕಾ ಪೂಣಚ್ಚ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಪಟ್ಟಣದ ಸ್ವಾತಂತ್ರ್ಯ ಸಂಗ್ರಾಮ ಭವನದಲ್ಲಿ ಗಾಂವಕರ್ ಮೆಮೋರಿಯಲ್ ಫೌಂಡೇಶನ್ ಬಾಸಗೋಡ ಇವರು ಆಯೋಜಿಸಿದ ಉಪನ್ಯಾಸ ಹಾಗೂ ಯುವ ಪ್ರತಿಭಾ ಪುರಸ್ಕಾರ ಹಾಗೂ ಸಾಂಸ್ಕೃತಿಕ ವೈಭವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಹುಮುಖಿ ವ್ಯಕ್ತಿತ್ವದವರಾಗಿದ್ದ ಬೊಮ್ಮಯ್ಯ ನಾಯಕ ಹಾಗೂ ಪಾರ್ವತಿ ದಂಪತಿಗಳ ಅವಿಭಕ್ತ ಕುಟುಂದ ಆದರ್ಶ ಚಿಂತನೆಗಳನ್ನು ಯುವ ಜನಾಂಗ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಿದೆ. ನಾಡಿನ ಸಂಸ್ಕೃತಿ ಮತ್ತು ಮೌಲ್ಯ ಪ್ರತಿಬಿಂಬಿಸುವ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸುಯೋಗ ನನಗೆ ಒಲಿದು ಬಂದಿದೆ ಎಂದರು. ವೈದ್ಯ ಡಾ.ರಣಜಿತ ಬಿ. ನಾಯಕ, ಕೆಂಚನ್ ಉಪನ್ಯಾಸ ನೀಡಿದರು.ಹಿರಿಯ ಪತ್ರಕರ್ತ ಗಂಗಾಧರ ಹೀರೆಗುತ್ತಿ ಅಧ್ಯಕ್ಷತೆ ವಹಿಸಿದ್ದರು.

ಸನ್ಮಾನ: ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ತೋರಿದ ಸಾಯಿನಾಥ ಮಾನು ಧವನ ಜೊಯಿಡಾ, ಮಹಾತ್ಮಾ ಮಂಜುನಾಥ ಜೈನ ಕುಮಟಾ, ಶಮಿತಾ ರಾಜಶೇಖರ ನಾಯ್ಕ ಮುಂಡಗೋಡ, ಆತ್ರೇಯ ರವೀಶ ಗಾಂವಕರ ಯಲ್ಲಾಪುರ, ಸಾಯಿಶ್ರೀ ಅರುಣ ನಾಯ್ಕ ಕಾರವಾರ, ಯಶವಂತ ಸೈಮನ್ ದಿವಟೆ ಹೊನ್ನಾವರ, ಎನ್. ಅದಿತಿ ಅಂಕೋಲಾ, ನವನೀತ ನವೀನ ಕಾಮತ ದಾಂಡೇಲಿ, ಶಫೀಕಾ.ಎಂ.ಕಾಗದ ಹಳಿಯಾಳ ಕಲ್ಪನಾ ಮಾಸ್ತಿ ಮೊಗೇರ ಭಟ್ಕಳ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಗಾಂವಕರ ಮೆಮೋರಿಯಲ್ ಫೌಂಡೇಶನ್ ಅಧ್ಯಕ್ಷ ದೇವಾನಂದ ಗಾಂವಕರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯದರ್ಶಿ ಚಂದ್ರಶೇಖರ .ಟಿ.ನಾಯಕ ಮಾತನಾಡಿ, ಚರಿತ್ರೆಯಲ್ಲಿ ಅಮರಳಾದ ವಾಸರೆಯ ಮಾಣುದೇವಿ ನಾಯಕ ಅವರ ಕುರಿತು ವಿವರಿಸಿದರು. ಕವಯತ್ರಿ ಅಕ್ಷತಾಕೃಷ್ಣಮೂರ್ತಿ ಅವರು, ಸ್ವಾತಂತ್ರ್ಯ ಇತಿಹಾಸದ ಪುಟಗಳಲ್ಲಿ ದಾಖಲಾದ 'ಬಹುಮುಖಿ'ಯ ಪರಿಷ್ಕೃತ ಪುಸ್ತಕವನ್ನು ಪರಿಚಯಿಸಿದರು. ಖ್ಯಾತ ಗಾಯಕಿಯರಾದ ಮೀನಾಕ್ಷಿ ಪಾಟೀಲ್ ಹಾಗೂ ದೀಪ್ತಿ ಅರ್ಗೆಕರ್ ಅವರು ಗಾಯನ ಪ್ರಸ್ತುತ ಪಡಿಸಿದರು. ಪೃಥ್ವಿ ದೇವಾನಂದ ಗಾಂವಕರ ಬಾಸಗೋಡ ಹಾಗೂ ಪುನೀತ ಮಾರುತಿ ನಾಯ್ಕ ಹನುಮಟ್ಟಾ ಯಕ್ಷ ನೃತ್ಯ ಪ್ರದರ್ಶಿಸಿದರು. ರಾಜಶ್ರೀ ಚಂದ್ರಶೇಖರ ನಾಯಕ, ಗೋಪಾಲ ಆರ್. ನಾಯಕ ಪರಿಚಯಿಸಿದರು. ಮೇಧಶ್ರೀ ತಾಂಡೇಲ್ ಹಾಗೂ ರಾಹುಲ್ ದೊಡ್ಮನಿ ಸಂವಿಧಾನದ ಪೀಠಿಕೆಯನ್ನು ವಾಚಿಸಿದರು. ನಿರೂಪಕಿ ಮಾಧುರಿ ಮೋನಪ್ಪ ನಾಯಕ ಹಾಗೂ ಶಿಲ್ಪಾ ನಾಯ್ಕ ಕಾರವಾರ ಕಾರ್ಯಕ್ರಮ ನಿರೂಪಿಸಿದರು. ಅಕ್ಷಯ ಕುಮಾರ ಗಾಂವಕರ ವಂದಿಸಿದರು.



ತಾಂತ್ರಿಕ ದೋಷ: ಮನೆ ಗೋಡೆಗೆ ಗುದ್ದಿದ ಬಸ್

• **ಅಂಕೋಲಾ:** ತಾಲೂಕಿನ ಹಾರವಾಡದಲ್ಲಿ ಸಾರಿಗೆ ಸಂಸ್ಥೆಯ ಬಸ್‌ಗಳ ಆದ್ವಾನ ಮುಂದುವರಿದಿದ್ದು, ಪದೇ ಪದೇ ಕೆಟ್ಟು ನಿಲ್ಲುವ ಬಸ್‌ನ್ನು ಸಾರ್ವಜನಿಕರ ಒತ್ತಾಯದ ಮೇರೆಗೆ ಬಹುಕಾಲದ ನಂತರ ಬದಲಾಯಿಸಲಾಗಿದೆಯಾದರೂ

ಬೇರೆ ಬಸ್ ಬಂದಿದೆ ಎಂದು ಜನರು ಸಮಾಧಾನದ ನಿಟ್ಟುಸಿರು ಬಿಡುವಷ್ಟರಲ್ಲೇ ಬದಲಿ ಬಸ್ ಸಹ ರಿವರ್ಸ್ ತೆಗೆಯುವ ಸಂದರ್ಭದಲ್ಲಿ ತಾಂತ್ರಿಕ ದೋಷದಿಂದ ಹಿಮ್ಮುಖದಲ್ಲಿ ಬಂದು ದ್ವಿಚಕ್ರ ವಾಹನ ಮತ್ತು ಮನೆಯೊಂದರ ಗೋಡೆಗೆ ಗುದ್ದಿದ್ದು ಹಾನಿ ಸಂಭವಿಸಿದೆ.

ಹಾರವಾಡಕ್ಕೆ ಬರುವ ಬಸ್ ಸಾಕಷ್ಟು ಬಾರಿ ತಾಂತ್ರಿಕ ದೋಷಗಳಿಂದ ರಸ್ತೆ ಮಧ್ಯದಲ್ಲಿ ಕೆಟ್ಟು ನಿಂತು ಸಾರ್ವಜನಿಕರಿಗೆ ವಿದ್ಯಾರ್ಥಿಗಳಿಗೆ ಸಮಸ್ಯೆ ಆಗುತ್ತಿರುವ ಕುರಿತಂತೆ ಸ್ಥಳೀಯರಿಂದ ಸತತ ದೂರು ಕೇಳಿಬಂದಿತ್ತು.

ಸಮಸ್ಯೆಗೆ ಪರಿಹಾರ ಒದಗಿಸುವಂತೆ ಸ್ಥಳೀಯ ಗ್ರಾಪಂ, ತಾಲೂಕು ಆಡಳಿತ, ಸಾರಿಗೆ ಸಂಸ್ಥೆಯ ಸ್ಥಳೀಯ ಘಟಕಕ್ಕೆ ಸಹ ಹಾರವಾಡದ ಜನತೆ ಮನವಿ ಸಲ್ಲಿಸಿದ್ದರಾದರೂ ಸ್ಪಂದನೆ ದೊರಕಿರಲಿಲ್ಲ. ಒಮ್ಮೆ ಬಸ್‌ನ ಸ್ಟಿಯರಿಂಗ್ ಎಕ್ಸಲ್ ತುಂಡಾಗಿ ಬಸ್ ಪಕ್ಕದ ಹೊಲಕ್ಕಿಳಿಯುವಂತಾದರೆ ಹಲವಾರು ಬಾರಿ ಬೇರೆ ಬೇರೆ ತಾಂತ್ರಿಕ ಕಾರಣಗಳಿಂದ ರಸ್ತೆಯ ಮಧ್ಯ ನಿಲ್ಲುವಂತಾಗಿತ್ತು. ಈ ಬಸ್‌ಗೆ ಟೋಲ್ ಪಾಸ್ ಮಾಡಿರುವ ಕಾರಣ ಅದೇ ಬಸ್‌ನ್ನು ಮುಂದುವರಿಸುವ ಕುರಿತು ಸಾರಿಗೆ ಸಂಸ್ಥೆಯ ಅಧಿಕಾರಿಗಳು ಹೇಳಿರುವುದು ಹಲವರ ಅಸಮಾಧಾನಕ್ಕೆ ಕಾರಣವಾಗಿತ್ತು.ಹಲವಾರು ದಿನಗಳ ಒತ್ತಾಯದ ನಂತರ ಕೆಲವು ದಿನಗಳ ಹಿಂದೆ ಹಾರವಾಡಕ್ಕೆ ಬೇರೆ ಬಸ್‌ನ ವ್ಯವಸ್ಥೆ ಮಾಡಲಾಗಿತ್ತು.

ಆದರೆ ಸೋಮವಾರ ಸಂಜೆ ಹಾರವಾಡಕ್ಕೆ ಬಂದ ಬಸ್ ರಿವರ್ಸ್ ತೆಗೆದುಕೊಳ್ಳುವ ಸಂದರ್ಭದಲ್ಲಿ ಬ್ರೇಕ್ ತಾಂತ್ರಿಕ ಸಮಸ್ಯೆಯಿಂದ ನಿಯಂತ್ರಣಕ್ಕೆ ಬಾರದೇ ದ್ವಿಚಕ್ರ ವಾಹನಗಳಿಗೆ ಬಡಿದು, ಕಂಪೌಂಡ್ ಒಂದರ ಗೋಡೆಗೂ ಗುದ್ದಿದೆ.

ಕಾರವಾರ ಸುರಂಗ ಮಾರ್ಗ ಮತ್ತು ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಬಸ್‌ಗಳು ತಾಂತ್ರಿಕ ದೋಷಗಳಿಂದ ಕೆಟ್ಟು ನಿಲ್ಲುವ ಮೂಲಕ ಇತ್ತೀಚೆಗೆ ಸುದ್ದಿಯಾಗಿತ್ತು. ಗ್ರಾಮೀಣ ಪ್ರದೇಶಗಳಿಗೆ ತೀರಾ ಹಳೆಯದಾದ ಬಸ್ ಗಳನ್ನು ಬಿಡಲಾಗುತ್ತಿದೆ ತಾಂತ್ರಿಕ ದೋಷಗಳಿದ್ದರೂ ಅದನ್ನು ಸರಿಪಡಿಸದೇ ಬಸ್‌ಗಳನ್ನು ಓಡಿಸುವುದು ಜನರ ಪ್ರಾಣದ ಜೊತೆ ಆಟವಾಡಲಾಗುತ್ತಿದೆ ಎಂದು ಸ್ಥಳೀಯ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಜನಸಾಮಾನ್ಯರ ಪ್ರಶ್ನೆ?

ಗ್ರಾಮೀಣ ಪ್ರದೇಶಗಳಿಗೆ ತೆರಳುವ ಕೆಲವು ಬಸ್‌ಗಳು ವಿಪರೀತ ಹೊಗೆಯುಗುಳುವ ಮೂಲಕ ವಾತಾವರಣವನ್ನು ಕಲುಷಿತಗೊಳಿಸುತ್ತಿರುವುದನ್ನು ಕಾಣಬಹುದಾಗಿದೆ. ಈ ಬಸ್‌ಗಳ ಹಿಂದೆ ಹೋಗುವ ವಾಹನಗಳಿಗೆ ಏನೂ ಕಾಣದ ಹಾಗೆ ಹೊಗೆ ಉಗುಳುವ ಬಸ್‌ಗಳು ಬೆಳಂಬಾರ ಮತ್ತಿತರ ಗ್ರಾಮೀಣ ಪ್ರದೇಶಗಳಿಗೆ ಸಂಚರಿಸುತ್ತಿವೆ.ಸಾರಿಗೆ ಸಂಸ್ಥೆಯ ಬಸ್‌ಗಳ ಮಾಲಿನ್ಯ ಪರೀಕ್ಷೆ ನಡೆಯುವುದಿಲ್ಲವೇ? ಎನ್ನುವುದು ಜನಸಾಮಾನ್ಯರ ಪ್ರಶ್ನೆಯಾಗಿದೆ.

ಸುಧಾರಣೆಗೆ ಸೂಚನೆ

ಸಾರಿಗೆ ಸಂಸ್ಥೆಯ ಉತ್ತರ ಕನ್ನಡ ವಿಭಾಗ ನಷ್ಟದಿಂದ ಹೊರಬಂದು ಸುಮಾರು 16 ಕೋಟಿ ರೂ. ಲಾಭದಲ್ಲಿದೆ ಎಂದು ಶಾಸಕ ಸತೀಶ ಸೈಲ್ ಅವರು ಇತ್ತೀಚೆಗೆ ಅಂಕೋಲಾ ತಾಲೂಕಿನ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಿಳಿಸಿದ್ದು, ಬಸ್‌ಗಳ ಸಮಸ್ಯೆ ಕುರಿತಂತೆ ಅಂಕೋಲಾ ತಾಲೂಕಿನಿಂದ ಪ್ರತಿ ದಿನ ದೂರುಗಳು ಕೇಳಿ ಬರುತ್ತಿದ್ದು,ವ್ಯವಸ್ಥೆಯನ್ನು ಸುಧಾರಿಸುವಂತೆ ಸೂಚನೆ ನೀಡಿದ್ದರು.

ಕಿರುಸುದ್ದಿ

ಸ್ಥಿರತೆ ಕಾಯ್ದುಕೊಂಡ ಬ್ಯಾಡಗಿ ಮೆಣಸಿನಕಾಯಿ



ಬ್ಯಾಡಗಿ: ಪಟ್ಟಣದ ಅಂತಾರಾಷ್ಟ್ರೀಯ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸುಮಾರು ಒಂದೂವರೆ ಲಕ್ಷಕ್ಕೂ ಅಧಿಕ ಮೆಣಸಿನಕಾಯಿ ಚೀಲಗಳು ಆವಕ ಆಗಿದ್ದು ದರವು ಕಳೆದ ವಾರಕ್ಕೆ ಹೋಲಿಸಿದರೆ ಸ್ಥಿರವಾಗಿದೆ. ಬ್ಯಾಡಗಿ ಕಡ್ಡಿ ಮೆಣಸಿನಕಾಯಿ ಕಳೆದ ವಾರಕ್ಕೆ ಹೋಲಿಸಿದರೆ ದರದಲ್ಲಿ ಇಳಿಕೆ ಕಡಿಮೆ 4.309ರೂ. 100ಕೆ.ಜಿ. ಸರಾಸರಿ ದರ 100 ಕೆಜಿಗೆ 48.250ರೂ. ಅತಿ ಹೆಚ್ಚು 100 ಕೆ ಜಿ ಗೆ 61.899ರೂ.ಬ್ಯಾಡಗಿ ಡಬ್ಬಿ ಕಳೆದ ವಾರಕ್ಕೆ ಹೋಲಿಸಿದರೆ ಈ ವಾರ ಅತಿ ಹೆಚ್ಚು ದರ ಕಡಿಮೆ ಪ್ರತಿ 100 ಕೆಜಿಗೆ 5.269ರೂ. ಸರಾಸರಿ ದರ ಪ್ರತಿ 100 ಕೆಜಿಗೆ 51.389ರೂ. ಹೆಚ್ಚು ದರ ಪ್ರತಿ 100 ಕೆಜಿಗೆ 64.222.ರೂ.ಗುಂಟೂರು ಒಣಮೆಣಸಿಕಾಯಿ ಕಡಿಮೆ ಬಿಳಿಕಾಯಿ ದರ ಪ್ರತಿ 100 ಕೆಜಿಗೆ 1529 ರೂ. ಸರಾಸರಿ ದರ ಪ್ರತಿ 100 ಕೆಜಿಗೆ.14.009ರೂ. ಅತಿ ಹೆಚ್ಚು ದರ ಪ್ರತಿ 100 ಕೆಜಿಗೆ 18.009ರೂ.

ಸಾಕ್ಷ್ಯಚಿತ್ರ ನಿರ್ಮಾಣ ನಿರ್ದೇಶಕರಾಗಿ ಆಯ್ಕೆ



ಹಾವೇರಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ 2025-26ನೇ ಸಾಲಿನ ಸಾಕ್ಷ್ಯಚಿತ್ರ ನಿರ್ಮಾಣದ ನಿರ್ದೇಶಕಿಯಾಗಿ ಹಾವೇರಿ ನಗರದ ಪ್ರಿಯಾಂಕ ಎಸ್. ಕೊಪ್ಪದ ಆಯ್ಕೆಯಾಗಿದ್ದಾರೆ. ಎಸ್‌ಸಿಎಸ್‌ಪಿ, ಟಿಎಸ್‌ಪಿ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿರ್ದೇಶಕರಿಂದ ರಾಜ್ಯದ ಕಲೆ, ಸಂಸ್ಕೃತಿ, ಜನಪದ ಕಲೆ, ವಿಶಿಷ್ಟ ಸಾಧನೆ ಮಾಡಿದ ಪರಿಶಿಷ್ಟ ಜಾತಿ ವ್ಯಕ್ತಿಗಳು, ಸಾಧಕರು ಮತ್ತು ಎಸ್‌ಸಿ, ಎಸ್‌ಟಿ ಜನರಿಗಾಗಿ ಸರ್ಕಾರ ರೂಪಿಸಿರುವ ಅಭಿವೃದ್ಧಿ ಕಾರ್ಯಕ್ರಮಗಳ ಕುರಿತು ಸಾಕ್ಷ್ಯಚಿತ್ರ ನಿರ್ದೇಶಿಸಿ, ನಿರ್ಮಿಸಿ ಕೊಡಲು ಅರ್ಜಿ ಆಹ್ವಾನಿಸಲಾಗಿತ್ತು. ಇದರನ್ವಯ ಪರಿಣತ ತಾಂತ್ರಿಕ ಮೌಲ್ಯಮಾಪನ ಸಮಿತಿಯಲ್ಲಿ ಆಯ್ಕೆಯಾಗಿರುವ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಛಾಯಾ ಮತ್ತು ಚಲನಚಿತ್ರ ಶಾಖೆ ಜಂಟಿ ನಿರ್ದೇಶಕ ಮಂಜುನಾಥ ಡೊಳ್ಳಿನ ಕಾರ್ಯಾದೇಶ ನೀಡಿದ್ದಾರೆ.

ವಿವಿಧ ಜಯಂತಿಗಳ ಪೂರ್ವಭಾವಿ ಸಭೆ



ಹಾವೇರಿ: ಜಿಲ್ಲಾಡಳಿತದಿಂದ ದೇವರ ದಾಸಿಮಯ್ಯ, ಅಗ್ನಿಬನ್ನಿರಾಯ ಹಾಗೂ ಭಗವಾನ್ ಮಹಾವೀರ ಜಯಂತಿ ಕುರಿತು ಪೂರ್ವಭಾವಿ ಸಭೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾ.12ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕೋರ್ಟ್ ಹಾಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಪ್ರಶ್ನೆ ಪತ್ರಿಕೆ: ಸರ್ಕಾರಕ್ಕೆ ಮನವಿ



ಹಾವೇರಿ: ಡಿ.ಎಸ್.ಇ.ಆರ್,ಟಿ ವತಿಯಿಂದ ಮುಂಬರುವ 6ರಿಂದ 9ನೇ ತರಗತಿಗಳ ಎರಡನೇ ಸಂಕಲನಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆಗಳನ್ನು ಕೇವಲ ಸರ್ಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಲಾಗಿನ್‌ಗೆ ಮಾತ್ರ ಕಳಿಸಲು ನಿರ್ಧರಿಸಲಾಗಿದೆ. ಆದರೆ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ನೀಡಲಾಗುತ್ತಿಲ್ಲ. ಈ ತಾರತಮ್ಯ ನೀತಿಯನ್ನು ಖಂಡಿಸಿ, ಎಲ್ಲಾ ಶಾಲೆಗಳಿಗೂ ಪ್ರಶ್ನೆಪತ್ರಿಕೆಯನ್ನು ಕಳಿಸಲು ಕೋರಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ಜಿಲ್ಲಾ ಘಟಕದಿಂದ ಅಪರ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಈ ವೇಳೆ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಎಚ್.ಬೆಟ್ಟೆಳ್ಳೇರ, ಕಾರ್ಯದರ್ಶಿ ಎನ್.ಎನ್.ಕುಂದೂರ, ಎಂ.ಬಿ.ರಮೇಶ, ಎಂ.ಎಸ್. ಕೆಂಚನಗೌಡರ, ಡಿ.ಡಿ.ಲಂಗೋಟಿ, ಮಾಲತೇಶ ಚಲುವಾದಿ, ದೇವಗಪ್ಪನವರ, ಶೋಭಾ ಜಾಗಟಗೇರಿ, ಎನ್.ಎಂ.ಓಲೇಕಾರ, ಬಸವರಾಜ ಪಾಟೀಲ, ಎಸ್.ಸಿ. ಎಲಿ, ಸೂರಗೊಂಡರ, ರವಿ ವಿ. ಸಂಗಮೇಶ ಪರಡ್ಡಿ, ವಿ.ಎನ್. ಹಾವನೂರ, ಎಸ್.ಬಿ.ಚನ್ನೂರ, ಪೂಜಾರ ಮತ್ತಿತರರಿದ್ದರು.



ಹಾನಗಲ್ಲ: ಸ್ಥಳೀಯ ಪುರಸಭೆಯ ಹಲವು ವಾರ್ಡ್‌ಗಳಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ ಒಟ್ಟು 7.60 ಕೋಟಿರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು.

ಮೀಸಲಾತಿ ಜಾರಿಗೊಳಿಸಲು ಆಗ್ರಹ

ರಾಣೇಬೆನ್ನೂರ: ರಾಜ್ಯ ಸರ್ಕಾರ ಎಡಗೈ ದಲಿತ ಸಮಾಜದ ಅನುಕೂಲಕ್ಕಾಗಿ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಮಾದಿಗ ಮಹಾಸಭಾ ಹಾಗೂ ದಲಿತ ಸಂಘರ್ಷ ಸಮಿತಿ ತಾಲೂಕು ಘಟಕದಿಂದ ನಗರದ ಸಿದ್ದೇಶ್ವರ ವೃತ್ತದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು. ಸಿಎಂ ಸಿದ್ದರಾಮಯ್ಯ ಮಾ.15ರೊಳಗೆ ಒಳ ಮೀಸಲಾತಿ ಜಾರಿಗೊಳಿಸಬೇಕು. ಒಳಮೀಸಲಾತಿ ಜಾರಿಯಿಂದಾಗಿ ದಲಿತ ಎಡಗೈ ಸಮಾಜದ ಮಕ್ಕಳಿಗೆ ಉನ್ನತ ಹುದ್ದೆ, ವಿದ್ಯಾಭ್ಯಾಸ ಹಾಗೂ ಶಿಕ್ಷಣವಾಗಿ ಅನುಕೂಲವಾಗಲಿದೆ. ಅಲ್ಲದೆ ಸಮಾಜದವರು ರಾಜಕೀಯ, ಸಾಮಾಜಿಕ, ಶೈಕ್ಷಣಿಕವಾಗಿ ಬೆಳೆಯಲು ದಾರಿದೀಪವಾಗಲಿದೆ. ನಮ್ಮ ಸಮಾಜದವರು ಬಹಳಷ್ಟು ಹಿಂದುಳಿದಿದ್ದು, ಸಮಾಜದ ಮುಖ್ಯವಾಹಿನಿಗೆ ಬರಲು ಒಳ ಮೀಸಲಾತಿ ಜಾರಿ ಬಹಳ ಅವಶ್ಯವಿದೆ. ಒಳ ಮೀಸಲಾತಿ ಜಾರಿಗೊಳಿಸದಿದ್ದರೆ ಮುಂದಿನ ದಿನದಲ್ಲಿ ದಲಿತ ಸಮಾಜದ ಸಚಿವರನ್ನು ರಾಜೀನಾಮೆ ಕೊಡುವವರೆಗೂ ಬಿಡುವುದಿಲ್ಲ, ಸಮಾಜದಿಂದ ಮತದಾನ ಬಹಿಷ್ಕಾರ ಹಾಕುತ್ತೇವೆ ಎಂದು ಎಚ್ಚರಿಸಿದರು. ಸ್ಥಳಕ್ಕೆ ಬಂದ ಗ್ರೇಡ್2 ತಹಶೀಲ್ದಾರ್ ಅರುಣ ಕಾರಗಿ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ತಾಪಂ ಮಾಜಿ ಅಧ್ಯಕ್ಷ ನೀಲಕಂಠಪ್ಪ ಕೂಸಗೂರ, ಮೈಲಪ್ಪ ದಾಸಪ್ಪನವರ, ನಗರಸಭೆ ಮಾಜಿ ಸದಸ್ಯರಾದ ಪ್ರಕಾಶ ಪೂಜಾರ, ಪುಟ್ಟಪ್ಪ ಮರಿಯಮ್ಮನವರ, ಪ್ರಮುಖರಾದ ಮೈಲಪ್ಪ ಗೋಣಿಬಸಮ್ಮನವರ, ರು ಆಡೂರ, ಸಂಜೀವ ಮಶಿಯಪ್ಪನವರ, ಶಾಂತಪ್ಪ ಹಲವಾಗಿಲ, ಮಲ್ಲೇಶಪ್ಪ ಮೆಣಸಿನಹಾಳ, ದುಗ್ಗಪ್ಪ ಹುಣಸಿಕಟ್ಟೆ, ಲಕ್ಷ್ಮಣ ನಿಟ್ಟೂರ, ಮಂಜಪ್ಪ ಮೈದೂರ, ಹೊನ್ನಪ್ಪ ಮಾದರ, ರಮೇಶ ಕಾಸಪ್ಪನವರ ಪಾಲ್ಗೊಂಡಿದ್ದರು.



ರಾಣೇಬೆನ್ನೂರ: ರಾಜ್ಯ ಸರ್ಕಾರ ಎಡಗೈ ದಲಿತ ಸಮಾಜದ ಅನುಕೂಲಕ್ಕಾಗಿ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಮಾದಿಗ ಮಹಾಸಭಾ ಹಾಗೂ ದಲಿತ ಸಂಘರ್ಷ ಸಮಿತಿ ತಾಲೂಕು ಘಟಕದ ವತಿಯಿಂದ ನಗರದ ಸಿದ್ದೇಶ್ವರ ವೃತ್ತದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಎಸ್ಸೆಸ್ಸೆಲ್ಸಿ ಪರೀಕ್ಷೆ ಪೂರ್ವಭಾವಿ ಸಭೆ | ಡಿಸಿ ಡಾ.ವಿಜಯಮಹಾಂತೇಶ ಅಭಿಮತ

ಉತ್ತಮ ಫಲಿತಾಂಶದ ನಿರೀಕ್ಷೆ

ಹಾವೇರಿ: ಎಸ್ಸೆಸ್ಸೆಲ್ಸಿ ಪರೀಕ್ಷೆ-1ನ್ನು ಪಾರದರ್ಶಕ ಹಾಗೂ ನಕಲು ಮುಕ್ತವಾಗಿ ನಡೆಸಲು ಕಟ್ಟುನಿಟ್ಟಿನ ಕ್ರಮ ವಹಿಸಬೇಕು. ಈ ಬಾರಿ ಜಿಲ್ಲೆಯು ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿದೆ ಈ ನಿಟ್ಟಿನಲ್ಲಿ ಇಲಾಖೆಯು ಸಕಲ ತಯಾರಿ ಮಾಡಿಕೊಂಡಿದೆ ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ್ ದಾನಮ್ಮನವರ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಸೋಮವಾರ ಎಸ್ಸೆಸ್ಸೆಲ್ಸಿ ಪರೀಕ್ಷೆ-1ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಾ.18ರಿಂದ ಏ.2ರವರೆಗೆ ಜಿಲ್ಲೆಯ 471 ಪ್ರೌಢಶಾಲೆಗಳ ಒಟ್ಟು ಸುಮಾರು 23,361 ವಿದ್ಯಾರ್ಥಿಗಳು 81 ಕೇಂದ್ರಗಳಲ್ಲಿ ಪರೀಕ್ಷೆ ಬರೆಯಲಿದ್ದಾರೆ. ಅದರಲ್ಲಿ 21453 ರೆಗ್ಯುಲರ್ ಫ್ರೆಶ್, 534 ಪ್ರೈವೇಟ್ ಫ್ರೆಶ್ ಹಾಗೂ 1374 ರಿಪೀಟರ್ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಲಿದ್ದು, 10,200 ವಿದ್ಯಾರ್ಥಿಗಳು ಹಾಗೂ 11,253 ವಿದ್ಯಾರ್ಥಿನಿಯರು ಪರೀಕ್ಷೆ ಬರೆಯಲ್ಲಿದ್ದಾರೆ. ಪರೀಕ್ಷೆಯಲ್ಲಿ ಯಾವುದೇ ಅಕ್ರಮಗಳು ನಡೆಯದಂತೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಕುಡಿಯುವ ಶುದ್ಧ ನೀರು, ಕೊಠಡಿ ಸ್ವಚ್ಚತೆ, ಅಗತ್ಯ ಬೆಳಕಿನ ಸೌಲಭ್ಯ, ಸಿಸಿ ಟಿವಿ, ಉತ್ತಮ ಬೆಂಚ್ಚಿನ ವ್ಯವಸ್ಥೆ ಮಾಡಬೇಕು. ಇದರಲ್ಲಿ ಯಾವುದೇ ರಾಜಿ ಇಲ್ಲ ವಿದ್ಯಾರ್ಥಿಗಳ ಪರೀಕ್ಷೆಗೆ ಯಾವುದೇ ರೀತಿ ತೊಂದರೆ ಆಗಬಾರದು. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಪರೀಕ್ಷೆ ಕೇಂದ್ರಕ್ಕೆ ನಿಯೋಜನೆಗೊಂಡ ಎಲ್ಲ ಸಿಬ್ಬಂದಿಗಳಿಗೂ ಮೊಬೈಲ್ ಬಳಕೆ ನಿಷೇಧಿಸಲಾಗಿದೆ. ಈ ನಿಟ್ಟಿನಲ್ಲಿ ಶಿಸ್ತು ಕ್ರಮ ವಹಿಸಿ ಎಂದರು.



> **ಬೆಳಗಾವಿ ವಿಭಾಗದ 9 ಶೈಕ್ಷಣಿಕ ಜಿಲ್ಲೆಗಳಲ್ಲಿ 4 ಜಿಲ್ಲೆಗಳು ಕಳೆದ ಬಾರಿ ಶೇ.80ರಷ್ಟು ಫಲಿತಾಂಶ ತೋರಿದ್ದು, ಹಾವೇರಿ 5ನೇ ಸ್ಥಾನದಲ್ಲಿದೆ ಈ ಬಾರಿ ಫಲಿತಾಂಶ ಸುಧಾರಿಸಬೇಕು.**
> ■ **ಡಾ.ವಿಜಯಮಹಾಂತೇಶ ದಾನಮ್ಮನವರ, ಡಿಸಿ, ಹಾವೇರಿ**

ಪರೀಕ್ಷಾ ದಿನಗಳಂದು ಆಯಾ ಪರೀಕ್ಷಾ ಕೇಂದ್ರಗಳಿಗೆ ನಿಯೋಜಿಸಿರುವ ತಹಶೀಲ್ದಾರ್‌ರು, ತಾಪಂ ಇಒಗಳು ಹಾಗೂ ಖಜಾನೆ ಅಧಿಕಾರಿಗಳು ತಮಗೆ ವಹಿಸಿಕೊಟ್ಟ ವಿಶೇಷ ವಿಚಕ್ಷಣಾ ದಳದ ಕರ್ತವ್ಯಗಳನ್ನು ತಪ್ಪದೆ ನಿರ್ವಹಿಸಬೇಕು. ಪ್ರಶ್ನೆಪತ್ರಿಕೆಗಳನ್ನು ಪೊಲೀಸ್ ಬಿಗಿ ಬಂದೋಬಸ್ತನಲ್ಲಿ ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಬೇಕು. ಪ್ರಶ್ನೆ ಪತ್ರಿಕೆಗಳ ಸಾಗಾಟಕ್ಕೆ ಖಾಸಗಿ ವಾಹನಗಳ ಬಳಕೆ ಮಾಡಬಾರದು. ಸರ್ಕಾರಿ ವಾಹನಗಳನ್ನು ಮಾತ್ರ ಬಳಕೆ ಮಾಡಬೇಕು ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ಅನಗತ್ಯ ಗೊಂದಲಗಳಿಗೆ ಅವಕಾಶ ಮಾಡಿಕೊಡಬೇಡಿ ಎಂದರು.

ಪರೀಕ್ಷಾ ದಿನಗಳಂದು ಹೆಸ್ಕಾಂ ಇಲಾಖೆಯು ವಿದ್ಯುತ್ ವ್ಯತ್ಯಯವಾಗದಂತೆ ಅಗತ್ಯ

▸▸ ಸಾರಿಗೆ ವ್ಯವಸ್ಥೆ, ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಿ

ಕ್ರಮಗಳನ್ನು ತೆಗೆದುಕೊಳ್ಳಬೇಕು. ಪರೀಕ್ಷಾ ಕೊಠಡಿ ಮುಖ್ಯ ಅಧೀಕ್ಷಕರು, ಪ್ರಶ್ನೆ ಪತ್ರಿಕೆ ಪಾಲಕರು, ಸ್ಥಾನಿಕ ಜಾಗೃತ ದಳ ಹಾಗೂ ಮೊಬೈಲ್ ಸ್ವಾದೀನ ದಳಗಳ ಅಧಿಕಾರಿಗಳು ತಮಗೆ ವಹಿಸಿದ ಕರ್ತವ್ಯಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕು. ಪರೀಕ್ಷಾ ಕೊಠಡಿಗಳಲ್ಲಿ ಸಿಸಿ ಕ್ಯಾಮೆರಾ ಸಮರ್ಪಕವಾಗಿ ಕಾರ್ಯನಿರ್ವಹಿಸುವ ಕುರಿತು ನಿಗಾವಹಿಸಿ, ವಿದ್ಯುತ್ ತೊಂದರೆಯಾಗದ ರೀತಿ ಜನರೇಟರ್ ಇಲ್ಲವೆ ಯುಪಿಎಸ್ ವ್ಯವಸ್ಥೆ ಮಾಡಿಕೊಳ್ಳಬೇಕು. ಪರೀಕ್ಷಾ ಕೊಠಡಿಯ ಹೊರಗಡೆಯ 200ಮೀ ಅಳತೆಯಲ್ಲಿ ನಿಷೇಧಾಜ್ಞೆ ಜಾರಿಯಿದ್ದು, ಅದಕ್ಕೆ ಅವಶ್ಯಕವಾದ ಪೊಲೀಸ್ ಸಿಬ್ಬಂದಿ ನಿಯೋಜಿಸಲು ಪೊಲೀಸ್ ಇಲಾಖೆ ಸಕಲ ತಯಾರಿ ಮಾಡಿಕೊಂಡಿದೆ ಎಂದರು.

ಸಭೆಯಲ್ಲಿ ಜಿಪಂ ಸಿಇಒ ರುಚಿ ಬಿಂದಲ್, ಎಸ್ಪಿ ಯಶೋಧ ವಂಟಗೋಡಿ, ಎಡಿಸಿ ಡಾ.ಎಲ್ ನಾಗರಾಜ್, ಎಎಸ್ಪಿ ಲಕ್ಷ್ಮಣ ಶಿರಕೋಳ, ಡಿಡಿಪಿಐ ಮೋಹನ ದಂಡಿನ, ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

ಸರ್ಕಾರಿ ಉಗ್ರಾಣ ನಿರ್ಮಾಣಕ್ಕೆ ಒತ್ತಾಯ

ಹಾವೇರಿ: ಕೃಷಿ ಪ್ರಧಾನವಾದ ಹಾವೇರಿ ಜಿಲ್ಲೆಯಲ್ಲಿ ಮೆಕ್ಕೆಜೋಳ ಸೇರಿದಂತೆ ಇತರೆ ಬೆಳೆಗಳನ್ನು ರೈತರು ಸಂರಕ್ಷಣೆ ಮಾಡಿಟ್ಟುಕೊಳ್ಳಲು ರಾಜ್ಯ ಸರ್ಕಾರ ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ಸರ್ಕಾರಿ ಉಗ್ರಾಣಗಳನ್ನು ನಿರ್ಮಿಸಬೇಕೆಂದು ಉತ್ತರ ಕರ್ನಾಟಕ ರೈತ ಸಂಘದ ರಾಜ್ಯಾಧ್ಯಕ್ಷ ಬಸವರಾಜ ಕರಿಗಾರ ಒತ್ತಾಯಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಅತೀ ಹೆಚ್ಚು ಮೆಕ್ಕೆಜೋಳ ಬೆಳೆಯನ್ನು ಬೆಳೆಯಲಾಗುತ್ತಿದೆ. ರೈತರಿಗೆ ಯೋಗ್ಯ ಬೆಲೆ ಸಿಗದೆ ಒದ್ದಾಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಜತೆಗೆ ಹಾವೇರಿ ಜಿಲ್ಲೆಯ 80 ಸಾವಿರ ಬಗರಹುಕುಂ ಹಾಗೂ ಭೂ ಸಾಗುವಳಿದಾರರು ಇದ್ದು, ಕೇವಲ ಬೆರಳಣಿಕೆಯಷ್ಟು ಮಾತ್ರ ಹಕ್ಕುಪತ್ರ ನೀಡ ಲಾಗಿದೆ. ಉಳಿದವರಿಗೆ ಇನ್ನೂ ಹಕ್ಕುಪತ್ರ ಕೊಟ್ಟಿಲ್ಲ, ತಮ್ಮ ಪೂರ್ವಜರ ಕಾಲದಿಂದಲೂ ಜಮೀನು ಉಳುಮೆ ಮಾಡಿಕೊಂಡು ಬಂದಿದ್ದರೂ ಗ್ರಾಮ ಆಡಳಿತಾಧಿಕಾರಿಗಳು, ಕಂದಾಯ ಅಧಿಕಾರಿಗಳ ಎಡವಟ್ಟಿನಿಂದ ಇನ್ನೂ ಸರ್ಕಾರಿ ಪಡಾ, ಗೋಮಾಳ ಎಂದೇ ನಮೂದಿವೆ. ಇಲಾಖೆಯ 25 ಮಾನದಂಡಗಳನ್ನು ಸಡಿಲಗೊಳಿಸಿ, ಭೂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕೆಂದು ಆಗ್ರಹಿಸಿದರು.

ಜಿಲ್ಲೆಯಲ್ಲಿ ಪ್ರತಿ ತಾಲೂಕು ಮಟ್ಟದಲ್ಲಿ ಭೂಮಿಯ ಸರ್ವೇ ಮಾಡಲಿಕ್ಕೆ ಜಿಪಿಎಸ್ ಮಾಪನವನ್ನು ಸರ್ಕಾರವೇ ಒದಗಿಸಬೇಕು. ಇಲ್ಲದಿದ್ದಲ್ಲಿ ಬಾಡಿಗೆ ರೂಪದಲ್ಲಿ ತೆಗೆದುಕೊಂಡು ರೈತರಿಗೆ 12,000 ರೂ.ನಿಂದ 15 ಸಾವಿರ ರೂ.ಗಳವರೆಗೆ ವಸೂಲಿ ಮಾಡುತ್ತಿದ್ದಾರೆ. ಸರ್ಕಾರದಿಂದಲೇ ಭೂಮಿ ಸರ್ವೇ



> **ಐತಿಹಾಸಿಕ ಹೆಗ್ಗೇರಿಕೆರೆ, ರಾಜಕಾಲುವೆ, ಉಪ ಕಾಲುವೆಗಳು ಒತ್ತುವರಿಯಾಗಿದ್ದು, ಜಿಲ್ಲಾಡಳಿತ ಹಾಗೂ ತಾಲೂಕಾಡಳಿತದ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಒತ್ತುವರಿ ತೆರವುಗೊಳಿಸಬೇಕು. ಹೆಗ್ಗೇರಿಕೆರೆ ಕೋಡಿ ಬಿದ್ದಾಗ ಕೆರೆನೀರು ಸರಾಗವಾಗಿ ಹರಿದು ವರದಾ ನದಿ ತಲುಪಬೇಕು. ಕಾಗಿನೆಲೆ ರಸ್ತೆ, ಕೆರಿಮತ್ತಿಹಳ್ಳಿ ರಸ್ತೆ, ಹೆಗ್ಗೇರಿಕೆರೆ ರಸ್ತೆ ಅಂಡರ್‌ಬ್ರಿಡ್ಜ್‌ಗಳು ಅಪಘಾತ ವಲಯವಾಗಿವೆ. ಹಮ್ಸ್ ಅಥವಾ ಸೂಚನಾ ಫಲಕ ಅಳವಡಿಸಬೇಕು.**
> ■ **ಫಕ್ಕೀರಗೌಡ ಗಾಜೀಗೌಡ್ರ, ಜಿಲ್ಲಾಧ್ಯಕ್ಷ, ಭೂಮಿ ಪುತ್ರ ರೈತ ಸಂಘಟನೆ**

ಮಾಡಿಸಿ ಕೊಡಬೇಕು. ಮುಂಬರುವ ಗ್ರಾಪಂ, ತಾಪಂ, ಜಿಪಂ ಚುನಾವಣೆಗಳಲ್ಲಿ ಉತ್ತರ ಕರ್ನಾಟಕ ರೈತ ಸಂಘ ವಿವಿಧ ರೈತ ಸಂಘಗಳನ್ನು ವಿಲೀನ ಮಾಡಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದರು.

ಫಕ್ಕೀರೇಶ ಕಾಳಿ, ಫಕ್ಕೀರೇಶ ಹುರಳಿಕುಪ್ಪಿ, ನೀಲಪ್ಪ ಹುಲಗಮ್ಮನವರ, ಫಕ್ಕೀರಪ್ಪ ವಡೆಯನಪುರ, ಶಿವಾನಂದಪ್ಪ ಮತ್ತಿಹಳ್ಳಿ, ಮಂಜುನಾತ ಹಿರೇಮಠ, ಸೈಫುಲ್‌ಸಾಬ ಕಮಗಾಲ, ಸಂಗಮೇಶ ನಾಗನೂರ, ಪ್ರಕಾಶ ಬಳಿಗಾರ, ಮಂಜಪ್ಪ ಯಲಿಗಾರ, ನಿಂಗಪ್ಪ ವಾಲೀಕಾರ, ಲಕ್ಷ್ಮಣ ಕಿಳ್ಳಿಕ್ಯಾತರ ಇದ್ದರು.

ಆಟೋ ಗ್ಯಾಸ್ ದರ ಹೆಚ್ಚಳ: ಚಾಲಕರ ಪರದಾಟ

ಹಾವೇರಿ: ಇರಾನ್-ಇಸ್ರೇಲ್, ಅಮೆರಿಕದ ನಡುವೆ ಯುದ್ಧದ ತೀವ್ರತೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬೆನ್ನಲ್ಲೇ ಅದರ ಪರಿಣಾಮಗಳು ದೇಶದ ಜನಸಾಮಾನ್ಯರ ಮೇಲೆ ತಟ್ಟುತ್ತಿದೆ. ಜಿಲ್ಲೆಯಲ್ಲಿ ವಾಣಿಜ್ಯ ಸಿಲಿಂಡರ್ ಹಾಗೂ ಆಟೋ ಗ್ಯಾಸ್ ಕೊರತೆ ಎದುರಾಗಿದ್ದು, ಗ್ಯಾಸ್ ದರ ದಿಢೀರ್ ಹೆಚ್ಚಳವಾಗಿದ್ದು, ಆಟೋ ಚಾಲಕರು ಪರದಾಡುವಂತಾಗಿದೆ.

ನಗರದ ಹಾನಗಲ್ಲ ರಸ್ತೆಯಲ್ಲಿರುವ ಗೋ ಗ್ಯಾಸ್ ಬಂಕ್‌ನಲ್ಲಿ ಸಮರ್ಪಕವಾಗಿ ಗ್ಯಾಸ್ ಪೂರೈಕೆಯಾಗದ ಪರಿಣಾಮದ ಗ್ಯಾಸ್ ವ್ಯತ್ಯಯದ ಬ್ಯಾನರ್ ಹಾಕಲಾಗಿದೆ. ಇರಾನ್-ಇಸ್ರೇಲ್ ಯುದ್ಧದ ಹಿನ್ನೆಲೆ ಆಟೋ ಚಾಲಕರಿಗೆ ಗ್ಯಾಸ್ ಕೊರತೆ ಸಾಧ್ಯತೆ ಇದ್ದು, ಸಹಕರಿಸಬೇಕು ಎನ್ನುವ ಬ್ಯಾನರ್ ಅಳವಡಿಸಿದ್ದರಿಂದ ಆಟೋ ಚಾಲಕರು ಸಮಸ್ಯೆ ಎದುರಿಸುವಂತಾಗಿದೆ.

ಕಳೆದ 15 ದಿನಗಳ ಹಿಂದೆ ಕೆಜಿ ಗ್ಯಾಸ್ ಬೆಲೆ 50ರೂ., ಇತ್ತು. ಈಗ ಕೆಜಿಗೆ ಗ್ಯಾಸ್‌ಗೆ 70ರೂ., ಆಗಿದೆ. ಆಟೋ ಓಡಿಸಿಕೊಂಡು ದುಡಿಮೆ ಮಾಡಿಕೊಂಡು ಜೀವನ ಮಾಡುವ ಆಟೋ ಚಾಲಕರ ಹೇಗೆ ಜೀವನ ಮಾಡೋದು ಹೇಗೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರ ಮಧ್ಯಸ್ಥಿಕೆ ವಹಿಸಿ ಗ್ಯಾಸ್ ಬೆಲೆ ಕಡಿಮೆ ಮಾಡಬೇಕು. ಪ್ರಯಾಣಿಕರಿಗೆ 10ರೂ., ಹೆಚ್ಚಿಗೆ ಹಣ ಕೇಳಿದರೆ ಜಗಳ ಮಾಡುತ್ತಾರೆ ಎಂದು ಆಟೋ ಚಾಲಕ ಮಹದೇವಪ್ಪ ಸಂಕಷ್ಟ ತೋಡಿಕೊಂಡರು.

ಹೋಟೆಲ್ ಉದ್ಯಮಕ್ಕೂ ತಟ್ಟಿದ ಬಿಸಿ: ಇರಾನ್-ಇಸ್ರೇಲ್, ಅಮೆರಿಕದ ನಡುವೆ ನಡೆಯುತ್ತಿರುವ ಯುದ್ಧದ ಬಿಸಿ ಭಾರತಕ್ಕೂ ತಟ್ಟುತ್ತಿದ್ದು, ಗೃಹ ಬಳಕೆ ಸಿಲೆಂಡರ್ 60ರೂ., ಏರಿಕೆ ಆಗುವ ಮೂಲಕ ಜನಸಾಮಾನ್ಯರ ಜೇಬಿಕೆ ಕತ್ತರಿ ಹಾಕಿದೆ. ಯುದ್ಧದ ಬಿಕ್ಕಟ್ಟಿನಿಂದಾಗಿ ಜಿಲ್ಲೆಯಲ್ಲಿ ಸಹ ಅನಿಲ ಪೂರೈಕೆ ಸ್ಥಗಿತದ ಆತಂಕ ಎದುರಾಗಿದೆ. ಗೃಹ ಬಳಕೆ ಸಿಲಿಂಡರ್ ಪಡೆಯಲು ಬುಕ್ಕಿಂಗ್‌ಗೆ ಹೆಚ್ಚು ಸಮಯ ಕಾಯುವಂತ ಅನಿವಾರ್ಯತೆ ಎದುರಿಸುವಂತಾಗಿದೆ.

ಇದರ ಜೊತೆಗೆ ವಾಣಿಜ್ಯ ಬಳಕೆ ಅನಿಲಕ್ಕೂ ಕೊರತೆ ಎದುರಾಗಿದ್ದು, ಇದರ ಬಿಸಿ ಹೋಟೆಲ್ ಉದ್ಯಮಕ್ಕೂ ತಟ್ಟುತ್ತಿದೆ. ಇದರಿಂದಾಗಿ ಹೋಟೆಲ್ ಉದ್ಯಮವನ್ನೇ ನಂಬಿಕೊಂಡು ಬದುಕು ಸಾಗಿಸುತ್ತಿರುವ ಅದೆಷ್ಟೋ ಜನರ ಬದುಕು ಈಗ ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಈ ಕೂಡಲೇ ರಾಜ್ಯ ಸರ್ಕಾರ ಗಮನ ಹರಿಸಿ ವಾಣಿಜ್ಯ ಸಿಲಿಂಡರ್ ಅಭಾವ ಸರಿಪಡಿಸಲು ಕ್ರಮಕೈಗೊಳ್ಳಬೇಕು ಎಂದು ಹೋಟೆಲ್ ಮಾಲೀಕರು ಮನವಿ ಮಾಡಿದ್ದರು.



ಸಭಾ ಭವನ ನಿರ್ಮಾಣಕ್ಕೆ ಅನುದಾನ: ಶಾಸಕ ಪಠಾಣ್

ಶಿಗ್ಗಾವಿ: ಹಡಪದ ಸಮಾಜ ಸೇರಿದಂತೆ ತಳ ಸಮುದಾಯಗಳಿಗೆ ಮುಂದಿನ ದಿನಗಳಲ್ಲಿ ನಿವೇಶನ ನೀಡಿ ಸಭಾ ಭವನ ನಿರ್ಮಾಣಕ್ಕೆ ಅನುದಾನ ನೀಡಲಾಗುವುದು ಎಂದು ಶಾಸಕ ಯಾಸೀರ್ ಅಹ್ಮದ್ ಖಾನ್ ಪಠಾಣ್ ಭರವಸೆ ನೀಡಿದರು.

ಪಟ್ಟಣದ ಅಂಬೇಡ್ಕರ್ ನಗರದ ಅಂಬೇಡ್ಕರ್ ಸಭಾಭವನದಲ್ಲಿ ಹಡಪದ ಸಮಾಜದ ವತಿಯಿಂದ ಹಮ್ಮಿಕೊಂಡ ವಲಯ ಮಟ್ಟದ ಸಮಾವೇಶ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ತಳ ಸಮುದಾಯದ ಏಳಿಗೆಗೆ ಪಣ ತೊಟ್ಟಿದ್ದೇನೆ, ಅವರ ಬೇಡಿಕೆಗಳನ್ನ ಈಡೇರಿಸಲಾಗುವುದು ಎಂದರು.



ಸಾನಿದ್ಯ ವಹಿಸಿ ಆಶೀರ್ವಚನ ನೀಡಿದ ಶಿಗ್ಗಾವಿ ವಿರಕ್ತಮಠದ ಸಂಗನಬಸವ ಶ್ರೀಗಳು ಕಾಯಕ ನಿಷ್ಠೆಯ ಸಮಾಜ ಹಡಪದ ಸಮಾಜವಾಗಿದೆ ಎಂದರು.

ಹಡಪದ ಸಮಾಜದ ರಾಜ್ಯ ಮಾಧ್ಯಮ ಪ್ರತಿನಿಧಿ ಮಲ್ಲಿಕಾರ್ಜುನ ಹಡಪದ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸಕರನ್ನು ಸನ್ಮಾನಿಸಲಾಯಿತು. ತಾಲೂಕಾ ನೂತನ ಹಡಪದ ಸಮಾಜದ ಅಧ್ಯಕ್ಷ ಮಂಜುನಾಥ ಕ್ಷೌರದ, ತಾಲೂಕ ಗ್ಯಾರಂಟಿ ಸಮಿತಿಯ ಅಧ್ಯಕ್ಷ ಶೇಕಪ್ಪ ಮಣಕಟ್ಟಿ, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗುಡ್ಡಪ್ಪ ಜಲದಿ, ಗುತ್ತಿಗೆದಾರ ಮಂಜುನಾಥ ತಿಮ್ಮಾಪೂರ, ಗೌಸಖಾನ್ ಮುನಶಿ, ಶಂಬು ನೆರ್ತಿ, ಸಮಾಜದ ಗೌರವಾಧ್ಯಕ್ಷ ಗುರುಬಸಪ್ಪ ಹಡಪದ, ಕಾರ್ಯಾಧ್ಯಕ್ಷ ಕೋಟೆಪ್ಪ ಹಡಪದ, ಸಮಾಜದ ಮಾಜಿ ಉಪಾಧ್ಯಕ್ಷ ಮುತ್ತಪ್ಪ ಕ್ಷೌರದ, ಹಡಪದ ಅಪ್ಪಣ್ಣ ಕ್ರೆಡಿಟ್ ಕೋ ಆಪ್ ಸೊಸೈಟಿ ಅಧ್ಯಕ್ಷ ಮಹಾಲಿಂಗಪ್ಪ ಹಡಪದ ಇದ್ದರು. ಮಾಜಿ ಅಧ್ಯಕ್ಷ ಬಸವರಾಜ ಹಡಪದ ಸ್ವಾಗತಿಸಿದರು. ಖಜಾಂಚಿ ಅಶೋಕ ಹಂಪಣ್ಣವರ ನಿರೂಪಿಸಿದರು.

ಸಮರ್ಪಕ ವಿದ್ಯುತ್ ಪೂರೈಸಲು ಒತ್ತಾಯಿಸಿ ರೈತರ ಮನವಿ

ಬ್ಯಾಡಗಿ: ತಾಲೂಕಿನ ಶಿಡೇನೂರು ಕೊಲ್ಲಾಪುರ ಆಣೂರು ಮಾಸಣಗಿ ಕೆರವಡಿ ಚಿಕ್ಕಣಜಿ ಹಿರೇ ನಂದಿಹಳ್ಳಿ ಗುಂಗರುಕೊಪ್ಪ ಗ್ರಾಮಗಳ ರೈತರ ಬೆಳೆಗಳಿಗೆ ನೀರು ಪೂರೈಸಲು ಪಂಪ್‌ಸೆಟ್‌ಗೆ ಕಳೆದ 15ರಿಂದ 20 ದಿನಗಳಲ್ಲಿ ಸಮರ್ಪಕವಾಗಿ ತ್ರಿಫೇಸ್ ವಿದ್ಯುತ್ ನೀಡುತ್ತಿಲ್ಲ ಆದ್ದರಿಂದ ರೈತರು ಸಂಕಷ್ಟಕ್ಕೆ ಸಿಲ್ಕಿದ್ದಾರೆ. ಕೂಡಲೇ ಸಮರ್ಪಕವಾಗಿ ವಿದ್ಯುತ್ ನೀಡುವಂತೆ ಆಗ್ರಹಿಸಿ ರೈತ ಮುಖಂಡ ಕಿರಣ ಗಡಿಗೋಳ ಒತ್ತಾಯಿಸಿದರು.



ಪಟ್ಟಣದ ವಿದ್ಯುತ್ ಪ್ರಸರಣ ಕೇಂದ್ರದ ಸಹಾಯಕ ಅಭಿಯಂತರರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು ರೈತರಿಗೆ ಸರಿಯಾಗಿ ವಿದ್ಯುತ್ ಸಂಪರ್ಕ ನೀಡುತ್ತಿಲ್ಲ ಬೆಳಗ್ಗೆ ನಾಲ್ಕು ಗಂಟೆ ರಾತ್ರಿ ಮೂರು ಗಂಟೆ ವಿದ್ಯುತ್ ನೀಡುತ್ತಿದ್ದೀರಿ. ರೈತರು ಇದರಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ ಸಮರ್ಪಕ ತ್ರೀಪೇಸ್ ವಿದ್ಯುತ್ ನೀಡುತ್ತಿಲ್ಲ, ಸರಿಯಾಗಿ ವಿದ್ಯುತ್ ಪೂರೈಕೆ ಮಾಡದ ಕಾರಣ ರೈತರು ಅತಂತ್ರ ಪರಿಸ್ಥಿತಿಯಲ್ಲಿದ್ದು, ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ ಸರಿಯಾಗಿ ವಿದ್ಯುತ್ ನೀಡದಿದ್ದಲ್ಲಿ ಆಗುವ ನಷ್ಟವನ್ನು ನಿಮ್ಮ ಇಲಾಖೆಯವರು ತುಂಬಿಕೊಂಡು ಬೇಕಾಗುತ್ತದೆ.

ಎರಡು ದಿನಗಳಲ್ಲಿ ನಮ್ಮ ಸಮಸ್ಯೆಯನ್ನು ಸರಿಪಡಿಸಿ ಸಮರ್ಪಕವಾಗಿ ವಿದ್ಯುತ್ ನೀಡಬೇಕು ಇಲ್ಲವಾದರೆ ಕಚೇರಿ ಬಳಿ ಹೋರಾಟ ಮಾಡಲಾಗುವುದು ಎಂದು ಹೇಳಿದರು.

ರೈತರುಗಳಾದ ಮಲ್ಲಪ್ಪ ಅರಳಿಕಟ್ಟಿ, ಬಸವರಾಜ ಆಲರಕಟ್ಟಿ, ರೇವಣೇಶ್ ಗಾಣಿಗೇರ್, ಲಿಂಗರಾಜು ದೊಡ್ಮನಿ, ಶಿವಕುಮಾರ್ ಗಡಿಗೋಳ, ಚಂದ್ರಪ್ಪ ದೇಸಾಯಿ, ನಿಂಗಪ್ಪ ಯಳಗೇರ, ಮಹೇಶ್ ಕನಕಾಪುರ, ಹನುಮಂತಪ್ಪ ಮಳಿಗೇರ, ಬಸವರಾಜ್ ಹುಲ್ಲತ್ತಿ, ಪ್ರಭು ಬಿದರಿ ಹಾಗೂ ಇನ್ನೂ ಅನೇಕ ರೈತರು ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯ



ಹಾನಗಲ್ಲ: ಖಾಲಿ ಹುದ್ದೆಗಳ ಭರ್ತಿ ಸೇರಿದಂತೆ ಹಲವು ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಲು ಸರ್ಕಾರದ ಗಮನ ಸೆಳೆಯುವಂತೆ ಆಗ್ರಹಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಶಾಸಕ ಶ್ರೀನಿವಾಸ ಮಾನೆ ಅವರಿಗೆ ಮನವಿ ಸಲ್ಲಿಸಿದರು. ಇಲಾಖೆಯಲ್ಲಿ ಖಾಲಿ ಹುದ್ದೆಗಳ ಭರ್ತಿಯಾಗದೇ ಇರುವುದರಿಂದ ಆರೋಗ್ಯ ಸೇವೆ ದೊರಕಿಸುವುದು ಸವಾಲಿನಿಂದಕೂಡಿದೆ. ಹಾಗಾಗಿ ಹುದ್ದೆಗಳ ಭರ್ತಿಯಾಗಬೇಕು. ಎಲ್ಲ ಆಸ್ಪತ್ರೆಗಳಿಗೆ ಸಮರ್ಪಕವಾಗಿ ಔಷಧಿಗಳು ಪೂರೈಕೆಯಾಗಬೇಕು. ವೃಂದ ಮತ್ತು ನೇಮಕಾತಿ ತಿದ್ದುಪಡಿಯಾಗಬೇಕು. ಎಲ್ಲ ವೃಂದಗಳ ಜೇಷ್ಠತಾ ಪಟ್ಟಿ ಕಾಲಕಾಲಕ್ಕೆ ಪ್ರಕಟಿಸಬೇಕು. ಅಧಿಕಾರಿಗಳು ಮತ್ತು ನೌಕರರಿಗೆ ಮುಂಬಡ್ತಿ ನೀಡಬೇಕು. ಸೇವಾನಿರತ ವೈದ್ಯರು, ಅಧಿಕಾರಿಗಳು, ನೌಕರರ ಉನ್ನತ ವ್ಯಾಸಾಂಗಕ್ಕೆ ಅವಕಾಶ ಒದಗಿಸಬೇಕು. ವರ್ಗಾವಣೆಯಲ್ಲಿನ ನ್ಯೂನ್ಯತೆ ಸರಿಪಡಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮನವಿಯಲ್ಲಿ ವಿವರಿಸಲಾಗಿದೆ. ಮನವಿಗೆ ಸ್ಪಂದಿಸಿದ ಶಾಸಕ ಮಾನೆ ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆಯುವ ಭರವಸೆ ನೀಡಿದರು.ತಾಲೂಕಾ ಆರೋಗ್ಯಾಧಿಕಾರಿ ಡಾ.ಲಿಂಗರಾಜ್ ಕೆ.ಜಿ., ಕರ್ನಾಟಕ ರಾಜ್ಯ ನೌಕರರ ಸಂಘದ ತಾಲೂಕಾಧ್ಯಕ್ಷ ಗುರುನಾಥ ಗವಾಣಿಕರ, ಆಡಳಿತ ವೈದ್ಯಾಧಿಕಾರಿಗಳಾದ ಡಾ.ಅಖಿಲೇಷ ಮಾಳೋದೆ, ಡಾ.ಗಗನ ಮಾಳೋದೆ, ಬಸವರಾಜ್ ದಿಡಗೂರ, ಡಾ.ಶಿವಕುಮಾರ ಶಿವೂರ, ಗೋಪಿಕೃಷ್ಣ ನಾಯ್ಕರ, ಪ್ರಕಾಶ ನಾಗರಹಳ್ಳಿ, ಜ್ಯೋತಿ ಸೇರಿದಂತೆ ನೌಕರರ ಸಂಘದ ಪದಾಧಿಕಾರಿಗಳು, ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಇದ್ದರು.

ಎನ್‌ಎಸ್‌ಎಸ್‌ನಿಂದ ಸೇವಾ ಭಾವನೆ ವೃದ್ಧಿ

ರಾಣೇಬೆನ್ನೂರ: ಶ್ರಮದಾನ ಎಂದರೆ ನಮ್ಮ ಶ್ರಮವನ್ನು, ಸಮಯವನ್ನು ಮತ್ತು ಶಕ್ತಿಯನ್ನು ಸ್ವಾರ್ಥವಿಲ್ಲದೆ ಸಮಾಜದ ಒಳ್ಳೆಯದಕ್ಕೆ ಮಾಡುವದನ್ನು ಎನ್‌ಎಸ್‌ಎಸ್ ಶಿಬಿರವು ಕಲಿಸುತ್ತದೆ ಎಂದು ಉಪನ್ಯಾಸಕ ಹೆಚ್.ಶಿವಾನಂದ ಹೇಳಿದರು. ತಾಲೂಕಿನ ಜೋಯಿಸರಹರಳಹಳ್ಳಿ ಗ್ರಾಮದಲ್ಲಿ ಬಿಎಜೆಎಸ್‌ಎಸ್ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ವಾರ್ಷಿಕ ವಿಶೇಷ ಶಿಬಿರದಲ್ಲಿ ಮಾತನಾಡಿದರು. ಸದೃಢ ದೇಶಕ್ಕೆ ಸದೃಢ ಯುವಕರು ಬೇಕು. ರಾಷ್ಟ್ರೀಯ ಸೇವಾ ಯೋಜನೆಯು ಭಾರತದ ಯುವಕರಲ್ಲಿ ಸೇವಾ ಭಾವನೆ ಮತ್ತು ಶ್ರಮದಾನದ ಮಹತ್ವವನ್ನು ಬೆಳೆಸುವುದು ಮುಖ್ಯ ಉದ್ದೇಶವಾಗಿದೆ ಎಂದರು. ಪರಿಸರ ಸ್ವಚ್ಛತೆ ಮತ್ತು ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಮತ್ತು ಅರಿವು ಮೂಡಿಸುವುದು ಸೇವೆಯ ಮೂಲಕ ಸಮಾಜದ ಅಭಿವೃದ್ಧಿಯನ್ನು ಸರ್ವರೂ ಮಾಡಬೇಕು ಎಂದರು. ಸಹಾಯಕ ಪ್ರಾಧ್ಯಾಪಕ ಡಾ. ರಾಜೀವ್ ಕೆ ಎಂ ಡಿಜಿಟಲ್ ಸಾಕ್ಷರತೆ ಬಗ್ಗೆ ಮಕ್ಕಳಿಗೆ ತಿಳಿಸಿ ವಿದ್ಯಾರ್ಥಿಗಳು ಓದಿನ ಜೊತೆಗೆ ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಖಂಡಿತವಾಗಿ ಶ್ರಮದ ಫಲ ಗೊತ್ತಾಗುತ್ತದೆ ಎಂದರು. ಪ್ರೊ. ಶ್ರೀಕಾಂತ್ ಕುಂಚೂರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ಪ್ರೊ.ಡಾ.ಸುರೇಶ ಬಣಕಾರ್, ಲಲಿತ.ವಿ.ಬಡಿಗೇರ, ಎನ್‌ಎಸ್‌ಎಸ್ ಯೋಜನೆ ಅಧಿಕಾರಿ ಪ್ರೊ.ಅಶೋಕ ಹಳ್ಳಿಯವರ ಉಪಸ್ಥಿತರಿದ್ದರು.



ಉದ್ಯೋಗ ಸ್ಥಳದಲ್ಲಿ ಸಮಾನತೆ ಅಗತ್ಯ

ಹಾವೇರಿ: ಮಹಿಳೆಯರಿಗೆ ಸಮಾಜದಲ್ಲಿ ಸಮಾನ ಸ್ಥಾನಮಾನ ದೊರೆ ತಾಗ ಮಾತ್ರ ನೆಮ್ಮದಿಯಾಗಿರಲು ಸಾಧ್ಯವೆಂದು ಉಪನ್ಯಾಸಕಿ ಸುಮಂಗಲಾ ಕಾರಗಿ ಹೇಳಿದರು.

ಇಲ್ಲಿನ ವಿನಾಯಕ ನಗರ ನಾಗರಿಕರ ವೇದಿಕೆಯಿಂದ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ವೇದಿಕೆಯ ಮಹಿಳಾ ಘಟಕದ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿ, ಬದಲಾದ ಕಾಲದಲ್ಲಿ ಮಹಿಳೆ ಪುರುಷರಿಗೆ ಸಮಾನವಾಗಿ ನಿಲ್ಲುವ ಸಾಮರ್ಥ್ಯವನ್ನು ಪಡೆದಿದ್ದಾಳೆ. ಮಹಿಳೆಯರನ್ನು ಮನೆ ಗೆಲಸ ಮಾಡುವ ಯಂತ್ರ ಎಂದು ಭಾವಿಸದೆ ಮನೆಯವರೆಲ್ಲರೂ ಅವಳ ನೋವು ನಲುವಿಗೆ ಸ್ಪಂದಿಸಬೇಕು. ದುಡಿ ಯುವ ಸ್ಥಳದಲ್ಲಿ ಸಹ ಸಮಾನತೆ ಯಿಂದ ಕಾಣಬೇಕು ಇಂತಹ ಹತ್ತಾರು ಬದಲಾವಣೆಗಳು ಎಲ್ಲೆಡೆ ಜಾರಿಗೊಂಡಾಗ ಮಾತ್ರ ಮಹಿಳೆ ನೆಮ್ಮದಿಯಿಂದ ಇರಲು ಸಾಧ್ಯವಾದಿತು ಎಂದರು.



ನೂತನ ಮಹಿಳಾ ಘಟಕದ ಅಧ್ಯಕ್ಷೆ ಆಶಾ ತಿಮ್ಮಾಪುರ ಮಾತನಾಡಿದರು. ಕಾರ್ಯದರ್ಶಿ ಮಲ್ಲಿಕಾರ್ಜುನ ಹಿಂಚಿಗೇರಿ, ವೇದಿಕೆ ಅಧ್ಯಕ್ಷ ನಿಜಲಿಂಗಪ್ಪ ಕಾಳೆ ಮಾತನಾಡಿದರು.

ಬಸವರಾಜ ಬೆಲ್ಲದ, ಗಂಜಿಗಟ್ಟಿ, ಎಸ್.ಟಿ. ತೆಪ್ಪದ, ಎಸ್.ಎಲ್ ಕಾಡದೇವರಮಠ, ಸಾಹಿತಿ ಹನುಮಂತಗೌಡ ಗೊಲ್ಲರ, ಕೊಟ್ರೇಶ ನಡುವಿನಮಠ, ಟಿ.ಸಿ. ಚನ್ನವೀರಪ್ಪನವರ, ರಾಜೇಂದ್ರ ಕಾಳೆ, ಪ್ರಭು ಪತ್ರಿ, ಸುಮಿತ್ರಾ ದೇವಿಹೊಸೂರ, ಜಯಶ್ರೀ ದೊಡ್ಡಮನಿ, ಸುಧಾ ಮರಳಿಹಳ್ಳಿ, ಅನಿತಾ ಹಿಂಚಿಗೇರಿ, ಮಂಗಳಾ ತೆಂಬದ, ಅಕ್ಕಮ್ಮ ಎಲಿಗಾರ, ಸುಜಾತಾ ತೆಪ್ಪದ, ಭಾಗ್ಯಶ್ರೀ ಕೋಪರ್ಡೆ, ಪರ್ವಿನ್ ಎಲವಿಗಿ, ಮಹಾದೇವಿ ಪಾಟೀಲ, ರೂಪಾ ಅಗಡಿ ಉಪಸ್ಥಿತರಿದ್ದರು.

ಹಿರಿಯರಾದ ಮಹದೇವಕ್ಕ ಮುಕಣ್ಣವರ, ಸಾವಿತ್ರಿಬಾಯಿ ಹಬೀಬ, ಶಾಂತಕ್ಕ ಉಳ್ಳಾಗಡ್ಡಿ, ಕಮಲಕ್ಕ ಚನ್ನವೀರಪ್ಪನವರ, ಪಾರ್ವತಿ ಶಿವನಗೌಡ, ಭಾರತಿ ಶೆಟ್ಟರ ಅವರನ್ನು ಸನ್ಮಾನಿಸಲಾ ಯಿತು. ದಿನಾಚರಣೆ ಅಂಗವಾಗಿ ಮಹಿಳೆಯರಿಗೆ ರಂಗೋಲಿ, ಹಾಡಿನ ವಿವಿಧ ಆಟಗಳ ಸ್ಪರ್ಧೆ ಏರ್ಪಡಿಸಿ, ವಿಜೇತರಿಗೆ ಬಹುಮಾನ ಗಳನ್ನು ನೀಡಲಾಯಿತು. ರತ್ನಾ ನಾಯಕ ಸ್ವಾಗತಿಸಿದರು. ಭಾರತಿ ಶೆಟ್ಟರ ವಂದಿಸಿದರು.

ಕಿರುಸುದ್ದಿ

ಅವಧಿ ವಿಸ್ತರಣೆ

ಬೆಳಗಾವಿ : ಡಾ.ಬಾಬು ಜಗಜೀವನರಾಮ್ ರವರ 119 ನೇ ಹಾಗೂ ಡಾ.ಬಿ.ಆರ್.ಅಂಬೇಡ್ಕರ ಅವರ 135 ನೇ ಜನ್ಮ ದಿನಾಚರಣೆ ಅಂಗವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಾಂಗದವರ ಶ್ರೇಯಸ್ಸಿಗಾಗಿ ಪ್ರೋತ್ಸಾಹಿಸಿ, ಶ್ರಮಿಸಿ, ಗಣನೀಯ ಸೇವೆ ಸಲ್ಲಿಸಿದ ಅರ್ಹ ವ್ಯಕ್ತಿಗಳನ್ನು ಗುರುತಿಸಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಅರ್ಜಿಗಳನ್ನು ಜಂಟಿ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಆಯಾ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರುಗಳಿಂದ ಪಡೆದು ಮಾ.9 ರ ಸಂಜೆ 5 ಗಂಟೆಯೊಳಗಾಗಿ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು, ಇವರಿಗೆ ಸಲ್ಲಿಸುವಂತೆ ನಿಗದಿಪಡಿಸಲಾಗಿತ್ತು. ಸದರಿ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ಮಾ.15 ಕ್ಕೆ ವಿಸ್ತರಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.16ರಂದು ಪೂರ್ವಭಾವಿ ಸಭೆ

ಬೆಳಗಾವಿ : ಜಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ ಮತ್ತು ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಏ.5 ರಂದು ಡಾ.ಬಾಬು ಜಗಜೀವನರಾಮ್ ಹಾಗೂ ಏ.14ರಂದು ಡಾ.ಬಿ.ಆರ್ ಅಂಬೇಡ್ಕರ ಅವರ ಜನ್ಮ ದಿನಾಚರಣೆ ಆಚರಿಸುವ ಕುರಿತು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮಾ.16 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ ಮೊದಲನೇ ಮಹಡಿಯ ಸಭಾಂಗಣದಲ್ಲಿ ಪೂರ್ವ ಸಿದ್ದತಾ ಸಭೆಯನ್ನು ಕರೆಯಲಾಗಿದೆ.

ಜಿಲ್ಲೆಯ ಪರಿಶಿಷ್ಟ ಜಾತಿ, ವರ್ಗದ ಹಾಗೂ ವಿವಿಧ ಸಂಘಟನೆಗಳ ಮುಖಂಡರುಗಳು, ಪದಾಧಿಕಾರಿಗಳು ಸಭೆಗೆ ಹಾಜರಾಗಿ ಜಯಂತಿ ಯಶಸ್ವಿಗೆ ಸಲಹೆ ಸೂಚನೆಗಳನ್ನು ನೀಡುವಂತೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ಮಾ.13ರಿಂದ ತರಬೇತಿ ಶಿಬಿರ

ಅಡಹಳ್ಳಿ : ದಲಿತ ಸಂಘರ್ಷ ಸಮಿತಿ ಭೀಮಮಾರ್ಗ ರಾಜ್ಯ ಸಮಿತಿ ಬೆಂಗಳೂರು ಸಹಯೋಗದಲ್ಲಿ ದಲಿತ ಸಂಘರ್ಷ ಸಮಿತಿ ಪದಾಧಿಕಾರಿಗಳ ಮತ್ತು ಕಾರ್ಯಕರ್ತರ ಮೂರು ದಿನಗಳ ಅಧ್ಯಯನ ಶಿಬಿರವು ಮಾ.13ರಿಂದ 15 ರವರೆಗೆ ಮೂರು ದಿನಗಳ ಕಾಲ ಬೆಳಿಗ್ಗೆ 11ಗಂಟೆಗೆ ಘಟಪ್ರಭಾದ ಸೇವಾದಳ ತರಬೇತಿ ಕೇಂದ್ರದಲ್ಲಿ ನಡೆಯಲಿದೆ.



ಈ ಸಮಾರಂಭದಲ್ಲಿ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಜಾರಕಿಹೊಳಿ, ರಾಜ್ಯ ಕೋರ್ ಕಮಿಟಿಯ ಅಧ್ಯಕ್ಷ ಸಿದ್ಧಾರ್ಥ ಸಿಂಗೆ, ರಾಜ್ಯ ಸಂಚಾಲಕರಾದ ಡಾ. ಬಿ. ಎನ್. ವೆಂಕಟೇಶ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ ಆದ್ದರಿಂದ ಬೆಳಗಾವಿ ಜಿಲ್ಲೆಯ ಅಥಣಿ ಮತ್ತು ಕಾಗವಾಡ ತಾಲೂಕಿನಲ್ಲಿರುವ ಎಲ್ಲ ಭೀಮಮಾರ್ಗದ ಭಾಂದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋಹಳ್ಳಿ ಗ್ರಾಮದ ದಲಿತ ಸಂಘರ್ಷ ಸಮಿತಿ ಭೀಮಮಾರ್ಗ ರಾಜ್ಯ ಸಮಿತಿ

ಅಪಘಾತ: ಬೈಕ್ ಸವಾರ ಸಾವು

ಕುಡಚಿ: ಬೈಕ್ ಅಪಘಾತದಲ್ಲಿ ಸವಾರ ಮೃತಪಟ್ಟು, ಹಿಂಬದಿ ಸವಾರ ಗಾಯಗೊಂಡ ಘಟನೆ ಕುಡಚಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ನಿಲಜಿ ಗ್ರಾಮದ ಅಮೋಲ ಮಾರುತಿ ಮೋರೆ (40) ಮೃತಪಟ್ಟಿದ್ದು, ಹಿಂಬದಿ ಸವಾರ ಅನೀಲ ಭಾಸ್ಕರ ಕಾಂಬಳೆ ಗಾಯಗೊಂಡಿದ್ದಾರೆ.



ಸುಟ್ಟಟ್ಟಿ ಕ್ರಾಸ್ ಕಡೆಯಿಂದ ಸುಟ್ಟಟ್ಟಿ ಕಡೆಗೆ ಹೋಗುತಿದ್ದ ಬೈಕ್ ಸವಾರ ಶ್ರೀ ಅಡವಿ ಲಕ್ಷ್ಮೀದೇವಿ ಗುಡಿಯ ಸಮೀಪ ರಸ್ತೆಯ ತಿರುವಿನಲ್ಲಿ ನಿಯಂತ್ರಣ ತಪ್ಪಿ ತೆಗ್ಗಿನಲ್ಲಿ ಬಿದ್ದ ಪರಿಣಾಮವಾಗಿ ಭಾರಿ ಗಾಯಗೊಂಡು ಸ್ಥಳದಲ್ಲಿ ಮೃತಪಟ್ಟಿದ್ದಾನೆ. ಕುಡಚಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಈರಯ್ಯ ಮಠಪತಿ ನಿಧನ

ಹಾರೂಗೇರಿ: ಪಟ್ಟಣದ ಈರಯ್ಯ ತಿಪ್ಪಯ್ಯ ಮಠಪತಿ (85) ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ, ಐವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ಅಥಣಿ: ಪ್ರೊಆಕ್ಟಿವ್ ಅಬ್ಯಾಕಸ್ ರಾಷ್ಟ್ರೀಯ ಮಟ್ಟದ ಸ್ಪರ್ಧೆಯು ಪುಣೆಯಲ್ಲಿ ನಡೆಯಿತು. ಈ ಸ್ಪರ್ಧೆಯಲ್ಲಿ ಬೇರೆ ಬೇರೆ ರಾಜ್ಯಗಳಿಂದ 4000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಥಣಿಯ ಜೀನಿಯಸ್ ಪ್ರೊ.ಆಕ್ಟಿವ್ ಅಬಾಕಸ್ ಸೆಂಟರ್‌ನ 12 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರೀತಂ ಮುಗಳಖೋಡ್ 100ಕ್ಕೆ 100 ಲೆಕ್ಕಗಳನ್ನು 4 ನಿಮಿಷ 30 ಸೆಕೆಂಡುಗಳಲ್ಲಿ ಸರಿಯಾಗಿ ಬಿಡಿಸಿ ರಾಷ್ಟ್ರ ಮಟ್ಟಕ್ಕೆ 5 ನೇ ಸ್ಥಾನ ಪಡೆದಿದ್ದಾನೆ.

ಎನ್‌ಎಸ್‌ಎಸ್ ಶಿಬಿರಕ್ಕೆ ಚಾಲನೆ ಇಂದು

ಮೂಡಲಗಿ : ಪಟ್ಟಣದ ಆರ್‌ಡಿಎಸ್ ಕಲಾ ವಾಣಿಜ್ಯ ವಿಜ್ಞಾನ ಹಾಗೂ ಸಮಾಜ ಕಾರ್ಯ ಪದವಿ ಮಹಾವಿದ್ಯಾಲಯ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಕೋಶದ ವತಿಯಿಂದ ಸಮೀಪದ ದತ್ತು ಗ್ರಾಮ ಇಟ್ನಾಳದಲ್ಲಿ ಮಾ.11ರಿಂದ 17ರವರೆಗೆ ಎನ್‌ಎಸ್‌ಎಸ್ ವಾರ್ಷಿಕ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಮಾ.11ರಂದು ಮಧ್ಯಾಹ್ನ 3 ಗಂಟೆಗೆ ಶಿಬಿರದ ಉದ್ಘಾಟನೆ ನಡೆಸಲಾಗುವುದು. ಉದ್ಘಾಟಕರಾಗಿ ಇಟ್ನಾಳದ ಸಿದ್ದೇಶ್ವರ ಆಶ್ರಮದ ಸಿದ್ದೇಶ್ವರ ಸ್ವಾಮೀಜಿ ಆಗಮಿಸುವರು.

ಅಧ್ಯಕ್ಷತೆಯನ್ನು ಮೂಡಲಗಿಯ ಆರ್.ಡಿ.ಸಂಸ್ಥೆಯ ಅಧ್ಯಕ್ಷ ಸಂತೋಷ ತಮ್ಮಣ್ಣಾ ಪಾರ್ಶಿ ವಹಿಸಿಕೊಳ್ಳುವರು. ಮುಖ್ಯ ಅತಿಥಿಗಳಾಗಿ ಇಟ್ನಾಳದ ಪಿಕೆಪಿಎಸ್ ಅಧ್ಯಕ್ಷ ಚನ್ನಪ್ಪ ಮಗದುಮ್ಮ, ಲಕ್ಷ್ಮಿ ಪಿಕೆಪಿಎಸ್ ಅಧ್ಯಕ್ಷ ಗಿರಿಗೌಡ ಪಾಟೀಲ, ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ಗೀತಾ ಕಂಬಾರ, ಮಾಜಿ ಉಪಾಧ್ಯಕ್ಷ ಯಲ್ಲವ್ವ ಬ್ಯಾಕೂಡ, ಊರಿನ ಹಿರಿಯ ಮಲ್ಲಪ್ಪ ದಾನಿಹಾಳ, ಶಂಕರ ಪಾಟೀಲ, ಗೋವಿಂದ ಪೂಜೇರಿ, ಕಾಲೇಜಿನ ಪ್ರಾಚಾರ್ಯ ಎಸ್.ಬಿ.ಗೋಟೂರೆ ಹಾಗೂ ಉಪನ್ಯಾಸಕರು ಶಿಬಿರಾರ್ಥಿಗಳು ಪಾಲ್ಗೊಳ್ಳುವರು ಮತ್ತು ಶಿಬಿರದಲ್ಲಿ ಪ್ರತಿ ದಿನ ವಿಷಯ ಪರಿಣಿತರಿಂದ ವಿವಿಧ ವಿಷಯಗಳ ಉಪನ್ಯಾಸಕ ಮಾಲಿಕೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಎನ್.ಎಸ್.ಎಸ್. ಘಟಕಾಧಿಕಾರಿ ಉಪನ್ಯಾಸಕ ರಾಜು ಪತ್ತಾರ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ : ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಳಗಾವಿ ವತಿಯಿಂದ ,ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೆಳಗಾವಿ, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಇಲಾಖೆ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಇತರೆ ಸಂಬಂಧಿತ ಇಲಾಖೆಗಳ ಸಹಯೋಗದಲ್ಲಿ ಮಹೇಶ್ವರಿ ಅಂದಮಕ್ಕಳ ಶಾಲೆ ಸಭಾಂಗಣ, ಬೆಳಗಾವಿ ಇಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಯುಪಿಎಸ್‌ಸಿ ಸಾಧಕರಿಗೆ ಸನ್ಮಾನ | ಡಾ. ಶಿವಲಿಂಗೇಶ್ವರ ಸ್ವಾಮೀಜಿ ಅಭಿಮತ

ಜ್ಞಾನ, ಪರಿಶ್ರಮದಿಂದ ಸಾಧನೆ

ಸಂಕೇಶ್ವರ : ಸರಕಾರಿ ಸೇವೆಯು ಸಮಾಜ ಸೇವೆಗೆ ಉತ್ತಮ ಅವಕಾಶವಾಗಿದ್ದು, ಜನರ ಜೀವನದಲ್ಲಿ ಬದಲಾವಣೆ ತರುವ ಉತ್ತಮ ಯೋಜನೆಗಳ ಅನುಷ್ಠಾನದ ಮೂಲಕ ಒಳ್ಳೆಯ ವ್ಯಕ್ತಿ ಜೀವನ ನಡೆಸಬಹುದು ಎಂದು ನಿಡಸೋಸಿ ಜಗದ್ಗುರು ಪಂಚಮ ಡಾ. ಶಿವಲಿಂಗೇಶ್ವರ ಸ್ವಾಮೀಜಿ ಹೇಳಿದರು.

ಸಮೀಪದ ನಿಡಸೋಸಿ ಸಿದ್ದ ಸಂಸ್ಥಾನ ಮಠದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ನಂ.1 ಸ್ಥಾನ ಪಡೆದಿರುವ ಕಿರಣ ಕಮತೆ ದಂಪತಿ ಶ್ರೀಮಠಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರನ್ನು ಆಶೀರ್ವದಿಸಿ ಅವರು, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಜ್ಞಾನ, ಅನುಭವ ಹಾಗೂ ಪರಿಶ್ರಮದ ಮೂಲಕ ಜೀವನದಲ್ಲಿ ಯಾವುದೇ ಸಾಧನೆ ಮಾಡಬಲ್ಲರು ಎಂಬುದಕ್ಕೆ ಕಿರಣ ಅವರ ಸಾಧನೆ ಪ್ರೇರಣೆಯಾಗಿದೆ ಎಂದರು.

ಶ್ರೀಮಠದ ಎಸ.ಜೆಪಿಎನ್ ಟ್ರಸ್ಟಿನ ಹಿರಾಶುಗರ ಇಂಜಿನಿಯರಿಂಗ್ ಕಾಲೇಜು ಪ್ರಾಚಾರ್ಯರಾದ ಡಾ.ಎಸ.ಸಿ.ಕಮತೆ ಅವರ ಪುತ್ರ ಕಿರಣ ಈ ಸಾಧನೆ ಮಾಡಿರುವುದು ಶ್ರೀಮಠ ಹಾಗೂ ಟ್ರಸ್ಟಿಗೆ ಅಭಿಮಾನದ ಸಂಗತಿಯಾಗಿದೆ ಎಂದರು.



ಹಿರಾಶುಗರ ಇಂಜಿನಿಯರಿಂಗ್ ಕಾಲೇಜು ಪ್ರಾಚಾರ್ಯ ಡಾ.ಎಸ.ಸಿ.ಕಮತೆ ಮಾತನಾಡಿ, ಶ್ರೀಮಠದ ಸಂಸ್ಕಾರ ಹಾಗೂ ಜಗದ್ಗುರು ಡಾ. ಶಿವಲಿಂಗೇಶ್ವರ ಶ್ರೀಗಳ ಆಶೀರ್ವಾದದಲ್ಲಿ ನಮ್ಮ ಕುಟುಂಬ ಬೆಳೆದು ಬಂದಿದ್ದು, ನನ್ನ ಮಗ ರಾಜ್ಯದಲ್ಲಿ ಅತ್ಯುನ್ನತ ಸಾಧನೆ ಮಾಡಿದ್ದು, ಶ್ರೀಗಳ ಆಶೀರ್ವಾದದೊಂದಿಗೆ ಕಿರಣ ರಾಜ್ಯ ಮೆಚ್ಚುವ ಕಾರ್ಯ ಮಾಡುತ್ತಾರೆಂಬ ನಂಬಿಕೆ ನನಗಿದೆ ಎಂದರು.

ಸಾಧಕ ಕಿರಣ ಕಮತೆ ಮಾತನಾಡಿ, ಶ್ರೀಮಠದ ಪೂಜ್ಯರ ಆಶೀರ್ವಾದ ನನ್ನ ಬದುಕಿನ ಗುರಿಗಳಿಗೆ ಮತ್ತಷ್ಟು ಬಲ ನೀಡಲಿದ್ದು, ವೃತ್ತಿ ಬದುಕಿನಲ್ಲಿ ಉತ್ತಮ ಕಾರ್ಯಗಳ ಮೂಲಕ ಈ ನೆಲದ ಋಣ ತೀರಿಸುವ ಕೆಲಸ ಮಾಡುತ್ತೇನೆ ಎಂದರು.

> ಹಿರಾಶುಗರ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ.ಎಸ್.ಸಿ.ಕಮತೆ ಪುತ್ರ ಕಿರಣ ಸಾಧನೆ ಗ್ರಾಮೀಣ ಪ್ರದೇಶದ ಯುವಕರಿಗೆ ಪ್ರೇರಣೆಯಾಗಿದ್ದು, ಕಿರಣ ಇನ್ನುಳಿದ ಪ್ರತಿಭಾವಂತ ಯುವಕರಿಗೆ ಸ್ಫೂರ್ತಿಯಾಗಿ ಕಾರ್ಯ ಮಾಡಿ ಗ್ರಾಮೀಣ ಸಾಧಕರ ಸಂಖ್ಯೆ ಹೆಚ್ಚಿಸಬೇಕು.
>
> ■ ಜಗದ್ಗುರು ಪಂಚಮ ಡಾ. ಶಿವಲಿಂಗೇಶ್ವರ ಸ್ವಾಮೀಜಿ, ನಿಡಸೋಸಿ

ಇದೇ ಸಂದರ್ಭದಲ್ಲಿ ಯುಪಿಎಸ್ಸಿ ಪರೀಕ್ಷೆಯಲ್ಲಿ ದೇಶದ 53ನೇ ರ್‍ಯಾಂಕ ಹಾಗೂ ರಾಜ್ಯಕ್ಕೆ ನಂ.1 ಸ್ಥಾನ ಪಡೆದ ಕಿರಣ ಕಮತೆ ಹಾಗೂ ಲೋಚನಾ ದಂಪತಿಗಳು ಶ್ರೀಗಳು ಆಶೀರ್ವದಿಸಿದರು. ಈ ಸಂದರ್ಭದಲ್ಲಿ ರುಕ್ಮಿಣಿ ಕಮತೆ, ಲೋಚನಾ ಕಮತೆ ಉಪಸ್ಥಿತರಿದ್ದರು.

ಸ್ಮಾರಕಗಳ ರಕ್ಷಣೆ ನಮ್ಮೆಲ್ಲರ ಹೊಣೆ

ಮೂಡಲಗಿ : ಪ್ರಾಚೀನ ಸ್ಮಾರಕಗಳು ನಮ್ಮ ಇತಿಹಾಸವನ್ನು ಸಾರುತ್ತವೆ. ಯಾವುದೇ ಕಾಯ್ದೆ ಕಾನೂನುಗಳಿಂದ ಸ್ಮಾರಕಗಳನ್ನು ರಕ್ಷಿಸಲು ಸಾಧ್ಯವಿಲ್ಲ. ಅದು ಕೇವಲ ಸಾಮಾಜಿಕ ಹೊಣೆಗಾರಿಕೆಯಿಂದ ಮಾತ್ರ ಸಾಧ್ಯ ಎಂದು ಬಳೋಬಾಳದ ಪ್ರೌಢ ಶಾಲಾ ಶಿಕ್ಷಕ ಅಮರ ಬಳೋಜಿ ಹೇಳಿದರು.

ಸಮೀಪದ ದತ್ತುಗ್ರಾಮ ಬಳೋಬಾಳದಲ್ಲಿ, ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ ಹಮ್ಮಿಕೊಂಡಿರುವ 2025–26ನೇ ಸಾಲಿನ ವಾರ್ಷಿಕ ವಿಶೇಷ ಶಿಬಿರದ ಅಂಗವಾಗಿ ಸೋಮವಾರ ಆಯೋಜಿಸಲಾಗಿದ್ದ 'ಪ್ರಾಚೀನ ಸ್ಮಾರಕಗಳ ಹಾಗೂ ಅರಣ್ಯ ಸಂರಕ್ಷಣೆಯ ಮಹತ್ವ' ಎಂಬ ವಿಷಯದ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಇನ್ನೋರ್ವ ಅತಿಥಿ ಶಿಕ್ಷಕ ಬಿ.ಎಚ್. ಬೀರಗೌಡ್ರ ಮಾತನಾಡಿ, ಅರಣ್ಯ ಸಂರಕ್ಷಣೆಯು ಪರಿಸರ ಸಮತೋಲನ, ಜೀವವೈವಿಧ್ಯದ ರಕ್ಷಣೆ ಮತ್ತು ಶುದ್ಧ ಗಾಳಿ-ನೀರಿನ ಲಭ್ಯತೆಗೆ ಅತ್ಯಗತ್ಯ. ಇಂಗಾಲದ ಡೈಆಕ್ಸೈಡ್ ಹೀರಿ, ಆಮ್ಲಜನಕ ನೀಡಿ ಭೂಮಿಯ ತಾಪಮಾನವನ್ನು ನಿಯಂತ್ರಿಸಲು ಮತ್ತು ಮಣ್ಣಿನಸವೆತ,ಪ್ರವಾಹಗಳನ್ನು ತಡೆಗಟ್ಟಲು ಮರಗಳ ರಕ್ಷಣೆ ಮುಖ್ಯವಾಗಿದೆ. ಇದು ವನ್ಯಜೀವಿಗಳ ಆವಾಸಸ್ಥಾನವನ್ನು ಉಳಿಸಲು ಮತ್ತು ಮಾನವನ ಸುಸ್ಥಿರ ಬದುಕಿಗೆ ಅಡಿಪಾಯವಾಗಿದೆ ಎಂದರು.

ಉಪನ್ಯಾಸಕ ಸಿದ್ದೇಶ್ವರ ಮೆಳವಂಕಿ ಮಾತನಾಡಿದರು. ಡಾ. ಎಂ.ಬಿ. ಕುಲಮೂರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಹಶಿಬಿರಾಧಿಕಾರಿ ಡಿ.ಎಸ್. ಹುಗ್ಗಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

ಪೂಜಾ ಪಂಡ್ರೊಳಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಪೂಜಾ ಮನ್ನಾಪೂರ ಹಾಗೂ ಸಂಗಡಿಗರು ಎನ್.ಎಸ್.ಎಸ್. ಗೀತೆ ಹಾಡಿದರು. ರಾಧಿಕಾ ಕರೆಪ್ಪಗೋಳ, ನಾಗರಾಜ ನಾಯಿಕವಾಡಿ ವಂದಿಸಿದರು.



ಯುಪಿಎಸ್‌ಸಿ ಸಾಧಕನ ಅಭಿನಂದಿಸಿದ ಶಾಸಕ



ನೇಸರಗಿ: ಯುಪಿಎಸ್‌ಸಿ ಪರೀಕ್ಷೆಯಲ್ಲಿ 739 ರ್‍ಯಾಂಕ್ ಪಡೆದು ತೇರ್ಗಡೆಯಾದ ಸಮೀಪದ ಮೇಕಲಮರಡಿ ಗ್ರಾಮದ ನಿವಾಸಿ (ಹೊಸೂರ ಗ್ರಾಮದ) ಬಸವರಾಜ ಮಡಿವಾಳಪ್ಪ ಪಾಟೀಲ ಅವರನ್ನು ಚನ್ನಮ್ಮನ ಕಿತ್ತೂರು ಶಾಸಕರಾದ ಬಾಬಾಸಾಹೇಬ ಪಾಟೀಲ ಅವರು ವಿಡಿಯೋ ಕಾಲ್ ಮಾಡಿ ಅಭಿನಂದಿಸಿದರು. ಆಲದಕಟ್ಟಿ ನಂತರ ನೀವು ಬೈಲಹೊಂಗಲ ತಾಲೂಕಾ ಮತ್ತು ಕಿತ್ತೂರು ವಿಧಾನಸಭಾ ಕ್ಷೇತ್ರದಿಂದ ಉನ್ನತ ಮಟ್ಟದಲ್ಲಿ ಪಾಸಾಗಿ ನಮ್ಮ ಕ್ಷೇತ್ರಕ್ಕೆ ಹೆಮ್ಮೆ ತಂದಿದ್ದು. ಪ್ರಸಕ್ತ ಯುವ ಜನತೆಗೆ ನೀವು ಮಾದರಿ ಆಗಿದ್ದೀರಾ, ಮುಂದೆ ಉನ್ನತ ಸ್ಥಾನ ಪಡೆದು ಮುಂದೆ ಬರುತ್ತೀರಿ ಎಂದು ಹೇಳಿ ಶುಭ ಕೋರಿದರು.



ಸುರೇಬಾನ: ಸುರೇಬಾನ-ಮನಿಹಾಳ ಹಾಗೂ ರೇವಡಿಕೊಪ್ಪದಲ್ಲಿ ಹಿಂದು ಸಮಾಜ್ಯೋತ್ಸವ ಕಾರ್ಯಕ್ರಮದ ನಿಮಿತ್ತ ನೂರಾರು ಹಿಂದು ಕಾರ್ಯಕರ್ತರು ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ಸಂಚರಿಸಿದರು. ಜೈ ಶ್ರೀರಾಮ ಎಂಬ ಘೋಷಣೆಯನ್ನು ಕೂಗುತ್ತಾ ಅದ್ದೂರಿಯಾಗಿ ಬೈಕ್ ರ್‍ಯಾಲಿ ನಡೆಸಿದರು. ಈ ಕಾರ್ಯಕ್ರಮಕ್ಕೆ ಬಿಗಿ ಪೊಲೀಸ್ ಭದ್ರತಾ ದೃಷ್ಟಿಯಿಂದ 1 ಸಿಪಿಐ, 2 ಜನ ಪಿಎಸ್‌ಐ, 9 ಎಎಸ್‌ಐ, 50 ಜನ ಪೊಲೀಸ್ ಸಿಬ್ಬಂದಿ, 1 ಡಿಆರ್ ತುಕಡಿ ನಿಯೋಜಿಸಲಾಗಿದೆ ಎಂದು ಸುರೇಬಾನ ಪೊಲೀಸ್ ಠಾಣೆಯ ಪಿಎಸ್‌ಐ ಗುರುರಾಜ ಕಲಬುರ್ಗಿ ತಿಳಿಸಿದರು.

ಮಾ.17ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಖಾನಾಪುರ: ಪಟ್ಟಣದ ಆಶೀರ್ವಾದ ಆಸ್ಪತ್ರೆಯಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಮಾ.17ರಂದು ಮಂಗಳವಾರ ಬೆಳಿಗ್ಗೆ 9ರಿಂದ ಮಧ್ಯಾಹ್ನ 3ರವರೆಗೆ ಮಹಿಳೆಯರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಆಸ್ಪತ್ರೆಯ ನಿರ್ದೇಶಕ ಹಾಗೂ ವೈದ್ಯರ ಸಂಘದ ತಾಲೂಕು ಘಟಕದ ಅಧ್ಯಕ್ಷ ಡಾ.ಡಿ.ಇ ನಾಡಗೌಡ ಹೇಳಿದರು.

ಪಟ್ಟಣದ ಆಶೀರ್ವಾದ ಆಸ್ಪತ್ರೆಯಲ್ಲಿ ಮಂಗಳವಾರ ಆಸ್ಪತ್ರೆಯ ಮಹಿಳಾ ವೈದ್ಯರು ಮತ್ತು ಸಿಬ್ಬಂದಿಗಾಗಿ ಆಯೋಜಿಸಿದ್ದ ಮಹಿಳಾ ದಿನಾಚರಣೆಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ''ಆಸ್ಪತ್ರೆಯ ವತಿಯಿಂದ ಆಯೋಜಿಸಿರುವ ಈ ಶಿಬಿರದಲ್ಲಿ ತಜ್ಞವೈದ್ಯರು ಭಾಗವಹಿಸಿ ಆರೋಗ್ಯ ತಪಾಸಣೆ ನಡೆಸಲಿದ್ದಾರೆ. ಆರೋಗ್ಯ ಸಮಸ್ಯೆಗಳು ಇರುವವರಿಗೆ ಚಿಕಿತ್ಸೆ ಮತ್ತು ಔಷಧೋಪಚಾರ ಒದಗಿಸಲಿದ್ದಾರೆ. ಈ ಶಿಬಿರದ ಪ್ರಯೋಜನವನ್ನು ಪಟ್ಟಣ ಹಾಗೂ ಅಕ್ಕಪಕ್ಕದ ಭಾಗದ ಮಹಿಳೆಯರು ಪಡೆಯಬೇಕು ಎಂದರು. ಕಾರ್ಯಕ್ರಮದಲ್ಲಿ ಡಾ.ವಿನೋದ ಮಾಳಿ, ಡಾ.ಗಂಗಾ ಲೋಕಾಪುರ ಸೇರಿದಂತೆ ಆಸ್ಪತ್ರೆಯ ವೈದ್ಯರು, ತಂತ್ರಜ್ಞರು, ಸಿಬ್ಬಂದಿ ಇದ್ದರು.



ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಬರಲಿ

ಯರಗಟ್ಟಿ: ಆಧುನಿಕ ತಂತ್ರಜ್ಞಾನ ಯುಗದಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಂಡು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಬರಬೇಕು ಎಂದು ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರದ ಶಾಸಕರಾದ ವಿಶ್ವಾಸ ವೈದ್ಯ ಅವರ ಧರ್ಮಪತ್ನಿ ಶೃತಿ ವಿಶ್ವಾಸ ವೈದ್ಯ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಒಳ್ಳೆಯ ವಿದ್ಯಾಭ್ಯಾಸವು ಮಹಿಳಾ ಸಬಲೀಕರಣದ ಮೊದಲ ಹೆಜ್ಜೆಯಾಗಿದೆ ಎಂದು ಪ್ರತಿಪಾದಿಸಿದರು.

ಸ್ಥಳೀಯ ಬಾಲಕಿಯರ ವಸತಿ ನಿಲಯದ ಮೇಲ್ವಿಚಾರಕಿ ಆಶಾ ಪರೀಟ ಅವರು ಮಹಿಳಾ ದಿನಾಚರಣೆಯ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಆರ್. ಎಸ್. ಮರಿಗೌಡರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ವೇಳೆ ವಿಜಯಲಕ್ಷ್ಮಿ ಬದ್ದಿ, ಡಾ. ಸುನಂದಾ ಮಾದರ, ಶಂಕರ ಲಗಳಿ, ಡಾ. ರಾಜಶೇಖರ ಬಿರಾದಾರ ಸೇರಿದಂತೆ ಮಹಾವಿದ್ಯಾಲಯದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ನೀರಿಗಾಗಿ ಖಾಲಿ ಕೊಡಗಳೊಂದಿಗೆ ಪ್ರತಿಭಟನೆ

ಬೆಳಗಾವಿ : ನಗರದಲ್ಲಿರುವ ವಡಗಾಂವಿಯ ರೈತ ಗಲ್ಲಿಯ ನಿವಾಸಿಗಳು ಕಳೆದ 20 ದಿನಗಳಿಂದ ಕುಡಿಯುವ ನೀರಿನ ಸಮಸ್ಯೆ, ಮತ್ತು ಚರಂಡಿ ನೀರು ಪೈಪ್ ಲೈನ್ ಗೆ ಸೇರುತ್ತಿರುವ ಕುರಿತು ಪಾಲಿಕೆಗೆ ಪದೇ ಮನವಿ ಸಲ್ಲಿಸಿದ್ದರು. ಅಧಿಕಾರಿಗಳು ಈವರೆಗೂ ಯಾವುದೇ ಕ್ರಮ ಕೈಗೊಳ್ಳದೆ ಇರುವುದನ್ನು ಖಂಡಿಸಿ ವಡಗಾಂವಿಯ ಸಾರ್ಜಜನಿಕರು ಮಹಾನಗರ ಪಾಲಿಕೆ ಎದುರು ಖಾಲಿ ಕೊಡ ಹಿಡಿದುಕೊಂಡು ಪಾಲಿಕೆ ಅಧಿಕಾರಿಗಳ ವಿರುದ್ಧ ಆಕ್ರೋಶ್ ವ್ಯಕ್ತಪಡಿಸಿ ಪ್ರತಿಭಟನೆ ನಡೆಸಿದರು.

ಮಂಗಳವಾರ ವಡಗಾವಿಯ ಸಾರ್ವಜನಿಕರು ಕುಡಿಯುವ ನೀರಿನಲ್ಲಿ ಚರಂಡಿ ನೀರು ಸೇರ್ಪಡೆ ಯಾಗುತ್ತಿರುವುದರಿಂದ ಆಕ್ರೋಶ ವ್ಯಕ್ತಪಡಿಸಿ ಪಾಲಿಕೆಗೆ ಮುತ್ತಿಗೆ ಹಾಕಿ ಬೃಹತ್ ಪ್ರತಿಭಟನೆ ನಡೆಸಿದರು.

ತಾಳ್ಮೆ ಕಳೆದುಕೊಂಡ ನಿವಾಸಿಗಳು ಖಾಲಿ ಕೊಡಗಳನ್ನು ಹಿಡಿದು ಪಾಲಿಕೆ ಕಚೇರಿಯ ಆವರಣಕ್ಕೆ ಆಗಮಿಸಿ, ಅಧಿಕಾರಿಗಳ ಬೇಜವಾಬ್ದಾರಿಯನ್ನು ಪ್ರಶ್ನಿಸಿ ಪ್ರತಿಭಟನೆ ನಡೆಸಿದರು. ಮಹಾಪಾಲಿಕೆ ಕಚೇರಿಗೆ ನುಗ್ಗಲು ಮುಂದಾದ ಪ್ರತಿಭಟನಾಕಾರರನ್ನು ತಡೆಯಲು ಪೊಲೀಸರಿಗೆ ಹರಸಾಸಹ ಪಡಬೇಕಾಯಿತು

ಕಳೆದ15 ದಿನಗಳಿಂದಕೊಳಚೆ ನೀರು ಬೆರಕೆಯಾದ ನೀರು ಪೂರೈಕೆಯಾಗುತ್ತಿದೆ. ಜನಜಾನುವಾರುಗಳಿಗೆ ಕುಡಿಯಲು ತೊಂದರೆಯಾಗುತ್ತಿದೆ. ಹಲವಾರು ಮನವಿಯನ್ನು ನೀಡಿದರೂ ಯಾವುದೇ ಪ್ರಯೋಜವಾಗುತ್ತಿಲ್ಲ, ನಾವು ನೀರು ಕುಡಿಯಬೇಕೋ ವಿಷ ಕುಡಿಯಬೇಕೋ ಎಂದು ಪಾಲಿಕೆಯ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ನೀಡಿದರು. ಈ ವೇಳೆ ವಡಗಾವಿಯ ರೈತ ಕಾಲೋನಿಯ ನೂರಾರು ರೈತರು, ರೈತ ಮಹಿಳೆಯರು ಪ್ರತಿಭಟನೆಯಲ್ಲಿ ಇದ್ದರು.

ಮಹಾನಗರ ಪಾಲಿಕೆ ಎದುರು ಆಕ್ರೋಶ



ಕಾನೂನು ಅರಿವು ಕಾರ್ಯಕ್ರಮ

ಖಾನಾಪುರ: ಪಟ್ಟಣದ ಸ್ವಾಮಿ ವಿವೇಕಾನಂದ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಮಂಗಳವಾರ ವಕೀಲರ ಸಂಘ, ಶಿಕ್ಷಣ ಇಲಾಖೆ ಮತ್ತ ತಾಲೂಕು ಕಾನೂನು ಸೇವಾ ಸಮಿತಿಗಳ ಸಹಯೋಗದಲ್ಲಿ ಕಾನೂನು ಅರಿವು ಕಾರ್ಯಕ್ರಮ ಜರುಗಿತು. ಪಟ್ಟಣದ ನ್ಯಾಯಾಲಯದ ಹಿರಿಯ ದಿವಾಣಿ ನ್ಯಾಯಾಧೀಶ ನ್ಯಾ. ಚಂದ್ರಶೇಖರ ತಳವಾರ ಕಾರ್ಯಕ್ರಮ ಉದ್ಘಾಟಿಸಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಹಿರಿಯ ವಕೀಲ ಚೇತನ ಮನೇರಿಕರ ಪೋಕ್ಸೋ ಕಾಯ್ದೆ, ವರದಕ್ಷಿಣೆ ಕಾಯ್ದೆ, ಬಾಲ್ಯವಿವಾಹ ಮತ್ತು ಮಾದಕ ವಸ್ತು ವಿರೋಧಿ ಕಾಯ್ದೆಗಳ ಬಗ್ಗೆ ವಿವರಿಸಿದರು. ವಕೀಲರ ಸಂಘದ ಅಧ್ಯಕ್ಷ ಈಶ್ವರ ಘಾಡಿ ಅಧ್ಯಕ್ಷತೆ ವಹಿಸಿದ್ದರು. ಬಿಇಒ ರಾಮಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸ್ವಾಮಿ ವಿವೇಕಾನಂದ ಪಿಯು ಕಾಲೇಜು ಪ್ರಾಚಾರ್ಯ ಪಿ.ಕೆ ಚಾಪಗಾಂವಕರ, ಪ್ರೌಢಶಾಲೆಯ ಮುಖ್ಯ ಶಿಕ್ಷಕ ವಿನೋದ ಮರಾಠೆ ಸೇರಿದಂತೆ ವಕೀಲರು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಇದ್ದರು.



ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿ ವಿತರಣೆ



ಕಕಮರಿ : ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು. ಪ್ರತಿಭಾವಂತ ಮಕ್ಕಳ ಬೆನ್ನಿಗೆ ಸವದಿ ಕುಟುಂಬ ಸದಾ ನಿಲ್ಲುತ್ತದೆ ಎಂದು ಅಥಣಿ ಕಾಂಗ್ರೆಸ್ ಯುವ ಮುಖಂಡ ಚಿದಾನಂದ ಸವದಿ ಹೇಳಿದರು.

ಅವರು ಸ್ಥಳೀಯ ಶ್ರೀ ಅಮ್ಮಾಜೇಶ್ವರಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಾಮಗ್ರಿ ಉಚಿತವಾಗಿ ರೈಟಿಂಗ್ ಪ್ಯಾಡ್ ವಿತರಿಸಿ ಮಾತನಾಡಿದರು. ಅಥಣಿ ತಾಲೂಕಿನಾದ್ಯಂತ ಈ ವರ್ಷ 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪರೀಕ್ಷಾ ಸಾಮಗ್ರಿ ವಿತರಿಸುವ ಗುರಿ ಹೊಂದಲಾಗಿದೆ ಎಂದರು. ಹಿರಿಯರಾದ ಗಿರಮಲ್ಲ ಜನಗೌಡ, ಲಕ್ಷ್ಮಣ ಗುರ್ಕಿ, ಶ್ರೀ ಅಮ್ಮಾಜೇಶ್ವರಿ ಪಿಕೆಪಿಎಸ್ ಅಧ್ಯಕ್ಷ ಸಿಕಂದರ ಮುಜಾವರ, ಅಣ್ಣಾಸಾಬ ಬಿಜ್ಜರಗಿ, ಜಯಣ್ಣ ಪೂಜಾರಿ, ಪ್ರದೀಪ ಕರಡಿ, ಅಮೋಘಸಿದ್ದ ಒಡೆಯರ, ಶಿವನಿಂಗ ತಳಕಟ್ಟಿ, ಮುಖ್ಯೋಪಾಧ್ಯಾಯ ವಿ.ಎಸ್.ಕುಲಕರ್ಣಿ, ಎಸ್.ಆರ್.ಬಿರಾದಾರ, ಎಸ್.ಎಚ್.ಜಡಿನವರ, ಎಸ್.ಆರ್.ಪೂಜಾರಿ, ಎಸ್.ಎಲ್.ಕಾತ್ರಾಳ, ಎ.ಎಸ್.ಗಡಾಲೋಟಿ, ಆರ್.ಪಿ.ಪೂಜಾರಿ, ಎಸ್.ಎ.ಈರಗೌಡ ಇತರರಿದ್ದರು. ಶಿಕ್ಷಕ ಎಸ್.ಆರ್.ಬಿರಾದಾರ ಸ್ವಾಗತಿಸಿದರು, ಮುಖ್ಯೋಪಾಧ್ಯಾಯ ವಿ.ಎಸ್.ಕುಲಕರ್ಣಿ ನಿರೂಪಿಸಿ ವಂದಿಸಿದರು.

ಪಾಲಕರ ಸಭೆ ಮಕ್ಕಳ ಶಿಕ್ಷಣಕ್ಕೆ ಸಹಕಾರಿ

ಅಡಹಳ್ಳಿ : ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಸಾಮರ್ಥ್ಯ ಮತ್ತು ಸುಧಾರಣೆಗೆ ಅಗತ್ಯವಿರುವ ವಿಷಯಗಳ ಬಗ್ಗೆ ಚರ್ಚಿಸಲು ಪಾಲಕರ ಶಿಕ್ಷಕರ ಸಭೆ ಅವಶ್ಯವಾಗಿದೆ ಎಂದು ಎಸ್‌ಡಿಎಂಸಿ ಅಧ್ಯಕ್ಷ ಸುಭಾಸ ಸಿಂಗೆ ಹೇಳಿದರು.

ಅವರು ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಜರುಗಿದ ಪೋಷಕರು-ಶಿಕ್ಷಕರ ಮಹಾಸಭೆಯಲ್ಲಿ ಮಾತನಾಡಿ, ಈ ಸಭೆಗಳು ಮಕ್ಕಳ ಸರ್ವೋತ್ತಮ ವಿಕಾಸಕ್ಕೆ ಶಾಲೆ ಮತ್ತು ಪೋಷಕರ ನಡುವಿನ ಸಂಭಂದವನ್ನು ಬಲ ಪಡಿಸಲು ಸಹಾಯವಾಗಿವೆ. ಆದ್ದರಿಂದ ಪ್ರತಿಯೊಬ್ಬ ಪೋಷಕರು ಇಂತಹ ಸಭೆಯಲ್ಲಿ ಭಾಗವಹಿಸಬೇಕೆಂದು ಹೇಳಿದರು.

ಮುಖ್ಯ ಶಿಕ್ಷಕ ಐ. ಎಸ್. ಹಂಪಣ್ಣವರ ಮಾತನಾಡಿದರು. ಎಸ್ ಡಿ ಎಂ ಸಿ ಉಪಾಧ್ಯಕ್ಷ ಸಿದ್ದು ಬರಗಿ, ಸಿಆರ್‌ಸಿ ಎಸ್. ಕೆ. ಖೋತ, ಕಾಡು ಖೋಬ್ರಿ, ನಿಂಗಪ್ಪ ಅಡಹಳ್ಳಿ, ಭೀಮು ಸೂರ್ಯವಂಶಿ, ಪ್ರಶಾಂತ ಮಾಳಿ ಸೇರಿದಂತೆ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದರು. ಶಿಕ್ಷಕ ಎಸ್. ಎಂ. ಗೆಂಡ್ ನಿರೂಪಿಸಿ, ವಂದಿಸಿದರು.



ನೂತನ ಫಿಸಿಯೋಥೆರಪಿ ಆಸ್ಪತ್ರೆ ಉದ್ಘಾಟನೆ



ಹಾರೂಗೇರಿ: ಪಟ್ಟಣದ ಹನುಮಾನ ಗಲ್ಲಿಯ ಡಾ. ನಾರಗೊಂಡ ಆಸ್ಪತ್ರೆ ಹತ್ತಿರ ಬಾಗೇವಾಡಿ ಬಿಲ್ಡಿಂಗ್ ನಲ್ಲಿ ನೂತನವಾಗಿ ಬಳ್ಳಾರಿಯ ಡಾ.ರಾಜಕಿರಣ ಅವರ ಫಿಸಿಯೋಥೆರಪಿ ಆಸ್ಪತ್ರೆ ಉದ್ಘಾಟನೆಗೊಂಡಿತು. ಪಟ್ಟಣದ ಪ್ರಖ್ಯಾತ ಹೃದಯ ರೋಗ ತಜ್ಞರಾದ ಡಾ. ಎಲ್ ಎಸ್ ಜಂಬಗಿ ಅವರು ಈ ಆಸ್ಪತ್ರೆಯನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅತಿಥಿಗಳಾಗಿ ಡಾ.ಮೃತ್ಯುಂಜಯ ನಾರಗೊಂಡ, ನಿವೃತ್ತ ಪ್ರಾಚಾರ್ಯ ಬಿ ಎ ಜಂಬಗಿ, ಉದ್ಯಮಿ ಮಲ್ಲಿನಾಥ ಹುಕ್ಕೇರಿ, ಈರಪ್ಪ ಮಾಂಗ, ರಾಜು ಹೆಗ್ಗೊಂಡ, ವಿವೇಕ ಯಲ್ಲಡಗಿ, ಸುಕುಮಾರ ಶಿರಗಂವಕರ ಹಾಗೂ ಡಾ.ರಾಜಕಿರಣ ಅವರ ಕುಟುಂಬ ಸದಸ್ಯರು, ಮುಂತಾದವರು ಉಪಸ್ಥಿತರಿದ್ದರು.

ಕಿರುಸುದ್ದಿ

ಬದುಕು ಕಟ್ಟಿಕೊಳ್ಳಿ

ಗೋಕಾಕ: ವಿದ್ಯಾರ್ಥಿಗಳು ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ತಮ್ಮ ಬದುಕನು ಕಟ್ಟಿಕೊಳ್ಳುವಂತೆ ಎಸ್.ಎಲ್ .ಜೆ ಪಿ.ಯು ಕಾಲೇಜಿನ ಪ್ರಾಚಾರ್ಯ ಅರುಣ ಪೂಜೆರ ಹೇಳಿದರು.ನಗರದ ಶ್ರೀ ಲಕ್ಷ್ಮಣರಾವ ಜಾರಕಿಹೊಳಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಯ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಬಿಳ್ಕೋಡುಗೆ ಸಮಾರಂಭದಲ್ಲಿ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.ವಿದ್ಯಾರ್ಥಿಗಳು ಉನ್ನತ ಗುರಿಯೊಂದಿಗೆ ಪಾಲಕರ ಸಹಕಾರ ಹಾಗೂ ಗುರುಗಳ ಮಾರ್ಗದರ್ಶನದಲ್ಲಿ ಸಾಧಕರಾಗಿರಿ ತಮಗೆ ಆಸಕ್ತಿ ಇರುವ ಕ್ಷೇತ್ರಗಳ ಆಯ್ಕೆಯೊಂದಿಗೆ ಕಠಿಣ ಪರಿಶ್ರಮದಿಂದ ಪ್ರಯತ್ನ ಶೀಲರಾಗಿ ಸಮಾಜ ಗೌರವಿಸುವಂತ ವ್ಯಕ್ತಿಗಳಾಗಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸನತ್ ಜಾರಕಿಹೊಳಿ, ಮುಖ್ಯೋಪಾಧ್ಯಾಯರುಗಳಾದ ಎಚ್.ವ್ಹಿ.ಪಾಗನೀಸ, ಎ.ಎಂ.ಸರಕಾವಾಸ,ಪಿ.ವಿ.ಚಚಡಿ ಹಾಗೂ ನಿವೃತ್ತ ಶಿಕ್ಷಕ ಆರ್.ಎಂ.ದೇಶಪಾಂಡೆ ಇದ್ದರು.

7 ನೂತನ ಬೋಧನಾ ಕೊಠಡಿ ಲೋಕಾರ್ಪಣೆ

ಬೆಳಗಾವಿ : ಇಲ್ಲಿನ ರಾಮತೀರ್ಥ ನಗರದ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಶೈಕ್ಷಣಿಕ ಕ್ರಾಂತಿ ಆರಂಭವಾಗಿದೆ. ಕೊಠಡಿಗಳ ಕೊರತೆಯನ್ನು ನೀಗಿಸುವುದರ ಜೊತೆಗೆ, ಸರ್ಕಾರಿ ಶಾಲಾ ಮಕ್ಕಳಿಗೆ ಭವಿಷ್ಯದ ತಂತ್ರಜ್ಞಾನವಾದ ಎಐ ಶಿಕ್ಷಣ ನೀಡಲು ಸರ್ಕಾರ ಮುಂದಾಗಿದೆ. ಕೆಪಿಸಿ ಶಾಲೆಯ 7 ನೂತನ ಬೋಧನಾ ಕೊಠಡಿಗಳನ್ನು ಉತ್ತರ ಶಾಸಕ ಆಸೀಫ್ ಸೇಠ್ ಲೋಕಾರ್ಪಣೆಗೊಳಿಸಿದರು.ಬೆಳಗಾವಿಯ ರಾಮತೀರ್ಥನಗರದಲ್ಲಿರುವ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯ ಅಭಿವೃದ್ಧಿಗೆ ದೊಡ್ಡ ವೇಗ ಸಿಕ್ಕಿದೆ. ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿಯಲ್ಲಿ ಶಾಲೆಯಲ್ಲಿ 7 ಹೊಸ ಬೋಧನಾ ಕೊಠಡಿಗಳು ಮತ್ತು ಸುಸಜ್ಜಿತ ವಿಜ್ಞಾನ ಪ್ರಯೋಗಾಲಯವನ್ನು ಉತ್ತರ ಶಾಸಕ ಆಸೀಫ್ ಸೇಠ್ ಅವರು ಉದ್ಘಾಟಿಸಿದರು.ಈ ಹಿಂದೆ ಶಾಲೆಯಲ್ಲಿ ಇದ್ದ ಕೊಠಡಿಗಳ ಕೊರತೆಯನ್ನು ನೀಗಿಸುವಂತೆ ಶಿಕ್ಷಕರು, ಮುಖ್ಯೋಪಾಧ್ಯಾಯರು ಮತ್ತು ಬಿಇಒಗಳು ಮನವಿ ಸಲ್ಲಿಸಿದ್ದರು. ಈ ಮನವಿಗೆ ಸ್ಪಂದಿಸಿದ ಸರ್ಕಾರ, ತಕ್ಷಣವೇ ಹೊಸ ಕೊಠಡಿಗಳನ್ನು ನಿರ್ಮಿಸಿದೆ. ಇದರೊಂದಿಗೆ, ಸ್ಮಾರ್ಟ್ ಸಿಟಿ ಯೋಜನೆಯಡಿ 3 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅತ್ಯಾಧುನಿಕ ಎಐ ಕ್ಲಾಸ್ ರೂಮ್ ನಿರ್ಮಾಣವಾಗಿದ್ದು, ಸರ್ಕಾರಿ ಶಾಲಾ ಶಾಲಾ ಮಕ್ಕಳಿಗೆ ಪ್ರಾಥಮಿಕ ಹಂತದಿಂದಲೇ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ಪರಿಚಯಿಸುವ ಮಹತ್ವದ ಉದ್ದೇಶ ಹೊಂದಲಾಗಿದೆ ಎಂದರು. ಈ ವೇಳೆ ಬಿಇಒ ಲೀಲಾವತಿ ಭಜಂತ್ರಿ, ಸೇರಿದಂತೆ ಶಾಲೆಯ ಮುಖ್ಯಾಧ್ಯಾಪಕರು, ಶಿಕ್ಷಕರು, ಸೇರಿದಂತೆ ಇತರರು ಇದ್ದರು.

ಬಜೆಟ್‌ನಲ್ಲಿ ಘೋಷಣೆಯಾಗದ ಇಲಾಖಾವಾರು ಅನುದಾನ

ಬಾಗಲಕೋಟೆ: ಮುಖ್ಯಮಂತ್ರಿ 17 ಬಜೆಟ್ ಮಂಡಿಸಿದ್ದಾರೆ ಅಂದರೆ ಒಂದು ತಲೆಮಾರು ಹಣಕಾಸು ಇಲಾಖೆ ಕೈಯಲ್ಲಿ ಇಟ್ಟುಕೊಂಡಿದ್ದಾರೆ. ಇವರೊಬ್ಬ ಆರ್ಥಿಕ ತಜ್ಞ ಎಂದು ಹೇಳಿಕೊಳ್ಳಲು ನಾಚಿಕೆಯಾಗಬೇಕು. ರಾಜ್ಯ ಸರ್ಕಾರದ ಮೇಲೆ 8.34 ಲಕ್ಷ ಕೋಟಿ ಸಾಲ ಇದೆ. 5.55 ಲಕ್ಷ ಕೋಟಿ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗ ಸಾಲ ಮಾಡಿದ್ದಾರೆ ಎಂದರು. ರಾಜ್ಯದ ಒಬ್ಬ ವ್ಯಕ್ತಿಗೆ 1.17 ಲಕ್ಷ ತಲಾ ಸಾಲ ಹೊರಿಸಿದ್ದಾರೆ. ಈ ವರೆಗಿನ ಎಲ್ಲ ಸಿಎಂಗಳು 3.25 ಲಕ್ಷ ಕೋಟಿ ಸಾಲ ಮಾಡಿದ್ದರು. ಆದರೆ, ಈ ಸಿದ್ದರಾಮಯ್ಯ ಅವರು, 5.55 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ರಾಜ್ಯ ದಿವಾಳಿ ಆಗಿದೆ ಎಂದು ಎಂದು ಬಿಜೆಪಿ ರಾಜ್ಯ ವಕ್ತಾರ ಚಂದ್ರಶೇಖರ ಆರೋಪಿಸಿದರು.ನವನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲಾಖಾವಾರು ಘೋಷಣೆಯಾದ ಅನುದಾನದಲ್ಲಿ ಹಣವೇ ಬಿಡುಗಡೆಯೇ ಆಗಿಲ್ಲ, ರಾಜ್ಯದ 11 ನಿಗಮದಲ್ಲಿ 8 ನಿಗಮಕ್ಕೆ ಅಧ್ಯಕ್ಷರೇ ಇಲ್ಲ, 2024ರಿಂದ ವಾಲ್ಮೀಕಿ ನಿಗಮದ ಫಲಾನುಭವಿಗಳನ್ನೆ ಆಯ್ಕೆ ಮಾಡಿಲ್ಲ. ಪಂಚ ಗ್ಯಾರಂಟಿ ಎಂದು ಹೇಳುತ್ತಾರೆ. ಈ ಯೋಜನೆಗಳಿಗೆ 52 ಸಾವಿರ ಕೋಟಿ ಬಳಕೆ ಆಗುತ್ತದೆ. ಬಜೆಟ್ ನ ಉಳಿದ ಹಣ ಎಲ್ಲಿ ಹೋಗುತ್ತಿದೆ ಎಂದು ಪ್ರಶ್ನಿಸಿದರು.ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿ, ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಮಂಡಿಸಿರುವ ಬಜೆಟ್‌ದಲ್ಲಿ ಜಿಲ್ಲೆಗೆ ಯಾವುದೇ ಮಹತ್ವದ ಯೋಜನೆಗಳು ಘೋಷಣೆಯಾಗಲಿಲ್ಲ, ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ಉಪಚುನಾವಣೆ ನಡೆಯಲಿದ್ದು, ದಾವಣಗೇರೆ ನೀಡಿದಷ್ಟು ಯೋಜನೆ, ಅನುದಾನ ಬಾಗಲಕೋಟೆಗೆ ನೀಡಲಿಲ್ಲ. ಬಾಗಲಕೋಟೆಯಲ್ಲಿ ಕಾಂಗ್ರೆಸ್ ಪಕ್ಷ ಸೋಲುತ್ತದೆ ಎಂದು ಒಪ್ಪಿಕೊಂಡ ಕಾರಣದಿಂದಲೇ ಬಜೆಟ್‌ದಲ್ಲಿ ಜಿಲ್ಲೆಗೆ ಹೆಚ್ಚಿನ ಅನುದಾನ ನೀಡಿಲ್ಲ ಎಂದು ದೂರಿದರು.




ಗೋಕಾಕ: ನಗರದ ಶ್ರೀ ಲಕ್ಷ್ಮಣರಾವ ಜಾರಕಿಹೊಳಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಯ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಬಿಳ್ಕೋಡುಗೆ ಸಮಾರಂಭದಲ್ಲಿ ಪ್ರಾಚಾರ್ಯ ಅರುಣ ಪೂಜೆರ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಪ್ರಭು ಮಹಾಲಿಂಗೇಶ್ವರ ಅದ್ಧೂರಿ ರಥೋತ್ಸವ

ನೇಸರಗಿ: ಸಮೀಪದ ಮಾಸ್ತಮರಡಿ ಗ್ರಾಮದ 200 ವರ್ಷಗಳ ಇತಿಹಾಸವುಳ್ಳ ಅನೇಕ ಭಕ್ತರ ಆರಾಧ್ಯ ತಾಣ, ಅಲ್ಲಮಪ್ರಭು ವಾಸಿತ, ಶ್ರೀ ಪ್ರಭುಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರದಂದು ಅದ್ದೂರಿ ರಥೋತ್ಸವವು ಅನೇಕ ಮಹಾತ್ಮರ, ಮುಖಂಡರ, ಭಕ್ತರ ಭಕ್ತಿ ಭಾವದೊಂದಿಗೆ ಅದ್ದೂರಿಯಾಗಿ ನೆರವೇರಿತು.ಈ ಜಾತ್ರಾ ಮಹೋತ್ಸವದಲ್ಲಿ ಮಾಜಿ ಶಾಸಕ ಹಾಗೂ ಬಿಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಮಹಾಂತೇಶ ದೊಡ್ಡಗೌಡರ ಮಾತನಾಡಿ, ಜಾತ್ರೆಗಳಿಂದ ಜನರ ಮನಸಿನಲ್ಲಿ ಪ್ರೀತಿ, ಸೌಹಾರ್ದ, ಕುಟುಂಬ ಪ್ರೇಮ ಇಮ್ಮಡಿಗೊಳ್ಳುತ್ತದೆ. ಈಗಿನ ಪಿಠಾಧಿಪತಿಗಳಾದ ವೀರಭದ್ರ ಪಂಡಿತ ಆರಾಧ್ಯ ಶ್ರೀಗಳು ಈ ಮಠದ ಅಭಿವೃದ್ಧಿಗೆ ಪಾಳು ಬಿದ್ದ ಮಠವನ್ನು ಉನ್ನತಿಕರಿಸಿ ನೂತನ ರಥೋತ್ಸವ ನಿರ್ಮಾಣ ಮಾಡಿಸಿ ಅದ್ದೂರಿ ಜಾತ್ರೆ ಆಗಲು ಅವರ ಪರಿಶ್ರಮ ಅಪಾರವಾಗಿದೆ ಎಂದರು.

ಮಹಾ ನೂತನ ರಥೋತ್ಸವದಲ್ಲಿ ಮುನ್ನ ಧರ್ಮಸಭೆಯಲ್ಲಿ ಮಹಾತ್ಮರಾದ ಅಂಕಲಗಿ ಅಡವಿ ಸಿದ್ದೇಶ್ವರ ಮಠದ ಅಮರಸಿದ್ದೇಶ್ವರ ಸ್ವಾಮೀಜಿ, ಮಮದಾಪುರ ಮೌನ ಮಲ್ಲಿಕಾರ್ಜುನಶ್ರೀಗಳು, ಕಾದ್ರೊಳ್ಳಿಯ ಅದೃಶ್ಯ ಪಾಲಾಕ್ಷಶಿವಯೋಗಿಗಳು, ಮಾಸ್ತಮರ್ಡಿ ಪ್ರಭುಲಿಂಗೇಶ್ವರ ಮಠದ ಷ.ಬ್ರ. ವೀರಭದ್ರ ಪಂಡಿತ ಆರಾಧ್ಯ ಶ್ರೀಗಳು,ಹಾರುಗೋಪ್ಪದ ಶ್ರೀ ಶಿವಯೋಗಿಣಿ ತಾಯಿ ಮುಂತಾದ ಮಹಾತ್ಮರು ಧರ್ಮಸಭೆಯಲ್ಲಿ ಅಧ್ಯಾತ್ಮ ಪ್ರವಚನದಲ್ಲಿ ಭಾಗವಹಿಸಿದ್ದರು. ಯುವ ಮುಖಂಡ ಸಚಿನ ಪಾಟೀಲ ಸೇರಿದಂತೆ ನೇಸರಗ ಜಿ ಪಂ ಭಾಗದ ಮುಖಂಡರು, ಸುತ್ತಮುತ್ತಲಿನ ಗ್ರಾಮಗಳ ಅಪಾರ ಭಕ್ತ ಸಮೂಹ ಪಾಲ್ಗೊಂಡಿದ್ದರು.



ನೇಸರಗಿ: ಸಮೀಪದ ಮಾಸ್ತಮರಡಿ ಗ್ರಾಮದ 200 ವರ್ಷಗಳ ಇತಿಹಾಸವುಳ್ಳ ಅನೇಕ ಭಕ್ತರ ಆರಾಧ್ಯ ತಾಣ, ಅಲ್ಲಮಪ್ರಭು ವಾಸಿತ, ಶ್ರೀ ಪ್ರಭುಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರದಂದು ಅದ್ದೂರಿ ರಥೋತ್ಸವವು ಅನೇಕ ಮಹಾತ್ಮರ, ಮುಖಂಡರ, ಭಕ್ತರ ಭಕ್ತಿ ಭಾವದೊಂದಿಗೆ ಅದ್ದೂರಿಯಾಗಿ ನೆರವೇರಿತು.

ರಾಷ್ಟ್ರಭಕ್ತಿ ಮೂಡಿಸುವ ಹಿಂದು ಧರ್ಮ

ಸುರೇಬಾನ: ರಾಮಸೇತು ನಿರ್ಮಾಣದ ಕಾರ್ಯ ಪ್ರಾರಂಭಿಸುವಾಗ ಶ್ರೀರಾಮನು ಲಂಕಾಧೀಶ್ವರನಾದ ರಾವಣನಿಗೆ ಪೂಜಾ ಕಾರ್ಯಕ್ರಮಕ್ಕೆ ಆಹ್ವಾನ ನೀಡಿ, ಅವರಿಂದ ಆಶೀರ್ವಾದ ಪಡೆದದ್ದು, ನಮ್ಮ ಸಂಸ್ಕೃತಿ ಎಂದು ಸಾಮಾಜಿಕ ಕಾರ್ಯಕರ್ತ ಶಿವಾನಂದ ಬಡಿಗೇರ ಹೇಳಿದರು.

ಅವರ ಸಮೀಪದ ಮನಿಹಾಳ-ಸುರೇಬಾನ ಗ್ರಾಮದ ಶ್ರೀ ಮಾರುತೇಶ್ವರ ತೇರಿನ ಮೈದಾನದಲ್ಲಿ ಸೋಮವಾರ ಸಂಜೆ ಆಯೋಜಿಸಿದ್ದ ವಿರಾಟ್ ಹಿಂದೂ ಸಮಾಜೋತ್ಸವ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಹಿಂದು ಧರ್ಮ ಒಂದು ಜಾತಿಗೆ ಸೇರಿದ್ದಲ್ಲ, ರಾಷ್ಟ ಧರ್ಮ, ರಾಷ್ಟ ಭಕ್ತಿ ಮೂಡಿಸಿ ಎಲ್ಲರನ್ನು ಒಂದಾಗಿಸುವುದೇ ಹಿಂದೂ ಧರ್ಮ ಎಂದು ತಿಳಿಸಿದರು.

ಯಾವ ಧರ್ಮಕ್ಕೆ ಹುಟ್ಟು ಇದೆಯೋ ಆ ಧರ್ಮಕ್ಕೆ ಸಾವು ಇರುತ್ತದೆ. ಹಿಂದೂ ಧರ್ಮಕ್ಕೆ ಹುಟ್ಟು ಇಲ್ಲಾ, ಸಾವು ಇಲ್ಲಿ ಇದು ಸೂರ್ಯ-ಚಂದ್ರರು ಇರುವ ವರೆಗೂ ಇದು ಇದ್ದೇ ಇರುತ್ತದೆ ಎಂದು ಗರ್ಜಿಸಿದರು.

ಸಾನ್ನಿಧ್ಯ ವಹಿಸಿದ್ದ ಅವರಾದಿ ಫಲಾಹಾರೇಶ್ವರ ಮಠದ ಶಿವಮೂರ್ತಿ ಸ್ವಾಮೀಜಿ ಆಶೀರ್ವಚನ ನೀಡಿ, ಸಾವಿರಾರು ವರ್ಷಗಳ ಇತಿಹಾಸ ವಿರುವ ಪುರಾತನ ಧರ್ಮವೆಂದರೆ ಅದು ಹಿಂದೂ ಧರ್ಮ ಮಾತ್ರ. ಇದು ಅನಂತ ಸತ್ಯ ಧರ್ಮವಾಗಿದ್ದು, ಜಗತ್ತಿನಲ್ಲಿಯೇ ಶ್ರೇಷ್ಠ ಧರ್ಮವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗುರುದೇವ ಆತ್ಮಾನಂದ ಪಣ್ಯಾಶ್ರಮದ ಸಮರ್ಥ ಶಿವಾನಂದ ಸ್ವಾಮಿಜಿ ಮಾತನಾಡಿ, ಸನಾತನ ಹಿಂದೂವು ಮಾನವ ಕುಲಕ್ಕೆ ಒಳ್ಳೆಯದನ್ನೇ ಬಯಸುತ್ತಿದೆ, ಜಾತಿಗಳು ಬೇರೆ ಬೇರೆ ಇದ್ದರು ಎಲ್ಲರೂ ಒಂದೇ ಎಂಬುದನ್ನು ಸಾರವ ಈ ಸನಾತನ ಧರ್ಮ ಎಂದು ತಿಳಿಸಿದರು.



» ವಿರಾಟ್ ಹಿಂದೂ ಸಮಾಜೋತ್ಸವ
» ಶಿವಾನಂದ ಬಡಿಗೇರ ಹೇಳಿಕೆ.

ಲಖನಾಯಕನಕೊಪ್ಪದ ಪುರ್ಣನಂದ ಮಠದ ಕೃಷ್ಣಾನಂದ ಸ್ವಾಮೀಜಿ ಆಶೀರ್ವಚನ ನೀಡುತ್ತಾ, ಈಗ ಗೋ ಭಕ್ಷಕರ ಸಂಖ್ಯೆ ಹೆಚ್ಚಾಗಿದ್ದು, ಅದನ್ನು ತಡೆಯು ಎಲ್ಲರೂ ಮುಂದೆ ಬರಬೇಕೆಂದು ಕರೆ ನೀಡಿದರು.

ಗೋಪಾಲ ಪಾತಾಳಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮುಳ್ಳೂರುಹಿರೇಮಠದಚಂದ್ರಶೇಖರಸ್ವಾಮೀಜಿ, ಸುರೇಬಾನ ಶ್ರೀರಾಮ ಮಂದಿರ, ಶಬರಿ ಆಶ್ರಮದ ಅವದೇಶದಾಸ ಮಹಾರಾಜ ಹಾಗೂ ಬೆಂಗಳೂರ ಓಂ ಶಿವೇ ಮಂಗಳಾ ಸೇವಾಶ್ರಮದ ಮಾತೋಶ್ರೀ ಕೌಶಲ್ಯಾ ಮಾತೆ ವೇದಿಕೆಯ ಮೇಲಿದ್ದರು.

ಸುರೇಬಾನ-ಮನಿಹಾಳ ಗ್ರಾ.ಪಂನ ಪೌರಕಾರ್ಮಿಕರಿಗೆ, ಶ್ರೀ ಕ್ಷೇ.ಧ.ಗ್ರಾ.ಯೋಜನೆಯ ಅಧಿಕಾರಿಗಳಿಗೆ ಹಾಗೂ ಭಗವದ್ಗೀತೆಯಿಂದ ಸಾಮಾಜಿಕ ಸಾಮರಸ್ಯದ ಕುರಿತು ಭಾಷಣದಲ್ಲಿ

ಹಿಂದೂ ಧರ್ಮವನ್ನು ನಾಶ ಮಾಡುತ್ತೇವೆಂದು ಹೇಳಿದವರು ತಾವೇ ನಾಶವಾಗಿ ಹೋಗಿದ್ದಾರೆ. ಇದು ವಸುದೈವ ಕುಟುಂಬಂಕಂ ಎಂದು ಪ್ರತಿಪಾದನೆ ಮಾಡಿದ ಹಿಂದೂ ಧರ್ಮ.

■ ಶಿವಾನಂದ ಬಡಿಗೇರ, ಸಾಮಾಜಿಕ ಕಾರ್ಯಕರ್ತ

ರಾಜ್ಯಮಟ್ಟಕ್ಕೆ ಆಯ್ಕೆಯಾದ ಕುಮಾರಿ ಅಶ್ವಿತಾ ಹಡಪದ,

ಶ್ರೀನಿಧಿ ಯಲಿಗೋಡ, ವಿಜಯಲಕ್ಷ್ಮಿ ಕಮ್ಮಾರ ಇವರುಗಳಿಗೆ ಸನ್ಮಾನಿಸಲಾಯಿತು.

ದೇಶ, ಸಂಸ್ಕೃತಿ, ಸಮಾಜದ ಸ್ವಾಸ್ಥ್ಯ ಹಾಗೂ ಪರಿಸರ ಉಳುವಿಗೋಸ್ಕರ ಪ್ರಮಾಣ ವಚನ ಮಾಡಲಾಯಿತು.

ಶಿವಾನಂದ ಕರದಿನ ನಿರೂಪಿಸಿದರು, ಮಂಜುನಾಥ ಹನಸಿ ಸ್ವಾಗತಿಸಿದರು, ಮೌನೇಶ ಕಮ್ಮಾರ ವಂದಿಸಿದರು.

ಒಂದೇ ಮಾತರಂ ಗೀತೆ ಹಾಡಿನೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಮಹಿಳಾ ಸಬಲೀಕರಣದಿಂದ ಸಮಾಜದ ಅಭಿವೃದ್ಧಿ ಸಾಧ್ಯ

ಚನ್ನಮ್ಮ ಕಿತ್ತೂರು: ಮಹಿಳೆಯರ ಸಬಲೀಕರಣವೇ ಸಮಾಜದ ಸಮಗ್ರ ಅಭಿವೃದ್ಧಿಗೆ ಮೂಲಾಧಾರವಾಗಿದ್ದು, ಮಹಿಳೆಯರು ಶಿಕ್ಷಣ, ಆರೋಗ್ಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಮುನ್ನಡೆಯುವ ಮೂಲಕ ದೇಶದ ಪ್ರಗತಿಗೆ ಮಹತ್ತರ ಕೊಡುಗೆ ನೀಡುತ್ತಿದ್ದಾರೆ ಎಂದು ತಾಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ನಿಂಗಪ್ಪ ಮಸಳಿ ಹೇಳಿದರು.

ತಾಲೂಕು ಪಂಚಾಯತಿ ಸಭಾ ಭವನದಲ್ಲಿ ಸೋಮವಾರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರಮಹಿಳೆಯರಕಲ್ಯಾಣಕ್ಕಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳನ್ನು ಸಮರ್ಪಕವಾಗಿ ಬಳಸಿಕೊಂಡರೆ ಮಹಿಳೆಯರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಇನ್ನಷ್ಟು ಬಲಿಷ್ಠರಾಗಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಿಡಿಪಿಒ ಅರುಣ್ ಕುಮಾರ್ ಮಾತನಾಡಿ, ಮಹಿಳೆಯರ ಆರೋಗ್ಯ, ಪೌಷ್ಟಿಕತೆ ಹಾಗೂ ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ ಎಂದು ಹೇಳಿದರು.

ಗ್ಯಾರಂಟಿ ಯೋಜನೆ ಅಧ್ಯಕ್ಷ ಗಂಗಪ್ಪ ಹುರಕಡ್ಲಿ, ಯೋಜನಾಧಿಕಾರಿ ಗೌಡಪ್ಪ ಗಿರಿಮಲ್ಲನವರ ಸೇರಿದಂತೆ ಸಂಜೀವಿನಿ ಒಕ್ಕೂಟದ ಸದಸ್ಯರು, ತಾಲೂಕು ಪಂಚಾಯತ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಗ್ರಾಮೀಣ ಪ್ರದೇಶಗಳಲ್ಲಿಯೂ ಮಹಿಳೆಯರು ಸ್ವಸಹಾಯ ಸಂಘಗಳು ಹಾಗೂ ಸಂಜೀವಿನಿ ಒಕ್ಕೂಟಗಳ ಮೂಲಕ ಮಹಿಳೆಯರು ಸ್ವಾವಲಂಬನೆಯ ದಾರಿಗೆ ಸಾಗುತ್ತಿರುವುದು ಶ್ಲಾಘನೀಯ ಬೆಳವಣಿಗೆಯಾಗಿದೆ.

■ ನಿಂಗಪ್ಪ ಮಸಳಿ, ತಾಪಂ ಇಒ



ಬೋಗಸ್ ವಿಳಾಸ ಸೃಷ್ಟಿ: ಆರೋಪ

ಚಿಕ್ಕೋಡಿ: ಪಟ್ಟಣದ ಹೊರವಲಯದಲ್ಲಿ ಕಳೆದ 10 ವರ್ಷಗಳ ಹಿಂದೆ ನಿರ್ಮಿಸಿದ ಜವಳಿ ಪಾರ್ಕ್‌ನಲ್ಲಿ ಮಹಾರಾಷ್ಟ್ರ, ಗುಜರಾತ್ ಸೇರಿದಂತೆ ಹೊರರಾಜ್ಯದ ಜನರು ಬೋಗಸ್ ವಿಳಾಸ ನೀಡಿ ಸರ್ಕಾರದ ಸಹಾಯಧನ ಪಡೆದುಕೊಂಡು ಸ್ಥಳೀಯರಿಗೆ ಅನ್ಯಾಯ ಮಾಡಿದ್ದಾರೆ ಎಂದು ಮುಖಂಡ ರಾಜು ಖಿಚಡೆ ಆರೋಪಿಸಿದರು.

ನಿಪ್ಪಾಣಿ ತಾಲೂಕಿನ ಬೋರಗಾಂವ ಪಟ್ಟಣದಲ್ಲಿಮಂಗಳವಾರಸುದ್ದಿಗೋಷ್ಠಿಯಲ್ಲಿ ಮಾತನಾಡಿ, 75 ಎಕರೆ ಪ್ರದೇಶ ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಜವಳಿ ಪಾರ್ಕ್‌ನಲ್ಲಿ 216 ನಿವೇಶನಗಳನ್ನು ಮಾಡಲಾಗಿದ್ದು, ಇವುಗಳಲ್ಲಿ 55 ಘಟಕಗಳನ್ನು ಉದ್ಯಮಿಗಳು ಸ್ಥಾಪಿಸಲಾಗಿದೆ. 55 ಘಟಕಗಳ ಪೈಕಿ 45 ಘಟಕಗಳನ್ನು ಸ್ಥಾಪಿಸಿದವರು ಹೊರರಾಜ್ಯದ ಉದ್ದಿಮೆದಾರರಾಗಿದ್ದು, ಬೋಗಸ್ ವಿಳಾಸ ನೀಡಿ ಜವಳಿ ಇಲಾಖೆಯಿಂದ 85.2 ಕೋಟಿ ಸಹಾಯಧನ ಪಡೆದುಕೊಂಡು ಸರ್ಕಾರಕ್ಕೆ ವಂಚಿಸಿದ್ದಾರೆ ಎಂದರು.

ಸರ್ವೆ ನಂ. 184/1ಎ ನಲ್ಲಿರುವ ಜವಳಿ ಪಾರ್ಕ್‌ನ್ನು 2013-14ರಲ್ಲಿ ಸಣ್ಣ ಕೈಗಾರಿಕೆ ಸಚಿವರಾಗಿದ್ದ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ಸ್ಥಾಪನೆಯಾಗಿದ್ದು, 27 ಕೋಟಿ ವೆಚ್ಚದಲ್ಲಿ ಕುಡಿಯುವ ನೀರು, ವಿದ್ಯುತ್, ರಸ್ತೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಆದರೆ ಸ್ಥಳೀಯ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡದ ಜನರಿಗೆ ದೊರೆಯಬೇಕಿದ್ದ ಸೌಲಭ್ಯಗಳನ್ನು ಸ್ಥಳೀಯ ಮುಖಂಡ ಶರದ ಜಂಗಟೆ ಸೇರಿದಂತೆ ಹಲವರ ಕುಮ್ಮಕ್ಕಿನಿಂದ ಅಕ್ರಮದ ವಾಸನೆ ಇದೆ. ಈ ಕುರಿತು ಸಂಬಂಧಿಸಿದ ಇಲಾಖೆಯವರು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಮುಖಂಡ ವಿದ್ಯಾಧರ ಅಮ್ಮಣ್ಣವರ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಶಿಶಿರ ಸಾತಪೂತೆ, ಭಾವುಸಾಹೇಬ ಪಾಟೀಲ, ಶಿವಪ್ಪ ಮಾಳಗೆ, ಅಣ್ಣಾಸಾಹೇಬ ಬರವಾಡೆ, ರೋಹಿತ ಪಾಟೀಲ, ಭರತ ಹವಲೆ, ಬಾಳಸಾಹೇಬ ಬಸನ್ನವರ, ಅಶೋಕ ಹವಲೆ, ಧನಪಾಲ ಹವಲೆ ಇತರರು ಇದ್ದರು.



ಸಹಕಾರಿ ಸಂಘದ 6ನೇ ಶಾಖೆ ಉದ್ಘಾಟಿಸಿದ ಶ್ರೀಗಳು

ಮೂಡಲಗಿ: ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ದೊರೆಯುವಂತೆ ಸಹಕಾರ ಸಂಘಗಳಲ್ಲಿ ಸಾಲ ವಿತರಿಸುವ ಮೂಲಕ ಬಡ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಸಾಲ ನೀಡಿ ಅವರನ್ನು ವಿದ್ಯಾವಂತರನ್ನಾಗಿ ಮಾಡಿ ಎಂದು ಮೂಡಲಗಿ ಶಿವಬೋಧರಂಗ ಸಂಸ್ಥಾನ ಮಠದ ಪೀಠಾಧಿಪತಿ ದತ್ತಾತ್ರಯಬೋಧ ಸ್ವಾಮಿಜಿ ಹೇಳಿದರು.

ಚಿಕ್ಕೋಡಿ ತಾಲೂಕಿನ ಕಬ್ಬೂರ ಪಟ್ಟಣದ ರಾಯಬಾಗ ರಸ್ತೆಯ ಶ್ರೀಶೈಲ ಸೋಲ್ಲಾಪೂರೆ ಕಾಂಪ್ಲೆಕ್ಸ್‌ನಲ್ಲಿ ಸ್ಥಳೀಯ ಮಂಜುನಾಥ ಅರ್ಬನ ಕೋ ಆಪ್ ಕ್ರೆಡಿಟ್ ಸೊಸೈಟಿಯ ಆರನೇಯ ಶಾಖೆಯುನ್ನು ಉದ್ಘಾಟಿಸಿ ಮಾತನಾಡಿದರು.

ದೊಡವಾಡದ ದುರದುಂಡೇಶ್ವರ ಮಠದ ಶಿವಾನಂದ ಮಹಾಸ್ವಾಮಿಜಿಗಳು ಗಣಕಯಂತ್ರ ಪೂಜೆ ಸಲ್ಲಿಸಿದರು.

ಸಾನಿಧ್ಯವಹಿಸಿದ ಸುಣಧೋಳೀಯ ಜಡಿಸಿದ್ದೇಶ್ವರ ಮಠದ ಪೀಠಾಧಿಪತಿ ಶಿವಾನಂದ ಸ್ವಾಮೀಜಿ, ಘಟಪ್ರಭಾ ಗುಬ್ಬಲಗುಡ್ಡದ ಡಾ ಮಲ್ಲಿಕಾರ್ಜುನ ಮಹಾಸ್ವಾಮಿಜಿಗಳು ಶೇರು ಪತ್ರ ವಿತರಿಸಿದರು.

ಸಾನ್ನಿಧ್ಯ ವಹಿಸಿದ್ದ ಕಬ್ಬೂರದ ಗೌರಿಶಂಕರ ಮಠದ ರೇವಣಸಿದ್ದ ಶಿವಾಚಾರ್ಯ ಶ್ರೀಗಳು ಸಂಘದ ಆಡಳಿತ ಮಂಡಳಿಗೆ ಶುಭ ಹಾರೈಸಿದರು,

ಸಂಘದ ಅಧ್ಯಕ್ಷ ಸಂಗಪ್ಪ ನಿಡಗುಂದಿ ಸಮಾರಂಭದ ಅಧ್ಯಕ್ಷತೆ ವಹಿಸಿದರು, ಮೂಡಲಗಿ ಬಸವೇಶ್ವರ ಸೊಸಾಯಿಟಿಯ ಸಂಸ್ಥಾಪಕ ಅಧ್ಯಕ್ಷ ಬಸವಪ್ರಭು ನಿಡಗುಂದಿ ನೂತನ ಶಾಖೆಯನ್ನು ಉದ್ಘಾಟಿಸಿದರು.

ಗೋಕಾಕ ಸನ್ನದು ಲೇಖಪರಿಶೋಧಕ ಸತೀಶ ನಾಡಗೌಡ ಅತಿಥಿಯಾಗಿ ಆಗಮಿಸಿದರು.

ಉಪಾಧ್ಯಕ್ಷ ಶಿವಬಸು ಕುಡಚಿ, ನಿರ್ದೇಶಕರಾದ ರುದ್ರಪ್ಪ ಬಳಿಗಾರ ಶಿವಬಸು ಸುಣದೋಳಿ,ಶಿವಬೋಧ ಉದಗಟ್ಟಿ,ಪಾಂಡುರಂಗ ಮಹೇಂದ್ರಕರ,ಪ್ರಶಾಂತ ನಿಡಗುಂದಿ,ಶಿವಪ್ಪ ಬುಜನ್ನವರ,ಮಹಾದೇವ ಗೋಕಾಕ, ಲಕ್ಷ್ಮಿ ಶಿವಾಪೂರ, ಶೈಲಜಾ ನಾರಯಣಕರ, ರಶ್ಮಿ ಸಸಾಲಟ್ಟಿ, ಶಾಖಾ ಸಲಹ ಸಮಿತಿ ಸದಸ್ಯರಾದ ಸುಭಾಸ ಚಿಕ್ಕೋಡಿ,ಶಿವಾನಂದ ಪಾಟೀಲ,ರಮೇಶ ರಂಗಾಪೂರ,ಹಾಲಪ್ಪ ಮದಕರಿ,ಬಸವರಾಜ ಮನಗುಳಿ,ಅಂಜಲಿ ಮನ್ನಾಪೂರ ಹಾಗೂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು, ಪ್ರಧಾನ ಕಾರ್ಯದರ್ಶಿ ಬಸವರಾಜ ಕುದರಿ ಸ್ವಾಗತಿಸಿ ವಂದಿಸಿದರು.



ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ

ಯಮಕನಮರಡಿ: ಸಮೀಪದ ಇಂದ್ರಾನಗರ ಗ್ರಾಮದ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಯಶಸ್ವಿಯಾಗಿ ಜರುಗಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹಳೆ ಗುಡಗನಟ್ಟಿಯ ಶಿಕ್ಷಕರಾದ ಶೆಟ್ಟಿ ಅವರು ವಿದ್ಯಾರ್ಥಿಗಳಿಗೆ ಶಿಕ್ಷಣದಬಗ್ಗೆ ಅರಿವು ಮೂಡಿಸಿದರು. ಇಂದ್ರನಗರ ಗ್ರಾಮದ ಹಿರಿಯ ಪತ್ರಕರ್ತ ಹಾಗೂ ಸಾಹಿತಿಗಳಾದ ಗೋಪಾಲ್ ಚಿಪಣಿ ಮಾತನಾಡಿ, ಈಗಾಗಲೇ ಶಾಲೆಗೆ ನೂತನವಾಗಿ ಮೂರು ಸುಸಜ್ಜಿತ ಕಟ್ಟಡಗಳು ಮಂಜುರಾಗಿವೆ,ಶಾಲೆಯ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಭವಿಷ್ಯದ ಅಭಿವೃದ್ಧಿಗೆ ನಿಮ್ಮೊಂದಿಗೆ ನಾವು ಸದಾ ಇರುತ್ತೇವೆ ಎಂದರು.ಈ ಸಂದರ್ಭದಲ್ಲಿ ಶಾಲೆಯ ಹಿರಿಯ ಗುರು ಮಾತೆಯರು ಎಲ್ಲರನ್ನೂ ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳನ್ನು ಸನ್ಮಾನಿಸಲಾಯಿತು.



ಮಾ.11ರಿಂದ 6 ದಿನ ಕೃಷಿ ಮೇಳ: ಬಸವಪ್ರಸಾದ ಜೊಲ್ಲೆ

ಚಿಕ್ಕೋಡಿ: ನಿಪ್ಪಾಣಿ ನಗರದ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಮಾಜಿ ಸಂಸದ ಹಾಗೂ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ, ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಮಾರ್ಗದರ್ಶನ ದಲ್ಲಿ ಮಾ.11ರಿಂದ ಮಾ.16 ರವರೆಗೆ 6 ದಿನಗಳ ಕಾಲ ಕೃಷಿ ಮೇಳ ಹಮ್ಮಿಕೊಳ್ಳಲಾಗಿದೆ. ಬೃಹತ್ ಕೃಷಿ ಉತ್ಸವದಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯಗಳ ಗಡಿ ಭಾಗದ ಎರಡು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಯುವ ಉದ್ಯಮಿ, ಜೊಲ್ಲೆ ಗ್ರುಪ್ ಉಪಾಧ್ಯಕ್ಷ ಬಸವಪ್ರಸಾದ ಜೊಲ್ಲೆ ಹೇಳಿದರು.

ನಿಪ್ಪಾಣಿ ನಗರ ಹಾಲ ಶುಗರ್ಸ್ ಕಾರ್ಖಾನೆ ಆವರಣದಲ್ಲಿ ಕೃಷಿ ಉತ್ಸವ ನಡೆಯುವ ಸ್ಥಳದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಉದ್ದೇಶಿಸಿ ಮಾತನಾಡಿದರು.

12 ಎಕರೆ ಪ್ರದೇಶದಲ್ಲಿಬೇರೆ ಬೇರೆ ರಾಜ್ಯಗಳಿಂದ ಬರುವ ಕೃಷಿ ಸಂಬಂಧಿತ ವಸ್ತುಗಳ ಮಾರಾಟ ಮತ್ತು ಪ್ರದರ್ಶನಕ್ಕೆ 300ಕ್ಕೂ ಹೆಚ್ಚು ಸ್ಟಾಲ್ ಗಳನ್ನು ನಿರ್ಮಿಸಲಾಗಿದ್ದು, ಗಡಿ ಭಾಗದ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಬಾಗವಹಿಸಿ ಇದರ ಸದುಪಯೋಗ ಪಡೆದು ಕೂಳ್ಳಬೇಕೆಂದು ಮನವಿ ಮಾಡಿದರು.

ಕೃಷಿ ಉತ್ಸವದಲ್ಲಿ ಭಾಗವಹಿಸುವ ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಭದ್ರತೆ, ಫೈರ್ ಫೈಟರ್, ಅಂಬ್ಯೂಲನ್ಸ್ ಸೇವೆ , ಸಿಸಿಟಿವಿ ಅಳವಡಿಕೆ,ಕುಡಿಯುವ ನೀರು ಮತ್ತು ವಾಶ್ ರೂಮ್ ಸಹಿತ ಎಲ್ಲಾ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದರು.

ಬುಧವಾರ ಮಾ. 11ರಂದು ಭವ್ಯ ಎತ್ತಿನ ಗಾಡಿ



ಶರ್ಯತ್ತಿನೊಂದಿಗೆ ಕೃಷಿ ಉತ್ಸವ ಉದ್ಘಾಟನೆಯಾಗಲಿದೆ. ಕಣೇರಿ ಸಿದ್ದಗಿರಿಮಠದ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ.

ಡೊಳ್ಳಿನ ಸ್ಪರ್ಧೆ, ಕೊಲ್ಲಾಪುರದ ಭಜನ ಸಂಘದಿಂದ ಆಧುನಿಕ ಸ್ವರೂಪದಲ್ಲಿ ಭಜನೆಗಳು, ಬೆಂಗಳೂರಿನ ಸೈಕಿಕ್ ಸಿಬಲಿಂಗ್ಸ ವತಿಯಿಂದ ಮನಸಿನ ಆಟಗಳು ಕಾರ್ಯ ಕ್ರಮ ನಡೆಯುವವು. ಮಾ.12 ರಂದು ಕಬ್ಬು ಬೆಳೆಯ ಸೆಮಿನಾರ್, ಮರ್ದಾನಿ ಕ್ರೀಡಾ ಸ್ಪರ್ಧೆ ,ಮಿಸ್ ಮತ್ತು ಮಿಸ್ಸೆಸ್ ನಿಪ್ಪಾಣಿ ಸ್ಪರ್ಧೆಯ ಗ್ರ್ಯಾಂಡ್ ಫಿನಾಲೆ, ಅನ್ ಪ್ಲಗ್ಡ್ ಸ್ಟುಡಿಯೂ ಬೆಳಗಾವಿ ಇವರ ಹಾರಮೋನಿ ಮ್ಯುಜಿಕಲ್ ಕಾರ್ಯಕ್ರಮ ನಡೆಯಲಿವೆ. ಮಾ. 13 ರಂದು ಆಧುನಿಕ ಪದ್ದತಿಯಲ್ಲಿ ಕಬ್ಬು ಬೆಳೆಯುವ ಬಗ್ಗೆ ಉಪನ್ಯಾಸ, ಶ್ವಾನ ಸ್ಪರ್ಧೆ,ಸಂತರ ಅಭಂಗ ಆಧಾರಿತ ಸಂಗಿತ ಕಾರ್ಯಕ್ರಮ ಜರುಗಲಿವೆ. ಮಾ.14ರಂದು ರೈತರಿಗೆ ಅಗ್ರಿ ಫೈನಾನ್ಸ್ ಸೆಮಿನರ್, ನವದೆಹಲಿಯ ಚಯನಿತ್ ಬ್ಯಾಂಡ್ ಅಂಧ ಮಕ್ಕಳ ವಿಶೇಷ ಸಂಗೀತ ಕಾರ್ಯಕ್ರಮ, ಗೋಕಾಕನ ಜನಪದ ಚಿಲಿಪಿಲಿ ರಸಮಂಜರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.ಮಾ.15 ರಂದು ಕೃಷಿ ಪಂಡಿತ ರಿಂದ ಸಮಗ್ರ ಕೃಷಿ ಪದ್ದತಿ ಉಪನ್ಯಾಸ, ಹಲಗಿ ಸ್ಪರ್ಧೆ, ಜಮಖಂಡಿ ಸಪ್ತಸ್ವರ ಲೈವ್ಸ ಇವರ ಕನ್ನಡ ಜನಪದ, ಪುಣೆ ಮೂಲದ ಕಲಾವಿದರಿಂದ ಲಾವಣಿ ನೃತ್ಯ ನಡೆಯಲಿವೆ. ಮಾ. 16ರಂದು ಟಗರಿನ ಕಾಳಗ, ಗೋವಾದ ಸಾಶ್ ಬ್ಯಾಂಡ್ ಅವರ ಮ್ಯುಜಿಕಲ್ ಆರ್ಕೆಸ್ಟ್ರಾ ಆಯೋಜನೆ ಮಾಡಲಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕಾರ್ಖಾನೆ ಅಧ್ಯಕ್ಷ ಎಮ್ ಪಿ ಪಾಟೀಲ, ಸಂಚಾಲಕ ಜಯಕುಮಾರ ಖೋತ, ಜಯವಂತ ಬಾಟಲೆ, ರಾಜು ಗುಂದೇಶಾ, ಸಮಿತ ಸಾಸನೆ, ಸುನಿಲ ಪಾಟೀಲ, ರಾವಸಾಹೇಬ ಪರಾಳೆ, ರಮೇಶ ಪಾಟೀಲ ಸುಹಾಸ ಗೂಗೆ, ಪ್ರವಿಣ ಶಿಂಧೆ, ವ್ಯವಸ್ಥಾಪಕ ನಿರ್ದೇಶಕ ಅಪ್ಪಾಸಾಹೇಬ ಶಿರಗಾಂವೆ, ಕಚೇರಿ ಅಧೀಕ್ಷಕ ಗಜಾನನ ರಾಮನಕಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಪರಿಶೀಲಿಸದೆ ಪಡಿತರ ಚೀಟಿ ಮಂಜೂರು: ಆರೋಪ

ಖಾನಾಪುರ: ಬಿಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದವರ ಪೈಕಿ ಬಹುತೇಕ ಪಡಿತರ ಚೀಟಿಗಳನ್ನು ಸರಿಯಾದ ಪರಿಶೀಲನೆ ಕೈಗೊಳ್ಳದೇ ಮಂಜೂರು ಮಾಡಲಾಗಿದ್ದು, ಇದಕ್ಕಾಗಿ ಆಹಾರ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಅರ್ಜಿದಾರರಿಂದ ಮಧ್ಯವರ್ತಿಗಳ ಮೂಲಕ ಹಣ ಪಡೆದು ಅವ್ಯವಹಾರ ಮಾಡಿದ್ದಾರೆ. ಈ ಅವ್ಯವಹಾರದ ತನಿಖೆ ಕೈಗೊಂಡು ಕರ್ತವ್ಯದ್ರೋಹ ಎಸಗಿರುವ ಆಹಾರ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಕರ್ತವ್ಯದಿಂದ ವಜಾ ಮಾಡಬೇಕು ಎಂದು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸರ್ವ ಸದಸ್ಯರು ಒಕ್ಕೊರಲಿನಿಂದ ಆಗ್ರಹಿಸಿದರು.

ಪಟ್ಟಣದ ತಾಪಂ ಸಭಾಗೃಹದಲ್ಲಿ ಮಂಗಳವಾರ ಜರುಗಿದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಸಮಿತಿಯ ಸದಸ್ಯರಾದ ದೀಪಾ ಪಾಟೀಲ, ಪ್ರಕಾಶ ಮಾದಾರ ಹಾಗೂ ಇತರರು, ''ಆಹಾರ ಇಲಾಖೆಯವರು ಅರ್ಜಿಗಳನ್ನು ಸರಿಯಾಗಿ ಪರಿಶೀಲಿಸದೇ ಹೊಸ ಬಿ.ಪಿ.ಎಲ್ ಕಾರ್ಡ್‌ಗಳಿಗೆ ಮಂಜೂರಾತಿ ನೀಡಿದ್ದಾರೆ. ಹೊಸ ಕಾರ್ಡ್ ಮಂಜೂರಾತಿಗೆ ಪ್ರತಿ ಕಾರ್ಡ್‌ಧಾರಕರಿಂದ ಸಾವಿರಾರು ರೂಪಾಯಿ ನೀಡಿರುವುದಾಗಿ ಸಾರ್ವಜನಿಕರು ಗ್ಯಾರಂಟಿ ಸಮಿತಿ ಸದಸ್ಯರಿಗೆ ಮಾಹಿತಿ ನೀಡಿದ್ದಾರೆ. ಅನರ್ಹರಿಗೆ ಬಿ.ಪಿ.ಎಲ್ ಪಡಿತರ ನೀಡುವ ಮೂಲಕ ಸರ್ಕಾರದ ಬೊಕ್ಕಸಕ್ಕೂ ನಷ್ಟ ಉಂಟು ಮಾಡಿರುವ ಆಹಾರ ಇಲಾಖೆಯವರ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಸಬೇಕು'' ಎಂದು ಗ್ಯಾರಂಟಿ ಅನುಷ್ಠಾನ ಸಮಿತಿಯ ಕಾರ್ಯದರ್ಶಿ, ತಾಪಂ ಇಒ ಅವರಿಗೆ ದೂರು ಸಲ್ಲಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಇಲಾಖೆಗಳ ಅಧಿಕಾರಿಗಳು ಫೆಬ್ರುವರಿ ತಿಂಗಳಲ್ಲಿ ತಾಲೂಕಿಗೆ ಮಂಜೂರಾದ ಗ್ಯಾರಂಟಿ ಯೋಜನೆಗಳ ಅನುದಾನದ ಬಗ್ಗೆ ವಿವರಿಸಿದರು. ಗ್ಯಾರಂಟಿ ಸಮಿತಿ ಅಧ್ಯಕ್ಷ ಸೂರ್ಯಕಾಂತ ಕುಲಕರ್ಣಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಿಡಿಪಿಒ ವಿಕ್ರಮ ಸೇರಿದಂತೆ ಸಮಿತಿ ಸದಸ್ಯರು, ಅಧಿಕಾರಿಗಳು, ತಾಪಂ ಸಿಬ್ಬಂದಿ ಇದ್ದರು.



» ಸೂಕ್ತ ತನಿಖೆಗೆ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸರ್ವ ಸದಸ್ಯರು ಒಕ್ಕೂರಲಿನಿಂದ ಆಗ್ರಹಿಸಿದರು.

ಕಿರುಸುದ್ದಿ

ಸೈನಿಕ ಶಾಲೆಗೆ ಆಯ್ಕೆ

ಹುನಗುಂದ: ತಾಲೂಕಿನ ಕೂಡಲಸಂಗಮದ ಬಸವ ಭಾರತಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಅಭಿನವ ಎಸ್.ಭದ್ರಶೆಟ್ಟಿ 2026ನೇ ಸಾಲಿನ 6ನೇ ತರಗತಿಯ ಸೈನಿಕ ಶಾಲೆಯ ಪ್ರವೇಶ ಪರೀಕ್ಷೆಯಲ್ಲಿ 300ಕ್ಕೆ 201 ಅಂಕವನ್ನು ಗಳಿಸುವ ಮೂಲಕ ಸೈನಿಕ ಶಾಲೆಗೆ ಆಯ್ಕೆಯಾಗಿದ್ದಾನೆ. ಸೈನಿಕ ಶಾಲೆಯ ಮೊದಲನೆಯ ಹಂತದ ಆಯ್ಕೆ ಪಟ್ಟಿಯಲ್ಲಿ ಅಭಿನವ ಭದ್ರಶೆಟ್ಟಿ ಬೀದರ ಸೈನಿಕ ಶಾಲೆಗೆ ಆಯ್ಕೆಯಾಗಿ ಮಾ.26ರಂದು ಮೊದಲ ಹಂತದ ಆಯ್ಕೆಯ ಕೌನ್ಸಿಲಿಂಗ್ ಬಂದಿದ್ದು, ವಿದ್ಯಾರ್ಥಿಯ ಈ ಸಾಧನೆಗೆ ಶಾಲೆಯ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ಮುಖ್ಯೋಪಾಧ್ಯರು, ಸಿಬ್ಬಂದಿ ಮತ್ತು ಪಾಲಕರು ಅಭಿನಂದನಸಿದ್ದಾರೆ.



ವಿದ್ಯುತ್ ವ್ಯತ್ಯಯ ಇಂದು

ಜಮಖಂಡಿ ತಾಲೂಕಿನ ಮರೇಗುದ್ದಿ ಗ್ರಾಮದ 110 ಕೆವಿ ವಿತರಣಾ ಕೇಂದ್ರದ ತ್ರೈಮಾಸಿಕ ನಿರ್ವಹಣೆ ಕಾರ್ಯ ಮಾ.12ರಂದು ಹಮ್ಮಿಕೊಂಡಿದ್ದು, ಅಂದು ಮರೇಗುದ್ದಿ ವಿತರಣಾ ಕೇಂದ್ರದ 11 ಕೆವಿಯಿಂದ ಹೊರಹೋಗುವ ಕೊಣ್ಣೂರ ಐಪಿ, ಮರೆಗುದ್ದಿ ಐಪಿ. ನ್ಯೂ ಹುಣಸಿಕಟ್ಟಿ, ಹುಣಸಿಕಟ್ಟಿ, ಮರೆಗುದ್ದಿ ವಿಲೇಜ್, ಕೊಣ್ಣೂರ ವಿಲ್ಲೇಜ್ ಹುಲ್ಯಾಳೇಶ್ವರ, ಪಡಸಾಲಿ ವಸ್ತಿ, ಲಕ್ಷ್ಮೀಗುಡಿ, ಮೈತ್ರಿಸ್ಕೂಲ ಸಾವಂತ ವಸ್ತಿ ಶಂಭುಲಿಂಗೇಶ್ವರ ಎನ್‌ಜೆವೈ, ಕರಿಸಿದ್ದೇಶ್ವರ ಎನ್‌ಜೆವೈ ಮಾರ್ಗಗಳಲ್ಲಿ ಬೆಳಗ್ಗೆ 10ರಿಂದ ಸಂಜೆ 6ರ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗುತ್ತದೆ ಎಂದು ಹೆಸ್ಕಾಮ ಅಧಿಕಾರಿಗಳು ತಿಳಿಸಿದ್ದಾರೆ.

ಮಾ.15ಕ್ಕೆ ವಿದ್ಯುತ್ ವ್ಯತ್ಯಯ

ಜಮಖಂಡಿ: ನಗರದ 110 ಕೆವಿ ವಿತರಣಾ ಕೇಂದ್ರದ ತ್ರೈಮಾಸಿಕ ನಿರ್ವಹಣೆ ಕಾರ್ಯ ಮಾ.15ರಂದು ಬೆಳಗ್ಗೆ 10ರಿಂದ ಸಂಜೆ 6ರ ವರೆಗೆ ಹಮ್ಮಿಕೊಂಡಿದ್ದು, 11 ಕೆವಿ ಪ್ರಭುಲಿಂಗೇಶ್ವರ ಶುಗರ್ಸ ಲಿಮಿಟೆಡ್ ಮಾರ್ಗ ವಿದ್ಯುತ್ ವ್ಯತ್ಯಯ ಉಂಟಾಗುವ ಜಮಖಂಡಿ ವಿವಿ ಕೇಂದ್ರದಿಂದ ಹೊರಡುವ 33 ಕೆವಿ ಮಾರ್ಗಗಳು 33ಕೆವಿ ವಿತರಣಾ ಕೇಂದ್ರ ಹಿಪ್ಪರಗಿ, 33ಕೆವಿ ವಿತರಣಾ ಕೇಂದ್ರ ಮಧುರಖಂಡಿ, ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಜಮಖಂಡಿ ವಿವಿ ಕೇಂದ್ರದಿಂದ ಹೊರಡುವ 11 ಕೆವಿ ಮಾರ್ಗಗಳು 11 ಕೆವಿ ಎಪಿಎಂಸಿ, ಹುನ್ನೂರ, ರಾಮತೀರ್ಥ, ಜಮಖಂಡಿ, ಕೆಎಚ್‌ಬಿ, ರಾಮಬಾಗ, ಹಂಚಿನಾಳ ಆರ್‌ಸಿ, ಜಕನೂರ ಎನ್ ಜೆವೈ ಮತ್ತು ಆಲಗೂರ ಆರ್‌ಸಿ ಎನ್‌ಜೆವೈ(ಪಟ್ಟಣ ಮತ್ತು ನಿರಂತರ ಜ್ಯೋತಿ ಮಾರ್ಗಗಳು) 11 ಕೆವಿ ಕಂಕಣವಾಡಿ ಮತ್ತು ಹುಲ್ಯಾಳ ಕರಿಯಮ್ ದೇವಿ ಫೀಡರಗಳಿಗೆ ಬೆಳಗ್ಗೆ 3 ಗಂಟೆಗೆ 10 ಗಂಟೆಯವರೆಗೆ ವಿದ್ಯುತ್ ಪೂರೈಸಲಾಗುವುದು ಎಂದು ತಿಳಿಸಿದ್ದಾರೆ.

ಕಾನಿಪ ಸದಸ್ಯತ್ವ ನವೀಕರಣಕ್ಕೆ ಅರ್ಜಿ ಆಹ್ವಾನ

ಬಾಗಲಕೋಟೆ: ಕರ್ನಾಟಕ ಕಾರ್ಯನಿರತ ಪತ್ರಕರ್ತ ಸಂಘದ 2026–27ನೇ ಸಾಲಿನ ಸದಸ್ಯತ್ವ ನವೀಕರಣ ಮತ್ತು ನೂತನ ಸದಸ್ಯತ್ವ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಮಾಧ್ಯಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಕಾರ್ಯನಿರತ ಪತ್ರಕರ್ತರು ಮಾತ್ರ ಈ ಸಂಘದಲ್ಲಿ ಸದಸ್ಯತ್ವ ಪಡೆಯಲು ಅರ್ಹರಾಗಿರುತ್ತಾರೆ. ಸದಸ್ಯತ್ವ ನವೀಕರಣ ಪಡೆಯುವ ಸದಸ್ಯರು ತಮ್ಮ ಸಂಸ್ಥೆಯ ಶಿಫಾರಸ್ಸು ಪತ್ರ, ಎಸ್ಸೆಸ್ಸೆಲ್ಸಿ ಅಂಕ ಪಟ್ಟಿ, ಆಧಾರ ಕಾರ್ಡ್ ಕಡ್ಡಾಯವಾಗಿ ನೀಡಬೇಕು. ತಾಲೂಕು ಘಟಕಗಳಿಂದ ಕಾರ್ಯಕಾರಿ ಸಮಿತಿ ಒಪ್ಪಿತವಾಗಿ ಬರುವ ಸದಸ್ಯತ್ವ ಪಟ್ಟಿಯನ್ನು ಜಿಲ್ಲಾ ಘಟಕ ಕಡ್ಡಾಯವಾಗಿ ಪರಿಶೀಲಿಸಿ, ಜಿಲ್ಲಾ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅಂಗೀಕರಿಸಿ ರಾಜ್ಯ ಘಟಕಕ್ಕೆ ಕಳುಹಿಸಿಕೊಡಲಾಗುವುದು. ಸದಸ್ಯತ್ವ ನೀಡುವ ಕುರಿತು ವಿವಾದ, ತಕರಾರುಗಳಿದ್ದಲ್ಲಿ ಅರ್ಜಿದಾರರಿಗೆ ಸ್ಥಳದಲ್ಲೇ ಸುದ್ದಿ ಬರೆಯುವ ಲಘು ಪರೀಕ್ಷೆ ನಡೆಸಿ ಸದಸ್ಯತ್ವ ನೀಡಲು ತೀರ್ಮಾನಿಸಬೇಕು.

ಸದಸ್ಯತ್ವ ಪಡೆಯಲು 18 ವರ್ಷ ಪೂರ್ಣಗೊಳಿಸಿರುವುದು ಕಡ್ಡಾಯವಾಗಿದೆ. ಕ್ರಿಮಿನಲ್ ಅಪರಾಧ ಹಿನ್ನಲೆಯುಳ್ಳವರಿಗೆ (ಅಪರಾಧಿ ಎಂದು ಸಾಬೀತಾಗಿದ್ದರೆ) ಸದಸ್ಯತ್ವ ನೀಡುವಂತಿಲ್ಲ. ಆಯಾ ತಾಲೂಕು ಘಟಕಗಳ ಅಧ್ಯಕ್ಷರ ಬಳಿ ಸದಸ್ಯತ್ವ ಅರ್ಜಿಯನ್ನು ಪಡೆದು ಮಾ.15ರೊಳಗೆ ಭರ್ತಿ ಮಾಡಿ ತಲುಪಿಸಬೇಕು. ನಂತರ ಬರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಮಾರ್ಗಸೂಚಿಗಳಿಗಾಗಿ ತಾಲೂಕು ಘಟಕದ ಅಧ್ಯಕ್ಷರನ್ನು ಹಾಗೂ ಜಿಲ್ಲಾ ಕೇಂದ್ರದಲ್ಲಿರುವ ಇರುವ ಪತ್ರಕರ್ತರು ಪತ್ರಿಕಾ ಭವನದಲ್ಲಿ ಮಾಹಿತಿ ಪಡೆದುಕೊಳ್ಳಬಹುದು ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಜಗದೀಶ ಎಂ.ಗಾಣಿಗೇರ ತಿಳಿಸಿದ್ದಾರೆ.



ಬಾಗಲಕೋಟೆ: ಜಿಪಂ ನೂತನ ಸಭಾಭವನದಲ್ಲಿ ಹಮ್ಮಿಕೊಂಡ ಜನಗಣತಿ-2027 ತರಬೇತಿ ಕಾರ್ಯಾಗಾರಕ್ಕೆ ಜಿಲ್ಲಾಧಿಕಾರಿ ಸಂಗಪ್ಪ ಚಾಲನೆ ನೀಡಿದರು. ಜಿಪಂ ಸಿಇಒ ಶಶಿಧರ ಕುರೇರ, ಜನಗಣತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶಕ್ತಿಕುಮಾರ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಜನಗಣತಿ ನಿರ್ದೇಶನಾಲಯದ ಸಹಾಯಕ ನಿರ್ದೇಶಕ ಶಮಕುಮಾರ ಎಸ್.ಬಿ, ತರಬೇತಿಯ ಜಿಲ್ಲಾ ನೋಡಲ್ ಅಧಿಕಾರಿ ಶುಶೀಲಕುಮಾರ ಶರ್ಮಾ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ರೇಣುಕಾ ಎಂ.ಉಪಸ್ಥಿತರಿದ್ದರು.

ಮೇ 3ರಂದು ಚಿಂತನ ಮಂಥನ ಕಾರ್ಯಕ್ರಮ

ತೇರದಾಳ: ಪಟ್ಟಣದ ತಕ್ಷಶಿಲಾ ಮಹಾಬುದ್ಧವಿಹಾರದಲ್ಲಿ ಛಲವಾದಿ ಮಹಾಸಭಾ ವತಿಯಿಂದ ಬುದ್ಧ ಹಾಗೂ ಬೌದ್ಧಧರ್ಮದ ಕುರಿತು ಜಿಲ್ಲಾಮಟ್ಟದ ಕಾರ್ಯಕ್ರಮದ ನಿಮಿತ್ತ ಪ್ರಥಮ ಪೂರ್ವಭಾವಿ ಸಭೆ ಏರ್ಪಡಿಸಲಾಗಿತ್ತು. ಈ ವೇಳೆ ಮಾತನಾಡಿದ ದಲಿತ ಮುಖಂಡ ಪರಸಪ್ಪ ಮಾಸ್ತಿ ಅವರು, ಜಗತ್ತಿಗೆ ಮಾನವ ಕುಲದ ಉದ್ಧಾರಕ್ಕಾಗಿ ಶ್ರೇಷ್ಠ ಸಂದೇಶ ನೀಡಿದ ಬುದ್ಧ ಹಾಗೂ ಬೌದ್ಧ ಧಮ್ಮದ ಕುರಿತು ಜಿಲ್ಲಾಮಟ್ಟದ ಚಿಂತನ ಮಂಥನ ಕಾರ್ಯಕ್ರಮ 2026 ಮೇ 3ರಂದು ಭಾನುವಾರದಿಂದ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಕಾರಣ ಎಲ್ಲಾ ದಲಿತ ಬಾಂಧವರು ಇದರಲ್ಲಿ ಪಾಲ್ಗೊಂಡು ಈ ಕಾರ್ಯಕ್ರಮ ಯಶಸ್ಸುಗೊಳಿಸಬೇಕೆಂದು ವಿನಂತಿಸಿದರು. ನ್ಯಾಯವಾದಿ ಶಶಿಕಾಂತ ದೊಡಮನಿ ಮಾತನಾಡಿ, ಮಹಾನ್ ನಾಯಕರು ಆದರ್ಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಒಳ್ಳೆಯ ಸಮಾಜಕಟ್ಟುವುದು ಮುಖ್ಯವಾಗಿದೆ. ಅದಕ್ಕಾಗಿ ಇಂತಹ ಕಾರ್ಯಕ್ರಮ ಅತಿ ಅವಶ್ಯಕವಾಗಿದೆ ಎಂದರು. ಸಿದ್ದು ದೊಡಮನಿ ಮಾತನಾಡಿ, ಇಂದಿನ ಯುವಪೀಳಿಗೆ ಬದುಕು ಕಟ್ಟಿಕೊಳ್ಳುವ ಮುಂಚೆಯೇ ದುಶ್ಚಟಕ್ಕೆ ಬಲಿಯಾಗಿ ಇಡೀ ಕುಟುಂಬವನ್ನೇ ಮುಳುಗಿಸುತ್ತಿದ್ದಾರೆ. ಕಾರಣ ಅಂತಹ ಮಕ್ಕಳ ಮನಸ್ಸು ಪರಿವರ್ತನೆಯಾಗಲು ಇದು ಸಹಾಯವಾಗುತ್ತದೆ. ಕೊನೆಗೆ ಪ್ರಭಾಕರ ಛಲವಾಗಿ ಮಾತನಾಡಿ ಸಮಾಜದ ಉದ್ಧಾರಕ್ಕಾಗಿ ಆಗಾಗ ಇಂತಹ ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಉಚಿತವಾಗಿದೆ. ಇದು ಒಳ್ಳೆಯ ಬೆಳವಣಿಗೆಆಗಿದೆ ಕಾರಣ ಎಲ್ಲಾ ದಲಿತ ಬಾಂಧವರು ಈ ಚಿಂತನಮಂಥನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಮ್ಮ ಸಮಾಜದಲ್ಲಿರುವ ಕತ್ತಲೆಯನ್ನು ಕಳೆದುಕೊಳ್ಳಬೇಕು ಎಂದರು.



ತೇರದಾಳ: ಪಟ್ಟಣದ ತಕ್ಷಶಿಲಾ ಮಹಾಬುದ್ಧವಿಹಾರದಲ್ಲಿ ಛಲವಾದಿ ಮಹಾಸಭಾ ವತಿಯಿಂದ ಬುದ್ಧ ಹಾಗೂ ಬೌದ್ಧಧರ್ಮದ ಕುರಿತು ಜಿಲ್ಲಾಮಟ್ಟದ ಕಾರ್ಯಕ್ರಮದ ನಿಮಿತ್ತ ಪ್ರಥಮ ಪೂರ್ವಭಾವಿ ಸಭೆ ನಡೆಯಿತು. ದಲಿತ ಮುಖಂಡ ಪರಸಪ್ಪ ಮಾಸ್ತಿ, ನ್ಯಾಯವಾದಿ ಶಶಿಕಾಂತ ದೊಡಮನಿ, ಸಿದ್ದು ದೊಡಮನಿ ರವಿ ಬಬಲೇಶ್ವರ, ದಯಾನಂದ ಕಾಳೆ, ಗೌತಮ ರೋಡಕರ, ಮಂಜು ಸರಿಕರ, ಬಸು ಯಲ್ಲೋಡಗಿ, ಸದಾಶಿವ ದೊಡಮನಿ, ಪರಶುರಾಮ ಕಿತ್ತೂರ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.

ಮಹಿಳೆ ಸಮಾಜದ ಶಕ್ತಿ: ಶಾಂತಾ



ಗುಳೇದಗುಡ್ಡ: ಭಾರತೀಯ ಪರಂಪರೆಯಲ್ಲಿ ನಾರಿ ಸಂಕುಲವನ್ನು ಇಡಿ ಜಗತ್ತು ಗೌರವಿಸುತ್ತದೆ. ಸಮಾಜದ ಪ್ರತಿಯೊಂದು ರಂಗದಲ್ಲಿ ಮಹಿಳೆ ತನ್ನದೇ ಆದ ವಿಶೇಷ ಮತ್ತು ವಿಶಿಷ್ಟ ಸಾಧನೆ ಮಾಡಿದ್ದಾರೆ. ಪುರುಷರಿಗೆ ಸರಿಸಾಮಾನವಾಗಿ ಮಹಿಳೆ ಬೆಳೆದು ನಿಂತಿದ್ದಾಳೆ. ಮಹಿಳೆಯನ್ನು ಗೌರವಿಸುವ ಕುಟುಂಬ ಸಮಾಜದಲ್ಲಿ ಎತ್ತರಕ್ಕೆ ಬೆಳೆಯುತ್ತದೆ ಎಂದು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಡಾ.ಶಾಂತಾ ಕರಡಿಗುಡ್ಡ ಹೇಳಿದರು.

ಪಟ್ಟಣದ ಸಾಲೇಶ್ವರ ಸಮುದಾಯ ಭವನದಲ್ಲಿ ಪಟ್ಟಸಾಲಿ ನೇಕಾರ ಮಹಿಳಾ ಸಂಘ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳೆ ಸಮಾಜದ ಶಕ್ತಿಯಾಗಿ ಪ್ರತಿಯೊಂದು ಕ್ಷೇತ್ರಗಳಲ್ಲಿ ಉನ್ನತ ಸಾಧನೆ ಮಾಡಿದ್ದಾಳೆ ಎಂದರು.

ಸರ್ಕಾರಿ ಶಾಲೆ ಮುಖ್ಯ ಶಿಕ್ಷಕಿ ಭಾರತಿ ತಾಂಡೂರ ಮಾತನಾಡಿ, ಮಹಿಳೆಯರು ಸಮಾಜದಲ್ಲಿ ಆರ್ಥಿಕ, ಸಾಮಾಜಿಕವಾಗಿ ಮುಂದೆ ಬರಬೇಕು. ಅದಕ್ಕೆ ಮೊದಲು ಮಹಿಳೆಯರು ಶಿಕ್ಷಣ, ಸಂಸ್ಕಾರ, ಸಂಸ್ಕೃತಿ ಬೆಳೆಸಿಕೊಳ್ಳಬೇಕು. ಮಹಿಳೆಗೆ ಎಲ್ಲರೂ ಗೌರವ, ಸತ್ಕಾರದಿಂದ ಕಾಣಬೇಕು ಎಂದರು.ಪಟ್ಟಸಾಲಿ ನೇಕಾರ ಮಹಿಳಾ ಸಂಘದ ಅಧ್ಯಕ್ಷೆ ಗೌರಮ್ಮ ಕಲಬುರ್ಗಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿವಿಧ ಮಹಿಳಾ ಮಂಡಳಿ ಅಧ್ಯಕ್ಷ ಅನುಪಮಾ ಧಾರವಾಡ, ಚಂದ್ರಿಕಾ ಜೋಶಿ, ಸಿದ್ದಮ್ಮ ಆಚನೂರ, ಚನ್ನಮ್ಮ ಜವಳಿ, ದ್ರಾಕ್ಷಯಣಿ ನಾಗುರ, ಶಕುಂತಲಾ ದೇವಾಂಗಮಠ ಸೇರಿದಂತೆ ವಿವಿಧ ಮಹಿಳಾ ಸಂಘದ ಅಧ್ಯಕ್ಷ್ಯ, ಪದಾಧಿಕಾರಿಗಳನ್ನು ಸನ್ಮಾನಿಸಲಾಯಿತು.ಅನುಷಾ ತಿಪ್ಪಾ ಅವರ ಭರತ ನಾಟ್ಯ ಗಮನ ಸೆಳೆಯಿತು. ಗಿರಿಜಾ ಕಲ್ಯಾಣಿ, ಭಾಗ್ಯಾ ಉದ್ನೂರ, ತಾರಾಮತಿ ರೋಜಿ, ದೀಪಾ ಉಂಕಿ, ವೇದಾ ಶೀಪ್ರಿ, ನಾಗರತ್ನಾ ಎಣ್ಣೆ, ದ್ರಾಕ್ಷಾಯಿಣಿ ಗೊಬ್ಬಿ, ಮಾಲಾ ರಾಜನಾಳ, ಅನಿತಾ ಶಿರೋಳ, ಅನಸೂಯ ಅಲದಿ, ಮುರಿಗೆವ್ವ ಸಾರಂಗಿ, ಮೀನಾಕ್ಷಿ ಜೆಡಗಿ, ಶಶಿಕಲಾ ಭಾವಿ ಇತರರು ಇದ್ದರು.

ಮಹಿಳೆಯರಿಗೆ ಉನ್ನತ ಸ್ಥಾನಮಾನ ನೀಡಿ

ಬಾಗಲಕೋಟೆ: ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಆಶ್ರಯದಲ್ಲಿ ತೋವಿವಿಯ ಸಭಾಭವನದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ನಡೆಯಿತು. ಈ ವೇಳೆಮಾತನಾಡಿದಬೆಳಗಾವಿಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ, ಅವರು, ಪ್ರಸ್ತುತ ಜಗತ್ತಿನ ವಿವಿಧ ಕ್ಷೇತ್ರಗಳಲ್ಲಿನ ಮಹಿಳೆಯರ ನಿರ್ದೇಶನಗಳನ್ನು ಪ್ರೇರಿಪಿಸುವುದರ ಮೂಲಕ ಅವರಿಗೆ ಉನ್ನತ ಸ್ಥಾನಮಾನವನ್ನು ನೀಡಬೇಕು. ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಪರುಷರು ಮಹಿಳೆಯರೊಂದಿಗೆ ಕೈಜೋಡಿಸಬೇಕೆಂದು ಕರೆ ನೀಡಿದರು.

ಬಸವೇಶ್ವರ ಎಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕಿ ಡಾ.ಭಾರತಿ ಮೇಟಿ ಮಾತನಾಡಿ, ಮಹಿಳೆಯರು ಜಂಕ್ ಆಹಾರ ಪದ್ಧತಿಯನ್ನು ತ್ಯಜಿಸಿ ಸಾಂಪ್ರದಾಯಕ ಆಹಾರ ಪದ್ಧತಿಯನ್ನು ರೂಢಿಸಿಕೊಂಡು ಕುಟುಂಬದ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ತಿಳಿಸಿದರು. ಯೋಗ ಮತ್ತು ವ್ಯಾಯಾಮ ಮಾಡುವುದರ ಮೂಲಕ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿರಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ತೋಟಗಾರಿಕೆ ವಿವಿಯ ಕುಲಪತಿ ಡಾ.ವಿಷ್ಣುವರ್ಧನ್



ಮಾತನಾಡಿ,ಸಮಾಜದಲ್ಲಿನಲಿಂಗಭೇದ ತ್ಯಜಿಸಿ ಹೆಣ್ಣು ಮತ್ತು ಗಂಡು ಒಂದೇ ಎನ್ನುವ ಸಮಾನತೆಯ ಮಂತ್ರವನ್ನು ಅಳವಡಿಕೊಳ್ಳಬೇಕು. ಮಕ್ಕಳ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿರುವುದರಿಂದ ಅವರಿಗೆ ಉತ್ತಮ ಸಂಸ್ಕಾರ ನೀಡಬೇಕೆಂದು ತಿಳಿಸಿದರು.

ವಿವಿ ಅಧಿಕಾರಿ ಡಾ.ತಮ್ಮಯ್ಯ ಎನ್., ಡಾ.ಬಿ. ಫಕ್ರುದ್ದೀನ್, ಡಾ.ವೆಂಕಟೇಶಲು,ಡಾ.ಬಾಲಾಜಿಎಸ್. ಕುಲಕರ್ಣಿ, ಮಲ್ಲಿಕಾರ್ಜುನ ಶೆಲ್ಲಿಕೇರಿ, ರವೀಂದ್ರ ಕಾಂಬಳೆ, ಡಾ.ಶಾಂತಪ್ಪ ತಿರಕಣ್ಣನವರ, ಡಾ.ಐ.ಬಿ.ಬಿರಾದಾರ, ಡಾ.ವಸಂತ ಗಾಣಿಗೇರ, ಡಾ.ಈ. ರಾಜಶೇಖರ, ತೋವಿವಿಯ ಗ್ರಂಥ ಪಾಲಕ ಡಾ.ಬಿ.ಸಿ.ಪಾಟೀಲ, ಡಾ.ಸರ್ವಮಂಗಳಾ ಚೋಳಿನ, ಡಾ.ಭುವನೇಶ್ವರಿ ಜಿ., ಡಾ.ಸುಹಾಸಿನಿ ಜಾಲವಾದಿ, ಡಾ.ದೀಪಾ ತೇರದಾಳ ಹಾಗೂ ಸಿಬ್ಬಂದಿ ಇದ್ದರು.

ಗಾಯಕ ರವೀಂದ್ರಗೆ ಕರ್ನಾಟಕ ಕಲಾಶ್ರೀ ಪ್ರಶಸ್ತಿ

▸ ನಾರನಗೌಡ ಉತ್ತಂಗಿ

ಮಹಾಲಿಂಗಪುರ: ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 2025–26ನೇ ಸಾಲಿನ ಕರ್ನಾಟಕ ಕಲಾಶ್ರೀ ವಾರ್ಷಿಕ ಪ್ರಶಸ್ತಿಗೆ ಮಹಾಲಿಂಗಪುರದ ಹಿಂದೂಸ್ತಾನಿ ಶಾಸ್ತ್ರೀಯ ಮತ್ತು ಸುಗಮ ಸಂಗೀತ ಗಾಯಕ ಹಾಗೂ ಚಲನಚಿತ್ರ ಹಿನ್ನೆಲೆ ಗಾಯಕ ರವೀಂದ್ರ ಸೋರಗಾಂವಿ ಭಾಜನರಾಗಿದ್ದಾರೆ.

ಸ್ವಂತ ಕಲಾ ತಂಡ ಕಟ್ಟಿಕೊಂಡು 5 ದಶಕಗಳ ಕಾಲ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ ಮಹಾಲಿಂಗಪುರದ ಹೆಸರಾಂತ ಶ್ರೀಕೃಷ್ಣ ಪಾರಿಜಾತ ಕಲಾವಿದ ದಿ.ಮುರಿಗೆಪ್ಪ ಸೋರಾಂವಿ ಅವರ ಮೊಮ್ಮಗ ರವೀಂದ್ರ ಸೋರಗಾಂವಿ. ಇವರ ತಂದೆ ಸುಭಾಷ್ ಹಾರ್ಮೋನಿಯಂ ಕಲಾವಿದರು. ಚಿಕ್ಕಪ್ಪ ಶ್ರೀಶೈಲ ರಂಗಭೂಮಿ ಕಲಾವಿದರು. ಹೀಗೆ ಇಡೀ ಕುಟುಂಬವೇ ಕಲಾವಿದರ ಕುಟುಂಬವಾದ್ದರಿಂದ ಇವರಿಗೆ ಕಲೆ ರಕ್ತಗತವಾಗಿಯೇ ಒಲಿದಿತ್ತು.

1987ರಿಂದ ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಧ್ವನಿ ಪರೀಕ್ಷೆಯಲ್ಲಿ ಪಾಸಾಗಿ, ಹಿಂದೂಸ್ಥಾನಿ ಶಾಸ್ತ್ರೀಯ ಹಾಗೂ ಸುಗಮ ಸಂಗೀತ ನೀಡಿದರು. ಹೈಗ್ರೇಡ್ ಕಲಾವಿದರಾಗಿ ನಿರಂತರವಾಗಿ ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಸಂಗೀತ ಕಾರ್ಯಕ್ರಮ ಕೊಡುತ್ತಾ ಸಂಗೀತ ಕ್ಷೇತ್ರದಲ್ಲಿ ಜನಪ್ರಿಯ ಕಲಾವಿದರಾದರು.

ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಸದಸ್ಯರಾಗಿ ಸೇವೆ ಸಲ್ಲಿಸಿರುವ ಇವರು ಲಂಡನ್, ಬಹರೆನ್, ಕತಾರ್ ದೇಶಗಳಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದಾರೆ. ಪುಟ್ಟಕ್ಕನ ಹೈವೆ ಚಿತ್ರದ ಹಿನ್ನೆಲೆ ಗಾಯನಕ್ಕಾಗಿ 2010–11ನೇ ಸಾಲಿನ ಅತ್ಯುತ್ತಮ ಹಿನ್ನೆಲೆ ಗಾಯಕ ರಾಜ್ಯ ಪ್ರಶಸ್ತಿ ಪಡೆದಿರುವ ಇವರು ಕಳೆದ 16 ವರ್ಷಗಳಲ್ಲಿ 200ಕ್ಕೂ ಅಧಿಕ ಚಲನಚಿತ್ರಗಳಿಗೆ ಹಿನ್ನೆಲೆ ಗಾಯನ ನೀಡಿದ್ದಾರೆ.

ಹಿಂದೂಸ್ತಾನಿ ಶಾಸ್ತ್ರೀಯ ಗಾಯನಕ್ಕಾಗಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 2025–26ನೇ ಸಾಲಿನ ಕರ್ನಾಟಕ ಕಲಾಶ್ರೀ ವಾರ್ಷಿಕ ಪ್ರಶಸ್ತಿ ಬಂದಿದ್ದು ಸಂತೋಷ ನೀಡಿದೆ. ಹೆಚ್ಚಿನ ಸಾಧನೆಗೆ ಪ್ರೋತ್ಸಾಹ ಸಿಕ್ಕಂತಾಗಿದೆ ಎಂದು ರವೀಂದ್ರ ಸೋರಗಾಂವಿ ಹರ್ಷ ವ್ಯಕ್ತಪಡಿಸಿದರು.



ಅವರ ಗಾಯನ ಕಲಾ ಪ್ರಕಾರಕ್ಕಾಗಿ ಈ ಪ್ರಶಸ್ತಿ ನೀಡಲಾಗಿದ್ದು, ಅಕಾಡೆಮಿ ಅಧ್ಯಕ್ಷೆ ಶುಭ ಧನಂಜಯ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ಈ ಆಯ್ಕೆ ಮಾಡಲಾಯಿತು. ಈ ವಾರ್ಷಿಕ ಪ್ರಶಸ್ತಿ ಪುರಸ್ಕೃತ ರವೀಂದ್ರ ಅವರಿಗೆ ರೂ.25 ಸಾವಿರ ಚೆಕ್ ಹಾಗೂ ಪ್ರಶಸ್ತಿ ವಿಗ್ರಹ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ: ಶ್ಲಾಘನೀಯ

ಬಾದಾಮಿ: ಗುರುಕುಲ ತರಬೇತಿ ಕೇಂದ್ರವು ಕಳೆದ 21 ವರ್ಷಗಳಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುತ್ತಾ ವಿವಿಧ ವಸತಿ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ತರಬೇತಿ ನೀಡಿ ಪ್ರತಿಭಾನ್ವಿತರನ್ನು ಸನ್ಮಾನಿಸುತ್ತಿರುವ ಈ ಸಂಸ್ಥೆ ಉತ್ತರೋತ್ತರವಾಗಿ ಬೆಳೆಯಲಿ ಎಂದು ನೀಲಗುಂದ ಸುಕ್ಷೇತ್ರದ ಮಂಜುನಾಥ ಅಪ್ಪಾಜಿಯವರು ಹಾರೈಸಿದರು.

ಪಟ್ಟಣದ ಚಾಲುಕ್ಯ ನಗರದಲ್ಲಿ ಪ್ರಜಂಟೇಶನ್ ಪ್ರಾಥಮಿಕ ಶಾಲೆ ಹಾಗೂ ಗುರುಕುಲ ನವೋದಯ ತರಬೇತಿಯ ಸ್ನೇಹ ಸಮ್ಮೇಳನ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು.

ನಿವೃತ್ತ ಪ್ರಾಚಾರ್ಯ ಆರ್.ಬಿ ಸಂಕದಾಳ ಮಾತನಾಡಿ, ಪ್ರಜಂಟೇಶನ್ ಶಾಲೆಯ ಅಧ್ಯಕ್ಷ ಹನಮಂತ ಡೋಣಿ, ಬಸವರಾಜ ಉಳ್ಳಾಗಡ್ಡಿ, ಹುಲಗಪ್ಪ ಭೋವಿ, ಸಿದ್ದು ಉಳ್ಳೇಗಡಿಯವರು ಶಾಲೆ ಪ್ರಗತಿಗೆ ಶ್ರಮಿಸುತ್ತಿರುವುದನ್ನು ಕಣ್ಣಾರೆ ಕಂಡಿದ್ದೇನೆ, ಕಟ್ಟಡಸಣ್ಣದಿದ್ದರೂ ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ, ಮುಂದಿನ ದಿನಗಳಲ್ಲಿ ಸ್ವಂತ ಕಟ್ಟಡದಲ್ಲಿ ಶಾಲೆ ನಡೆಸುವಂತಾಗಲಿ ಎಂದರು.

ಗುರುಕುಲ ವಿದ್ಯಾವರ್ಧಕ ಈಗಾಗಲೇ ಸಂಸ್ಥೆಯ ಬಸವರಾಜ ಉಳಾಗಡ್ಡಿ ನಮ್ಮ ಸಂಸ್ಥೆಯಿಂದ ಸ್ಮಾರ್ಟ್ ಕ್ಲಾಸ್ ಮೂಲಕ ನವೋದಯ, ಸೈನಿಕ, ಮೊರಾರ್ಜಿ, ಆದರ್ಶ ಪರೀಕ್ಷಾ ಪೂರ್ವ ತರಬೇತಿಯೊಂದಿಗೆ ಕ್ರೀಡೆ, ಕರಾಟೆ, ನೃತ್ಯ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ತರಬೇತಿ ನೀಡಲಾಗುತ್ತಿದೆ, 2026–27ಸಾಲಿಗೆ ಗುರುಕುಲ ವಿದ್ಯಾ ಸಂಸ್ಥೆಯಿಂದ ಪೂರ್ವ ಪ್ರಾಥಮಮಿಕ ಆಂಗ್ಲ



ಮಾಧ್ಯಮ ಶಾಲೆಯನ್ನು ತೆರೆಯಲಾಗುತ್ತಿದೆ, ಪ್ರಜಂಟೇಶನ್ ಶಾಲೆಯಲ್ಲಿ ಕನ್ನಡ ಮಾಧ್ಯದಲ್ಲಿ ನರ್ಸರಿ, ಎಲ್‌ಕೆಜಿ, 1 ರಿಂದ 5ನೇ ತರಗತಿಗಳು ನಡೆಯುತ್ತಿವೆ ಎಂದರು. ಪ್ರಜಂಟೇಶನ್ ಪ್ರಾಥಮಿಕ ಶಾಲೆಯ ಚೇರಮನ್ ಹನಮಂತ ಡೋಣಿ ಮಾತನಾಡಿ, ನಮ್ಮ ಪ್ರಜಂಟೇಶನ್ ಪ್ರಾಥಮಿಕ ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣದೊಂದಿಗೆ ನೈತಿಕ ಮೌಲ್ಯವನ್ನು ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದಾರೆ ಎಂದರು, ಬಾದಾಮಿಯ ನವಗ್ರಹ ಹಿರೇಮಠದ ಶಿವಪೂಜಾ ಶಿವಾಚಾರ್ಯರು ಆಶೀರ್ವಚನ ಬೋಧಿಸಿದರು.

ಸಂಸ್ಥೆಯ ಉಪಾಧ್ಯಕ್ಷ ದತ್ತಾತ್ರೇಯ ದೇಶಪಾಂಡೆ, ಕಾರ್ಯದರ್ಶಿ ಹುಲಗಪ್ಪ ಭೋವಿ, ಸಂಸ್ಥೆಯ ಖಜಾಂಚಿ ಮಂಜುನಾಥ ಉಳ್ಳಾಗಡ್ಡಿ, ಸಂಸ್ಥೆಯ ಮುಖ್ಯಸ್ಥೆ ನಿವೇದಿತಾ ಬಸವರಾಜ ಉಳ್ಳಾಗಡ್ಡಿ, ಶ್ರೀರಾಮ ಸೇನೆ ರಾಜ್ಯ ಕಾರ್ಯದರ್ಶಿ ಶಹಾಜಿ ಪವಾರ, ಸಮಾಜ ಸೇವಕ ರುದ್ರೇಶ ಹುನಸಿಗಿಡದ, ನಿವೃತ್ತ ಮುಖ್ಯಾಧ್ಯಾಪಕ ಎಸ್.ಎಸ್.ಮೇಟಿ, ಆರ್.ವೈ.ಯಲಿಗಾರ, ಮೀನುಗಾರಿಕೆ ಇಲಾಖೆಯ ಸದಾಶಿವ ಮರಡಿ, ಕನಕಪ್ಪ ಶಾಂತಗೇರಿ, ಮುಖ್ಯಾಧ್ಯಾಪಕಿ ಸವಿತಾ ಮೇಟಿಮಠ, ಶೈನಾಜ ಬಾರಾವಲಿ, ರೇಖಾ ಶೇಠ, ಶಂಕ್ರಮ್ಮ ಗಡ್ಡಿ, ಖುಷಿ ಮಹೇಂದ್ರಕರ ಇದ್ದರು.

ಬಜೆಟ್‌ನಲ್ಲಿ ಘೋಷಣೆಯಾಗದ ಇಲಾಖಾವಾರು ಅನುದಾನ: ಆರೋಪ

ಬಾಗಲಕೋಟೆ: ಮುಖ್ಯಮಂತ್ರಿ 17 ಬಜೆಟ್ ಮಂಡಿಸಿದ್ದಾರೆ ಅಂದರೆ ಒಂದು ತಲೆಮಾರು ಹಣಕಾಸು ಇಲಾಖೆ ಕೈಯಲ್ಲಿ ಇಟ್ಟುಕೊಂಡಿದ್ದಾರೆ. ಇವರೊಬ್ಬ ಆರ್ಥಿಕ ತಜ್ಞ ಎಂದು ಹೇಳಿಕೊಳ್ಳಲು ನಾಚಿಕೆಯಾಗಬೇಕು. ರಾಜ್ಯ ಸರ್ಕಾರದ ಮೇಲೆ 8.34 ಲಕ್ಷ ಕೋಟಿ ಸಾಲ ಇದೆ. 5.55 ಲಕ್ಷ ಕೋಟಿ ಸಿದ್ದರಾಮಯ್ಯ ಅವರು ಸಿಎಂ ಆಗಿದ್ದಾಗ ಸಾಲ ಮಾಡಿದ್ದಾರೆ ಎಂದರು. ರಾಜ್ಯದ ಒಬ್ಬ ವ್ಯಕ್ತಿಗೆ 1.17 ಲಕ್ಷ ತಲಾ ಸಾಲ ಹೊರಿಸಿದ್ದಾರೆ. ಈ ವರೆಗಿನ ಎಲ್ಲ ಸಿಎಂಗಳು 3.25 ಲಕ್ಷ ಕೋಟಿ ಸಾಲ ಮಾಡಿದ್ದರು. ಆದರೆ, ಈ ಸಿದ್ದರಾಮಯ್ಯ ಅವರು, 5.55 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ರಾಜ್ಯ ದಿವಾಳಿ ಆಗಿದೆ ಎಂದು ಎಂದು ಬಿಜೆಪಿ ರಾಜ್ಯ ವಕ್ತಾರ ಚಂದ್ರಶೇಖರ ಆರೋಪಿಸಿದರು.

ನವನಗರದ ಪತ್ರಿಕಾಭವನದಲ್ಲಿ



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಲಾಖಾವಾರು ಘೋಷಣೆಯಾದ ಅನುದಾನದಲ್ಲಿ ಹಣವೇ ಬಿಡುಗಡೆಯೇ ಆಗಿಲ್ಲ. ರಾಜ್ಯದ 11 ನಿಗಮದಲ್ಲಿ 8 ನಿಗಮಕ್ಕೆ ಅಧ್ಯಕ್ಷರೇ ಇಲ್ಲ. 2024ರಿಂದ ವಾಲ್ಮೀಕಿ ನಿಗಮದ ಫಲಾನುಭವಿಗಳನ್ನೆ ಆಯ್ಕೆ ಮಾಡಿಲ್ಲ. ಪಂಚ ಗ್ಯಾರಂಟಿ ಎಂದು ಹೇಳುತ್ತಾರೆ. ಈ ಯೋಜನೆಗಳಿಗೆ 52 ಸಾವಿರ ಕೋಟಿ ಬಳಕೆ ಆಗುತ್ತದೆ. ಬಜೆಟ್ ನ ಉಳಿದ ಹಣ ಎಲ್ಲಿ ಹೋಗುತ್ತಿದೆ ಎಂದು ಪ್ರಶ್ನಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿರುವ ಬಜೆಟ್‌ದಲ್ಲಿ ಜಿಲ್ಲೆಗೆ ಯಾವುದೇ ಮಹತ್ವದ ಯೋಜನೆಗಳು ಘೋಷಣೆಯಾಗಲಿಲ್ಲ. ದಾವಣಗೆರೆ ಮತ್ತು ಬಾಗಲಕೋಟೆಯಲ್ಲಿ ಉಪಚುನಾವಣೆ ನಡೆಯಲಿದ್ದು, ದಾವಣಗೇರೆ ನೀಡಿದಷ್ಟು ಯೋಜನೆ, ಅನುದಾನ ಬಾಗಲಕೋಟೆಗೆ ನೀಡಲಿಲ್ಲ, ಬಾಗಲಕೋಟೆಯಲ್ಲಿ ಕಾಂಗ್ರೆಸ್ ಪಕ್ಷ ಸೋಲುತ್ತದೆ ಎಂದು ಒಪ್ಪಿಕೊಂಡ ಕಾರಣದಿಂದಲೇ ಬಜೆಟ್‌ದಲ್ಲಿ ಜಿಲ್ಲೆಗೆ ಹೆಚ್ಚಿನ ಅನುದಾನ ನೀಡಿಲ್ಲ ಎಂದು ದೂರಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ಮಾಧ್ಯಮ ವಕ್ತಾರ ಸತ್ಯನಾರಾಯಣ ಹೇಮಾದ್ರಿ ಮುಂತಾದವರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣಕ್ಕೆ ಕಾರ್ಯಾಗಾರ ಸಹಕಾರಿ

ಮುಧೋಳ: ಎಸ್.ಆರ್.ಕಂಠಿ ಮಹಾವಿದ್ಯಾಲಯದ ಐಕ್ಯೂಎಸಿ ಅಡಿಯಲ್ಲಿ ಕಾಲೇಜಿನ ಹಳೆಯ (ಹಿರಿಯ) ವಿದ್ಯಾರ್ಥಿಗಳ ಹಾಗೂ ಪಾಲಕರ ಸಂಘ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶನ ಕೋಶ ಸಹಯೋಗಯದಲ್ಲಿ ಹಮ್ಮಿಕೊಂಡಿದ್ದ ನಗರದ ಬಾಗಲಕೋಟೆ ಬಿವಿವಿ ಸಂಘದ ನಗರದ ಎಸ್.ಆರ್.ಕಂಠಿ ಮಹಾವಿದ್ಯಾಲಯದಲ್ಲಿ 10 ದಿನಗಳ ಸ್ಪರ್ಧಾತ್ಮಕ ಪರೀಕ್ಷಾ ಜಾಗೃತಿ ಮತ್ತು ಸಿದ್ಧತೆ ಕಾರ್ಯಾಗಾರದ ಸಮಾರೋಪ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಎಮ್.ಆರ್.ಜರಕುಂಟಿ ಮಾತನಾಡಿ, ಈ ಹತ್ತು ದಿನಗಳ ಸ್ಪರ್ಧಾತ್ಮಕ ಪರೀಕ್ಷೆಗಳ ಜಾಗೃತಿ ಮತ್ತು ತಯಾರಿ ಕಾರ್ಯಾಗಾರವು ವಿದ್ಯಾರ್ಥಿಗಳಿಗೆ ಸಾಕಷ್ಟು ಉಪಯುಕ್ತ ಮಾಹಿತಿ ಪಡೆದು ಕೊಂಡಿದ್ದಾರೆ. ವಿದ್ಯಾರ್ಥಿಗಳ ತಮ್ಮ ಭವಿಷ್ಯ ನಿರ್ಮಾಣಕ್ಕೆ ಸಹಕಾರಿಯಾಗಿದೆ, ಇಂತಹ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಸ್ಪಷ್ಟ ಅರಿವು ಮೂಡುತ್ತದೆ ಹಾಗೂ ಸರಿಯಾದ ತಯಾರಿಯ ಮಾರ್ಗದರ್ಶನ ದೊರೆಯುತ್ತದೆ ಎಂದು ಹೇಳಿದರು.

ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶನ ಘಟಕದ ಅಧ್ಯಕ್ಷ ಡಾ.ಚಿರಂಜೀವಿ ಎಲ್ ಎಂ. ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಸ್ಪಷ್ಟವಾಗಿ



ನಿರ್ಧರಿಸಿ ಹೆಚ್ಚಿನ ಪರಿಶ್ರಮ ದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ಪ್ರೇರಣೆ ಪಡೆದು ಕೊಂಡಿರುತ್ತಾರೆ ಎಂದರು.

ಹುಬ್ಬಳ್ಳಿ ವಿದ್ಯಾನಗರದ ಗುರುಕುಲ ಸ್ಕಿಲ್ಸ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿ ಸಂತೋಷ ಕೆ ಮತ್ತು ಶ್ರೀನಿಧಿ ಮಹಾವಿದ್ಯಾಲಯದ ಹಳೆಯ(ಹಿರಿಯ) ವಿದ್ಯಾರ್ಥಿಗಳ ಸಂಘದ ಕಾಲೇಜು ಕಮಿಟಿ ಅಧ್ಯಕ್ಷ ವಿಶ್ವನಾಥ ಮುನವಳ್ಳಿ ಮಾತನಾಡಿದರು. ಐಕ್ಯೂಎಸಿ ಸಂಯೋಜಕ ಪ್ರೊ.ಅಜ್ಜಪ್ಪ ಕಡೂರ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಸುನೀಲ ಕುಸ್ತಿ, ಸ್ಪರ್ಧಾತ್ಮಕ ಪರೀಕ್ಷಾ ಮಾರ್ಗದರ್ಶನ ಘಟಕದ ಸದಸ್ಯರಾದ ಪ್ರೊ.ಸುರೇಶ ಶಿಂಧೆ, ಪ್ರೊ.ಎಂ.ಕೆ. ಹುಗಾರ, ಪ್ರೊ. ಬಸವರಾಜ ಡಂಗಿ, ಪ್ರೊ.ರವೀಂದ್ರ ಕತ್ತಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಧರ್ಮಸ್ಥಳ ಸಂಘದಿಂದ ಸಾಮಾಜಿಕ ಕಾರ್ಯ



ಬಾದಾಮಿ: ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ವತಿಯಿಂದ ಸಾಮಾಜಿಕ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದು ಜಾಲಿಹಾಳ ಸಿದ್ದೇಶ್ವರ ಪತ್ತಿನ ಸೌಹಾರ್ದ ಸಂಘದ ಅಧ್ಯಕ್ಷ ಶಾಂತಗೌಡ ಪಾಟೀಲ ಹೇಳಿದರು.

ಬೇಲೂರ ಗ್ರಾಮದಲ್ಲಿ ವಾತ್ಸಲ್ಯ ಮನೆ ಉದ್ಘಾಟನೆ ಮಾಡಿ ಮಾತನಾಡಿ, ಧರ್ಮಸ್ಥಳ ಯೋಜನೆ ಮೂಲಕ ಸಮಾಜಕ್ಕೆ ಬಹುಉಪಯೋಗಿ ಕೆಲಸ ಆಗುತ್ತಿದೆ ಪೂಜ್ಯರ ಸಮಾಜ ಸೇವೆ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲೂಕಿನ ಬೆಲೂರು ಗ್ರಾಮದ ನಿವಾಸಿ 80 ವರ್ಷದ ಕಮಲವ್ವ ಬಡಿಗೇರ ಅವರಿಗೆ ನಡೆಯಲು ಆಗುವುದಿಲ್ಲ. ಜೀವನ ನಿರ್ವಹಣೆ ತುಂಬಾ ಕಷ್ಟ ಧರ್ಮಸ್ಥಳ ಯೋಜನೆಯಿಂದ ಬರುವ ರೂ. ಒಂದು ಸಾವಿರ ಮಾಸಾಶನದ ಹಣದಲ್ಲಿ ಬದುಕು ಕಟ್ಟಿಕೊಂಡು ಟೆಂಗಿನ ಗರಿಯ ಹೊದಿಕೆಯ ಜೋಪಡಿಯಲ್ಲಿ ಬದುಕುತ್ತಿರುವ ಅಜ್ಜಿಗೆ ಧರ್ಮಸ್ಥಳ ಧರ್ಮಾಧಿಕಾರಿ ಜ್ಞಾನ ವಿಕಾಸ ಕಾರ್ಯಕ್ರಮದ ಮೂಲಕ ವಾತ್ಸಲ್ಯ ಕಾರ್ಯಕ್ರಮದ ಅಡಿಯಲ್ಲಿ ಕಲ್ಯಾಣ ಕರ್ನಾಟಕ ವಿಭಾಗದ ಪ್ರಾದೇಶಿಕ ನಿರ್ದೇಶಕ ಚಂದ್ರಶೇಖರ ಜೆ.ಅವರು ಹಸ್ತಾಂತರಿಸಿದರು.ಜನಜಾಗೃತಿ ವೇದಿಕೆ ಸದಸ್ಯ ರಮೇಶ ಹಾದಿಮನಿ, ಗ್ರಾಪಂ ಅಧ್ಯಕ್ಷೆ ಜಯಶ್ರೀ ಪಾಟೀಲ, ಸದಸ್ಯರಾದ ಗಂಗಪ್ಪ ವಡ್ಡರ ಒಕ್ಕೂಟದ ಅಧ್ಯಕ್ಷರೂ ಪದಾಧಿಕಾರಿಗಳು ಸಂಘದ ಸದಸ್ಯರು ಭಾಗವಹಿಸಿದ್ದರು. ಯೋಜನಾಧಿಕಾರಿ ನಾಗರಾಜ ಹದ್ಲಿ ಸ್ವಾಗತಿಸಿದರು. ಮೇಲ್ವಿಚಾರಕ ಅಮನ ವಂದಿಸಿದರು. ಜ್ಞಾನ ವಿಕಾಸ ಸಮನ್ವಯಧಿಕಾರಿ ರತ್ನಾ ನಿರೂಪಿಸಿದರು.

ಗ್ರಾಪಂ ವ್ಯಾಪ್ತಿ ಕೆಪಿಎಸ್ ಆರಂಭಿಸಿ: ನಿರಾಣಿ

ಬೀಳಗಿ: ರಾಜ್ಯದ ಬಹಳಷ್ಟು ಶಾಲೆಗಳು ಮೂಲ ಸೌಲಭ್ಯದ ಕೊರತೆಯಿಂದ ಸೊರಗುತ್ತಿವೆ. ಮಹತ್ವಾಕಾಂಕ್ಷೆಯಿಂದ ಆರಂಭಿಸಲಾದ ಕರ್ನಾಟಕ ಪಬ್ಲಿಕ್ ಸ್ಕೂಲ್(ಕೆಪಿಎಸ್)ಗಳಲ್ಲಿ ಶಿಕ್ಷಕರ ಕೊರತೆ ಬಹಳಷ್ಟಿದೆ. ಇದರಿಂದಾಗಿ ಕೆಪಿಎಸ್ ಸ್ಕೂಲ್‌ಗಳ ಉದ್ದೇಶದ ಸಾಕಾರವಾಗಿಲ್ಲ. ಮಕ್ಕಳ



ಕಲಿಕೆಯು ಕುಂಠಿತವಾಗಿದೆ, ಸರ್ಕಾರ ಕೂಡಲೇ ಶಿಕ್ಷಕರ ನೇಮಕ್ಕೆ ಕ್ರಮ ಕೈಗೊಳ್ಳಬೇಕು. ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ ಕರ್ನಾಟಕ ಪಬ್ಲಿಕ್ ಸ್ಕೂಲ್ ಆರಂಭಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಹನುಮಂತ ಆರ್.ನಿರಾಣಿ ವಿಧಾನ ಪರಿಷತ್ತಿನಲ್ಲಿ ಆಗ್ರಪಡಿಸಿದರು.

ಹೊಸದಾಗಿ 800 ಶಾಲೆಗಳನ್ನು ಆರಂಭಿಸಲು ಸರ್ಕಾರ ನಿರ್ಧರಿಸಿದೆ. ಕೆಲವು ಸುಧಾರಣೆಗಳನ್ನು ಮಾಡಲು ಮುಂದಾಗಿದೆ. ಇದನ್ನು ಸ್ವಾಗತಿಸುವೆ. ಆದರೆ ಪ್ರಸಕ್ತ ಬಜೆಟ್ಟಿನಲ್ಲಿ ಕೇವಲ 3900 ಕೋಟಿ ರೂ. ನಿಗದಿಪಡಿಸಲಾಗಿದೆ. ಇದರಿಂದ ಈ ಯೋಜನೆಗೆ ಹಿನ್ನಡೆಯಾಗುವುದು ಎಂದು ಅವರು ಹೇಳಿದರು.

ಕೆಪಿಎಸ್ ಸ್ಕೂಲ್‌ಗಳಲ್ಲಿ ಒಂದನೇ ತರಗತಿಯಿಂದ ಇಂಗ್ಲಿಷ್ ಕಲಿಸುವ ಸೌಲಭ್ಯ ಇದೆ. ಆದರೆ ಇಂಗ್ಲಿಷ್ ಶಿಕ್ಷಕರ ನೇಮಕವನ್ನೇ ಮಾಡಿಲ್ಲ. ಕಂಪ್ಯೂಟರ್ ಪೂರೈಸಲು ನಿರ್ಧರಿಸಲಾಗಿದೆ. ಆದರೆ ಕಂಪ್ಯೂಟರಗಳು ಇನ್ನೂ ಬಂದಿಲ್ಲ ಎಂದು ತೀವ್ರ ಕಳವಳ ವ್ಯಕ್ತಪಡಿಸಿದ ಎಚ್.ಆರ್.ನಿರಾಣಿಯವರು, ಶಿಕ್ಷಕರಿಗೆ ನ್ಯಾಯ ಒದಗಿಸುವಂತೆ ವರ್ಗಾವಣೆಯ ಬೇಡಿಕೆಗೆ ಅನುಸರಿಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಪಡಿಸಿದರು.

ಮಹಿಳೆಯರ ಸಾಧನೆಗೆ ಪ್ರೋತ್ಸಾಹಿಸಿ



ಮುಧೋಳ: ಪುರುಷನ ಯಶಸ್ವಿ ಹಿಂದೆ ಮಹಿಳೆಯ ಪಾತ್ರ ಇರುತ್ತದೆ ಎನ್ನುವಂತೆ ಮಹಿಳೆಯ ಸಾಧನೆಗೂ ಪುರುಷ ಬೆನ್ನೆಲುಬು ಆಗಿ ನಿಂತರೆ ಮಾತ್ರ ಸಾಧ್ಯ ಎಂದು ಶಿಕ್ಷಕಿ ಮಹಾದೇವಿ ರಾಮತೀರ್ಥ ಹೇಳಿದರು. ನಗರದ ಕಮಕೇರಿ ಹಳೇ ಆಸ್ಪತ್ರೆಯಲ್ಲಿ 1987ರ ಎಸ್ಸೆಸ್ಸೆಲ್ಸಿ ಬಳಗದ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಶಿಕ್ಷಕರಾದ ಸುರೇಶ ನಿಂಗಪ್ಪನವರ ಮಾತನಾಡಿ, ಇತ್ತೀಚೇಗೆ ಶಾಲೆಗಳಲ್ಲಿ ಬಾಲಕಿಯರ ಪ್ರವೇಶಾತಿ ಹೆಚ್ಚಳ ಆಗುತ್ತಿದೆ. ಪರೀಕ್ಷೆಗಳಲ್ಲಿಯೂ ಬಾಲಕೀಯರ ಮೇಲುಗೈ. ಪುರುಷರಂತೆ ಎಲ್ಲ ರಂಗಗಳಲ್ಲೂ ಹೆಚ್ಚಿನ ಅವಕಾಶ ಮಹಿಳೆಯರಿಗೆ ದೊರೆಯಬೇಕಾಗಿದೆ ಎಂದು ಹೇಳಿದರು. ಎಂ.ಆರ್.ಬಿದರಿ ಮಾತನಾಡಿ ಭಾರತೀಯ ಸಂಸ್ಕೃತಿಯಲ್ಲಿ ನಾರಿಯರಿಗೆ ಪೂಜ್ಯನೀಯ ಸ್ಥಾನ ನೀಡಿ ಭಾರತ ಅತ್ಯುನ್ನತ, ಸಂಸ್ಕಾರಯುತ ದೇಶ ಎಂದೆನಿಸಿಕೊಳ್ಳುತ್ತಿದೆ. ಭಾರತ ಸರ್ಕಾರ ಎಸ್‌ಪಿಜಿಎನ್‌ದಲ್ಲಿ ಮಹಿಳೆಗೂ ಅವಕಾಶ ನೀಡಿ ಗೌರವಿಸಿರುವದು ಹೆಮ್ಮೆ ವಿಷಯ ಎಂದರು.ಗೆಳೆಯರ ಬಳಗದ ಅಧ್ಯಕ್ಷ ಸಂಜು ಕಮಕೇರಿ, ನಂದು ಚಿಕದಾನಿ, ಎಂ.ಬಿ.ಪಾಟೀಲ, ಆರ್.ಎನ್.ಬಂಗಾರಪ್ಪನವರ, ಬಿ.ಎಚ್.ಬೀಳಗಿ, ಎಸ್.ಆರ್.ಪಾಟೀಲ, ಅಪ್ಪಾಸಿ ಘೋರ್ಪಡೆ, ಕಿಶೋರ ಘೋರ್ಪಡೆ, ಸುಭಾಸ ಭೋಸಲೆ, ಗಂಗಮ್ಮ ತಿಮಸಾನಿ, ಸುನಿತಾ ಜಾಧವ, ಶಾರದಾ ಕುಲಗೋಡ ಇತರರಿದ್ದರು.

ಭಾವೈಕ್ಯತೆ ಮೂಡಿಸುವ ಇಫ್ತಿಯಾರ್ ಕೂಟ

ಲೋಕಾಪುರ: ರಂಜಾನ್ ತಿಂಗಳಲ್ಲಿ ಆಚರಿಸುವ ಇಫ್ತಿಯಾರ್ ಕೂಟಗಳು ಜನರಲ್ಲಿ ಭಾವೈಕ್ಯತೆ ಮೂಡಿಸಲು ಹಲವಾರು ಶತಮಾನಗಳಿಂದ ಕಾರಣವಾಗಿವೆ ಎಂದು ಅಂಜುಮನ್–ಎ–ಇಸ್ಲಾಂ ಕಮಿಟಿ ಅಧ್ಯಕ್ಷ ಹಾಗೂ ಪತ್ರಕರ್ತ ಹಸನ್ ಡೋಂಗ್ರಿ ಮಹಾಲಿಂಗಪುರ ಹೇಳಿದರು.

ಶನಿವಾರ ಅತ್ತಾರ ಸಹೋದರರಿಂದ ಮುಸ್ಲಿಂ ಬಾಂಧವರಿಗೆ ಇಫ್ತಿಯಾರ್ ಕೂಟ ಹಾಗೂ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪವಿತ್ರ ರಂಜಾನ್ ತಿಂಗಳಲ್ಲಿ ಕುರಾನ ಪಠಣದ ಜೊತೆಗೆ, ಧರ್ಮ ಗುರುಗಳಿಂದ ಸಮುದಾಯಕ್ಕೆ ಅಗತ್ಯವಿರುವ ಮಾರ್ಗದರ್ಶನ ದೊರೆಯುತ್ತದೆ ಎಂದರು. ಸನ್ಮಾನ ಸ್ವೀಕರಿಸಿ ರಾಯಲ್ ಪ್ಯಾಲೇಸ್ ಶಾಲೆಯ ಅಧ್ಯಕ್ಷ ಹಾಗೂ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅಲ್ಲಾಸಾಬ ಯಾದವಾಡ ಮಾತನಾಡಿ, ಈ ಸೌಹಾರ್ದ ಇಫ್ತಾರ್‌ಕೂಟವು ಕಾಲಕ್ರಮೇಣ ಸ್ಥಳೀಯ ಸಮುದಾಯದ ಒಗ್ಗಟ್ಟಿನ ಪ್ರತೀಕವಾಗಿ ಬೆಳೆಯಿತು. ರಂಜಾನ್ ಮಾಸದ ಉಪವಾಸ ಮುರಿಯುವ ಇಫ್ತಾರ್ ಸಮಯದಲ್ಲಿ ಸರ್ವ ಧರ್ಮಿಯರು ಇಫ್ತಾರ್ ಕೂಟದಲ್ಲಿ ಭಾಗವಹಿಸಿ ನನ್ನನ್ನು ಸನ್ಮಾನಿಸಿದ ಅತ್ತಾರ ಸಹೋದರರಿಗೆ ಅಭಿನಂದನೆ ಸಲ್ಲಿಸಿದರು. ಗುಲಾಬಸಾಬ ಅತ್ತಾರ, ಜಾಕೀರ ಅತ್ತಾರ, ಹುಸಮಾನಸಾಬ ಜೀರಗಾಳ, ಮಲಿಕ ಭಾಗವಾನ, ಎ.ಎಸ್.ಚಿಗರಡ್ಡಿ, ಸಾದೀಕ ಪಠಾಣ, ಬಂದೇನವಾಜ ರಾಮದುರ್ಗ, ರಫೀಕ ಗುಳೆದಗುಡ್ಡ, ಎಸ್‌ಡಿಎಂಸಿ ಅಧ್ಯಕ್ಷ ಶಬ್ಬೀರ ಅತ್ತಾರ ಇದ್ದರು.



ಕಿರುಸುದ್ದಿ

ಜೋಡೆತ್ತು ಸಾಕಿದ ರೈತ ದಂಪತಿಗಳಿಗೆ ಸನ್ಮಾನ



ಝಳಕಿ: ಸಾವಯುವ ಕೃಷಿಯು ರಾಸಾಯನಿಕ ಮುಕ್ತ ಪರಿಸರ ಸ್ನೇಹಯಾಗಬೇಕು ಎಂದು ಅಮೃತಾನಂದ ಸ್ವಾಮೀಜಿ ಆರ್ಶಿವಚನ ನೀಡಿದರು. ಸಮೀಪದ ಬಳ್ಳೊಳ್ಳಿ ಗ್ರಾಮದ ವೀರಭದ್ರಶ್ವರ ದೇವಸ್ಥಾನ ಸೇವಾ ಸಮಿತಿಯಿಂದ ಹಮ್ಮಿಕೊಂಡಿದ್ದ ಜೋಡೆತ್ತುಗಳ ಸಾಕಿದ ದಂಪತಿಗಳಿಗೆ ಸನ್ಮಾನಿಸಿ ಆರ್ಶಿವಚನ ನೀಡಿದ ಅವರು, ಸಾವಯುವ ಕೃಷಿ ಪದ್ಧತಿಯಾಗಿದ್ದು ಮಣ್ಣಿನ ಫಲವತ್ತತೆ ಹೆಚ್ಚಿಸುತ್ತದೆ. ನೈಸರ್ಗಿಕ ಸಂಪನ್ಮೂಲ ಸಂರಕ್ಷಿಸುತ್ತದೆ. ವಿಷಮುಕ್ತ ಆರೋಗ್ಯಕರ ಆಹಾರ ಒದುಗಿಸುತ್ತದೆ. ಮೊದಲು ಮನುಷ್ಯ ಆರೋಗ್ಯವಂತ ಇದ್ದರೆ ಏನ್ನಾದರು ಸಾಧನೆ ಮಾಡಬಹುದು. ಪ್ರತಿಯೊಬ್ಬರ ಮನೆಯಲ್ಲಿ ಹಸು. ಎತ್ತು ಇರಬೇಕು. ಆದರಿಂದ ನಮಗೆ ಆರೋಗ್ಯವಾಗಿ ಇರಲು ಸಾಧ್ಯವಿದೆ ಎಂದರು. 40 ಜೋಡೆತ್ತುಗಳ ಗ್ರಾಮದ ಪ್ರಮುಖ ರಸ್ತೆಯಲಗಳಲ್ಲಿ ಮೆರವಣಿಗೆ ಮಾಡಲಾಯಿತು.

ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೇಟ್ಟಿ, ಭೀಮಾಶಂಕರ ಸಕ್ಕರೆ ಕಾರ್ಖಾನೆ ನಿರ್ದೇಶಕ ಎಂ.ಆರ್ .ಪಾಟೀಲ, ರೈತ ಸಂಪರ್ಕ ಕೇಂದ್ರ ಅಧಿಕಾರಿ ಹಿಟ್ಟನಳ್ಳಿ, ಕಾಮಣ್ಣಗೌಡ ಬಿರಾದಾರ, ಅಶೋಕ ತೋಟದಾರ, ಮಾದೇವ ಕದರಿ, ಸಿದ್ದಾರಾಮ ಸಾಹುಕಾರ ವಾಲಿ, ಈರಣ್ಣ ಸಾಹುಕಾರ ವಾಲಿ, ರಾಘವೇಂದ್ರ ಕಾಪಸೆ ಇದ್ದರು.

ಮಾ.11ಕ್ಕೆ ರೇಣುಕಾಚಾರ್ಯ ಜಯಂತ್ಯುತ್ಸವ

ನಿಡಗುಂದಿ: ಜಗದ್ಗುರು ರೇಣುಕಾಚಾರ್ಯ ಜಯಂತ್ಯುತ್ಸವ ಮಾ.11ರಂದು ಬುಧವಾರ ಜರುಗಲಿದೆ. ಬೆಳಗ್ಗೆ ಮುದ್ದೇಶ್ವರ ದೇವಸ್ಥಾನದಿಂದ ವೀರಭದ್ರೇಶ್ವರ ದೇವಸ್ಥಾನದವರೆಗೆ ರೇಣುಕಾಚಾರ್ಯರ ಭಾವಚಿತ್ರ ಹಾಗೂ ಶಿವಾಚಾರ್ಯರೊಂದಿಗೆ ಕುಂಭ, ಕಳಸ ಹಾಗೂ ಸಕಲ ವಾದ್ಯವೈಭವಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಂತರ ಗರಡಿಮನಿ ಕಟ್ಟೆಯಲ್ಲಿ ಧರ್ಮಸಭೆ ಜರುಗುತ್ತದೆ. ದಿವ್ಯ ಸಾನಿಧ್ಯವನ್ನು ರುದ್ರೇಶ್ವರ ಮಠದ ರುದ್ರಮುನಿ ಶ್ರೀಗಳು ವಹಿಸಲಿದ್ದಾರೆ. ಮುತ್ತಗಿಯ ಪಂಡಿತಾರಾಧ್ಯ, ಬಸವನಬಾಗೇವಾಡಿ, ಶಿವಪ್ರಕಾಶ ಶ್ರೀ, ಬಿಲ್‌ಕೆರೂರದ ಗುರುಲಿಂಗ ಶ್ರೀ, ಚಿಮ್ಮಲಗಿ ಸಿದ್ದರೇಣುಕ ಶ್ರೀ, ಇಟಗಿಯ ಗುರುಶಾಂತವೀರ ಶ್ರೀ, ಮುಳವಾಡದ ವಿರುಪಾಕ್ಷ ಶ್ರೀ, ಆಲಮಟ್ಟಿಯ ರುದ್ರಮುನಿ ದೇವರು ಪಾಲ್ಗೊಳ್ಳಲಿದ್ದಾರೆ ಎಂದು ರೇಣುಕಾಚಾರ್ಯ ಜಂಗಮ ಹಾಗೂ ಶೈಕ್ಷಣಿಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಬಸಲಿಂಗಯ್ಯ ಗಣಾಚಾರಿ ತಿಳಿಸಿದ್ದಾರೆ.

ನಾಗರಬೆಟ್ಟ ಏತ ನೀರಾವರಿ ಪೂರ್ಣಗೊಳಿಸಲು ಮನವಿ



ಮುದ್ದೇಬಿಹಾಳ: ತಾಲೂಕಿನ ಬಹು ನಿರೀಕ್ಷಿತ ನಾಗರಬೆಟ್ಟ ಏತ ನೀರಾವರಿ ಯೋಜನೆಯ ಪೂರ್ವ ಕಾಲುವೆ ಯೋಜನೆಗೆ ರೈತರು ತಮಗೆ ಬರಬೇಕಾದ ಭೂಸ್ವಾಧೀನ ಮತ್ತು ಪರಿಹಾರ ದೊರೆಯದೆ ಇರುವುದರಿಂದ ಅಡ್ಡಿಪಡಿಸುತ್ತಿದ್ದು, ಆದಷ್ಟು ಬೇಗನೆ ರೈತರಿಗೆ ಪರಿಹಾರ ಒದಗಿಸಿ ನಿಂತಿರುವ ನೀರಾವರಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿ ಯುವಜನ ಸೇನೆ ರಾಜ್ಯ ಅಧ್ಯಕ್ಷ ಶಿವಾನಂದ ವಾಲಿ ಕೃಷ್ಣ ಜಲಭಾಗ್ಯ ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರ ಅವರಿಗೆ ಮನವಿ ನೀಡಿದ್ದಾರೆ.

ಈ ಕುರಿತು ಅಧಿಕಾರಿಗಳಿಗೆ ಮನವಿ ನೀಡಿರುವ ಅವರು, ನಾಗರಬೆಟ್ಟ ಯೋಜನೆ 2021ರಲ್ಲಿ ವಿದ್ಯುಕ್ತವಾಗಿ ಪ್ರಾರಂಭವಾಗಿ ಆರು ವರ್ಷ ಕಳೆದಿದೆ ಆದರೂ ಯೋಜನೆಯ ಪೂರ್ಣಪ್ರಮಾಣದ ಕಾಮಗಾರಿ ಮುಗಿದಿಲ್ಲ. ಚಿಕ್ಕಗುಡ್ಡದ ಹತ್ತಿರ ಇರುವ ಪೂರ್ವ ಕಾಲುವೆ 12 ಕಿಮೀ ಉದ್ದವಿದ್ದು ಕೇವಲ 300 ಮೀಟರ್ ಕಾಮಗಾರಿ ಮುಗಿದಿದೆ. ನಾಲತವಾಡ ಸೀಮೆಯ ಕಾಮಗಾರಿ ಕೇವಲ ಐವತ್ತು ಮೀಟರ್ ಪೂರ್ಣಗೊಂಡಿದೆ. ಈ ಭಾಗದಲ್ಲಿ ರೈತರು ಪರಿಹಾರ ದೊರೆಯದೆ ಕಾಲುವೆ ಕಾಮಗಾರಿ ಮಾಡಲು ಬಿಟ್ಟಿಲ್ಲ, ಕಾಮಗಾರಿಗೆ ತಡೆಯಿದ್ದು ಅರ್ಧಕ್ಕೆ ನಿಂತಿದೆ ಹೀಗಾಗಿ, ನಿಂತಿರುವ ಕಾಮಗಾರಿಯನ್ನು ಆದಷ್ಟು ಬೇಗ ಭೂ ಸ್ವಾಧೀನ ಆಗಿರುವ ರೈತರಿಗೆ ಪರಿಹಾರವನ್ನು ಕೊಡುವ ಮೂಲಕ ಪ್ರಾರಂಭಿಸಬೇಕು. ಇದರಿಂದ ನೀರಾವರಿ ಅನುಕೂಲ ಆಗುತ್ತದೆ ಎಂದಿರುವ ಅವರು, ಅಪೂರ್ಣಗೊಂಡಿರುವ ಕಾಮಗಾರಿಯನ್ನು ಶೀಘ್ರದಲ್ಲಿ ಪೂರ್ಣಗೊಳಿಸದೆ ಹೋದರೆ ಯುವಜನ ಸೇನೆ ವತಿಯಿಂದ ನಾಗರಬೆಟ್ಟ ಗುಡ್ಡದ ಹತ್ತಿರ ಧರಣೆ ಸತ್ಯಾಗ್ರಹವನ್ನು ಮಾಡಬೇಕಾಗುತ್ತದೆ ಎಂದು ಮನವಿ ಪತ್ರದಲ್ಲಿ ಕೆಬಿಜೆಏನ್ ಎಲ್ ಅಧಿಕಾರಿಗಳಿಗೆ ಎಚ್ಚರಿಸಿದ್ದಾರೆ.



ಮುದ್ದೇಬಿಹಾಳ: ತಾಲೂಕಿನ ಬಸರಕೋಡ ಗ್ರಾಮದ ಪವಾಡ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಲಾಯಿತು. ದೇವಸ್ಥಾನ ಕಮಿಟಿಯ ಅಧ್ಯಕ್ಷ ಕೆ.ವೈ.ಬಿರಾದಾರ, ಬಸಯ್ಯ ಸ್ವಾಮೀಜಿ, ಹಿರಿಯ ಸಾಹಿತಿ ಅಶೋಕ ಪಿ.ಮಣಿ, ಪ್ರಾಂಶುಪಾಲ ಡಾ.ಎಚ್.ಎ.ಕಟಗೂರು, ಎನ್ ಎಸ್‌ಎಸ್ ಘಟಕದ ಸಂಚಾಲಕ ಪರಶುರಾಮ ದೇವಿ, ಹಿರಿಯ ಉಪನ್ಯಾಸಕರಾದ ಎಲ್.ಎಚ್.ಮಮದಾಪುರ, ಜ್ಯೋತಿ ಕೆ.,ಸೇರಿದಂತೆ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಶಾಸಕರ ತಾರತಮ್ಯ ನೀತಿ ಸಲ್ಲದು: ಕುಚಬಾಳ

ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳ ವಿರೋಧಿಸಿ ನಡೆಯುತ್ತಿರುವ ಧರಣಿ ಸತ್ಯಾಗ್ರಹದಲ್ಲಿ ಮಾತನಾಡಿದ ಭಾಜಪ ಮಾಜಿ ಜಿಲ್ಲಾಧ್ಯಕ್ಷ ಆರ್.ಎಸ್.ಪಾಟೀಲ(ಕೂಚಬಾಳ) ತಾಳಿಕೋಟೆ ಪಟ್ಟಣದಲ್ಲಿ ಹದಿಮೂರು ದಿನಗಳಿಂದ ನಡೆಯುತ್ತಿರುವ ಈ ಧರಣಿ ಸ್ಥಳಕ್ಕೆ ಶಾಸಕರು ಬರದೆ ಧರಣಿ ನಿರತರ ಮುಂದೆ ಹಾದು ಸೌಜನ್ಯಕ್ಕೂ ಕೂಡಾ ಬಾರದೆ ಹೋದದ್ದು ಖಂಡನಿಯವಾದುದ್ದು. ನಿಮಗೆ ತಾಳಿಕೋಟಿ ಜನತೆ ಹೆಚ್ಚಿನ ಮತ ನೀಡಿದ್ದಾರೆ. ಅದನ್ನು ಶಾಸಕರು ಮರೆತಿದ್ದಾರೆ. ಶಾಸಕರು ಪಟ್ಟಣದ ಋಣ ತೀರಿಸಬೇಕಾದರೆ ಪಟ್ಟಣದಲ್ಲಿಯೇ ಪ್ರಜಾಸೌಧ ಕಟ್ಟಡ ನಿರ್ಮಿಸುವಂತೆ ಒತ್ತಾಯಿಸಿದರು. ತಾಳಿಕೋಟೆ ತಾಲೂಕು ಹೋರಾಟ ಸಮಿತಿಯ ಉಪಾಧ್ಯಕ್ಷ ವಿಜಯ ಸಿಂಗ್ ಹಜೇರಿ ಮಾತನಾಡಿ, ತಾಲೂಕು ಆಡಳಿತ ಸಂಪೂರ್ಣ ಏಕ ಪಕ್ಷಿಯವಾಗಿ ನಡೆದು ಕೊಳ್ಳುತ್ತಿದ್ದೂ ತಮ್ಮದೆ ಕುಟುಂಬಕ್ಕೆ ಅನಕೂಲವಾಗುವ ಹಾಗೆ ನಡೆಕೊಳ್ಳುತ್ತಿರುವುದು ವಿಷಾಧನಿಯ ಸಂಗತಿಯಾಗಿದೆ ಎಂದರು. ಈಗ ನಿಗದಿ ಪಡಿಸಿರುವ ಸ್ಥಳ ಕೂಡಲೇ ರದ್ದುಪಡಿಸಬೇಕು ಎಂದು ಆಗ್ರಹಿಸಿದರು. ಮಂಗಳವಾರ 13ನೇ ದಿನದ ಧರಣಿ ಸತ್ಯಾಗ್ರಹವು ರಾಜಪುತ ಸಮಾಜದ ಎಲ್ಲಾ ಹಿರಿಯರಿಂದ ನಡೆಯಿತು. ಹೋರಾಟ ಸಮಿತಿಯ ಪದಾಧಿಕಾರಿಗಳಾದ ಹೋರಾಟ ಸಮಿತಿ ಅಧ್ಯಕ್ಷ ದಶರತಸಿಂಗ್ ಮನಗೂಳಿ, ಎಸ್.ಬಿ.ಕಟ್ಟಿಮನಿ, ಮುತ್ತಪ್ಪ ಚಮಲಾಪುರ, ಕಾಶಿನಾಥ ಮುರಾಳ, ಮೆಹಬೂಬ ಚೋರಗಸ್ತಿ, ಪರಶುರಾಮ ತಂಗಡಗಿ, ಪ್ರಕಾಶ ಹಜೇರಿ, ಮಯೂರ ಪಾಟೀಲ ಇದ್ದರು.



ತಾಳಿಕೋಟೆ: ತಾಲೂಕಿನ ಮೈಲೇಶ್ವರ ಗ್ರಾಮದ ಹತ್ತಿರ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳ ವಿರೋಧಿಸಿ ನಡೆಯುತ್ತಿರುವ ಧರಣಿ ಸತ್ಯಾಗ್ರಹ ಮಂಗಳವಾರ 13ನೇ ದಿನಕ್ಕೆ ರಾಜಪುತ ಸಮಾಜದ ಎಲ್ಲಾ ಹಿರಿಯರಿಂದ ಬೆಂಬಲ ದೊರೆಯಿತು. ಅಮಿತ್ ಮನಗೂಳಿ, ಮಹೇಶ ಚಲವಾದಿ, ರವಿ ಕಟ್ಟಿಮನಿ ಹಾಗೂ ಪಟ್ಟಣದ ರಜಪೂತ ಸಮಾಜದ ಗುರುಹಿರಿಯರು ಹಾಜರಿದ್ದರು.

ಮಾ.18ರಿಂದ ಏ.2ರ ವರಿಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ | ಜಿಲ್ಲಾಧಿಕಾರಿ ಸೂಚನೆ

ಸುಸೂತ್ರ, ಪಾರದರ್ಶಕವಾಗಿ ಪರೀಕ್ಷೆ ನಡೆಸಿ

ವಿಜಯಪುರ: ಮಾ.18ರಿಂದ ಆರಂಭವಾಗುವ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಯಾವುದೇ ಲೋಪವಾಗದಂತೆ ಪಾರದರ್ಶಕ, ವ್ಯವಸ್ಥಿತ ಹಾಗೂ ಸುಸೂತ್ರವಾಗಿ ನಡೆಸಬೇಕೆಂದು ಪರೀಕ್ಷೆಗೆ ನಿಯೋಜಿತ ಅಧಿಕಾರಿ ಹಾಗೂ ಸಿಬ್ಬಂದಿಗೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಸೂಚನೆ ನೀಡಿದರು.



ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಮಂಗಳವಾರ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1ರ ಜಿಲ್ಲಾಮಟ್ಟದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪರೀಕ್ಷೆಗೆ ನಿಯೋಜಿತ ವಿವಿಧ ಅಧಿಕಾರಿಗಳು ಹಾಗೂ ಸಿಬ್ಬಂದಿ ನಿರ್ವಹಿಸಬೇಕಾದ ಕರ್ತವ್ಯ ಹಾಗೂ ಜವಾಬ್ದಾರಿ ಹಾಗೂ ನಿರ್ವಹಣೆ ಕುರಿತ ಸಲಹೆ ನೀಡಿದರು.

ಬಿಇಒ, ತಹಶೀಲ್ದಾರ್ ಅವರು ತಾಲೂಕಿನಲ್ಲಿ ಸಭೆ ನಡೆಸಿ ಅಗತ್ಯ ಸೂಚನೆ ನೀಡಬೇಕು. ಮೈಕ್ರೊ ಪ್ಲಾನಿಂಗ್ ಮಾಡಿಕೊಳ್ಳಬೇಕು ಪರೀಕ್ಷಾ ಪ್ರಕ್ರಿಯೆಯಲ್ಲಿ ಲೋಪ-ದೋಷಗಳಾಗಬಾರದು. ಆರೋಗ್ಯ ಇಲಾಖೆಯಿಂದ ಅಗತ್ಯ ಸಿಬ್ಬಂದಿ ನಿಯೋಜಿಸಬೇಕು. ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣ ಕಲ್ಪಿಸುವ ನಿಟ್ಟಿನಲ್ಲಿಗಾಳಿ, ಬೆಳಕು ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದೂ ಜಿಲ್ಲಾಧಿಕಾರಿಗಳು ಸಲಹೆ ಮಾಡಿದರು.

ಜಿಪಂ ಸಿಇಒ ರಿಷಿ ಆನಂದ ಮಾತನಾಡಿ, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರ ಕಾರ್ಯ ಗುರುತರವಾಗಿದೆ. ನಮ್ಮ ಜಿಲ್ಲೆಯಲ್ಲಿ ಪರೀಕ್ಷೆಯನ್ನು ಯಾವುದೇ ಲೋಪ ಆಗದಂತೆ ನೋಡಿಕೊಳ್ಳಬೇಕು. ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ತಮ್ಮ ಜವಾಬ್ದಾರಿ ಅರಿತು ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದರು.

ಪರೀಕ್ಷಾ ಕೇಂದ್ರಗಳಿಗೆ ನಿಗದಿತ ಸಮಯಕ್ಕೆ ಪ್ರಶ್ನೆ ಪತ್ರಿಕೆಗಳು ತಲುಪುವಂತೆ ನೋಡಿಕೊಳ್ಳಬೇಕು. ಪರೀಕ್ಷೆಗೆ ನಿಯೋಜಿತ ಅಧಿಕಾರಿಗಳು ಅತ್ಯಂತ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬೇಕು. ಪರೀಕ್ಷಾ ಕೇಂದ್ರಗಳಿಗೆ ಕಲ್ಪಿಸಿರುವ ವ್ಯವಸ್ಥೆ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮನಗೌಡ ಹಟ್ಟಿ ಮಾತನಾಡಿ, ಪರೀಕ್ಷೆ ಪಾರದರ್ಶಕವಾಗಿ ನಡೆಯುವ ನಿಟ್ಟಿನಲ್ಲಿ ಎಲ್ಲ 137 ಪರೀಕ್ಷಾ ಕೇಂದ್ರಗಳಿಗೆ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗುವುದು ಎಂದರು.

ಜಮಖಂಡಿಯ ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರು ಆದ ಜಿಲ್ಲಾ ನೋಡಲ್ ಅಧಿಕಾರಿ ಮಂಗಳಾ ನಾಯಕ ಮಾತನಾಡಿ, ಜೂನ್ ತಿಂಗಳಿಂದಲೇ ಪರೀಕ್ಷಾ ಸಿದ್ದತೆ ನಡೆದಿದೆ. ಹಾಗಾಗಿ ಎಲ್ಲರೂ ಪಾರದರ್ಶಕ ಪರೀಕ್ಷೆಗೆ ಸಹಕರಿಸಬೇಕು ಎಂದರು. ಪ್ರಶ್ನೆ ಪತ್ರಿಕೆಯನ್ನು ನಿಗದಿತ ವೇಳೆಗೆ ವಿತರಿಸುವಂತೆ ನೋಡಿಕೊಳ್ಳುವುದು ಪರೀಕ್ಷಾ ಮುಖ್ಯಸ್ಥರು ಜವಾಬ್ದಾರಿಯಾಗಿದೆ ಎಂದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ವೀರಯ್ಯ ಸಾಲಿಮಠ ಮಾತನಾಡಿ, ಪರೀಕ್ಷೆಗೆ ಜಿಲ್ಲೆಯಲ್ಲಿ ಒಟ್ಟು 42,450 ವಿದ್ಯಾರ್ಥಿಗಳು ಪರೀಕ್ಷೆ ನೋಂದಾಯಿಸಿಕೊಂಡಿದ್ದಾರೆ. 137 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯುತ್ತಿದ್ದು, ಯಾವುದೇ ಲೋಪವಾಗದಂತೆ ಎಲ್ಲ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದರು.

ಡಯಟ್ ಪ್ರಾಚಾರ್ಯ ಉಮಾದೇವಿ ಸೊನ್ನದ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ, ತೋಟಗಾರಿಕಾ ಇಲಾಖೆಯ ಅಧಿಕಾರಿ ರಾಹುಲ್ ಭಾವಿದೊಡ್ಡಿ, ವಿಷಯ ಪರಿವೀಕ್ಷಕ ಶಿವಾನಂದ ಬ್ಯಾಹಟ್ಟಿ ಸೇರಿದಂತೆ ಅಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರು, ಉಪ ಮುಖ್ಯ ಅಧೀಕ್ಷಕರು, ಸಿಬ್ಬಂದಿ ಉಪಸ್ಥಿತರಿದ್ದರು.

ಮಕ್ಕಳಿಗೆ ಸಂಸ್ಕಾರಯತ ಶಿಕ್ಷಣ ನೀಡುವಲ್ಲಿ ಶಿಕ್ಷಕರ ಪಾತ್ರ ಮುಖ್ಯ: ಭೀಮಣ್ಣ ಕೌಲಗಿ

ಇಂಡಿ: ಮಕ್ಕಳಿಗೆ ಸಂಸ್ಕಾರಯತ ಶಿಕ್ಷಣ ನೀಡುವಲ್ಲಿ ಶಿಕ್ಷಕರ ಪಾತ್ರ ಬಹಳ ಮಹತ್ವದಾಗಿದೆ ಎಂದು ರಾಜ್ಯ ನಿಂಬೆ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಭೀಮಣ್ಣ ಕೌಲಗಿ ಹೇಳಿದರು.

ನಗರದ ಸರ್ಕಾರಿ ಕನ್ನಡ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಹಾಗೂ 8ನೇ ತರಗತಿ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಈ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ ಉತ್ತಮ ನಾಗರಿಕರನ್ನಾಗಿ ಮಾಡುವುದು ಶಿಕ್ಷಕರ ಜವಾಬ್ದಾರಿಯಾಗಿದೆ ಎಂದರು.

ಶಿಕ್ಷಣ ಸಂಯೋಜಿಕ ಎ.ಓ.ಹೂಗಾರ ಮಾತನಾಡಿ, ಪಾಲಕರು ದಿನನಿತ್ಯ ನಿಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ನಿಮ್ಮ ಜವಾಬ್ದಾರಿಯಾಗಿದೆ. ಮಕ್ಕಳ ಸರ್ವಾಗೀಣ ಬೆಳವಣಿಗೆಗೆ ಶಿಕ್ಷಕರೊಂದಿಗೆ ಕೈಜೋಡಿಸಿದರೆ ಯಶಸ್ಸು ಸಾಧ್ಯ ಎಂದರು.

ನ್ಯಾಯವಾದಿ, ಟಿಎಂಸಿ ಮಾಜಿ ಸದಸ್ಯ ಸೋಮು ನಿಂಬರಗಿಮಠ ಮಾತನಾಡಿ, ಓಕೆ ಗುರುಗಳು ಹಾಗೂ ಎಲ್ಲ ಗುರುಗಳು ಗುರು ಮಾತೆಯರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಗುಣಮಟ್ಟದ ಶಿಕ್ಷಣ ನೀಡುತ್ತಿದ್ದಾರೆ. ಹೀಗೆ ಇನ್ನಷ್ಟು ಈ ಶಾಲೆ ಅಭಿವೃದ್ಧಿ ಹೊಂದಲಿ ಎಂದು ಹೇಳಿದರು.

ಎಸ್ಡಿಎಂಸಿ ಅಧ್ಯಕ್ಷ ಆನಂದ ವಿಶ್ವನಾಥ ಕಂಬಾರ ಅಧ್ಯಕ್ಷತೆ ವಹಿಸಿದ್ದರು. ಪುರಸಭೆ ಮಾಜಿ ಅಧ್ಯಕ್ಷ ಭೀಮನಗೌಡ ಪಾಟೀಲ, ಶ್ರೀಕಾಂತ ಕೂಡಿಗನೂರ, ಯಮುನಾ ಜಿ ಸಾಳುಂಕೆ, ಶ್ರೀಧರ ಹಿಪ್ಪರಗಿ, ಉಪಾಧ್ಯಕ್ಷ ಸಂತೋಷ ಮೋರೆ, ಸದಸ್ಯರಾದ ಮಲ್ಲು ಗುಡ್ಲು, ಪ್ರಶಾಂತ ಗುಂದಗಿ ಅಮರ ಪತಂಗೆ, ಬಲಭೀಮ ಕಾಟಕರ, ರವಿಕುಮಾರ ಕಳವಂತ ಸುಶ್ಮಿತಾ ಮೇತ್ರಿ ಆಲೂ ರಾಥೋಡ, ಮುಖ್ಯ ಗುರುಗಳಾದ ಎಸ್.ಬಿ.ದಳವಾಯಿ, ಸಾತಪ್ಪ ತೆನೆಳ್ಳಿ, ಎಸ್.ವಿ.ಹರಳಯ್ಯ, ಬಿ.ಎಂ. ವಟಾರ, ಎಸ್.ಆರ್.ಪಾಟೀಲ್, ಆನಂದ ಕೆಂಭಾವಿ, ಪ್ರಕಾಶ ಐರೋಡಗಿ, ಮಾಳು ಪೂಜಾರಿ, ಎಂ.ಎಚ್.ಹೊಸಮನಿ, ಎಸ್. ಎಸ್.ಕಾಂಬಳೆ, ಎಂ.ಎಂ.ಲಕಡಹಾರ, ಡಿ.ಆರ್.ಕೋರಿ, ಎಂ.ಡಿ.ಹಿಂದೆ, ಬಸವರಾಜ ಲೋಕೂರ, ಗುರುಮಾತೆ ಕೆ.ಎಲ್.ಲಚ್ಯಾಣ, ಎಚ್.ಎಂ.ಕುಲಕರ್ಣಿ, ಎಸ್.ಟಿ.ಬಗಲಿ, ಎಸ್.ಎಸ್.ರಾಯಗೊಂಡ, ಎಸ್.ಎಸ್. ಕಾರಕಲ್, ಬಿ.ಸಿ.ಭಗವಂತಗೌಡರ, ವೈ. ಎಸ್.ಚಿಗರಿ, ಎಂ.ಡಿ.ದೊಡ್ಡಮನಿ, ಪಿ.ಜಿ.ಕಲ್ಮನಿ ಉಪಸ್ಥಿತರಿದ್ದರು.



ಭಾರತ ಮಾತೆ ಪೂಜಿಸುವುದು ನಮ್ಮ ಕರ್ತವ್ಯ

ಬಸವನಬಾಗೇವಾಡಿ: ಮುಸ್ಲಿಂ, ಕ್ರಿಶ್ಚಿಯನ್ ಸೇರಿ ದೇಶದಲ್ಲಿರುವರೆಲ್ಲರೂ ಮೂಲ ಹಿಂದೂಗಳೆ ಹೊರತು ಬೇರೆ ಯಾರೂ ಅಲ್ಲ, ನಾವೆಲ್ಲರೂ ಭಾರತ ಮಾತೆಯ ಮಕ್ಕಳು, ಭಾರತ ಮಾತೆಯನ್ನು ಪೂಜಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಹೇಳಿದರು.

ತಾಲೂಕಿನ ನಾಗೂರ ಗ್ರಾಮದ ಯಮನೂರೇಶ್ವರ ಚಕ್ರವರ್ತಿ ಚಾಂಗದೇವ ರಾಜಾ ಬಾಗಸವಾರ ಜಾತ್ರೆ ನಿಮಿತ್ತ ಡಾ.ಎ.ಪಿ.ಜೆ. ಅಬ್ದುಲ ಕಲಾಂ ಯುವಕ ಮಂಡಳಿಯವರು ಆಯೋಜಿಸಿದ್ದ ರಿವಾಯಿತ ಪದಗಳ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರವಚನಕಾರ ಲಾಲ ಹುಸೇನ ಕಂದಗಲ್ಲ ಮಾತನಾಡಿ ನಾನೊಬ್ಬ ಹಿಂದೂ, ಮುಸ್ಲಿಂ, ಕ್ರಿಶ್ಚನ್ ಎನ್ನುವ ಮೊದಲು ನಾನೊಬ್ಬ ಮನುಷ್ಯನೆಂಬುವುದನ್ನು ಅರಿತುಕೊಳ್ಳಬೇಕು ಮಧ್ಯೆಪ್ರಾಚ್ಯ ಯುದ್ದದಲ್ಲಿ ಮುಳಗಿ ರಕ್ತಮಾಯವಾಗಿದೆ, ಆದರೆ ಭಾರತ ಭಾವೈಕತ್ಯೆಯಯಿಂದ ಕೂಡಿದ ರಾಷ್ಟ್ರ ಮನುಷ್ಯನನ್ನು ಪ್ರೀತಿಸುವ ರಾಷ್ಟವಾಗಿದೆ ಎಂದು ಹೇಳಿದರು.

ಶಿರಹಟ್ಟಿ ಫಕೀರೇಶ್ವರ ಭಾವೈಕತ್ಯೆಯ ಶ್ರೀಪೀಠದ ಜಗದ್ಗುರು ಫಕೀರ ದಿಂಗಾಲೇಶ್ವರ ಮಹಾಸ್ವಾಮೀಜಿ ದಿವ್ಯಸಾನಿಧ್ಯವಹಿಸಿ ಮಾತನಾಡಿ ಡಾ.ಎ.ಪಿ.ಜೆ.ಅಬ್ದುಲ ಕಲಾಂರು ಹೇಳುವಂತೆ ಶ್ರೀಮಂತರು ಇರುವ ರಾಷ್ಟ್ರ ಶ್ರೀಮಂತ ರಾಷ್ಟವಲ್ಲ ದುರ್ಬಲರನ್ನು ಎತ್ತಿಕೊಂಡ ರಾಷ್ಟ್ರ ಶ್ರೀಮಂತ, ಆದ್ದರಿಂದ ಬಿದ್ದವರನ್ನು ಮೇಲೆ ಎತ್ತುವ ಕೆಲಸವಾಗಬೇಕು, ನಮ್ಮ ದೇಹದಲ್ಲಿರುವ ರಕ್ತ ಬೇರೆ ಅಲ್ಲ, ರಕ್ತ ಹಾಕಿಸಿಕೊಳ್ಳುವಾಗ ಯಾವುದೇ ಜಾತಿ, ಯಾವುದೇ ಧರ್ಮ ನೋಡಲಿಲ್ಲ, ಭಗವಂತ ಮನುಷ್ಯನನ್ನು ಸೃಷ್ಠಿ ಮಾಡಿದ, ಮನುಷ್ಯ ಧರ್ಮವನ್ನು ಸೃಷ್ಠಿ ಮಾಡಿದ, 50ವರ್ಷಗಳ ಹಿಂದೆ ಜಾತಿ ಇರಲ್ಲಿಲ್ಲ, ಇತ್ತೀಚಿನ ದಿನದಲ್ಲಿ ಕಲಿತವರೇ ವಿಷ ಬೀಜ ಬಿತ್ತುತ್ತಿದ್ದಾರೆ ಎಂದು ಕಳವಳವ್ಯಕ್ತಪಡಿಸಿದರು.

ಬಿಜೆಪಿ ಅಲ್ಪಸಂಖ್ಯಾಂತರ ಘಟಕದ ಅಧ್ಯಕ್ಷ ಬಂದೇನವಾಜ ವಾಲಿಕಾರ ಮಾತನಾಡಿದರು. ಹಿರೇಮಠದ ಶಿವಪ್ರಕಾಶ ಶಿವಾಚಾರ್ಯರು, ಮಸಬಿನಾಳದ ಸಿದ್ದರಾಮ ಸ್ವಾಮೀಜಿ, ಕೊಕಟನೂರ ಮಡಿವಾಳ ಶ್ರೀಗಳು, ಕಣಕಾಲ ದರ್ಗಾದ ಪಟ್ಟಧಿಕಾರಿ ಸೈಯದಶಾಹ ಖುತಬೇ ರಬ್ಬಾನಿ ಖಾದ್ರಿ, ಬಾಬುಸಾಬ ಚಪ್ಪರಬಂದ, ಚಂದ್ರಶೇಖರ ಮರೋಳ, ಮಲ್ಲಯ್ಯ ಹಾಲಿಹಾಳ, ಅನೀಲ ಅಗರವಾಲ, ರೇವಣಸಿದ್ದ ನಂದಿಹಾಳ, ಬಸನಗೌಡ ಪಾಟೀಲ, ಚಂದ್ರಶೇಖರಯ್ಯ ಗಣಕುಮಾರಮಠ, ಚಿನ್ನಪ್ಪ ಗಿಡ್ಡಪ್ಪಗೋಳ ಮುಖ್ಯಗುರುಮಾತೆ ಬಿ.ಬಿ.ಹಳೆಮನಿ, ಕಸ್ತೂರಿ ಆಲಕೊಪ್ಪರ ಇದ್ದರು. ಪೊಲೀಸ್ ಇಲಾಖೆಯಲ್ಲಿರುವ ನೌಕರರನ್ನು, ಮಹಾದಾನಿಗಳನ್ನು ಸನ್ಮಾನಿಸಿದರು.



ಚಡಚಣದಲ್ಲಿ ಹೋಳಿ ಸಂಭ್ರಮ: ಕುಣಿದು ಕುಪ್ಪಳಿಸಿದ ಜನತೆ

ಚಡಚಣ: ಪಟ್ಟಣದಲ್ಲಿ ಬಣ್ಣದ ಹಬ್ಬದ ಸಂಭ್ರಮ ಮನೆ ಮಾಡಿದೆ. ಯುವಕ ಯುವತಿಯರು, ಚಿಣ್ಣರು ಬಣ್ಣದೋಕುಳಿಯಲ್ಲಿ ಮಿಂದೆದ್ದಿದ್ದರು. ಹೋಳಿಯಾಟದಲ್ಲಿ ಪರಸ್ಪರ ಬಣ್ಣ ಎರಚಿ ಸಂಭ್ರಮಿಸಿದರು ಗಲ್ಲಿ, ಗಲ್ಲಿಗಳಲ್ಲಿ ರೇನ್ ಡಾನ್ಸ್ ಹಾಗೂ ಡಿಜೆ ಸೌಂಡ್ಗೆ ಹೆಜ್ಜೆ ಹಾಕಿ ಕುಣಿದಿದ್ದಾರೆ.

ಹೋಳಿ ಹಬ್ಬದ ಅಂಗವಾಗಿ ಪಟ್ಟಣದಲ್ಲಿ ಬೆಳಗ್ಗೆಯಿಂದಲೇ ಬಣ್ಣಗಳ ಆಟ ಶುರುವಾಗಿ, ಮಕ್ಕಳು, ಯುವಕರು, ಮಹಿಳೆಯರು ಪರಸ್ಪರ ಬಣ್ಣ ಎರಚಿ ಸಂಭ್ರಮಿಸಿದರು.

ಹೋಳಿ ಹುಣ್ಣಿಮೆಯ 5ನೇ ದಿನ ರವಿವಾರದಂದು ಪಟ್ಟಣದಲ್ಲಿ ಅಲ್ಲಲ್ಲಿ ರೇನ್ ಡ್ಯಾನ್ಸ್ ಹಾಗೂ ಡಿಜೆ ಸೌಂಡ್ ಏರ್ಪಡಿಸಿದ್ದರು. ಡಿಜೆ. ಸೌಂಡ್ಗೆ ಮಹಿಳೆಯರು, ಯುವತಿಯರು, ಯುವಕರು ಹೆಜ್ಜೆ ಹಾಕಿ, ನೃತ್ಯ ಮಾಡಿ ಬಣ್ಣದ ಹಬ್ಬದ ಉತ್ಸಾಹ ಹೆಚ್ಚಿಸಿದರು. ಪಟ್ಟಣದಾದ್ಯಂತ ಹೋಳಿ ಸಂಭ್ರಮ ಜೋರಾಗಿತ್ತು. ರಂಗಿನಾಟದಲ್ಲಿ ಮಿಂದೆದ್ದ ಯುವಕ ಯುವತಿಯರು, ಪರಸ್ಪರ ಬಣ್ಣ ಎರಚಿ ಕೇಕೆ ಹಾಕಿ ಕುಣಿದು ಕುಪ್ಪಳಿಸಿದ ದೃಶ್ಯ ಪಟ್ಟಣದಾದ್ಯಂತ ಕಂಡು ಬಂದಿತು. ಬಣ್ಣದಾಟದ ದಿನ ಯಾವುದೇ ರೀತಿಯ ಅಹಿತಕರ ಘಟನೆ ಸಂಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ಸಿಪಿಐ ಪರಶುರಾಮ ಮನಗೂಳಿ ನೇತೃತ್ವದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.



ಚಡಚಣ ಮರಡಿಯಲ್ಲಿ ಮಹಿಳೆಯರು ರಂಗ ಪಂಚಮಿ ಆಚರಣೆಯನ್ನು ಮಾಡಿದರೂ.ರಮೇಶ ಮಲ್ಲಾಡಿ ಸರ್ ಮನೆಯ ಮುಂದೆ ಸುಮಂಗಲಾ ಕೋರೆ, ಪೂನಮ ಮಲ್ಲಾಡಿ, ರೇಷ್ಮಾ ರೆವೆ, ಮಹಾನಂದ ಮಠಪತಿ, ವಿಜಯಲಕ್ಷ್ಮಿ ಚೋಳಕೆ, ಶಶಿಕಲಾ ಆಜೂರ್, ಸುಮಂಗಲ ಕನ್ನೊರ, ವಿರಾಟ್ ಸಾಮ್ರಾಟ್ ಒಬ್ಬರಿ ಗೊಬ್ಬರು ಬಣ್ಣ ಹಚ್ಚಿ ಸಂಭ್ರಮಿಸಿದರು.

ಮಹಿಳೆ ಸ್ವಾವಲಂಬಿಯಾಗಲು ಕುಟುಂಬದ ಪ್ರೋತ್ಸಾಹ ಅಗತ್ಯ

ಸಿಂದಗಿ: ಹೆಣ್ಣು ಮಕ್ಕಳು ಸಾಮಾಜಿಕ ಹಾಗೂ ಆರ್ಥಿಕವಾಗಿ ಬೆಳೆದು ಸ್ವಾವಲಂಬಿಗಳಾಗಲು ಕುಟುಂಬದ ಬೆಂಬಲ ಮತ್ತು ಪ್ರೋತ್ಸಾಹ ಅತ್ಯಗತ್ಯವಾಗಿದೆ ಎಂದು ಮಹಿಳಾ ಸಾಂತ್ವನ ಸಹಾಯವಾಣಿ ಕೇಂದ್ರ ಸಮಾಲೋಚಕಿ... ಸಮಾರುಖ ಕಾರ್ಯಕರ್ತೆ ರಶ್ಮಿ ನೂಲಾನವರ ಹೇಳಿದರು.

ನಗರದ ಗೋಲಗೇರಿ ರಸ್ತೆಯಲ್ಲಿರುವ ಡಾ.ಬಾಬು ಜಗಜೀವನರಾಮ್ ಭವನದಲ್ಲಿ ಸ್ಫೂರ್ತಿ ಮಹಿಳಾ ಸ್ವ-ಸಹಾಯ ಸಂಘಗಳ ಒಕ್ಕೂಟ ಹಾಗೂ ಸಂಗಮ ಸಮಗ್ರ ಗ್ರಾಮೀಣ ಅಭಿವೃದ್ಧಿ ಕೇಂದ್ರ, ಸಿಂದಗಿ ಇವರುಗಳ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮಹಿಳೆಯರು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿ ಸಮಾಜದಲ್ಲಿ ಆತ್ಮವಿಶ್ವಾಸದಿಂದ ಮುನ್ನಡೆಯಬೇಕು. ಹೆಣ್ಣು ಮಕ್ಕಳು ಶಿಕ್ಷಣ, ಉದ್ಯೋಗ ಮತ್ತು ಸಂಘಟಿತ ಶಕ್ತಿಯ ಮೂಲಕ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಆದ ಗುರುತು ಮೂಡಿಸುತ್ತಿದ್ದಾರೆ. ಕುಟುಂಬದ ಅಭಿವೃದ್ಧಿಯಿಂದ ಹಿಡಿದು ದೇಶದ ಪ್ರಗತಿವರೆಗೂ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ಮಹಿಳೆಯರು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಇನ್ನಷ್ಟು ಸಕ್ರಿಯವಾಗಿ ಭಾಗವಹಿಸಿ ಸಮಾಜದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಹೇಳಿದರು.



ಸಂಗಮ ಸಂಸ್ಥೆಯ ಸಹ ನಿರ್ದೇಶಕಿ ಸಿ.ಸಿಂತಿಯಾ ಡಿ.ಮೆಲ್ಲೊ, ತೇಜಸ್ವಿನಿ ಹಳ್ಳದಕೇರಿ ಮಾತನಾಡಿದರು. ಶೈಲಾ ಸಂಗಮ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಲಕ್ಷ್ಮೀ ಪೊಲೀಸ್‌ಪಾಟೀಲ, ಸರಿತಾ ಹರಿಜನ, ಪಾ.ಸಂತೋಷ ಎಸ್.ಜೆ., ಪಾ.ವಿಶಾಲ್ ಡಿ.ಸೋಜಾ, ಪಾ.ಜೀವನ್ ಡಿ.ಸೋಜಾ, ಪಾ.ಕೇವಿನ್ ಸಿಕ್ವೇರಾ, ಪ್ರತಿಭಾ ಚಳ್ಳಗಿ, ನೀಲಮ್ಮ ಬಡಿಗೇರ, ಭಾಗ್ಯಶ್ರೀ ಬಿರಾದಾರ ಇದ್ದರು.

ಮಹಿಳೆಯರ ಸಬಲೀಕರಣಕ್ಕೆ ಡಾ.ಅಂಬೇಡ್ಕರ್ ಹೋರಾಟ ಮೂಲಮಂತ್ರ

ವಿಜಯಪುರ: ನಾಲ್ಕು ಗೋಡೆಗಳಿಂದ ಮಹಿಳೆಯರು ಹೊರ ಬರಬೇಕು. ಅಂದಾಗ ಮಾತ್ರ ಮಹಿಳೆಯರು ಸುಧಾರಣೆಯಾಗಲು ಸಾಧ್ಯ ಎಂದು ಪದ್ಮಶ್ರೀ ಪುರಸ್ಕೃತ ಡಾ.ಸೀತವ್ವ ಜೋಡಟ್ಟಿ ಹೇಳಿದರು.

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಹಾಗೂ ವಿವಿಧ ನಿಕಾಯಗಳ ಸಹಯೋಗದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಆಯೋಜಿಸಿದ್ದ ಮಹಿಳಾ ಸಾಂಸ್ಕೃತಿಕ ಹಬ್ಬ-2026 ಉದ್ಘಾಟಿಸಿ ಮಾತನಾಡಿದರು. ಮಹಿಳೆಯರು ಅಬಲೆಯಲ್ಲ ಸಬಲರು. ತೊಟ್ಟಿಲು ತೂಗುವ ಕೈ ದೇಶವನ್ನು ಆಳುತ್ತದೆ. ಇದಕ್ಕೆ ರಾಷ್ಟ್ರಪತಿ ಮುರ್ಮು ಅವರು ನಿದರ್ಶನ. ಮಹಿಳೆಯರ ಸಬಲೀಕರಣಕ್ಕೆ ಬಾಬಾ ಸಾಹೇಬ್ ಅಂಬೇಡ್ಕರ ಅವರ ಶಿಕ್ಷಣ, ಸಂಘಟನೆ, ಹೋರಾಟ ಈ ಸಂದೇಶಗಳೆ ಮೂಲ ಮಂತ್ರಗಳಾಗಿವೆ ಎಂದು ಅವರು ನುಡಿದರು.

ದೇವದಾಸಿ ಪದ್ಧತಿ ನಿಲ್ಲಿಸಿ ದೇವದಾಸಿಯರ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಮಾಸ್ ಸಂಸ್ಥೆ 29 ವರ್ಷಗಳನ್ನು ಪೂರೈಸಿದೆ. ದೇವದಾಸಿಯರು ಮನೆಯಲ್ಲಿ ಆಸ್ತಿ ಕೇಳಿದಾಗ ಹಲವಾರು ಎಡರು ತೊಡರುಗಳು ಬಂದವು. ಆಗ ನಾವೂ ಸಂಸ್ಥೆಯಲ್ಲಿ ಕಾನೂನು ಕೋಶ ಆರಂಭಿಸಿದೆವು. ದೇವದಾಸಿ ಮಹಿಳಿಯರಿಗೆ ಮಾಶಾಸನ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದೆವು. ಎಚ್ .ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದಾಗ ಮಾಶಾಸನ ಮಂಜೂರು ಮಾಡಿದರು. ಈ ಎಲ್ಲ ಶ್ರೆಯಸ್ಸು ಮಾಸ್ ಸಂಸ್ಥೆಗೆ ಸೇರುತ್ತದೆ ಎಂದರು.

ಬಾಗಲಕೋಟೆ ಜಿಪಂ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ ಮಾತನಾಡಿ, ಮಹಿಳೆಯರು ಇಂದು ಪ್ರತಿಯೊಂದು ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಮಹಿಳೆ ಕೇವಲ ಮನೆಯನ್ನು ನಿರ್ವಹಿಸುವುದು ಅಷ್ಟೇ ಅಲ್ಲದೆ ಉದ್ಯೋಗ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾಳೆ. ಮಹಿಳೆಯರು ಸ್ಪಷ್ಟವಾದ ಗುರಿ ಹೊಂದಬೇಕು. ಅದಕ್ಕಾಗಿ ಸತತ ಪರಿಶ್ರಮ ಅಗತ್ಯವಿದೆ ಎಂದರು.



ಸಿಂಡಿಕೇಟ್ ಸದಸ್ಯೆ ಮಮತಾ ಎಸ್.ಮಾತನಾಡಿ, ಮಹಿಳೆಯರು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಬಲಿಷ್ಟ ರಾಷ್ಟವನ್ನು ಕಟ್ಟಲು ಸಾಧ್ಯ. ಕೇವಲ ಒಬ್ಬರೇ ಬೆಳೆಯುವುದು ಅಲ್ಲಾ ನಮ್ಮ ಜೊತೆಯಲ್ಲಿ ಇರುವವರನ್ನು ಬೆಳೆಸಿದಾಗ ಮಹಿಳಾ ಸಬಲೀಕರಣ ಸಾಧ್ಯವಾಗುತ್ತದೆ. ಜೀವನದಲ್ಲಿ ತಂದೆ ತಾಯಿಗಳ ಸ್ಥಾನ ಮಹತ್ವದಾಗಿದೆ. ಅವರಿಗೆ ಗೌರವವಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ, ಕುಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಆಶಯಗಳನ್ನು ಅನುಷ್ಠಾನಗೊಳಿಸಲು ನಾವೆಲ್ಲರೂ ಇಂದು ಸಂಕಲ್ಪ ಮಾಡಬೇಕಾಗಿದೆ ಎಂದರು.

ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್.ಲಕ್ಕಣ್ಣವರ, ಮಹಿಳಾ ಸಾಂಸ್ಕೃತಿಕ ಹಬ್ಬದ ಸದಸ್ಯ ಸಂಚಾಲಕಿ ಪ್ರೊ.ಲಕ್ಷ್ಮೀದೇವಿ ವೈ., ಪ್ರೊ.ಶಾಂತಾದೇವಿ ಟಿ., ಡಾ.ತಹಮೀನಾ ಕೋಲಾರ, ಡಾ.ಕಲಾವತಿ ಕಾಂಬಳೆ ಮತ್ತು ಪ್ರೊ.ಜ್ಯೋತಿ ಉಪಾದ್ಯೆ, ರುಕ್ಮವ್ವ ಅಗಸರ, ಪ್ರೊ.ರಾಜು ಬಾಗಲಕೋಟೆ, ಡಾ.ಶಶಿಕಲಾ ರಾಠೋಡ ಇದ್ದರು.

ದಾಸೋಹ ಜೀವನವೇ ಪರಿಪೂರ್ಣ ಬದುಕು: ಗುರುಲಿಂಗ ಶ್ರೀ

ದೇವರಹಿಪ್ಪರಗಿ: ತನ್ನಪಾಡಿಗೆ ಮಾಡುವುದು ಉಪಜೀವನ. ತನ್ನಗಲ್ಲದೇ ಪರಹಿತಕ್ಕೆ ಮಾಡುವುದು ಒಳ್ಳೆಯ ಜೀವನ. ಪರಹಿತದಲ್ಲಿ ಪರಮಾತ್ಮನನ್ನು ಕಾಣುವುದು ದಾಸೋಹ ಜೀವನ ಎಂದು ದಾಸೋಹ ಸೂತ್ರದಲ್ಲಿ ಶರಣಬಸವಪ್ಪ ಅಪ್ಪ ಹೇಳಿದ್ದಾರೆ. ಅಂಥ ದಾಸೋಹ ಜೀವನವೇ ಮನುಜರೆಲ್ಲ ಪಾಲಿಗೆ ಪರಿಪೂರ್ಣ ಬದುಕು ಎಂದು ಯಲಗೋಡ ಪರಮಾನಂದ ಮಠದ ಗುರುಲಿಂಗ ಸ್ವಾಮೀಜಿ ಬಣ್ಣಿಸಿದರು.

ತಾಲೂಕಿನ ಹುಣಶ್ಯಾಳ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕಲಬುರಗಿ ಶರಣಬಸವೇಶ್ವರ ಪುರಾಣ ಮಂಗಲೋತ್ಸವ ಹಾಗೂ ಧರ್ಮ ಸಭೆಯ ಸಾನಿಧ್ಯವನ್ನು ವಹಿಸಿ ಮಾತನಾಡಿದ ಅವರು, ಶರಣಬಸವೇಶ್ವರರು ಕೇವಲ ಧಾರ್ಮಿಕ ಸಂತನಾಗಿರದೆ ಕಾಯಕ ಮತ್ತು ಜ್ಞಾನದ ಮೂಲಕ ಸಮಾಜದಲ್ಲಿ ಬದಲಾವಣೆ ತಂದ ಮಹಾನ್ ದಾರ್ಶನಿಕರಾಗಿದ್ದರು ಎಂದು ಹೇಳಿದರು.

ಸಾನಿಧ್ಯವನ್ನು ಮಳಖೇಡದ ಹಜರತ್ ಸೈಯದ್ ಷಾ ಮುಸ್ತಫಾ ಖಾದ್ರಿ ಅವರು ಮಾತನಾಡಿ, ಭಾರತ ಬಹುತ್ವದ ದೇಶ. ಎಲ್ಲಾ ಧರ್ಮ, ಜಾತಿ, ಭಾಷೆ, ಪ್ರಾಂತ್ಯದವರು ಒಟ್ಟಾಗಿ ಬಾಳಬೇಕು. ಮನುಷ್ಯತ್ವ ಬಹಳ ದೊಡ್ಡದು. ಬಿದ್ದವನನ್ನು ಎಬ್ಬಿಸುವುದೇ ಧರ್ಮದ ಸಾರವಾಗಿದೆ. ಎಲ್ಲರೂ ಪರಸ್ಪರ ಪ್ರೀತಿಸಬೇಕು. ಇನ್ನೊಂದು ಧರ್ಮವನ್ನು ಪ್ರೀತಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ದಿವ್ಯ ಸಾನ್ನಿಧ್ಯ ಬೋರಗಿ-ಪುರದಾಳ ವಿಶ್ವಾರಾಧ್ಯ ಮಠಾಧಿಪತಿ ತಪೋರತ್ನ ಮಹಾಲಿಂಗೇಶ್ವರ ಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು.

ವಿಜಯಪುರದ ಅನುಗ್ರಹ ಕಣ್ಣಿನ ಆಸ್ಪತ್ರೆಯ ಮುಖ್ಯಸ್ಥರು ಹಾಗೂ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ.ಪ್ರಭುಗೌಡ ಲಿಂಗದಳ್ಳಿ (ಚಬನೂರ), ಜಿಪಂ ಮಾಜಿ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ ಬಸನಗೌಡ ಪಾಟೀಲ (ಯಡಿಯಾಪೂರ) ಮಾತನಾಡಿದರು. ಯುವ ಮುಖಂಡರಾದ ಶಂಕರಗೌಡ ಕೋಟಿಖಾನಿ ಮಾತನಾಡಿದರು. ಶಂಕ್ರಯ್ಯ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು. ಶಾಸಕರ ಸಹೋದರ ಸಚೀನಗೌಡ ಪಾಟೀಲ(ಕುದರಿಸಾಲವಾಡಗಿ), ಅಂಜುಮನ್ ಸಂಸ್ಥೆಯ ಅಧ್ಯಕ್ಷ ಎ.ಎ.ಮೋಮಿನ, ಪ್ರವಚನಕಾರ ಮಹಾಂತಯ್ಯ ಸ್ವಾಮೀಜಿ, ಬಿಜೆಪಿ ಮುಖಂಡರಾದ ಸಿದ್ದು ಬುಳ್ಳಾ,ತಾಳಿಕೋಟಿ ಪುರಸಭೆ ಸದಸ್ಯರಾದ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ(ಎಂಎಲ್‌ಎ), ಕೋರವಾರ ಪಿಕೆಪಿಎಸ್ ಅಧ್ಯಕ್ಷ ಸಂಗಮೇಶ ಛಾಯಗೋಳ, ಮುಖಂಡರಾದ ವೀರೇಶ ನಾಡಗೌಡ, ಸುಭಾಷಗೌಡ ದೇವರಗುಡಿ, ಶಂಕ್ರಪ್ಪ ಬಂಗಾರಗುಂಡ, ಗೋಲ್ಲಾಳಪ್ಪ ಪಟ್ಟಣಶೆಟ್ಟಿ, ಗುತ್ತಪ್ಪಗೌಡ ಕೋಟಿಖಾನಿ, ಹುಸೇನ ನಾಗಾವಿ, ಮಹಾಂತಯ್ಯ ಹಿರೇಮಠ, ಶಾಂತಪ್ಪ ಕೋಟಿಖಾನಿ,ಪ್ರಭುಗೌಡ ದೇವರಗುಡಿ, ಸೋಮನಗೌಡ ಕೋಟಿಖಾನಿ, ನಿಂಗಣ್ಣ ಪಾಕಿ, ಸಲಬಣ್ಣ ಬಡಿಗೇರ, ಅವಣ್ಣ ಯಂಕಂಚಿ, ನಾನಾಗೌಡ ಕರ್ನಾಳ, ಶರಣಗೌಡ ಕೋಟಿಖಾನಿ, ಶರಣಪ್ಪ ಹಿಪ್ಪರಗಿ (ಪಡಶೆಟ್ಟಿ), ಅಪ್ಪಸಾಹೇಬ ದೇವರಗುಡಿ, ಹುಸೇನ ನಾಗಾವಿ, ಶಿಕ್ಷಕ ಸುರೇಶ ಭೋವಿ ಸೇರಿದಂತೆ ಗ್ರಾಮದ ಪ್ರಮುಖರು ಗಣ್ಯರು, ಮಹಿಳೆಯರು ಹಾಗೂ ಯುವಕರು ಭಾಗವಹಿಸಿದ್ದರು.



ಕಿರುಸುದ್ದಿ

ಕಮರ್ಷಿಯಲ್ ಸಿಲಿಂಡರ್ ಕೊರತೆ: ಸಂಕಷ್ಟದಲ್ಲಿ ಹೋಟೆಲ್ ಉದ್ಯಮ

ಕಲಬುರಗಿ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಎಲ್‌ಪಿಜಿ ಸಿಲಿಂಡರ್



ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುವ ಹಿನ್ನೆಲೆ ಕಲಬುರಗಿಯಲ್ಲಿ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್‌ಗಳ ಕೊರತೆ ಎದುರಾಗಿದೆ. ಇದರ ಪರಿಣಾಮವಾಗಿ ಹೋಟೆಲ್ ಉದ್ಯಮಿಗಳು ಸಂಕಷ್ಟಕ್ಕೆ ಸಿಲುಕಿದ್ದು, ಕೆಲವು ಹೋಟೆಲ್‌ಗಳನ್ನು ತಾತ್ಕಾಲಿಕವಾಗಿ ಬಂದ್ ಮಾಡುವ ಕುರಿತು ಚರ್ಚೆ ನಡೆಸುತ್ತಿದ್ದಾರೆ.

ನಗರದಲ್ಲಿ ನಿನ್ನೆಯಿಂದಲೇ ಎಚ್‌ಪಿ ಗ್ಯಾಸ್ ಕಂಪನಿಯ ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಸ್ಥಗಿತಗೊಂಡಿರುವುದು ತಿಳಿದುಬಂದಿದೆ. ಎಚ್‌ಪಿ ಗ್ಯಾಸ್ ಗೋಡೌನ್‌ನಲ್ಲಿ ಕಮರ್ಷಿಯಲ್ ಸಿಲಿಂಡರ್‌ಗಳು ಖಾಲಿಯಾಗಿ ಬಿದ್ದಿರುವ ದೃಶ್ಯ ಕಂಡುಬಂದಿದೆ ಎಂದು ಮೂಲಗಳು ತಿಳಿಸಿವೆ.ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಮಾಡಬಾರದು ಎಂಬ ಸೂಚನೆ ಬಂದಿದೆ ಎಂದು ಕೆಲವು ಎಚ್‌ಪಿ ಗ್ಯಾಸ್ ಏಜೆನ್ಸಿ ಮೂಲಗಳು ಹೇಳಿವೆ.

ಇದರ ಪರಿಣಾಮವಾಗಿ ಹೋಟೆಲ್ ಹಾಗೂ ಇತರೆ ವಾಣಿಜ್ಯ ಬಳಕೆಯ ಗ್ಯಾಸ್ ಪೂರೈಕೆ ಸಂಪೂರ್ಣವಾಗಿ ನಿಂತಿರುವಂತಾಗಿದೆ.ಇದರ ನಡುವೆ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಮಾತ್ರ ಮುಂದುವರಿದಿದ್ದು, ಬುಕ್ಕಿಂಗ್ ಮಾಡಿದ ಬಳಿಕ ಸುಮಾರು ಎಂಟು ದಿನಗಳೊಳಗೆ ಗ್ರಾಹಕರಿಗೆ ಸಿಲಿಂಡರ್ ಪೂರೈಕೆ ಮಾಡಲಾಗುತ್ತಿದೆ ಎಂದು ತಿಳಿದುಬಂದಿದೆ.ಕಮರ್ಷಿಯಲ್ ಸಿಲಿಂಡರ್ ಕೊರತೆಯಿಂದ ಹೋಟೆಲ್ ಉದ್ಯಮದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದ್ದು, ಸಂಬಂಧಿತ ಅಧಿಕಾರಿಗಳು ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಉದ್ಯಮಿಗಳು ಆಗ್ರಹಿಸಿದ್ದಾರೆ.

ನಾಳೆಯಿಂದ ಕೊಪ್ಪಳ ಶ್ರೀಗಳ ಆಧ್ಯಾತ್ಮಿಕ ಪ್ರವಚನ

ಕಲಬುರಗಿ: ಜಿಲ್ಲೆಯ ಆಳಂದ ತಾಲೂಕಿನ ಬಾಳಿ ಗ್ರಾಮದಲ್ಲಿ ಮಾ. 12ರಿಂದ ಮಾ. 17ರವರೆಗೆ ಕೊಪ್ಪಳದ ಅಭಿನವ ಗವಿಸಿದ್ಧೇಶ್ವರ ಶ್ರೀಗಳ ಅಮೃತ ಹಸ್ತದಿಂದ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವ ಸಮಿತಿ ಸಂಚಾಲಕ ಶಂಕರ ಉಜಳಂಬೆ ತಿಳಿಸಿದರು.



ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು,ಬಾಳಿಯ ಶ್ರೀ ಮಲ್ಲಿಕಾರ್ಜುನ ರಥೋತ್ಸವ ಮೈದಾನದಲ್ಲಿ ಪ್ರತಿದಿನ ಸಂಜೆ 6.30 ರಿಂದ 7.30 ರವರೆಗೆ ಪ್ರವಚನ ನಡೆಯಲಿದ್ದು, ಸುತ್ತಮುತ್ತಲಿನ ಜಿಲ್ಲೆಗಳಿಂದ ಸಾವಿರಾರು ಭಕ್ತಾದಿಗಳು ಆಗಮಿಸುವ ನಿರೀಕ್ಷೆಯಿದೆ.ಈ ಕುರಿತು ಶ್ರೀ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವ ಸಮಿತಿಯು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಳ್ಳುವಂತೆ ವಿನಂತಿಸಿದರು.

ಕಾರ್ಯಕ್ರಮಗಳ ವಿವರ: ಮಾ.18ರಂದು ಬೆಳಿಗ್ಗೆ 9ಗಂಟೆಗೆ ಲಿಂಗದೀಕ್ಷೆ, ಅಯ್ಯಾಚಾರ, ರುದ್ರಾಕ್ಷಿ ಧಾರಣೆ ಹಾಗೂ ಉಡಿ ತುಂಬುವ ಕಾರ್ಯಕ್ರಮ. ರಾತ್ರಿ ಶ್ರೀ ಮಲ್ಲಿಕಾರ್ಜುನ ಕರ್ತೃ ಗದ್ದುಗೆಗೆ ರುದ್ರಾಭಿಷೇಕ ಜರುಗಲಿದೆ. ಮಾ.19ರಂದು ಬೆಳಿಗ್ಗೆ 8ಗಂಟೆಗೆ ಶ್ರೀ ಮಲ್ಲಿಕಾರ್ಜುನ ದೇವರ ಪಲ್ಲಕ್ಕಿ ಮಹೋತ್ಸವ ಮತ್ತು ನಂದಿಕೋಲು ಮೆರವಣಿಗೆ. ಸಂಜೆ 6.30ಕ್ಕೆ ಭವ್ಯ ರಥೋತ್ಸವ ಹಾಗೂ ರಾತ್ರಿ 8ಗಂಟೆಗೆ ಧಾರ್ಮಿಕ ಸಭೆ ನಡೆಯಲಿದೆ. ಮಾ.20ರಂದು ಬೆಳಿಗ್ಗೆ 11ಗಂಟೆಯಿಂದ ಭಜನಾ ಕಾರ್ಯಕ್ರಮ ಹಾಗೂ ಸಂಜೆ 4ಗಂಟೆಯಿಂದ ಜಂಗಿ ಪೈಲ್ವಾನ್ ಕುಸ್ತಿ ಪಂದ್ಯಾವಳಿಗಳು ಆಯೋಜನೆಗೊಂಡಿವೆ.ಈ ಧಾರ್ಮಿಕ ಸಮ್ಮೇಳನದ ನೇತೃತ್ವವನ್ನು ದಾಸೋಹ ಮೂರ್ತಿ ಶ್ರೀ ಪಟ್ಟದಲಿ ಬ್ರಹ್ಮ ಸಿದ್ಧರಾಮ ಶಿವಾಚಾರ್ಯರು (ಚಿನ್ಮಯಗಿರಿ ಪೂಜ್ಯರು) ವಹಿಸಲಿದ್ದಾರೆ. ನಾಡಿನ ಹರಗುರು ಚರಮೂರ್ತಿಗಳು ಆಶೀರ್ವಚನ ನೀಡಲಿದ್ದಾರೆ ಎಂದರು.

ಭಕ್ತಾದಿಗಳ ಅನುಕೂಲಕ್ಕಾಗಿ ಕಲಬುರಗಿ ನಗರದ ಶಹಾಬಜಾರ್ ನಾಕಾದಿಂದ ಮಧ್ಯಾಹ್ನ 4.30ಕ್ಕೆ ಸಾರಿಗೆ ವ್ಯವಸ್ಥೆ, ಆರೋಗ್ಯ ಸೇವೆ ಹಾಗೂ ಪ್ರಸಾದದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ ಎಂದು ತಿಳಿಸಿದರು.

ರಾಜ್ಯಮಟ್ಟದ ವಿಕಸಿತ ಭಾರತ ಯುವ ಸಂಸತ್ತಿಗೆ ಆಯ್ಕೆ

ಕುಕನೂರು: ತಾಲೂಕಿನ ವಿರಾಪುರು ಗ್ರಾಮದ ನಿವಾಸಿ ಹಾಗೂ ಕೊಪ್ಪಳ ನಗರದ ಗವಿಸಿದ್ಧೇಶ್ವರ ಪದವಿ ಮಹಾವಿದ್ಯಾಲಯದ ನಡೆದ ಜಿಲ್ಲಾ ಮಟ್ಟದ ವಿಕಸಿತ ಭಾರತ ಯುವ ಸಂಸತ್ತು ಸ್ಪರ್ಧೆಯಲ್ಲಿ ವೀರಪೂರ ಗ್ರಾಮದ ವಿದ್ಯಾರ್ಥಿ ಶಶಿಕುಮಾರ ಗವಿಸಿದ್ದಪ್ಪ ಉಳ್ಳಾಗಡ್ಡಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಜಿಲ್ಲೆಯ ವಿವಿಧ ಕಾಲೇಜುಗಳಿಂದ ಭಾಗವಹಿಸಿದ್ದ 50ಕ್ಕೂ ಹೆಚ್ಚು ವಿದ್ಯಾರ್ಥಿಗಳಲ್ಲಿ ರಾಜ್ಯಮಟ್ಟಕ್ಕೆ 5 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.





ಕುರುಗೋಡು: ಪಟ್ಟಣದ ಕೃಷಿ ಇಲಾಖೆ ಕಛೇರಿ ಮುಂಭಾಗ ರೋಟಾ ವೇಟರ್ ಕೃಷಿ ಯಂತ್ರವನ್ನು ಎಚ್. ವೀರಾಪುರ ಗ್ರಾಮದ ರೈತ ಸತ್ಯ ನಾರಾಯಣ ಅವರಿಗೆ ವಿತರಿಸಲಾಯಿತು. ಒಟ್ಟು ಕೃಷಿ ಯಂತ್ರದ ಮೌಲ್ಯ 1ಲಕ್ಷ 33 ಸಾವಿರದ 766 ರೂಪಾಯಿ ಆಗಿದ್ದು ಸರ್ಕಾರದ ಸಬ್ಸಿಡಿ 58,359 ರೂಪಾಯಿ ನೀಡಲಿದ್ದು, ಉಳಿದಂತೆ ರೈತರು 74,766 ರೂ ವಂತಿಕೆ ಕಟ್ಟಬೇಕು ಎಂದು ಕೃಷಿ ಯಂತ್ರ ತಾಂತ್ರಿಕ ಸಹಾಯಕರಾದ ಮೆಹಬೂಬಾ ಖಾನ್ ಎಂಜಿನೀಯರಿಂಗ್ ವರ್ಕ್ ಮಾನ್ವಿ ಅವರು ಇದೇ ವೇಳೆ ಮಾಹಿತಿ ನೀಡಿದರು. ಹಿರಿಯ ಕೃಷಿ ಅಧಿಕಾರಿ ಎಂ.ದೇವರಾಜ್,ರೈತರು ಹಾಗೂ ಇತರರಿದ್ದರು.

ಜಾತ್ರಾ ಮಹೋತ್ಸವ: ಅದ್ದೂರಿ ಗರುಡ ಉತ್ಸವ

ಕನಕಗಿರಿ: ಐತಿಹಾಸಿಕ ಪ್ರಸಿದ್ಧ ಶ್ರೀಕನಕಾಚಲ ಲಕ್ಷ್ಮೀನರಸಿಂಹ ಜಾತ್ರಾ ಮಹೋತ್ಸವ ನಿಮಿತ್ತ ಗರುಡ ಉತ್ಸವವು ಮಂಗಳವಾರ ಬೆಳಗಿನ ಜಾವ ವಿಜೃಂಭಣೆಯಿಂದ ನಡೆಯಿತು.

ರಾತ್ರಿ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನಡೆಯುವ ಸ್ವಾಮಿಯ ಕಲ್ಯಾಣೋತ್ಸವದಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಸಚಿವ ಶಿವರಾಜ ತಂಗಡಗಿ ಹಾಗೂ ಧರ್ಮಪತ್ನಿ ಪೂಜೆಯಲ್ಲಿ ಭಾಗವಹಿಸಿದ್ದರು.

ರಾಜ್ಯದ ವಿವಿಧ ಜಿಲ್ಲೆಯಗಳಿಂದ ಸಾವಿರಾರು ಭಕ್ತರು ಆಗಮಿಸಿ, ದಿವಟಗಿ(ದೀಪ)ವನ್ನು ಹಿಡಿದುಕೊಂಡು ಕರ್ಪೂರ, ಒಣ ಕೊಬ್ಬರಿ ಹಾಗೂ ಅಕ್ಕಿಯನ್ನು ಹಾಕಿ ದೀಪವನ್ನು ಹಚ್ಚಿಕೊಂಡು ರಾಜಬೀದಿಯಲ್ಲಿ ಗೋವಿಂದನ ನಾಮ ಸ್ಮರಣೆ ಮಾಡುತ್ತಾ, ಭಕ್ತಿಪೂರ್ವಕವಾಗಿ ಉತ್ಸವವಾಗಿ ಆಚರಿಸಿದರು.ಪರಸಪ್ಪ ಹಾಗೂ ಇಮ್ಮಡಿ ಉಡಚನಾಯಕರ ಆಳ್ವಿಕೆಯಿಂದಲೂ ಜಾತ್ರಾ ಆಚರಣೆ ಸಂದರ್ಭದಲ್ಲಿ ಗೊಲ್ಲ ಸಮುದಾಯದವರು ನೇಮ ನಿತ್ಯದಿಂದ ಸ್ವಾಮಿಯ ನಿರಂತರ ಸೇವೆ ಮಾಡುತ್ತಾ ಬಂದವರು. ಹಾಗಾಗೀ ಇವರ ಭಕ್ತಿಯ ಸೇವೆ ಮೆಚ್ಚಿ ಪ್ರತಿ ಉತ್ಸವದ ಬಲಬದಿಯ ನಗವನ್ನೆ ಹೊರುತ್ತಾರೆ. ರಥೋತ್ಸವಕ್ಕೆ ನಾಲ್ಕೈದು ದಿನಗಳ ಮುಂಚಿತವಾಗಿಯೇ ವ್ರತದ ಮೂಲಕ ಉಪವಾಸ ಆಚರಣೆ ಮಾಡುತ್ತಿದ್ದಾರೆ. ಕೆಂಪು ಶಾಲು, ಬಿಳಿ ದೋತರ ಹಾಗೂ ಹಳದಿ ಬಣ್ಣವುಳ್ಳ ಉಡಪನ್ನು ಧರಿಸಿ ವ್ರತ ಆಚರಣೆ ಮಾಡುವುದು ವಿಶೇಷವೆನಿಸಿದೆ.ಗರಡೋತ್ಸವ ದೇವಸ್ಥಾನಕ್ಕೆ ತಲುಪಿದ ನಂತರ ಭಕ್ತರು ಅಲ್ಪ ಆಹಾರ ಶಿರಾ ಉಪ್ಪಿಟ್ಟು ಪಲಾವ್, ನೀರಿನ ಪಾಕೀಟು ಸಾರ್ವಜನಿಕರಿಗೆ ವಿತರಿಸಿದರು.



ಕನಕಗಿರಿ: ಐತಿಹಾಸಿಕ ಪ್ರಸಿದ್ಧ ಶ್ರೀಕನಕಾಚಲ ಲಕ್ಷ್ಮೀನರಸಿಂಹ ಜಾತ್ರಾ ಮಹೋತ್ಸವ ನಿಮಿತ್ತ ಗರುಡ ಉತ್ಸವವು ಮಂಗಳವಾರ ಬೆಳಗಿನ ಜಾವ ವಿಜೃಂಭಣೆಯಿಂದ ನಡೆಯಿತು.

ಸಮಸ್ಯೆ ಪರಿಹಾರಕ್ಕೆ ಶೀಘ್ರ ಎಚ್‌ಡಿಕೆಗೆ ಭೇಟಿ

ಕೊಪ್ಪಳ: ಮುಂದಿನ ವಾರದಲ್ಲಿ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರ ಸ್ವಾಮಿ ಅವರನ್ನು ಭೇಟಿಯಾಗಿ ಕೈಗಾರಿಕೆಗಳ ಮಾಲಿನ್ಯದಿಂದ ಭಾದಿತ ಗ್ರಾಮಗಳ ವಸ್ತುನಿಷ್ಠ ವರದಿಯನ್ನು ಸಲ್ಲಿಸಲಾಗುವುದು ಎಂದು ಜೆಡಿಎಸ್ ಕೋರ್ ಕಮಿಟಿ ಸದಸ್ಯ ಸಿ.ವಿ. ಚಂದ್ರಶೇಖರ್ ಹೇಳಿದರು.

ಕೊಪ್ಪಳದ ಸುತ್ತಮುತ್ತಲಿನ ಕಾರ್ಖಾನೆಗಳ ಮಾಲಿನ್ಯದಿಂದ ಭಾದಿತವಾಗಿರುವ ಹಿರೆಬಗನಾಳ, ಕಾಸನಕಂಡಿ, ಕುಣಿಕೇರಿ ಹಾಗೂ ಕುಣಿಕೇರಿ ತಾಂಡಾಗಳಿಗೆ ವಸ್ತುಸ್ಥಿತಿ ಅಧ್ಯಯನಕ್ಕಾಗಿ ತೆರಳಿದ ನಿಯೋಗದ ನೇತೃತ್ವ ವಹಿಸಿ ಅವರು ಮಾತನಾಡಿದರು.

ನಾನು ಕಳೆದ ವರ್ಷ ವೈಯಕ್ತಿಕ ನೆಲೆಗಟ್ಟಿನಲ್ಲಿ ಕುಮಾರಸ್ವಾಮಿಯವರಿಗೆ ಸುಧೀರ್ಘ ವರದಿ ಸಲ್ಲಿಸಿ ಕಾನೂನುಉಲ್ಲಂಘಿಸಿರುವ ಕಾರ್ಖಾನೆಗಳ ವಿರುದ್ಧ ಕ್ರಮಕ್ಕಾಗಿ ಆಗ್ರಹಿಸಿದ್ದೆ. ನನ್ನ ವರದಿಯ ಆಧಾರದ ಮೇಲೆ ಕುಮಾರಸ್ವಾಮಿಯವರು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅವರಿಗೆ ಪತ್ರ ಬರೆದ ನಂತರ ಕೇಂದ್ರದ ಅಧಿಕಾರಿಗಳ ತಂಡ ಮೂರು ದಿನಗಳ ಕಾಲ ಭೇಟಿ ನೀಡಿ ವರದಿ ಸಲ್ಲಿಸಿತು. ರಾಜ್ಯ ಸರಕಾರ ಇಲ್ಲಿಯ ತನಕ ಈ ವರದಿಯ ಅನುಷ್ಠಾನಕ್ಕೆ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಭಾದಿತ ಗ್ರಾಮಸ್ಥರ ಜೊತೆಗೆ ಸಂವಾದ ನಡೆಸಿ ವಸ್ತು ತಿಳಿದುಕೊಂಡು ಮತ್ತೊಮ್ಮೆ ವರದಿ ಸಲ್ಲಿಸಲು ನಿರ್ಧರಿಸಲಾಯಿತು. ನಮ್ಮ ಭೇಟಿಯ ಹಿಂದೆ ರಾಜಕೀಯ ಉದ್ದೇಶವಿಲ್ಲ, ವಿನೂತನ ತಂತ್ರಜ್ಞಾನ ಅಳವಡಿಸಿಕೊಂಡು ಕಾರ್ಖಾನೆಗಳು ಮಾಲಿನ್ಯವನ್ನು ನಿಯಂತ್ರಿಸಬೇಕು. ಭಾದಿತ ಗ್ರಾಮಸ್ಥರಿಗೆ ಪರಿಹಾರ ನೀಡಬೇಕು ಎಂದರು.



ವಸ್ತುನಿಷ್ಠ ಅಧ್ಯಯನಕ್ಕೆ ಭಾದಿತ ಗ್ರಾಮಸ್ಥರೊಂದಿಗೆ ಸಂವಾದ ನಡೆಸಿದ ಜೆಡಿಎಸ್ ನಾಯಕರು

> **ಹಿರೆಬಗನಾಳ ಗ್ರಾಮದ ಜನಸಂಖ್ಯೆ ಸುಮಾರು 2500. ಇದರಲ್ಲಿ ಧೂಳಿನಿಂದ ವಿವಿಧ ರೋಗಗಳಿಗೆ ತುತ್ತಾದವರ ಸಂಖ್ಯೆ 220ಕ್ಕೂ ಹೆಚ್ಚು. ಕಳೆದ 25 ವರ್ಷಗಳಲ್ಲಿ ಅಧಿಕಾರದಲ್ಲಿ ಇದ್ದವರ ಕಣ್ಣಿಗೆ ಈ ಸಮಸ್ಯೆ ಗಮನಕ್ಕೆ ಬಾರದೆ ಹೋಗಿದ್ದು ದುರಂತ. ಕೇಂದ್ರ ಸರಕಾರದಿಂದ ಸಿಗಬಹುದಾದ ಎಲ್ಲಾ ಪರಿಹಾರ ರೂಪದ ಕ್ರಮಗಳನ್ನು ಜಾರಿಗೊಳಿಸಲು ಮಾಡಬೇಕಾದ ಪ್ರಯತ್ನ ಮಾಡುತ್ತೇನೆ.**
> **■ ಸಿ.ವಿ. ಚಂದ್ರಶೇಖರ, ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ.**

ಜಿಲ್ಲಾ ವಕ್ತಾರ ಮಲ್ಲನಗೌಡ ಕೋಣನಗೌಡ್ರು ಮಾತನಾಡಿ, ಈ ಭಾಗದಲ್ಲಿ ಕೃಷಿ ಕ್ಷೇತ್ರ ಅಪಾರ ನಷ್ಟಕ್ಕೀಡಾಗಿದೆ. ಈ ಭಾಗದ ಬೆಳೆಯನ್ನು ಯಾರೂ ಖರೀದಿಸುತ್ತಿಲ್ಲ. ಈ ನಷ್ಟದ ಕುರಿತು ಅಧ್ಯಯನ ನಡೆಸಿ ಅಂಕಿ ಅಂಶ ಸಮೇತ ವರದಿ ಸಿದ್ಧಪಡಿಸಬೇಕು. ತೆರಿಗೆದಾರರ ಹಣದಿಂದ ಜೀವನ ಸಾಗಿಸುತ್ತಿರುವ ಸರಕಾರಿ ಅಧಿಕಾರಿಗಳು ಸಮಸ್ಯೆಗೆ ಕ್ರಮ ಕೈಗೊಳ್ಳದೆ ತಮ್ಮ ನಿರ್ಲಕ್ಷವನ್ನು ಮುಂದುವರೆಸಿದರೆ ಜನ ದಂಗೆ ಹೇಳುವುದು ಖಚಿತ ಎಂದು ಎಚ್ಚರಿಸಿದರು.

ಜಿಲ್ಲಾ ಉಪಾಧ್ಯಕ್ಷ ಮೂರ್ತ್ಯಪ್ಪ ಗಿಣಿಗೇರಿ ಮಾತನಾಡಿದರು. ಜಿಲ್ಲಾ ಒಬಿಸಿ ಅಧ್ಯಕ್ಷ ಕರಿಯಪ್ಪ ಹಾಲವರ್ತಿ ಮಾತನಾಡಿ, ಕೈಗಾರಿಕೆಗಳ ಆಡಳಿತ ಮಂಡಳಿಗಳಿಗೆ ಅಧಿಕಾರಿಗಳ ಭಯ ಇಲ್ಲವಾಗಿದೆ. ಅವರು ಗ್ರಾಮಸ್ಥರ ಮುಗ್ಧತೆಯನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಎಂಬತ್ತರ ದಶಕದಲ್ಲಿ ನರಗುಂದದಲ್ಲಿ ಉಂಟಾದ ರೈತರ ಬಂಡಾಯದಂತೆ ಹಿರೆಬಗನಾಳ ಗ್ರಾಮದಲ್ಲಿ ಬಂಡಾಯದ ಕಿಡಿ ಹತ್ತಿದೆ. ಇದು ಆಳುವವರ ಮತ್ತು ಅಧಿಕಾರಿಗಳಲ್ಲಿ ತಲ್ಲಣ ಮೂಡಿಸಿದೆ. ಹೀಗಾಗಿ 15 ದಿನಗಳಲ್ಲಿ ಕ್ರಮ ಕೈಗೊಳ್ಳುವ ನಾಟಕ ಮಾಡುತ್ತಿದ್ದಾರೆ. ಯಾವುದೇ ಕ್ರಮ ಕೈಗೊಳ್ಳದಿದ್ದರೆ ನಾವು ಉಗ್ರ ಹೋರಾಟಕ್ಕೆ ಸಿದ್ಧ ಎಂದು ಹೇಳಿದರು.

ತಾಲೂಕು ಅಧ್ಯಕ್ಷ ವೀರೇಶ್ ಗೌಡ, ನಗರ ಘಟಕದ ಅಧ್ಯಕ್ಷ ಸೋಮನಗೌಡ ಹೊಗರನಾಳ ಹಾಜರಿದ್ದರು.

ಅಧಿಕ ಉಷ್ಣಾಂಶ ಎಚ್ಚರಿಕೆ ವಹಿಸಿ: ಜಿಲ್ಲಾಧಿಕಾರಿ

ರಾಯಚೂರು: ಭಾರತೀಯ ಹವಾಮಾನ ಇಲಾಖೆಯ ವರದಿಯ ಪ್ರಕಾರ ಮುಂದಿನ ದಿನಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಅಧಿಕ ಉಷ್ಣಾಂಶ ದಾಖಲಾಗುವ ಸಾಧ್ಯತೆಯಿದ್ದು, ಬಿಸಿ ಗಾಳಿ (ಹೀಟ್ ವೇವ್) ಎಚ್ಚರಿಕೆ ನೀಡಲಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರಾಗಿರುವ ಜಿಲ್ಲಾಧಿಕಾರಿ ನಿತೀಶ.ಕೆ ತಿಳಿಸಿದ್ದಾರೆ.



ಹೀಟ್ ವೇವ್ ಸ್ಟ್ರೋಕ್‌ನಿಂದಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಸಾರ್ವಜನಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮನವಿ ಮಾಡುತ್ತಿದೆ.

ಸಾರ್ವಜನಿಕರು ರೇಡಿಯೋ, ಟಿವಿ, ದಿನ ಪತ್ರಿಕೆಗಳಲ್ಲಿ ಬಿಸಿಲಿನ ತಾಪಮಾನದ ಕುರಿತು ಮುನ್ಸೂಚನೆಗಳನ್ನು ಪಡೆದುಕೊಳ್ಳಬೇಕು. ಬಾಯಾರಿಕೆಯಿಲ್ಲದಿದ್ದರೂ ಸಾಧ್ಯವಾದಷ್ಟು ಹೆಚ್ಚಾಗಿ ನೀರನ್ನು ಕುಡಿಯಬೇಕು. ತೆಳುವಾದ ಸಡಿಲವಾದ ಹತ್ತಿಯ ಉಡುಪುಗಳನ್ನು ಧರಿಸಬೇಕು. ಆದಷ್ಟು ಬಿಳಿ ಬಣ್ಣದ ಬಟ್ಟೆಗಳ ಬಳಕೆ ಒಳ್ಳೆಯದು. ಬಿಸಿಲಿನಲ್ಲಿ ಹೊರಗೆ ಹೋಗುವಾಗ ರಕ್ಷಣಾತ್ಮಕ ಕನ್ನಡಕಗಳು, ಟೋಪಿ, ಬೂಟುಗಳು ಅಥವಾ ಚಪ್ಪಲಗಳನ್ನು ಬಳಸಬೇಕು. ದೂರದ ಪ್ರಯಾಣವನ್ನು ರಾತ್ರಿ ವೇಳೆ ಮಾಡುವುದು ಉತ್ತಮ, ಒಂದು ವೇಳೆ ಪ್ರಯಾಣ ಮಾಡುವ ಸಂದರ್ಭ ಬಂದರೆ ಪ್ರಯಾಣ ಮಾಡುವಾಗ ನಿಮ್ಮೊಂದಿಗೆ ನೀರನ್ನು ತೆಗೆದುಕೊಂಡು ಹೋಗುವುದು. ನೀವು ಹೊರಗೆ ಕೆಲಸ ಮಾಡುತ್ತಿದ್ದರೆ, ಟೋಪಿ ಅಥವಾ ಛತ್ರಿಯನ್ನು ಬಳಸಿ ಮತ್ತು ನಿಮ್ಮ ತಲೆ, ಕುತ್ತಿಗೆ, ಮುಖ ಮತ್ತು ಕೈಕಾಲುಗಳ ಮೇಲೆ ಒದ್ದೆಯಾದ ಬಟ್ಟೆಯನ್ನು ಸಹ ಬಳಸಬೇಕು.

ಮನೆಯಲ್ಲಿ ತಯಾರಿಸಿದ ಪಾನೀಯಗಳಾದ ಲಸ್ಸಿ, ಶರಬತ್, ನಿಂಬೆ ನೀರು, ಮಜ್ಜಿಗೆ ಇತ್ಯಾದಿಗಳನ್ನು ಬಳಸಿ ಅದು ದೇಹವನ್ನು ಪುನಃ ತಂಪಾಗಿಡಲು ಸಹಾಯ ಮಾಡುತ್ತದೆ. ಪ್ರಾಣಿ, ಪಕ್ಷಿಗಳನ್ನು ನೆರಳಿನಲ್ಲಿ ಇರಿಸಿ ಮತ್ತು ಅವುಗಳಿಗೆ ಕುಡಿಯಲು ಸಾಕಷ್ಟು ನೀರು ನೀಡಬೇಕು. ಕಲ್ಲಂಗಡಿ, ಕರಬೂಜ, ಕಿತ್ತಳೆ, ದ್ರಾಕ್ಷಿ, ಅನನಾಸ್, ಸೌತೆಕಾಯಿ, ಎಳನೀರನ್ನು ಹೆಚ್ಚಾಗಿ ಸೇವಿಸಬೇಕು. ನವಜಾತ ಶಿಶುಗಳು, ಹಿರಿಯ ನಾಗರಿಕರು ಹಾಗೂ ಚಿಕ್ಕ ಮಕ್ಕಳು, ಗರ್ಭಿಣಿಯರು, ಹೊರಾಂಗಣದಲ್ಲಿ ಕೆಲಸ ನಿರ್ವಹಿಸುವವರು, ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರು ಹಾಗೂ ಇತರ ಆರೋಗ್ಯ ಸಮಸ್ಯೆಗಳಿರುವವರು, ಅದರಲ್ಲೂ ವಿಶೇಷವಾಗಿ ಹೃದ್ರೋಗ ಹಾಗೂ ರಕ್ತದ ಒತ್ತಡದಿಂದ ಬಳಲುತ್ತಿರುವವರು ಹೆಚ್ಚು ಜಾಗರೂಕತೆ ವಹಿಸಬೇಕು.

ದೇಹವನ್ನು ನಿರ್ಜಲೀಕರಣಗೊಳಿಸುವ ಆಲ್ಕೋಹಾಲ್, ಚಹಾ, ಕಾಫಿ ಮತ್ತು ಹಾನಿಕಾರಕ ಪಾನೀಯಗಳನ್ನು ಸೇವಿಸಬೇಡಿ. ಇವು ಹೊಟ್ಟೆ ನೋವನ್ನು ಉಂಟು ಮಾಡುತ್ತದೆ. ಹಾನಿಕಾರಕವಾದ ಆಹಾರ ಮತ್ತು ಹಳಸಿದ ಆಹಾರವನ್ನು ಸೇವಿಸಬಾರದು ಅಲ್ಲದೆ ಚಪ್ಪಲಿ ಧರಿಸದೆ ಹೊರಹೋಗುವ ಅಭ್ಯಾಸವನ್ನು ತಪ್ಪಿಸಬೇಕೆಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ನಿತೀಶ.ಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರು ಸರಬರಾಜು, ಮೇಲ್ಸೇತುವೆ ಕಾಮಗಾರಿಗೆ ಮುಕ್ತಿ ಯಾವಾಗ: ನಮೋಶಿ

ಕಲಬುರಗಿ: ಕಲಬುರಗಿ ನಗರದ ಖರ್ಗೆ ಪೆಟ್ರೋಲ್ ಬಂಕ್, ರಾಮ ಮಂದಿರ ವೃತ್ತ, ಹುಮನಾಬಾದ್ ರಿಂಗ್ ರಸ್ತೆ ಹಾಗೂ ಆಳಂದ ಚೆಕ್ ಪೋಸ್ಟ್ ಈ ನಾಲ್ಕು ಕಡೆ ಮೇಲ್ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಇದ್ದಲ್ಲಿ ಯಾವಾಗ ಕಾಮಗಾರಿ ಪ್ರಾರಂಭಿಸಿ ಜನರಿಗೆ ಸಂಚಾರ ದಟ್ಟಣೆಯಿಂದ ಯಾವಾಗ ಮುಕ್ತಿ ನೀಡಲಾಗುವುದು ಎಂದು ವಿಪ ಸದಸ್ಯ ಶಶೀಲ್ ನಮೋಶಿ, ವಿಧಾನ ಪರಿಷತ್ ಅಧಿವೇಶನದಲ್ಲಿ ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ ಅವರಿಗೆ ಪ್ರಶ್ನಿಸಿದರು.



ಚುಕ್ಕೆ ಗುರುತಿನ ಈ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 2020-21 ಸಾಲಿನ ಪ್ರಾದೇಶಿಕ ನಿಧಿ ಅಡಿಯಲ್ಲಿ ಹಾಗೂ 2021-22ನೇ ಸಾಲಿನ ಕಲಬುರಗಿ ಜಿಲ್ಲೆಯ ಮ್ಯಾಕ್ರೋ ಯೋಜನೆಯಡಿ ಕಲಬುರಗಿ ನಗರದ ಸೇಡಂ ರಿಂಗ್ ರಸ್ತೆಯಲ್ಲಿ ಫ್ಲೈ ಓವರ್ ಕಾಮಗಾರಿಗೆ ಅನುಮೋದನೆ ನೀಡಿ ಆದೇಶಿಸಲಾಗಿದೆ.ಆದರೆ,ಸದರಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವುದರಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ ಎಂದರು.

ಇನ್ನುಳಿದಂತೆ, ರಾಮ ಮಂದಿರ ವೃತ್ತ, ಹುಮನಾಬಾದ ರಿಂಗ್ ರಸ್ತೆ ಹಾಗೂ ಆಳಂದ ಚೆಕ್ ಪೋಸ್ಟ್ ಕಡೆ ಮೇಲ್ಸೇತುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ ಎಂದು ಉತ್ತರಿಸಿದರು. ನಂತರ ವಿಧಾನ ಪರಿಷತ್ ಸದಸ್ಯ ಸುನಿಲ್ ವಲ್ಯಾಪೂರೆಯವರ ಚುಕ್ಕೆ ಗುರುತಿನ ಪ್ರಶ್ನೆಯನ್ನು ಅವರ ಅನುಪಸ್ಥಿತಿಯಲ್ಲಿ ವಿಧಾನ ಪರಿಷತ್ ಸದಸ್ಯ ನಮೋಶಿ ಸಚಿವರಿಗೆ ಪ್ರಶ್ನಿಸಿ,

ಕಲಬುರಗಿ ಮಹಾನಗರ ಪಾಲಿಕೆಯಲ್ಲಿ ನಿರಂತರ ನೀರಿನ ಸರಬರಾಜು ಕಾಮಗಾರಿ ನಡೆಯುತ್ತಿದ್ದು ಎಲ್ ಅಂಡ್ ಟಿ ಕಂಪನಿ ಗುತ್ತಿಗೆ ಪಡೆದಿದ್ದು ಸದರಿ ಕಾಮಗಾರಿಯ ಬಹಳ ವರ್ಷಗಳಿಂದ ಪೂರ್ಣವಾಗದೆ ಉಳಿದಿರುಲು ಕಾರಣವೇನು ಮತ್ತು ಈ ಕಾಮಗಾರಿಗೆ ಸರ್ಕಾರದಿಂದ ಇಲ್ಲಿಯವರೆಗೆ ಬಿಡುಗಡೆಯಾದ ಅನುದಾನ ಎಷ್ಟು ಬಳಕೆಯಾದ ಅನುದಾನ ಎಷ್ಟು ಈ ಕಾಮಗಾರಿಯು ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು.

ಇದಕ್ಕೆ ಉತ್ತರಿಸಿದ ಸಚಿವರು, ಈ ಕಾಮಗಾರಿಯ ಕೆಲವು ಕಾರಣಗಳಿಂದ ವಿಳಂಬವಾಗಿದೆ.ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿದ್ದು, ಭೌತಿಕವಾಗಿ ಶೇ.55% ರಷ್ಟು ಹಾಗೂ ಆರ್ಥಿಕವಾಗಿ ಶೇ.40 ರಷ್ಟು ವೆಚ್ಚ ಮಾಡಲಾಗಿದೆ.ಈ ಯೋಜನೆಯ ನಿರ್ಮಾಣ ಕಾಮಗಾರಿಗೆ ಸರ್ಕಾರದಿಂದ ರೂ.604.95 ಕೋಟಿಗೆ ಮಂಜೂರಾಗಿದ್ದು, ಇದೂವರೆಗೆ ರೂ.241.90 ಕೋಟಿ ವೆಚ್ಚವಾಗಿರುತ್ತದೆ ಎಂದರು.

ಕರಾರಿನ ನಿಯಮಾನುಸಾರ ನಿರ್ದಿಷ್ಟ ಪ್ರಗತಿ ಸಾಧಿಸದ ಕಾರಣ.ಗುತ್ತಿಗೆದಾರರ ವಿಳಂಬಕ್ಕೆ ಕರಾರಿನ ನಿಯಮಾನುಸಾರ ರೂ.60.5 ಕೋಟಿ ದಂಡವನ್ನು ವಿಧಿಸಿದೆ ಎಂದು ಸಂಪೂರ್ಣ ಮಾಹಿತಿಯನ್ನು ಲಿಖಿತ ರೂಪದಲ್ಲಿ ಒದಗಿಸಿದರು.

ವಿಶಿಷ್ಟ ಚೇತನರ ವಾಹನ ವಿತರಣೆಗೆ ಪೂಜಾರ ಆಗ್ರಹ

ಕುಷ್ಟಗಿ: ತಾಲೂಕಿನ ತಾಪಂ ಆವರಣದಲ್ಲಿ ಇರುವ ಎಂಆರ್‌ಡಬ್ಲ್ಯೂ, ವಿ ಆರ್ ಡಬ್ಲ್ಯೂ ಸಮಲೋಚನಾ ಕೇಂದ್ರದ ಬಳಿ ಧೂಳು ತಿಂದು ಹಾಳಾಗುವ ಮುನ್ನ ಯಂತ್ರ ಚಾಲಿತ ದ್ವಿ ಚಕ್ರ ವಾಹನಗಳನ್ನು ವಿತರಣೆ ಮಾಡಿ ಎಂದು ಕರ್ನಾಟಕ ರಾಜ್ಯ ಅಂಗವಿಕಲ ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಮಲ್ಲಿಕಾರ್ಜುನ ಪೂಜಾರ ಆಗ್ರಹಿಸಿದರು.

ಅವರು ಸೋಮವಾರ ಪತ್ರಿಕಾ ಭವನದಲ್ಲಿ ಪತ್ರಿಕೆ ಪ್ರಕಟಣೆ ನೀಡಿ ಮಾತನಾಡಿದರು.



ಜಿಲ್ಲೆಯ ಎಲ್ಲಾ ತಾಪಂನವರು 2024-25ನೇ ಸಾಲಿನ ರಾಜ್ಯ ಹಣಕಾಸು ಆಯೋಗದ ಅನುದಾನದಡಿಯಲ್ಲಿ ತಾಲೂಕು ಪಂಚಾಯತ್ ಅನಿರ್ಬಂಧಿತ ಅನುದಾನದಲ್ಲಿ ವಿಕಲಚೇತನರಿಗೆ ಮೀಸಲಿರಿಸಿದ ಶೇ5% ರ ಅನುದಾನದಲ್ಲಿ ದೈಹಿಕ ವಿಕಲಚೇತನರಿಗೆ ಯಂತ್ರ ಚಾಲಿತ ದ್ವಿ ಚಕ್ರ ವಾಹನ ನೀಡಲು ಅರ್ಜಿ ಆಹ್ವಾನ ಮಾಡಿ ಒಂದು ವರ್ಷ ಕಳೆದಿದೆ, ಫಲಾನುಭವಿ ಆಯ್ಕೆ ಮಾಡಿ 8-9 ತಿಂಗಳು ಕಳೆದಿದೆ, ಅಲ್ಲದೇ ಶೋ ರೂಮ್ ನಿಂದ ವಾಹನ ಬಂದು ತಿಂಗಳು ಕಳೆದಿದೆ. ವಾಹನಗಳಿಗೆ ಧೂಳು ಹತ್ತಿ ಹಾಳಾಗುತ್ತಾ ಸಾಗಿವೆ ಅಲ್ಲದೇ ವಾಹನ ಫಿಟ್ಟಿಂಗ್ ಕೂಡ ಗುಣಮಟ್ಟದಲ್ಲಿ ಮಾಡಿರುವುದಿಲ್ಲ, ವಾಹನಗಳು ಬಿರುಬಿಸಿಲಿಗೆ ಬಣ್ಣ ಸುಟ್ಟು ಹೋಗುವ ಮುನ್ನ ಶೀಘ್ರವೇ ವಾಹನ ವಿತರಣೆಗೆ ಕ್ರಮವಹಿಸಬೇಕು ಇಲ್ಲವಾದಲ್ಲಿ ತಾಲೂಕು ಪಂಚಾಯತ್ ಮುಂದೆ ಜಿಲ್ಲೆಯ ವಿಕಲಚೇತನರ ಒಕ್ಕೂಟ ಗಳಿಂದ ಉಗ್ರ ಹೋರಾಟ ಮಾಡುತ್ತೇವೆ ಎಂದರು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳೆ ಜಗತ್ತಿಗೆ ಮಾದರಿ: ಅಂಗಡಿ

ಕುಕನೂರು: ಇಂದು ಮಹಿಳೆ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಮೂಲಕ ಜಗತ್ತಿಗೆ ಮಾದರಿಯಾಗಿದ್ದಾಳೆ. ಅವಳ ಈ ಸಾಧನೆಗೆ ಮನೆಯ ಪುರುಷರ ಸಹಕಾರವೇ ಕಾರಣ ಎಂದು ಎಚ್.ಓ. ಸುಮಾ ಅಂಗಡಿ ಹೇಳಿದರು.

ತಾಲೂಕಿನ ಮಂಗಳೂರು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರದ ವಸತಿ ಗೃಹ ಆವರಣದಲ್ಲಿ ಹಮ್ಮಿಕೊಂಡ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು

ಆಶಾ ಕಾರ್ಯಕರ್ತೆ ನೀಲಮ್ಮ ಮಾತನಾಡಿ, ವೃತ್ತಿ ಮಾಡುವ ಮಹಿಳೆ ತನ್ನ ನಿವೃತ್ತಿ ನಂತರವು ಕುಟುಂಬಕ್ಕಾಗಿ ದುಡಿಯುತ್ತಾಳೆ. ಆ ಮೂಲಕ ನಿವೃತ್ತಿ ನಂತರವೂ ಕುಟುಂಬದ ಜವಾಬ್ದಾರಿ ನಿಭಾಯಿಸುತ್ತಾಳೆ ಎಂದು ತಿಳಿಸಿದರು.

ಪುರುಷರು ಕುಟುಂಬಕ್ಕಾಗಿ ದುಡಿದು ತರತಾರೆ ಆದರೆ ಮಹಿಳೆ ಕುಟುಂಬಕ್ಕಾಗಿ ದುಡಿಯುವ ಜೊತೆ ಹಲವು ಜವಾಬ್ದಾರಿಗಳನ್ನು ಹೊತ್ತು ಹೆಣ್ಣಮಕ್ಕಳೆ ಸ್ಟ್ರಾಂಗು ಅಂತ ತೋರಿಸಿದ್ದಾಳೆ ಎಂದು ಶುಶ್ರೂಷಕ ಅಧಿಕಾರಿ ಮಂಜುಳಾ ಅನಿಸಿಕೆ ವ್ಯಕ್ತಪಡಿಸಿದರು.

ಹೆಚ್ಚಾಗಿ ಮಹಿಳಾ ದಿನಾಚರಣೆಯನ್ನ ನಾವ ನಾವೇ ಮಾಡಿಕೊಳ್ಳುತ್ತೇವೆ. ಆದರೆ, ಇವತ್ತಿನ ಈ ಕಾರ್ಯಕ್ರಮವನ್ನು ಎಲ್ಲಾ ಪುರುಷರು ಸೇರಿ ಆಯೋಜಿಸಿರುವುದು ತುಂಬಾ ಸಂತೋಷದ ವಿಷಯ ಎಂದು ತಿಳಿಸಿದ ಕಮಲಾ ರವರು ಎಲ್ಲರಿಗೂ ವಂದಿಸಿದರು. ಜಗತ್ತಿಗೆ ಅನೇಕ ಕೊಡುಗೆ ನೀಡಿದ ಮಹನೀಯ ಮಹಿಳೆಯರನ್ನು ಸಬೀನಾಬೇಗಂ ಮತ್ತು ರತ್ನಮ್ಮ ಸ್ಮರಿಸಿದರು.



ಅಂಬಿಕಾ ಮೆಣಸಗಿ ಮಾತನಾಡಿದರು. ಇದೇ ವೇಳೆ ಸೇವಾ ನಿವೃತ್ತಿ ಹೊಂದಿದ ಕುದರಿಮೋತಿ ಆಶಾ ಕಾರ್ಯಕರ್ತೆ ಮಂಗಳಾ ರವರನ್ನು ಸನ್ಮಾನಿಸಲಾಯಿತು. ವೇದಿಕೆಯ ಮೇಲೆ ಡಾ ಸಿ.ಎಂ.ಹಿರೇಮಠ, ಲಲಿತಾ, ಕಮಲಾ, ಜ್ಯೋತಿ, ವೀರಮ್ಮ, ಪುಷ್ಪಾಂಜಲಿ ಉಪಸ್ಥಿತರಿದ್ದು ಆರೋಗ್ಯ ಕೇಂದ್ರದ ಅಧಿಕಾರಿಗಳು ಸಿಬ್ಬಂದಿಗಳು ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

ಗೌರವಯುತ ಬದುಕಿಗೆ ಸಂವಿಧಾನ ಸಹಕಾರಿ: ರಾಯಪ್ಪ ಹುಣಸಗಿ

ಕಲಬುರಗಿ: ದೇಶದ ಪ್ರತಿ ಪ್ರಜೆ ಗೌರವಯುತ ಬದುಕಿಗೆ ನಾಂದಿ ಹಾಡಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರಚನೆಯ ಭಾರತದ ಸಂವಿಧಾನವು ಧರ್ಮ ಗ್ರಂಥಕ್ಕಿಂತ ಶ್ರೇಷ್ಠವಾದದ್ದು ಎಂದು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕಲಬುರಗಿ ಜಿಲ್ಲಾಡಳಿತ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಕಲಬುರಗಿ ನಗರದ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಾಮಾಜಿಕ ಮಹಾನ್ ಚಿಂತನೆಗೆ ಗಾನ ನಮನ ಅರ್ಪಿಸುವ 'ಭೀಮ ಗಾಯನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ರಾಜ್ಯದ 12 ಆಯ್ದಸ್ಥಳಗಳಲ್ಲಿಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ ಜೀವನ ಸಾಧನೆ,



ಸಮಾನತೆಯ ಹೋರಾಟ, ಅಸ್ಪೃಶ್ಯತೆ ನಿರ್ಮೂಲನೆ, ಸ್ತ್ರೀ ಸಮಾನತೆ ಕುರಿತ ಗೀತೆಗಳನ್ನೊಳಗೊಂಡ ಸಮಾನತೆಯ ಸ್ವರ ಸಂಭ್ರಮ ಕಾರ್ಯಕ್ರಮವನ್ನು ಇಂದಿಲ್ಲಿ ಆಯೋಜಿಸಿರುವುದು ಪ್ರಸ್ತುತವಾಗಿದೆ.ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತಷ್ಟು ಸದೃಢವಾಗಬೇಕಾದರೆ ಎಲ್ಲರೂ ಸಂವಿಧಾನಕ್ಕೆ ತಲೆಬಾಗಬೇಕು. ಬಲಾಢ್ಯ ಸಂವಿಧಾನ ಇರುವ ಕಾರಣವೇ ಇಂದು ದೇಶ ಪ್ರಗತಿ ಹಾದಿಯಲ್ಲಿ ಸಾಗುತ್ತಿದೆ ಎಂದು ರಾಯಪ್ಪ ಹುಣಸಗಿ ಅಭಿಪ್ರಾಯಪಟ್ಟರು.

ಗಾಯನವನ್ನು ಸಂಭ್ರಮಿಸಿದ ವಿದ್ಯಾರ್ಥಿ ಸಮೂಹ: ಭೀಮನ ಆದರ್ಶಗಳನ್ನು ಸ್ವರಗಳಲ್ಲಿ ಜೀವಂತಗೊಳಿಸುವ ಜಾಗೃತಿ, ಆತ್ಮಗೌರವ ಮತ್ತು ಸಮಾನತೆಯ ಸ್ವರ ಸಂಭ್ರಮದ ಭೀಮ ಗಾಯನವನ್ನು ಚಿಕ್ಕಬಳ್ಳಾಪುರದ ಸಿದ್ಧಾರ್ಥ ಯುವ ಕ್ರೀಡಾ ಸಾಂಸ್ಕೃತಿಕ ಅಭಿವೃದ್ಧಿ ಸಂಘವು ನಡೆಸಿಕೊಟ್ಟಿತ್ತು. ಅಂಬೇಡ್ಕರ್ ಅವರ ಜೀವನ ಚರಿತ್ರೆ, ಸಮಾಜದಲ್ಲಿ ಅಡಗಿರುವ ಮೌಢ್ಯನಂಬಿಕೆ ಕಂದಾಚಾರ, ಹೋರಾಟದ ಕುರಿತು ಅನೇಕ ಗೀತೆಗಳನ್ನು ಕಲಾವಿದರು ತುಂಬಾ ಸುಶ್ರಾವ್ಯವಾಗಿ ಹಾಡಿ ಜನರಲ್ಲಿ ಜಾಗೃತಿ ಮೂಡಿಸಿದರು. ಇನ್ನು ಭೀಮನ ಗೀತೆಗಳಿಗೆ, ತಮಟೆ ವಾದನಕ್ಕೆ ವಿದ್ಯಾರ್ಥಿ ಸಮೂಹ ಹೆಜ್ಜೆ ಹಾಕಿ ಸಂಭ್ರಮಿಸಿತು.

ಕಾರ್ಯಕ್ರಮದಲ್ಲಿ ರಾಜ್ಯ ಪತ್ರಿಕಾ ಮಾನ್ಯತಾ ಸಮಿತಿ ಸದಸ್ಯ ಗುರುರಾಜ ಕುಲಕರ್ಣಿ, ಭಾರತೀಯ ದಲಿತ ಫ್ಯಾಂಥರ್ ರಾಜ್ಯಾಧ್ಯಕ್ಷ ಮಲ್ಲಪ್ಪ ಹೊಸಮನಿ, ಸಾಹಿತಿ ಮತ್ತುಬದಲಿತ ಮುಖಂಡ ಎ.ಬಿ.ಹೊಸಮನಿ, 135ನೇ ಡಾ.ಬಿ.ಆರ್.ಅಂಬೇಡ್ಕರ್ ಜಯಂತ್ಯೋತ್ಸವ ಜಿಲ್ಲಾ ಸಮಿತಿ ಅಧ್ಯಕ್ಷ ಅಶೋಕ ವೀರಾನಾಯಕ್, ರಾಜ್ಯ ಎಸ್.ಸಿ-ಎಸ್.ಟಿ ಸರ್ಕಾರಿ-ಅರೇ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಹೇಶ ಹುಬಳಿ ಸೇರಿದಂತೆ ಅಂಬೇಡ್ಕರ್ ಗೀತೆಗಳ ಈ ಮಹೋತ್ಸವಕ್ಕೆ ಅನೇಕ ದಲಿತಪರ ಹಾಗೂ ಇತರೆ ಎಲ್ಲ ಸಂಘಟನೆಗಳ ಪದಾಧಿಕಾರಿಗಳು, ಮುಖಂಡರು ಹಾಗೂ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಸರ್ವರನ್ನು ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು.

ಪಿಎಂಎಸ್‌ವೈಎಂ ಯೋಜನೆಯಿಂದ ತಿಂಗಳಿಗೆ 3000 ರೂ. ಪಿಂಚಣಿ ಪಡೆಯಿರಿ

ಯಲಬುರ್ಗಾ: ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್-ಧನ್ (ಪಿಎಂಎಸ್‌ವೈಎಂ) ಎನ್ನುವುದು ಅಸಂಘಟಿತ ವಲಯದ ಕಾರ್ಮಿಕರಿಗಾಗಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಒಂದು ಸ್ವಯಂಪ್ರೇರಿತ ಮತ್ತು ಕೊಡುಗೆ ಆಧಾರಿತ ಪಿಂಚಣಿ ಯೋಜನೆಯಾಗಿದ್ದು, ಈ ಯೋಜನೆಯಡಿ 60 ವರ್ಷ ವಯಸ್ಸಿನ ನಂತರ ಪ್ರತಿ ತಿಂಗಳು 3,000 ಖಚಿತವಾದ ಪಿಂಚಣಿ ದೊರೆಯುತ್ತದೆ ಎಂದು ಪಿಡಿಒ ಫಕೀರಪ್ಪ ಕಟ್ಟಿಮನಿ ಹೇಳಿದರು.

ತಾಲೂಕಿನ ಸಂಕನೂರ ಗ್ರಾಪಂ ಸಂಕನೂರ ಗ್ರಾಮದಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನ ಮಾಡುತ್ತಿರುವ ನಾಲಾ ಹೊಳೆತ್ತುವ ಕಾಮಗಾರಿ ಸ್ಥಳದಲ್ಲಿ ಕೂಲಿಕಾರರಿಗೆ ರೋಜಗಾರ್ ದಿನಾಚರಣೆ ಹಾಗೂ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ನೊಂದಣಿ ಅಭಿಯಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.



ಅಸಂಘಟಿತ ವಲಯದ ಕಾರ್ಮಿಕರು ಎಂದರೆ ಬೀದಿ ಬದಿ ವ್ಯಾಪಾರಿಗಳು, ರಿಕ್ಷಾ ಚಾಲಕರು, ಕಟ್ಟಡ ಕಾರ್ಮಿಕರು, ಕೃಷಿ ಕೂಲಿ ಕಾರ್ಮಿಕರು, ಮನೆ ಕೆಲಸದವರು ಹಾಗೂ ನರೇಗಾ ಕೂಲಿಕಾರರು ಸೇರಿದಂತೆ ವಿವಿಧ ರೀತಿಯ ಕಾರ್ಮಿಕರು 18 ರಿಂದ 40 ವರ್ಷಗಳ ಒಳಗಿರಬೇಕು. ಮಾಸಿಕ ಆದಾಯ 15,000 ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಅರ್ಜಿದಾರರು ಆದಾಯ ತೆರಿಗೆ ಪಾವತಿದಾರರಾಗಿರಬಾರದು ಮತ್ತು ಇಪಿಎಫ್‌ಒಇಎಸ್ ಐಸಿ ಅಥವಾ ಎನ್‌ಪಿಎಸ್ ಸದಸ್ಯರಾಗಿರಬಾರದು ಎಂದರು.

ತಾಲೂಕು ಐಇಸಿ ಸಂಯೋಜಕರಾದ ಶರಣಪ್ಪ ಹಾಳಕೇರಿ ಮಾತನಾಡಿ, ಯೋಜನೆಯಡಿ 60 ವರ್ಷ ತುಂಬಿದ ನಂತರ ಪ್ರತಿ ತಿಂಗಳು 3000 ಪಿಂಚಣಿ ಸಿಗುತ್ತದೆ. ಕೂಲಿಕಾರರು ಪ್ರತಿ ತಿಂಗಳು ವಯಸ್ಸಿಗೆ ತಕ್ಕಂತೆ ಎಷ್ಟು ಹಣ ಪಾವತಿಸುತ್ತೀರಿ, ಅಷ್ಟೇ ಮೊತ್ತವನ್ನು ಕೇಂದ್ರ ಸರ್ಕಾರವು ನಿಮ್ಮ ಪಿಂಚಣಿ ಖಾತೆಗೆ ಜಮೆ ಮಾಡುತ್ತದೆ. ಫಲಾನುಭವಿಯ ಮರಣದ ನಂತರ, ಅವರ ಸಂಗಾತಿಗೆ (ಪತಿ ಅಥವಾ ಪತ್ನಿ) ಪಿಂಚಣಿಯ 50% ಅಂದರೆ (1,500) ಮೊತ್ತವನ್ನು ಕುಟುಂಬ ಪಿಂಚಣಿಯಾಗಿ ನೀಡಲಾಗುತ್ತದೆ. ನಿಮ್ಮ ವಯಸ್ಸಿಗೆ ಅನುಗುಣವಾಗಿ ತಿಂಗಳಿಗೆ 55 ರಿಂದ 200 ವರೆಗೆ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ನೀವು ಉಚಿತ ಸಹಾಯವಾಣಿ ಸಂಖ್ಯೆ 1800 2676 888ಗೆ ಕರೆ ಮಾಡಬಹುದೆಂದು ಹೇಳಿದರು.

ಈ ವೇಳೆಯಲ್ಲಿ ಗ್ರಾಪಂ ಕಂಪ್ಯೂಟರ್ ಆಪರೇಟರ್ ಭೀಮರಾವ್ ದೇಸಾಯಿ, ಗ್ರಾಮ ಕಾಯಕ ಮಿತ್ರ ಜಯಶ್ರೀ ಬೇನಾಳ, ಕಾಯಕ ಬಂಧುಗಳು,103 ಕೂಲಿಕಾರರು,ತಾಲೂಕು ಐಇಸಿ ಸಂಯೋಜಕರು ಇದ್ದರು.

ಕಿರುಸುದ್ದಿ

ಶ್ರೀಶೈಲಕ್ಕೆ ಗೌಡಗೇರಾ ಗ್ರಾಮಸ್ಥರಿಂದ ಪಾದಯಾತ್ರೆ



◆ **ಯಾದಗಿರಿ:** ಚಂದ್ರಮಾನ ಯುಗಾದಿ ಹಬ್ಬದ ಹಿನ್ನಲೆಯಲ್ಲಿ ತಾಲೂಕಿನ ಗೌಡಗೇರಾ ಗ್ರಾಮಸ್ಥರು ಮಂಗಳವಾರ ಬೆಳಗ್ಗೆ ಆಂಧ್ರಪ್ರದೇಶದ ಸುಪ್ರಸಿದ್ಧ ತೀರ್ಥಕ್ಷೇತ್ರ ಶ್ರೀಶೈಲಂಗೆ ಪಾದಯಾತ್ರೆ ಕೈಗೊಂಡರು.

ಈ ವೇಳೆ ಮಾತನಾಡಿದ ಗ್ರಾಮದ ಮುಖಂಡ ಅಮೀನರಡ್ಡಿ ಪಾಟೀಲ, ಸನಾತನ ಹಿಂದೂ ಧರ್ಮದ ಆಚರಣೆಗಳಲ್ಲಿ ಯುಗಾದಿ ಅತೀ ಮಹತ್ವದ್ದಾಗಿದೆ. ಹಿಂದೂ ಬಾಂಧವರಿಗೆ ಇದೇ ಹೊಸ ವರ್ಷವಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿವರ್ಷ ಗ್ರಾಮದಿಂದ ಸುಮಾರು 40 ರಿಂದ 50 ಜನ ಪಾದಯಾತ್ರೆ ಕೈಗೊಳ್ಳುವುದು ಸಂಪ್ರದಾಯವಾಗಿದೆ ಎಂದರು.

ಪಾದಯಾತ್ರೆ ಸಂದರ್ಭದಲ್ಲಿ ಯಾತ್ರಾರ್ಥಿಗಳಿಗೆ ಉಪಹಾರ ಮತ್ತು ಊಟದ ವ್ಯವಸ್ಥೆಯನ್ನು ಕಾಂಗ್ರೆಸ್ ಹಿರಿಯ ಮುಖಂಡ ಶರಣಪ್ಪ ಮಾನೇಗಾರ ಕಲ್ಪಿಸಿದ್ದಾರೆ. ಒಟ್ಟು 7 ದಿನಗಳ ಕಾಲ ಈ ಯಾತ್ರೆ ನಡೆಯಲಿದೆ ಎಂದು ಹೇಳಿದರು. ಈ ವೇಳೆ ಪ್ರಮುಖರಾದ ರಾಮಣ್ಣ ಹೊಸಮನಿ, ರಾಜುಬಯಂಕಣ್ಣೋರ, ಪರಶುರಾಮ ದಳಪತಿ, ಬಾಲರಾಜ ಹಳಿಮನಿ, ಹಣಮಂತ್ರಾಯ ದಂಡಪ್ಪನೂರ, ಮಲ್ಲಪ್ಪ ಗೋಗಿ, ಬಸವರಾಜ ದೊಡ್ಡಮನಿ ಇದ್ದರು.

ಆರೋಗ್ಯ ಸುರಕ್ಷತೆ ಕುರಿತು ಬೀದಿ ನಾಟಕ



◆ **ವಿಜಯನಗರ:** ಜಿಲ್ಲಾಡಳಿತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹೊಸಪೇಟೆ ತಾಲೂಕಿನ ಬಸವನದುರ್ಗ ಗ್ರಾಮದಲ್ಲಿ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ನಾಟಕದ ಮುಖಾಂತರ ಜನ ಜಾಗೃತಿ ಕಾರ್ಯಕ್ರಮ ನಡೆಯಿತು.

ಜಿಲ್ಲಾ ಪ್ರಭಾರ ಜಿಲ್ಲಾ ಆರೋಗ್ಯ ಶಿಕ್ಷಣ ಅಧಿಕಾರಿ ಎಂ.ಧರ್ಮನಗೌಡ ಅವರು ತಮಟೆ ಬಾರಿಸುವ ಮೂಲಕ ಬೀದಿ ನಾಟಕಕ್ಕೆ ಚಾಲನೆ ನೀಡಿದರು.

ನಾಗೇನಹಳ್ಳಿ ಗ್ರಾ. ಪಂ. ಅಧ್ಯಕ್ಷ ದುರಗಪ್ಪ ಉದ್ಘಾಟನೆ ಮಾಡಿದರು. ಗುಂಡಿ ರಮೇಶ್ ಕಲಾ ಟ್ರಸ್ಟ್‌ನಿಂದ ಕಲಾ ಪ್ರದರ್ಶನ ನೀಡಿದರು. ಲಿಂಗ ಸಮಾನತೆ, ಲಸಿಕಾಕರಣ ಮತ್ತು ಕಾಲರ ನಿಯಂತ್ರಣ ಸ್ವಚ್ಛತೆ ಕುರಿತು ಕಲಾವಿದರು ಬೀದಿ ನಾಟಕ ಪ್ರದರ್ಶಿಸಿದರು.

ಸರ್ಕಾರಿ ಬಸ್ ಡಿಕ್ಕಿ: ಶಾಲಾ ವಿದ್ಯಾರ್ಥಿ ಸೇರಿ ಹಲವರಿಗೆ ಗಾಯ

◆ **ಕೂಡ್ಲಿಗಿ:** ತಾಲೂಕಿನ ಗುಡೆಕೋಟೆಯಿಂದ ಬರುತ್ತಿದ್ದ ಕೆಕೆಆರ್‌ಟಿಸಿ ಬಸ್ ಪಟ್ಟಣದ ಹೊರವಲಯದಲ್ಲಿ ಮರಕ್ಕೆ ಡಿಕ್ಕಿಯಾದ ಪರಿಣಾಮ ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರು ಸೇರಿ 30ಕ್ಕೂ ಹೆಚ್ಚಿನ ಜನರು ಗಾಯಗೊಂಡಿರುವ ಘಟನೆ ಮಂಗಳವಾರ ನಡೆದಿದೆ.

ಕೆಕೆಆರ್‌ಟಿಸಿ ಬಸ್ ಶಾಲಾ ಟ್ರಿಪ್‌ಗಾಗಿ ಕಾನಾಮಡು, ಗುಡೆಕೋಟೆ, ರಾಮದುರ್ಗ ಮಾರ್ಗವಾಗಿ ಕೂಡ್ಲಿಗಿಗೆ ಬರುವಾಗ ಈ ಅವಘಡ ನಡೆದಿದೆ.

16 ಪುರುಷರು, 17 ಮಹಿಳೆಯರು ಹಾಗೂ 11ವಿದ್ಯಾರ್ಥಿಗಳು ಸೇರಿ ಒಟ್ಟು 33ಕ್ಕೂ ಹೆಚ್ಚು ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಆ ಪೈಕಿ ತೀವ್ರ ಗಾಯಗೊಂಡ ಕೆಕೆಆರ್‌ಟಿಸಿ ಬಸ್ ಚಾಲಕ ಶಶಿಧರ, ವಿದ್ಯಾರ್ಥಿನಿ ಸೇರಿ ಒಟ್ಟು 9 ಜನರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿ ವಿಮ್ಸ್‌ಗೆ ಕಳುಹಿಸಲಾಗಿದೆ.ಶಾಲಾ ಟ್ರಿಪ್‌ಗಾಗಿ ತಾಲೂಕಿನ ಕಾನಾಮಡು ಗ್ರಾಮದಿಂದ ಗುಡೆಕೋಟೆ ಮಾರ್ಗವಾಗಿ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳನ್ನು ತುಂಬಿಕೊಂಡು ಕೆಕೆಆರ್‌ಟಿಸಿ ಬಸ್ ಬರುತ್ತಿದ್ದಾಗ ಬ್ರೇಕ್ ಆಕ್ಟ್ ಬಂದಿದ್ದರಿಂದ ಅದನ್ನು ತಪ್ಪಿಸುವಾಗ ರಸ್ತೆ ಪಕ್ಕದಲ್ಲಿದ್ದ ಮರಕ್ಕೆ ಡಿಕ್ಕಿಯಾಗಿದೆ ಎಂದು ಹೇಳಲಾಗುತ್ತಿದೆ. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಸ್ಪತ್ರೆಗೆ ಭೇಟಿ ನೀಡಿದ ಎಸ್ಪಿ: ಕೆಕೆಆರ್‌ಟಿಸಿ ಬಸ್ ಮರಕ್ಕೆ ಡಿಕ್ಕಿಯಾಗಿ ವಿದ್ಯಾರ್ಥಿಗಳು ಹಾಗೂ ಪ್ರಯಾಣಿಕರು ಗಾಯಗೊಂಡಿರುವ ಘಟನೆ ವಿಷಯ ತಿಳಿಯುತ್ತಿದ್ದಂತೆ ವಿಜಯನಗರ ಎಸ್ಪಿ ಎಸ್.ಜಾಹ್ನವಿ, ಡಿವೈಎಸ್ಪಿ ಮಲ್ಲೇಶ ದೊಡ್ಡಮನಿ, ಸಿಪಿಐ ಪ್ರಹ್ಲಾದ ಆರ್.ಚನ್ನಗಿರಿ, ಪಿಎಸ್‌ಐ ಸಿ.ಪ್ರಕಾಶ್ ಆಸ್ಪತ್ರೆಗೆ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿದರು. ಅಲ್ಲದೆ, ಘಟನಾ ಸ್ಥಳಕ್ಕೂ ಭೇಟಿ ನೀಡಿ ಪರಿಶೀಲಿಸಿದರು.



ಗಾದಿಗನೂರು: ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು.1908ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಮಹಿಳಾ ಕಾರ್ಮಿಕರು ಉತ್ತಮ ಕೆಲಸದ ಪರಿಸ್ಥಿತಿ, ಸಮಾನ ವೇತನ ಮತ್ತು ಮತದಾನದ ಹಕ್ಕಿಗಾಗಿ ನಡೆಸಿದ ಪ್ರತಿಭಟನೆಯೇ ಈ ದಿನದ ಆರಂಭಕ್ಕೆ ಪ್ರೇರಣೆಯಾಯಿತು ಎಂದು ಅಂಗನವಾಡಿ ಶಿಕ್ಷಕಿ ಸುರೇಖಾ ಆರ್.ಕೆ. ತಿಳಿಸಿದರು. ಕಾರ್ಯಕ್ರಮದಲ್ಲಿ ಮಹಿಳೆಯರು ಹಾಗೂ ಮಕ್ಕಳು ಭಾಗವಹಿಸಿದರು.

ಆಶಾ ಕಾರ್ಯಕರ್ತೆಯರ ವಜಾಗೊಳಿಸದಿರಿ

◆ **ಕುರುಗೋಡು:** ಸಮೀಪದ ಕುಡತಿನಿ ಪಪಂ ವ್ಯಾಪ್ತಿಗೆ ಸಂಬಂಧಿಸಿದ 22 ಜನ ಆಶಾ ಕಾರ್ಯಕರ್ತೆಯರನ್ನು ವಜಾಗೊಳಿಸಬಾರದು ಎಂದು ಪಪಂ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಓಂ ಪ್ರಕಾಶ ಅವರಿಗೆ ಕುಡಿತಿನಿ ಪಟ್ಟಣದ ನಮ್ಮ ಕರ್ನಾಟಕ ರಕ್ಷಣಾ ವೇದಿಕೆ (ಯುವಸೈನ್ಯ) ವತಿಯಿಂದ ಅಧ್ಯಕ್ಷ ಬಿ. ಸಂಪತ್ತ ಕುಮಾರ್ ನೇತೃತ್ವದಲ್ಲಿ ಮಂಗಳವಾರ ಮನವಿ ಸಲ್ಲಿಸಲಾಗಿತು.

ನಾವು ನಮ್ಮ ಕರ್ನಾಟಕ ರಕ್ಷಣಾ ವೇದಿಕೆ (ಯುವಸೈನ್ಯ) ವತಿಯಿಂದ ಅಧ್ಯಕ್ಷ ಬಿ. ಸಂಪತ್ತು ಕುಮಾರ ಮಾತನಾಡಿ, ಕುಡತಿನಿ ವ್ಯಾಪ್ತಿಯಲ್ಲಿ ಸುಮಾರು 22,000 ಜನಸಂಖ್ಯೆ ಇದ್ದು, ಅದರಲ್ಲಿ ಕೇವಲ ಆಶಾಕಾರ್ಯಕರ್ತೆಯರು 20 ಜನರು ಇರುತ್ತಾರೆ. ಆದರೆ, ಈಗ ಈ ಸಂಖ್ಯೆಯಲ್ಲಿ ಕೂಡ ಈಗ ಸುಮಾರು 14 ಜನ ಆಶಾಕಾರ್ಯಕರ್ತೆಯರನ್ನು ವಜಗೊಳಿಸಲು ತೀರ್ಮಾನಿಸಿದ್ದು, ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತದೆ. ಸುಮಾರು 17 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದು, ಕೋರೋನಾ ಮತ್ತು ಟಿ.ಬಿ ಕಾಯಿಲೆ ಮತ್ತು ಗರ್ಭಿಣಿಯರಿಗೆ ಅವರುಗಳು ಬಹಳ ಸೇವೆ ಅಪಾರವಾಗಿರುತ್ತದೆ. ಅದಕಾರಣ ವಜಾಗೊಳಿಸಬಾರದು. ಒಂದು ವೇಳೆ ಮುಂದುವರೆದು ವಜಾಗೊಳಿಸಿದ ಪಕ್ಷದಲ್ಲಿ ನಾವುಗಳು ಮುಂದಿನ ನಮ್ಮ ಸಂಘಟನೆಯಿಂದ ಉಗ್ರ ಹೋರಾಟಕ್ಕೆ ಸಜ್ಜಾಗಬೇಕಾಗುತ್ತದೆ ತಿಳಿಸಿದ್ದಾರೆ.

ಅದೇ ರೀತಿ ಪಟ್ಟಣದ ಮುಖ್ಯಾಧಿಕಾರಿ ಮಂಜುನಾಥ, ಪೊಲೀಸ್ ವೃತ್ತ ನಿರೀಕ್ಷಕರಿಗೆ ಕೂಡ ಮನವಿ ಸಲ್ಲಿಸಲಾಗಿತು. ಈ ವೇಳೆ ಬಿ. ಜಂಭಯ್ಯ, ಮೇರಿಯಲಾ ಲಾಲಪ್ಪ, ಟಿ. ಜಂಭಯ್ಯ, ಮುಗ್ಗು ಮಾರೇಶ, ಹಾಗೂ ಪಟ್ಟಣದ ಆಶಾಕಾರ್ಯಕರ್ತೆಯರು. ಇತರರು ಇದ್ದರು.



ಕುರುಗೋಡು: ಸಮೀಪದ ಕುಡತಿನಿ ಪಪಂ ವ್ಯಾಪ್ತಿಗೆ ಸಂಬಂಧಿಸಿದ 22 ಜನ ಆಶಾ ಕಾರ್ಯಕರ್ತೆಯರನ್ನು ವಜಾಗೊಳಿಸಬಾರದು ಎಂದು ಪಪಂ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಓಂ ಪ್ರಕಾಶ ಅವರಿಗೆ ಕುಡಿತಿನಿ ಪಟ್ಟಣದ ನಮ್ಮ ಕರ್ನಾಟಕ ರಕ್ಷಣಾ ವೇದಿಕೆ (ಯುವಸೈನ್ಯ) ವತಿಯಿಂದ ಅಧ್ಯಕ್ಷ ಬಿ. ಸಂಪತ್ತ ಕುಮಾರ್ ನೇತೃತ್ವದಲ್ಲಿ ಮಂಗಳವಾರ ಮನವಿ ಸಲ್ಲಿಸಲಾಗಿತು.

ತಂದೆಯ ಹೆಗಲು, ತಾಯಿಯ ಮಡಿಲು ನಿಸ್ವಾರ್ಥ ಪ್ರೀತಿಯ ಸಂಕೇತ: ಗುತ್ತೇದಾರ್

◆ **ಹಗರಿಬೊಮ್ಮನಹಳ್ಳಿ:** ತಂದೆ-ತಾಯಿ ಎಂಬುದು ಮಕ್ಕಳ ಜೀವನದ ಮೊದಲ ಗುರುಗಳು. ಪ್ರಪಂಚದಲ್ಲಿ ಎಲ್ಲಿಡೆ ವಂಚನೆ, ಮೋಸ ಕಂಡರೂ ತಂದೆಯ ಹೆಗಲು ಮತ್ತು ತಾಯಿಯ ಮಡಿಲು ಮಾತ್ರ ನಿಸ್ವಾರ್ಥ ಪ್ರೀತಿಯ ಸಂಕೇತವಾಗಿವೆ ಎಂದು ನ್ಯಾಯವಾದಿ ನಾಗರಾಜ್ ಗುತ್ತೇದಾರ್ ತಿಳಿಸಿದರು.

ಸೋಮವಾರದಂದು ಪಟ್ಟಣದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ ಸಿ.ಬಿ.ಎಸ್.ಇ.ಹತ್ತನೇ ತರಗತಿ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಸಂಪೂರ್ಣಗೊಂಡ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಸಂಕಲ್ಪ ದಿವಸ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಜೀವನ ದೃಢ ಸಂಕಲ್ಪದೊಂದಿಗೆ ಆಣಿಗೊಳಿಸಲು ಮತ್ತು ಅವರ ಭವಿಷ್ಯ ಉಜ್ವಲವಾಗಿರಲೆಂದು ತಮ್ಮ ತಂದೆ ತಾಯಿಗಳ ಪಾದ ಪೂಜೆಯನ್ನು ನೆರವೇರಿಸಿ ಗೌರವ ಸಲ್ಲಿಸಿ ಆಶೀರ್ವಾದ ಪಡೆದುಕೊಂಡರು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಇಂದಿನ ಆಧುನಿಕ ಯುಗದಲ್ಲಿ ಬಹುತೇಕ ಶಿಕ್ಷಣ ಸಂಸ್ಥೆಗಳಲ್ಲಿ ಕೇವಲ ವಿದ್ಯಾಭ್ಯಾಸಕ್ಕೆ ಮಾತ್ರ ಪ್ರಾಮುಖ್ಯತೆ ನೀಡಲಾಗುತ್ತಿದೆ. ಆದರೆ ಭಾರತೀಯ ಸಂಸ್ಕೃತಿ, ಆದರ್ಶಗಳು, ನೈತಿಕ ಮೌಲ್ಯಗಳು ಮತ್ತು ಸಂಸ್ಕಾರಗಳನ್ನು ಮಕ್ಕಳಿಗೆ ಬೋಧಿಸುವಂತಹ ಶಿಕ್ಷಣ ಸಿಗುವುದು ಅತಿ ವಿರಳವಾಗಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಆತ್ಮವಿಮರ್ಶೆ ಮಾಡುವ ಗುಣವನ್ನು ಬೆಳೆಸಿಕೊಂಡರೆ ಯಾವ ಪರಿಸ್ಥಿತಿಯಲ್ಲೂ ತಮ್ಮ ದಾರಿಯಲ್ಲಿ ಸಾಗುವುದಿಲ್ಲ. ಜೀವನದಲ್ಲಿ ನೈತಿಕತೆ, ಶ್ರಮ ಮತ್ತು ಸತ್ಯತೆಯೊಂದಿಗೆ ನಡೆದುಕೊಂಡರೆ ಯಶಸ್ಸು ಸ್ವಯಂವಾಗಿ ದೊರೆಯುತ್ತದೆ ಎಂದು ಹೇಳಿದರು.



ಭಾರತೀಯ ಸಂಸ್ಕೃತಿ ಮತ್ತು ಸಂಸ್ಕಾರಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುತ್ತಿರುವ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಉತ್ತಮ ಸಂಸ್ಕಾರ ಮತ್ತು ಜೀವನ ಮೌಲ್ಯಗಳು ದೊರೆಯುತ್ತಿರುವುದು ಅತ್ಯಂತ ಸಂತೋಷದ ಸಂಗತಿ.

■ ನಾಗರಾಜ್ ಗುತ್ತೇದಾರ್ .ನ್ಯಾಯವಾದಿ


ಶಾಲೆಯಲ್ಲಿ ಕಲಿತ ಆದರ್ಶಗಳು, ಮೌಲ್ಯಗಳು ಮತ್ತು ಸಂಸ್ಕಾರಗಳನ್ನು ತಮ್ಮ ಜೀವನದಲ್ಲಿ ಅನುಸರಿಸುವುದರ ಜೊತೆಗೆ ಮುಂದಿನ ತಲೆಮಾರಿಗೆ ಹಸ್ತಾಂತರಿಸುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು.

ಶಾಲೆಯ ಪ್ರಧಾನಾಚಾರ್ಯರಾದ ಶ್ರೀ ಹೆಚ್. ಎ. ರಂಗನಾಥ ಅವರು ಮಾತನಾಡಿ, ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಮೌಲ್ಯಯುತ ಶಿಕ್ಷಣ, ಸಂಸ್ಕಾರ ಹಾಗೂ ವಿವಿಧ ಕೌಶಲ್ಯಗಳು ಅವರ ಜೀವನವನ್ನು ರೂಪಿಸುವಲ್ಲಿ ಮಹತ್ತರ ಪಾತ್ರವಹಿಸುತ್ತವೆ ಎಂದು ಹೇಳಿದರು. ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಕೇವಲ ವೈಯಕ್ತಿಕ ಅಭಿವೃದ್ಧಿಗೆ ಮಾತ್ರ ಬಳಸದೇ, ದೇಶದ ಕಟ್ಟೋಣದ ಜನರ ಒಳಿತಿಗಾಗಿ ಹಾಗೂ ಸಮಾಜದ ಸರ್ವಾಂಗೀಣ ಅಭಿವೃದ್ಧಿಗಾಗಿ ಬಳಸಬೇಕು ಎಂದು ಹೇಳಿದರು. ದೇಶವನ್ನು ವಿಶ್ವದ ಅಗ್ರಮಾನ್ಯ ರಾಷ್ಟ್ರವನ್ನಾಗಿ ಮಾಡಲು ಯುವಜನತೆ ಮುಂದಾಗಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ "ಸಂತೃಪ್ತ ಸ್ವಲ್ಪ, ಸಮಾಜಕ್ಕೆ ಸರ್ವಸ್ವ" ಎಂಬ ಮಹತ್ವದ ತತ್ತ್ವವನ್ನು ಒಳಗೊಂಡ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು.

ವಿದ್ಯಾರ್ಥಿಗಳು ದೇಶಭಕ್ತಿ, ಸಮಾಜ ಸೇವೆ, ನೈತಿಕ ಮೌಲ್ಯಗಳು ಹಾಗೂ ಜವಾಬ್ದಾರಿಯುತ ನಾಗರಿಕರಾಗಿ ಬದುಕುವ ಸಂಕಲ್ಪವನ್ನು ಕೈಗೊಂಡರು. ಕಾರ್ಯಕ್ರಮದಲ್ಲಿ ಭಾರತಾಂಬೆ ಅಖಂಡ ಭಾರತ ಭಾವಚಿತ್ರಕ್ಕೆ ಹತ್ತನೇ ತರಗತಿಯ ವಿದ್ಯಾರ್ಥಿಗಳು ದೀಪ ಬೆಳಗಿ ರಾಷ್ಟ್ರಭಕ್ತಿ ಮತ್ತು ಏಕತೆಯ ಸಂದೇಶವನ್ನು ಸಾರಿದರು.

ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರಾದ ವಿನಾಯಕ ಭಟ್ಟ, ಮಧುಕರ್, ಶಿವಶಂಕ್ರಯ್ಯ, ರೇಣುಕಾ, ಭುವನೇಶ್ವರಿ, ಬಿಂದು ಹಾಗೂ ಚೈತ್ರಾ ಮತ್ತು ಭೋದಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಬಿ.ಟಿ. ನಾಗರಾಜ ಸ್ವಾಗತಿಸಿದರು. ಕೆ. ನಾಗರಾಜ್ ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮವನ್ನು ಆಶಾ ಎಸ್. ಅವರು ನಿರೂಪಿಸಿದರು.

ವಿಮಾನ ನಿಲ್ದಾಣ ಮಾಡಿ, ಇಲ್ಲವೇ ರೈತರ ಭೂಮಿ ಹಿಂದಿರುಗಿಸಿ: ವೈ.ಎಂ. ಸತೀಶ್



◆ **ಬಳ್ಳಾರಿ:** ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುತ್ತೀರೋ ಇಲ್ಲವೋ ಸ್ಪಷ್ಟಪಡಿಸಿ. ಇಲ್ಲವಾದಲ್ಲಿ ಆರ್ಸೆಲ್ಲರ್ ಮಿತ್ತಲ್ ಉಕ್ಕು ಕಾರ್ಖಾನೆಗೆ ಹಾಗೂ ವಿಮಾನ ನಿಲ್ದಾಣಕ್ಕಾಗಿ ಸ್ವಾಧೀನಕ್ಕೆ ಪಡೆದ ರೈತರ ಭೂಮಿಯನ್ನು ರೈತರಿಗೆ ಹಿಂದಿರುಗಿಸಿ ಎಂದು ವಿಪ ಸದಸ್ಯ ವೈ.ಎಂ. ಸತೀಶ ಅವರು ಆಗ್ರಹಿಸಿದರು.

ವಿಧಾನ ಪರಿಷತ್ತಿನ ಬಜೆಟ್ ಅಧಿವೇಶನದಲ್ಲಿ ಮಂಗಳವಾರ ಬಳ್ಳಾರಿ ವಿಮಾನ ನಿಲ್ದಾಣಕ್ಕೆ ಭೂ ಸ್ವಾಧೀನ ಮಾಡಿಕೊಂಡಿರುವ ವಿಷಯ ಪ್ರಸ್ತಾಪಿಸಿ, ಅಧಿಕಾರಿಗಳು ರೈತರ ಭೂಮಿಯನ್ನು ಸ್ವಾಧೀನ ಮಾಡಿಕೊಂಡಿಲ್ಲ, ಅಧಿಕಾರಿಗಳು ಮತ್ತು ಸರ್ಕಾರದ ಮಧ್ಯೆ ಯಾವ ರೀತಿಯಲ್ಲಿ ಕೆಲಸ ನಡೆಯುತ್ತಿದೆ ಎನ್ನಲು ಇದು ಉತ್ತಮವಾದ ಸಾಕ್ಷಿ. ರಸ್ತೆ ಇಲ್ಲದೇ ವಿಮಾನ ನಿಲ್ದಾಣಕ್ಕಾಗಿ ಭೂ ಸ್ವಾಧೀನ ಮಾಡಿಕೊಂಡ ಅಧಿಕಾರಿಗೆ ಗೌರವ ಸನ್ಮಾನ ಮಾಡಬೇಕು ಎಂದು ವ್ಯಂಗ್ಯವಾಡಿದರು.

ಆಗ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಅವರು, ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಗಳಿಂದಲೂ ವಿಮಾನ ನಿಲ್ದಾಣಕ್ಕಾಗಿ ಬೇಡಿಕೆ ಬಂದಿದೆ. ಈ ಹಿನ್ನೆಲೆ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಜಿಲ್ಲೆಯ ಜನಪ್ರತಿನಿಧಿಗಳ ಸಭೆಯನ್ನು ಶೀಘ್ರದಲ್ಲೇ ಆಯೋಜಿಸಿ, ವಿಮಾನ ನಿಲ್ದಾಣವನ್ನು ಎಲ್ಲಿ ನಿರ್ಮಾಣ ಮಾಡಲಾಗುತ್ತದೆ ಎನ್ನುವ ಸ್ಪಷ್ಟ ನಿರ್ಧಾರವನ್ನು ಕೈಗೊಳ್ಳಲಾಗುತ್ತದೆ. ಆ ನಂತರವೇ, ಬಳ್ಳಾರಿಯಲ್ಲಿ ವಿಮಾನ ನಿಲ್ದಾಣ ಪ್ರಾರಂಭಿಸುವ ಕುರಿತು ಸ್ಪಷ್ಟವಾಗಿ ಹೇಳಲು ಸಾಧ್ಯ ಎಂದರು.

ಸಚಿವ ಎಂ.ಬಿ. ಪಾಟೀಲ ಅವರು, ಸ್ವಾಧೀನ ಮಾಡಿಕೊಂಡಿರುವ ಭೂಮಿಗೆ ಪರಿಹಾರ ನೀಡಿರುವ ಕಾರಣ ಆ ಭೂಮಿಯನ್ನು ರೈತರಿಗೆ ಹಿಂದಿರುಗಿಸಲು ಸಾಧ್ಯವಿಲ್ಲ. ಬಳ್ಳಾರಿ ವಿಮಾನ ನಿಲ್ದಾಣದ ರಸ್ತೆಗೆ ಅಗತ್ಯವಾಗಿರುವ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಲಾಗುತ್ತದೆ. ಯಾವುದೇ ಕಾರಣಕ್ಕೂ ಬಿಳಿ ಆನೆ ಆಗಲು ಬಿಡುವುದಿಲ್ಲ. ಬೇರೆ ಉದ್ದೇಶಗಳಿಗೆ ಭೂಮಿಯನ್ನು ಬಳಕೆ ಮಾಡಿಕೊಳ್ಳಲಾಗುವುದೂ ಎಂದು ಸ್ಪಷ್ಟಪಡಿಸಿದರು.

ಪ್ರಶಸ್ತಿಗೆ ಅರ್ಜಿ ಆಹ್ವಾನ: ಅವಧಿ ವಿಸ್ತರಣೆ

◆ **ವಿಜಯನಗರ:** ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2026-27ನೇ ಸಾಲಿಗೆ ಡಾ.ಬಾಬು ಜಗಜೀವನ ರಾಂ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ರವರ ಜನ್ಮದಿನಾಚರಣೆ ಅಂಗವಾಗಿ ಡಾ.ಬಾಬು ಜಗಜೀವನ ರಾಂ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಮಾರ್ಚ್ 12ರವರೆಗೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಕಚೇರಿ ಸಂಪರ್ಕಿಸಬಹುದು ಎಂದು ವೈ.ಎಂ.ಶಾಳೆ ತಿಳಿಸಿದ್ದಾರೆ.

ರೈಲ್ವೆ ಅಭಿವೃದ್ಧಿ ನಿಯೋಗದಿಂದ ಮನವಿ

◆ **ಸಿರುಗುಪ್ಪ:** ಬಳ್ಳಾರಿ, ಸಿರುಗುಪ್ಪ ಸಿಂಧನೂರು, ಲಿಂಗಸುಗೂರು ನೂತನ ರೈಲ್ವೆ ಮಾರ್ಗದ ಆರಂಭಕ್ಕಾಗಿ ಹಿಂದಿನ ಯುಪಿಎ ಸರ್ಕಾರದ ರೈಲ್ವೆ ಮಂತ್ರಿ ಮಲ್ಲಿಕಾರ್ಜುನ ಖರ್ಗೆ ಹಾಗೂ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ರೈಲ್ವೆ ಮಂತ್ರಿ ಸದಾನಂದ ಗೌಡ ಅವರು ತಮ್ಮ ರೈಲ್ವೆ ಬಜೆಟ್‌ನಲ್ಲಿ ಈ ಮಾರ್ಗಕ್ಕೆ ಸರ್ವೆ ಆದೇಶ ಮಾಡಿದ್ದರು. ಸರ್ವೆ ಮುಗಿದು 13 ವರ್ಷಗಳಾದರೂ ಇಂದಿಗೂ ಈ ಮಾರ್ಗದ ಕೆಲಸ ಪ್ರಾರಂಭಿಸಿಲ್ಲ, ಕೂಡಲೇ ಇದಕ್ಕೆ ಚಾಲನೆ ನೀಡಬೇಕು ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ, ಮಾಜಿ ಮುಖ್ಯಮಂತ್ರಿ ಮತ್ತು ಬೆಳಗಾವಿ ಲೋಕಸಭಾ ಸದಸ್ಯ ಜಗದೀಶ್ ಶೆಟ್ಟರ್ ಅವರಿಗೆ ನಿಯೋಗ ಮನವಿ ಸಲ್ಲಿಸಿದರು.

ನವದೆಹಲಿಯಲ್ಲಿ ನಿಯೋಗ ಭೇಟಿ ಮಾಡಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮನವಿ ಸಲ್ಲಿಸಿ, ಅವರೊಂದಿಗೆ ಸುದೀರ್ಘವಾಗಿ ಚರ್ಚಿಸಿ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ನಂತರ ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಎಂ.ಮಹೇಶ್ವರ ಸ್ವಾಮಿ ಅವರು ಮಾತನಾಡಿ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಕೇಂದ್ರ ಬೃಹತ್ ಮತ್ತು ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಮಾಜಿ ಮುಖ್ಯಮಂತ್ರಿ ಹಾಗೂ ಹಾವೇರಿ ಲೋಕಸಭಾ ಸದಸ್ಯ ಬಸವರಾಜ ಬೊಮ್ಮಾಯಿ ಸೇರಿದಂತೆ ಕರ್ನಾಟಕದಿಂದ ಆಯ್ಕೆಯಾದ ಲೋಕಸಭೆ ಮತ್ತು ರಾಜ್ಯಸಭಾ ಸದಸ್ಯರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಎಂ. ಮಹೇಶ್ವರ ಸ್ವಾಮಿ, ಸಿರುಗುಪ್ಪ ಮಾಜಿ ಶಾಸಕ ಎಂ.ಎಸ್.ಸೋಮಲಿಂಗಪ್ಪ ಅವರ ನೇತೃತ್ವದ ನಿಯೋಗದಲ್ಲಿ 25ಕ್ಕೂ ಹೆಚ್ಚು ಜನರು ಉಪಸ್ಥಿತರಿದ್ದರು. ಹುಬ್ಬಳ್ಳಿ ರೈಲ್ವೆ ವಿಭಾಗದ ಡಿಆರ್‌ಯುಸಿಸಿ ಸದಸ್ಯ ಕೆ.ಎಂ. ಕೊಟ್ರೇಶ್, ತಾಲೂಕ ಸಮಿತಿ ಅಧ್ಯಕ್ಷ ಪಿ.ಯೋಗರಾಜ್, ಮುಖಂಡರಾದ ಗೋನಾಳ್ ರಾಜಶೇಖರ ಗೌಡ, ದಮ್ಮೂರು ಶೇಖರ್, ಪಲ್ಲೇದ ದೊಡ್ಡಪ್ಪ, ಬನಾಪುರ ರೆಡ್ಡಿ, ಸಿರುಗುಪ್ಪ ನಗರಸಭಾ ಮಾಜಿ ಸದಸ್ಯ ನಟರಾಜ್, ಮಂಜುನಾಥ್, ಮಹದೇವ, ಚಾಗಿ ಸುಬ್ಬಯ್ಯ, ಕುಂಟನಾಳ ಮಲ್ಲಿಕಾರ್ಜುನ ಇತರರಿದ್ದರು.



ಮೈಲಾರ ಅಭಿವೃದ್ಧಿ ಪ್ರಾಧಿಕಾರಕ್ಕೆ ಶಾಸಕ ಕೃಷ್ಣ ನಾಯ್ಕ ಒತ್ತಾಯ

◆ **ವಿಜಯನಗರ:** ಜಿಲ್ಲೆಯ ಪುಣ್ಯಕ್ಷೇತ್ರ ಮೈಲಾರದಲ್ಲಿ ಅಗತ್ಯ ಮೂಲ ಸೌಲಭ್ಯ ಕಲ್ಪಿಸಬೇಕು. ಅದಕ್ಕಾಗಿ ಪ್ರತ್ಯೇಕ ಅಭಿವೃದ್ಧಿ ಮಂಡಳಿ ಸ್ಥಾಪಿಸಬೇಕು ಎಂದು ಹೂವಿನಹಡಗಲಿ ಬಿಜೆಪಿ ಶಾಸಕ ಕೃಷ್ಣ ನಾಯ್ಕ ಸರ್ಕಾರಕ್ಕೆ ಒತ್ತಾಯಿಸಿದರು.



ವಿಧಾನಸಭೆಯಲ್ಲಿ ಪ್ರಶ್ನೋತ್ತರ ವೇಳೆ ಈ ಕುರಿತು ಮಾತನಾಡಿದ ಅವರು, ಹೂವಿನಹಡಗಲಿ ತಾಲೂಕಿನ ಮೈಲಾರ ಗ್ರಾಮದ ಶ್ರೀ ಲಿಂಗೇಶ್ವರ ಹಾಗೂ ಹಾವೇರಿ ಜಿಲ್ಲೆಯ ದೇವರಗುಡ್ಡದ ಶ್ರೀ ಮಾಲತೇಶ್ವರ ದೇವಸ್ಥಾನಗಳನ್ನು ಒಳಗೊಂಡು ಈ ಹಿಂದಿನ ಸರ್ಕಾರ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿ, 5 ಕೋಟಿ ರೂ. ಅನುದಾನವನ್ನೂ ಒದಗಿಸಿತ್ತು. ಆದರೆ, ಈವರೆಗೆ ಅದು ಕಾರ್ಯರೂಪಕ್ಕೆ ಬಂದಿಲ್ಲ ಎಂದು ಪ್ರಶ್ನಿಸಿದರು.

ಪ್ರತಿ ವರ್ಷ ನಡೆಯುವ ಕಾರ್ಣಿಕ ಹಾಗೂ ಜಾತ್ರಾ ಸಂದರ್ಭದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಸೇರುತ್ತಿದ್ದಾರೆ. ನದಿಯಲ್ಲಿ ಪುಣ್ಯ ಸ್ನಾನ ಮಾಡಲು ಸ್ನಾನಘಟ್ಟಗಳಿಲ್ಲ, ಶೌಚಾಲಯ, ರಸ್ತೆ ಸಂಪರ್ಕಗಳೂ ಸೇರಿದಂತೆ ಮೂಲ ಸೌಲಭ್ಯಗಳಿಲ್ಲ. ಈ ಕೂಡಲೇ ಸರ್ಕಾರ ಪ್ರತ್ಯೇಕ ಪ್ರಾಧಿಕಾರ ರಚಿಸಿ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಅದಕ್ಕೆ ಉತ್ತರಿಸಿದ ಮುಜರಾಯಿ ಮತ್ತು ಸಾರಿಗೆ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ಈ ಹಿಂದಿನ ಸರ್ಕಾರ ಸದನದ ಮೂಲಕ ಕಾಯ್ದೆ ರೂಪಿಸಿದೆ. ಕೇವಲ ಸರ್ಕಾರದ ಆದೇಶದ ಮೇಲೆ ಪ್ರಾಧಿಕಾರ ರಚನೆ ಮಾಡಿದ್ದರಿಂದ ಸಮಸ್ಯೆಯಾಗಿದೆ. ಸರ್ಕಾರದ ಆದೇಶದ ವಿರುದ್ಧ ಶ್ರೀ ಮೈಲಾರ ದೇವಸ್ಥಾನದ ಆನುವಂಶಿಕ ಟ್ರಸ್ಟಿ ಶ್ರೀ ಗುರುವೆಂಕಪ್ಪಯ್ಯ ನಾಯಕ ಮತ್ತು ಪ್ರಧಾನ ಅರ್ಚಕರು ಹೈಕೋರ್ಟ್ ಮೆಟ್ಟಿಲು ಹೋಗಿದ್ದರಿಂದ ಕಾನೂನು ತೊಡಕು ಎದುರಾಗಿದೆ. ಅಲ್ಲದೇ, ಅಂತಹ ಕ್ಷೇತ್ರದಲ್ಲಿ ಪ್ರಾಧಿಕಾರ ರಚನೆಗೆ ಅವಕಾಶವಿಲ್ಲ, ಆದರೆ, ಭಕ್ತರ ಅನುಕೂಲಕ್ಕಾಗಿ ಏನೇನು ಮಾಡಬೇಕು ಎಂಬುದನ್ನು ಅವಲೋಕಿಸಲು ಶೀಘ್ರವೇ ಕ್ಷೇತ್ರಕ್ಕೆ ಭೇಟಿ ನೀಡಿ, ಕ್ರಮ ಕೈಗೊಳ್ಳುವುದಾಗಿ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದರು.

ವಿವಿಧ ಕಾಮಗಾರಿಗೆ ಶಾಸಕ ನಾರಾ ಭರತ್ ರೆಡ್ಡಿ ಚಾಲನೆ

◆ **ಬಳ್ಳಾರಿ:** ನಗರದ ವಡ್ಡರಬಂಡೆ ಶಾದಿ ಮಹಲ್ ಕಾಮಗಾರಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು ಎಂದು ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಮಂಗಳವಾರ ನಗರದ 3ನೇ ವಾರ್ಡ್ ವ್ಯಾಪ್ತಿಯ ಖಬರಸ್ತಾನದ ಕಾಂಪೌಂಡ್ ಹಾಗೂ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ರಾಜ್ಯಸಭಾ ಸದಸ್ಯ ಡಾ.ಸಯ್ಯದ್ ನಾಸಿರ್ ಹುಸೇನ್, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್, ಸೇರಿ ನಾವೆಲ್ಲರೂ ತೀರ್ಮಾನಿಸಿದಂತೆ ನಗರದಲ್ಲಿ ಒಟ್ಟು ಎರಡು ಶಾದಿ ಮಹಲ್ ನಿರ್ಮಾಣ ಕಾರ್ಯ ನಡೆಯಲಿದೆ. ಇದರಿಂದ ಬಡವರ ಮಕ್ಕಳ ವಿವಾಹಕ್ಕೆ ಅನುಕೂಲವಾಗಲಿದೆ ಎಂದರು.



ನಗರದ ಮುಸ್ಲಿಂ ಸಮುದಾಯದ ಯುವಕರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಬೇಕೆಂಬುದು ನಮ್ಮೆಲ್ಲರ ಆಸೆ ಇತ್ತು, ಅದೇ ರೀತಿ ಇಂದು ನಗರದ ಈದ್ಗಾ ಹಾಗೂ ಖಬರಸ್ತಾನದ ಸ್ವಚ್ಛತೆ, ರಕ್ಷಣೆ ಹಾಗೂ ಹಸಿರೀಕರಣದ ಕೆಲಸವನ್ನು ಯುವಕರು ಮಾಡಿದ್ದಾರೆ. ಇದೇ ನಗರದ ಜನ ವಸತಿ ಬಡಾವಣೆಗಳಲ್ಲಿ ಹೋರಣಕ್ಕೆ ಎಲ್ಲರೂ ಶ್ರಮಿಸೋಣ ಎಂದರು.

ಈ ಸಂದರ್ಭದಲ್ಲಿ ವಕ್ಫ್ ಮಂಡಳಿಯ ಮಾಜಿ ಅಧ್ಯಕ್ಷ ಹುಮಾಯೂನ್ ಖಾನ್, ಪಾಲಿಕೆಯ ಸದಸ್ಯರಾದ ಎಂ.ಪ್ರಭಂಜನಕುಮಾರ್, ನಾಜು, ಆಸಿಫ್, ಮುಖಂಡರಾದ ಅಯಾಜ್ ಅಹ್ಮದ್, ದಾದಾಭಾಯ್, ಕಣೇಕಲ್ ಮೆಹಬೂಬಸಾಬ, ಹುಸೇನ್ ಪೀರಾ, ಯೂನುಸ್ ಭಾಯ್, ಮಹಮ್ಮದ್ ಭಾಯ್, ಉಸ್ಮಾನ್, ಅನ್ವರ್, ಅರ್ಷದ್, ಆತೀಕ್, ತೌಸೀಫ್, ಸಮೀರ್, ಅಪಾಕ್, ನೂರ್, ಫರಾಜ್, ತಬರೇಜ್ ಇತರರಿದ್ದರು.

ಆರೋಪಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಮನವಿ

◆ **ವಿಜಯನಗರ:** ಹಿಂದೂ ಧರ್ಮ ಮತ್ತು ಮಹಿಳೆಯರಿಗೆ ಅವಮಾನಕರ ರೀತಿಯ ವಿಡಿಯೋವನ್ನು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿರುವ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಬಿಜೆಪಿ ಜಿಲ್ಲಾ ಘಟಕದ ವತಿಯಿಂದ ಮಂಗಳವಾರ ಇಲ್ಲಿನ ಎಸ್‌ಪಿ ಕಚೇರಿ ಬಳಿ ದಿಢೀರ್ ಪ್ರತಿಭಟನೆ ನಡೆಯಿತು.

ಪಕ್ಷದ ಜಿಲ್ಲಾ ಘಟಕದ ಉಪಾಧ್ಯಕ್ಷ ಸಂದೀಪ್ ಸಿಂಗ್, ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್ ನೇತೃತ್ವದಲ್ಲಿ ಎಸ್‌ಪಿ ಕಚೇರಿಗೆ ತೆರಳಿದ ನಿಯೋಗ, ಆರೋಪಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

'ಮಾರ್ಚ್ 5ರಂದು ಫೇಸ್‌ಬುಕ್ ನೋಡುತ್ತಿದ್ದಾಗ ಹಿಂದೂಗಳ ಭಾವನೆಗೆ, ಮಹಿಳೆಯರ ಘನತೆಗೆ ಧಕ್ಕೆ ತರುವಂತಹ ಪೋಸ್ಟ್‌ಗಳನ್ನು ಗಮನಿಸಿದ್ದೆವು. ಇಂತಹ ವಿಡಿಯೋ ಪೋಸ್ಟ್ ಮಾಡಿದ ಮತ್ತು ಶೇರ್ ಮಾಡಿದ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಮನವಿ ಸಲ್ಲಿಸಿದರೆ ಜಗದೀಶ್ ಅವರಿಗೆ ಪೊಲೀಸ್ ಇಲಾಖೆಯಿಂದಲೇ ದೂರು ಹಿಂಪಡೆಯುವಂತೆ ಸೂಚಿಸಿ ಬೆದರಿಕೆ ಬಂದಿದೆ. ಇದನ್ನು ಸಹಿಸಲಾಗದು. ಪೊಲೀಸ್ ಇಲಾಖೆ ತಕ್ಷಣ ತಮ್ಮ ಎಸಗಿದ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಬೇಕು, ತಪ್ಪಿದಲ್ಲಿ ಮಾರ್ಚ್ 15ರಂದು ವಿವಿಧ ಸಂಘಟನೆಗಳ ಜತೆಗೂಡಿ ಬೃಹತ್ ಪ್ರತಿಭಟನೆ ನಡೆಸಲಾಗುವುದು' ಎಂದು ಎಚ್ಚರಿಕೆ ನೀಡಲಾಯಿತು.

ಎರಡು ತಿಂಗಳ ಹಿಂದೆ ಸಹ ಇದೇ ರೀತಿ ಒಂದು ಪ್ರಸಂಗ ನಡೆದಾಗಲೂ ಆರೋಪಿ ವಿರುದ್ಧ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಲಾಯಿತು.



ಇದಕ್ಕೆ ಸ್ಪಂದಿಸಿದ ಎಸ್‌ಪಿ ಎಸ್.ಜಾಹ್ನವಿ, ದೂರು ನೀಡಿದವರ ವಿರುದ್ಧವೇ ಪೊಲೀಸ್ ಇಲಾಖೆಯಿಂದ ಬೆದರಿಕೆ ಬಂದರೆ ಅದನ್ನು ಸಹಿಸಲಾಗದು, ಅದರ ಬಗ್ಗೆ ವಿಚಾರಣೆ ನಡೆಸಲಾಗುವುದು. ಇಂತಹ ಪ್ರಕರಣಗಳಲ್ಲಿ ತನಿಖೆ ನಡೆಸಿ ಕ್ರಮ ಕೈಗೊಳ್ಳುವುದಕ್ಕೆ 14 ದಿನಗಳ ಕಾಲಾವಕಾಶ ಇದೆ. ನಾವು ಸೂಕ್ತ ರೀತಿಯಿಂದ ಕ್ರಮ ಕೈಗೊಳ್ಳುತ್ತೇವೆ' ಎಂದು ಭರವಸೆ ನೀಡಿದರು. ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಅಯ್ಯಾಳಿ ತಿಮ್ಮಪ್ಪ, ಜಿಲ್ಲಾ ವಕ್ತಾರ ಅಶೋಕ್ ಜೀರೆ, ನಗರಸಭೆ ಉಪಾಧ್ಯಕ್ಷ ಜೀವರತ್ನಂ, ಸ್ಥಾಯಿ ಸಮಿತಿ ಅಧ್ಯಕ್ಷ ಶರವಣ, ಸದಸ್ಯರಾದ ಕಿರಣ್ ಶಂಕ್ರಿ, ತಾರಿಹಳ್ಳಿ ಜಂಬುನಾಥ, ಬುಜ್ಜಿ ಹನುಮಂತ, ರಮೇಶ್ ಗುಪ್ತ, ಕಾಸಟ್ಟಿ ಉಮಾಪತಿ, ಮಧುರಚನ್ನ ಶಾಸ್ತ್ರಿ, ಉಮಾ, ಅನುರಾಧಾ ಇತರರು ಇದ್ದರು.



ಕುರೂರು: ಸಮೀಪದ ಆಗಲೂರು ಗ್ರಾಮದಲ್ಲಿ ಮಂಗಳವಾರದಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಂದ ಶಾರದಾ ಪೂಜೆ, ಸರಸ್ವತಿ ಪೂಜೆ ಮಾಡಲಾಯಿತು. ಒಂದರಿಂದ ಎಂಟನೇ ತರಗತಿಯ ವಿದ್ಯಾರ್ಥಿಗಳು, ಶಿಕ್ಷಕ, ಶಿಕ್ಷಕಿಯರು ಇದ್ದರು.

ಹೊಸಪೇಟೆ ತಾಪಂ ಕಚೇರಿಯಲ್ಲಿ ಅಗ್ನಿ ಅವಘಡ

◆ **ವಿಜಯನಗರ:** ಹೊಸಪೇಟೆ ನಗರದಲ್ಲಿರುವ ತಾ.ಪಂ. ಕಚೇರಿಯಲ್ಲಿ ಅಗ್ನಿ ಅವಘಡ ಸಂಭವಿಸಿರುವ ಘಟನೆ ಮಂಗಳವಾರ ರಾತ್ರಿ ನಡೆದಿದ್ದು, ಬೆಂಕಿ ನಂದಿಸಲು ಅಗ್ನಿ ಶಾಮಕ ಸಿಬ್ಬಂದಿ ಹರಸಾಹಸ ನಡೆಸುತ್ತಿದ್ದಾರೆ.

ತಾ.ಪಂ. ಕಚೇರಿಯ ಮೊದಲ ಮಹಡಿಯಲ್ಲಿರುವ ಸಭಾಂಗಣ ಹಾಗೂ ಇತರೆ ಎರಡು ಕೊಠಡಿಗಳಲ್ಲಿ ರಾತ್ರಿ 10 ಗಂಟೆ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದ್ದು, ನೋಡ ನೋಡುತ್ತಿದ್ದಂತೆ ಬೆಂಕಿ ಮುಗಿಲೆತ್ತರಕ್ಕೆ ಹೊತ್ತಿ ಉರಿದಿದೆ. ಘಟನೆಗೆ ಕಾರಣ ಏನು, ಕಚೇರಿಯಲ್ಲಿ ಯಾವ ದಾಖಲೆಗಳು ಸುಟ್ಟಿವೆ ಎಂಬುದು ಇನ್ನಷ್ಟೇ ತಿಳಿಯಬೇಕಿದೆ.

ಎಸ್ಸೆಸ್ಸೆಲ್ಸಿ ಫಲಿತಾಂಶ ಹೆಚ್ಚಿಸಲು ಕ್ರಮ ವಹಿಸಿ

◆ **ಹೂವಿನ ಹಡಗಲಿ:** 2026 ಮಾರ್ಚ್-ಏಪ್ರಿಲ್ ತಿಂಗಳಲ್ಲಿ ನಡೆಯಲಿರುವ ಎಸ್ಸೆಸ್ಸೆಲ್ಸಿ ಮುಖ್ಯ ಪರೀಕ್ಷೆಯ ಫಲಿತಾಂಶ ಸುಧಾರಣೆಗಾಗಿ ಮುಖ್ಯ ಗುರುಗಳು ಕ್ರಮ ಕೈಗೊಳ್ಳಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ವಿ. ಪೂಜಾರ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಸರ್ಕಾರಿ ಅನುದಾನಿತ ತುಂಗಭದ್ರಾ ಪ್ರೌಢಶಾಲೆಯಲ್ಲಿ ಸೋಮವಾರ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಎಸ್ಸೆಸ್ಸೆಲ್ಸಿ ಪೂರ್ವ ಸಿದ್ಧತಾ ಪರೀಕ್ಷೆ 3 ರ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು.

ಕಳೆದ ವರ್ಷ ಕಲ್ಯಾಣ ಕರ್ನಾಟಕದಲ್ಲಿ ತಾಲೂಕು ಪ್ರಥಮ ಸ್ಥಾನ ಪಡೆದಿದೆ. ಈ ವರ್ಷವೂ ಕಳೆದ ಬಾರಿಗಿಂತ ಹೆಚ್ಚು ಫಲಿತಾಂಶ ವೃದ್ಧಿಸಲು ಕ್ರಮ ವಹಿಸಿ ಎಂದು ಹೇಳಿದರು.

ಮೂರನೇ ಪೂರ್ವ ಸಿದ್ಧತಾ ಪರೀಕ್ಷೆಯ ಫಲಿತಾಂಶವನ್ನು ಸರ್ಕಾರಿ ಅನುದಾನಿತ ಶಾಲಾವಾರು ವಿಶ್ಲೇಷಣೆ ಮಾಡಿ ಮಾರ್ಗದರ್ಶನ ನೀಡಿದರು.

ಎಸ್ಸೆಸ್ಸೆಲ್ಸಿ ಅಂತಿಮ ಪರೀಕ್ಷೆಯಲ್ಲಿ 600 ಕ್ಕೂ ಹೆಚ್ಚು ಅಂಕ ಪಡೆಯುವ ಸಾಧ್ಯತೆ ಇರುವ ವಿದ್ಯಾರ್ಥಿಗಳಿಗೆ ವಿಶೇಷ ಗಮನ ಹರಿಸಬೇಕು. ನಿಧಾನಗತಿ ಕಲಿಕಾರ್ಥಿಗಳಿಗೂ ಸಹ ಗಮನಹರಿಸಬೇಕು ಎಂದು ತಿಳಿಸಿದರು.

ತಾಲೂಕಿನ 9 ಪರೀಕ್ಷಾ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.ಕುಡಿಯುವ ನೀರು, ಶೌಚಾಲಯ, ಪರೀಕ್ಷಾ ಕೊಠಡಿಗಳಿಗೆ ವಿದ್ಯುತ್ ಸಂಪರ್ಕ, ಪರೀಕ್ಷಾರ್ಥಿಗಳ ಆರೋಗ್ಯ ಕುರಿತು ನಿಗಾ ವಹಿಸಲು ಸೂಚಿಸಿದರು.



ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಉಪ ಮುಖ್ಯಸ್ಥರು ಹಾಗೂ ಪ್ರಶ್ನೆಪತ್ರಿಕೆ ಪಾಲಕರಿಗೆ ಮಂಡಳಿ ಸುತ್ತೋಲೆಯಂತೆ ಅಚ್ಚುಕಟ್ಟಾಗಿ ಪರೀಕ್ಷಾ ಕಾರ್ಯ ನಿರ್ವಹಿಸಲು ತಿಳಿಸಿದರು.

ಕ್ಷೇತ್ರ ಸಮನ್ವಯಾಧಿಕಾರಿ ಎ. ಕೊಟ್ರೇಶ್ 8 ಮತ್ತು 9 ನೇ ತರಗತಿ ದ್ವಿತೀಯ ಮೌಲ್ಯಾಂಕನ ಪರೀಕ್ಷೆ ಕುರಿತು ಮಾಹಿತಿ ನೀಡಿದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಿ ಹನುಮಂತಪ್ಪ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆ ಬಗ್ಗೆ ಮಾತನಾಡಿದರು. ತಾಲೂಕು ಪ್ರೌಢಶಾಲಾ ಮುಖ್ಯ ಗುರುಗಳ ಸಂಘದ ಅಧ್ಯಕ್ಷ ಜಿ.ಎಂ. ಕಾಂತೇಶ್ ಶಾಲಾ ಮುಖ್ಯ ಗುರು ಸುರೇಶ ಅಂಗಡಿ ಇದ್ದರು.ತಾಲೂಕಿನ ಸರ್ಕಾರಿ ಅನುದಾನಿತ ಅನುದಾನರಹಿತ ಮೊರಾರ್ಜಿ ದೇಸಾಯಿ ವಸತಿ ಪ್ರೌಢಶಾಲೆಗಳ ಮುಖ್ಯ ಗುರುಗಳು ಭಾಗವಹಿಸಿದ್ದರು.